ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದಿನಿಂದ ಚಾಂಪಿಯನ್ಸ್ ಟ್ರೋಫಿ

• ಕರಾಚಿಯಲ್ಲಿ ಮೊದಲ ಪಂದ್ಯ • ಪಾಕ್-ಕಿವೀಸ್ ಸೆಣಸಾಟ

ಬಹುನಿರೀಕ್ಷಿತ ಐಸಿಸಿ ಚಾಂಪಿಯನ್ಸ್ ಟ್ರೋಫಿ ಬುಧವಾರದಿಂದ ಪ್ರಾರಂಭವಾಗಲಿದೆ. ಪಾಕಿಸ್ತಾನ ಮತ್ತು ದುಬೈನಲ್ಲಿ 19 ದಿನಗಳ ಕಾಲ ನಡೆಯಲಿರುವ ಈ ಟೂರ್ನಿಯಲ್ಲಿ ಒಟ್ಟು 8 ತಂಡಗಳು ಭಾಗಿಯಾಗುತ್ತಿವೆ.

ಅನಧಿಕೃತ ಬಡಾವಣೆಗಳಿಗೆ ಕಡಿವಾಣ | ಏಕಕಾಲದ ಇತ್ಯರ್ಥಕ್ಕೆ ಸಿಎಂ ಸೂಚನೆ

ಇಂದಿನಿಂದ ಬಿ ಖಾತಾ ಅಭಿಯಾನ ಆರಂಭ

ಬೆಂಗಳೂರು: ರಾಜ್ಯದಲ್ಲಿ ಬಹುಕಾಲದ ಸಮಸ್ಯೆ ಎನಿಸಿರುವ ಅನಧಿಕೃತ ಬಡಾವಣೆಗಳಿಗೆ ಬ್ರೇಕ್ ಹಾಕಿ, ಒನ್‌ಟೈಂ ಪರಿಹಾರ ಕೈಗೊಳ್ಳಲು ತೀರ್ಮಾನಿಸಿರುವ ರಾಜ್ಯ ಸರಕಾರ ಮುಂದಿನ ಮೂರು ತಿಂಗಳು ವಿಶೇಷ ಅಭಿಯಾನದ ಮೂಲಕ ಬಿ-ಖಾತಾ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ.

ರಾಜ್ಯದಲ್ಲಿ ತಲೆಎತ್ತಿರುವ ಅನಧಿಕೃತ ಬಡಾವಣೆಗಳ ಸಮಸ್ಯೆಯನ್ನು ಬಗೆಹರಿಸಿ ಬಿ-ಖಾತಾ ಮಾಡಿಸಿಕೊಳ್ಳಲು ಕಂದಾಯ ಇಲಾಖೆಯು ಬುಧವಾರದಿಂದ ವಿಶೇಷ ಅಭಿಯಾನ ಆರಂಭಿಸಿದೆ. ಈವರೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದ ಈ ಪ್ರಕ್ರಿಯೆ ಇದೀಗ ರಾಜ್ಯಾದ್ಯಂತ ವಿಸ್ತರಣೆಯಾಗಿದ್ದು, ಮುಂದಿನ ಮೂರು ತಿಂಗಳಲ್ಲಿ ರಾಜ್ಯದೆಲ್ಲೆಡೆ ಇರುವ ಖಾತಾ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ರಾಜ್ಯ ಸರಕಾರ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಸಿಎಂ ಸಿದ್ದ ರಾಮಯ್ಯ ಅವರು ಮಂಗಳವಾರ ಅಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ ಮೂಲಕ ಸಭೆ ನಡೆಸಿದರು. ಮಹಾನಗರ ಪಾಲಿಕೆ ಗಳು, ನಗರಸಭೆ, ಪಟ್ಟಣ ಪಂಚಾಯಿತಿಯ ಆಯುಕ್ತರು, ಪೌರಾಯು ಕ್ತರು, ಮುಖ್ಯಾಧಿಕಾ ರಿಗಳು, ಜಿಲ್ಲಾಧಿಕಾರಿಗಳು, ಯೋಜನಾ ನಿರ್ದೇಶಕರೊಂದಿಗೆ ಸಭೆ ನಡೆಸಿದ ಅವರು, ನಗರ, ಪಟ್ಟಣ, ಪಾಲಿಕೆ ಮತ್ತು ಹಳ್ಳಿಗಳಲ್ಲಿರುವ ಅನಧಿಕೃತ ಬಡಾವಣೆಗಳಿಗೆ ಅಂತ್ಯ ಹಾಡುವಂತೆ ಸೂಚನೆ ನೀಡಿದರು. ಅನಧಿಕೃತ ಬಡಾವಣೆಗಳಿಗೆ ಅವಕಾಶವಿಲ್ಲದಂತೆ ಬಿ-ಖಾತಾ ನೀಡಬೇಕು. ಮುಂದಿನ 3 ತಿಂಗಳ ಒಳಗಾಗಿ ಅಭಿಯಾನದ ಮೂಲಕ ಖಾತಾ ವಿತರಣೆ ಕಾರ್ಯ ಪೂರ್ಣ ಗೊಳಿಸುವಂತೆ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಅನಧಿಕೃತ, ರೆವಿನ್ಯೂ ಬಡಾವಣೆಗಳಲ್ಲಿ ಸೈಟು, ಮನೆ ಕಟ್ಟಿರುವವರಿಗೆ ತೊಂದರೆ ಆಗಬಾರದು. ಒಟ್ಟಾರೆಯಾಗಿ ಬಡವರು, ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡಲು ಏಕಕಾಲಿಕ ಪರಿಹಾರ ನೀಡಲಾಗುತ್ತಿದೆ. ಗೊಂದಲಗಳಿಗೆ ಅವಕಾಶ ಮಾಡಿಕೊಡದಂತೆ ಇಂದಿನಿಂದಲೇ ಬಿ ಖಾತಾ ಅಭಿಯಾನವನ್ನು ಆರಂಭ ಮಾಡಿ 3 ತಿಂಗಳೊಳಗಾಗಿ ಪೂರ್ಣಗೊಳಿಸಿ.

- ಸಿದ್ದರಾಮಯ್ಯ

ಮತ್ತೆ ಅನಧಿಕೃತ ಬಡಾವಣೆ ತಲೆ ಎತ್ತದಂತೆ ಕ್ರಮವಹಿಸಿ: ರಾಜ್ಯ ಸರಕಾರ ಜಾರಿಗೊಳಿಸಿರುವ ಕಾಯಿದೆಯ ಮೂಲಕ ಅನಧಿಕೃತ ಬಡಾವಣೆಗಳು ಅಂತ್ಯಗೊಳ್ಳಲಿವೆ. ಇದನ್ನು ಅಧಿಕಾರಿಗಳು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಅನಧಿಕೃತ ಬಡಾವಣೆ ಗಳಿಂದ ಕಂದಾಯ ಬರುತ್ತಿಲ್ಲ, ಪರಿಣಾಮ ಜನರಿಗೆ ನಾಗರಿಕ ಸವಲತ್ತುಗಳೂ ಸಿಗುತ್ತಿಲ್ಲ, ಸ್ಥಳೀಯ ಸಂಸ್ಥೆಗಳಿಗೆ ಆದಾಯವೂ ಬಂದ್ ಆಗಿದೆ. ಇವೆಲ್ಲಾ ಅನಾನುಕೂಲಗಳಿಗೂ ಅಂತ್ಯ ಹಾಡಬೇಕಿದೆ ಎಂದು ಎಚ್ಚರಿಸಿದರು.

ಕಂದಾಯ ಕಟ್ಟದಿರುವುದರಿಂದ ಸಮಸ್ಯೆಗಳು ಹೆಚ್ಚಾಗುತ್ತಿವೆ. ಈ ಬಾರಿ ಒಂದು ಬಾರಿ ಬಿ ಖಾತಾ ಕೊಟ್ಟು ಅನಧಿಕೃತ ಬಡಾವಣೆಗಳಿಗೆ ಅಂತ್ಯ ಹಾಡಬೇಕು. ಇದು ಕೊನೆಯ ಅವಕಾಶವಾಗಿರಬೇಕು ಎಂದು ಸ್ಪಷ್ಟಪಡಿಸಿದರು. ಎಲ್ಲ ಅಧಿಕಾರಿಗಳಿಗೂ ಮೂರು ತಿಂಗಳು ಮಾತ್ರ ಸಮಯ ನೀಡಲಾಗುವುದು. ಅಷ್ಟರೊಳಗೆ ಅಭಿಯಾನ ನಡೆಸಿ ಖಾತಾ ವಿತರಣೆಯನ್ನು ಪೂರ್ಣಗೊಳಿಸಬೇಕು. ಇದರಲ್ಲಿ ಯಾವುದೇ ರಾಜಿ ಇಲ್ಲ. ಒಂದು ವೇಳೆ ಅಧಿಕಾರಿಗಳು ರಾಜಿ ಮಾಡಿಕೊಂಡರೂ ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಎಚ್ಚರಿಕೆ ನೀಡಿದರು. → 4

ಅಧಿಕಾರಿಗಳೊಂದಿಗೆ ನಡೆದ ವಿಡಿಯೊ ಕಾನ್ಫರೆನ್ಸ್‌ದಲ್ಲಿ ಸಿಎಂ ಸಿದ್ದರಾಮಯ್ಯ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಅರಣ್ಯ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹೀಂಖಾನ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರರು ಭಾಗವಹಿಸಿದ್ದರು.

ಬಿ-ಖಾತಾಗೆ ಬೇಕಿರುವ ದಾಖಲೆ

- ಸ್ವತ್ತಿನೊಂದಿಗೆ ಮಾಲೀಕರ ಫೋಟೋ, ಆಧಾರ್ ಕಾರ್ಡ್, ಮಾಲೀಕರ ಪಾಸ್‌ಪೋರ್ಟ್ ಅಳತೆಯ ಫೋಟೋ
- ಕೈ ಬರಹದ ನಮೂನೆ -3 ಪ್ರತಿ, ಇ.ಸಿ.ಪ್ರತಿ., 2015-16ರಿಂದ ಚಾಲ್ತಿ ಅಥವಾ ಪ್ರಸಕ್ತ ಸಾಲಿನವರೆಗೆ ಆಸ್ತಿ ತೆರಿಗೆ ಪಾವತಿಸಿರುವ ಚಲನ್
- ಭೂ ಪರಿವರ್ತನೆ ಆದೇಶ ಪ್ರತಿ., ಹಕ್ಕುಪತ್ರ - ನಿವೇಶನ ಹಂಚಿಕೆ ಪ್ರತಿ., ನೀರಿನ ತೆರಿಗೆ, ವಿದ್ಯುತ್ ಬಿಲ್‌ನ ಪ್ರತಿ
- ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪ್ರತಿ., ಗ್ರಾಮ ಠಾಣಾ ವ್ಯಾಪ್ತಿಗೆ ಒಳಪಟ್ಟಿದ್ದರೆ ದಿಶಾಂಕ್ ಆ್ಯಪ್ ಪ್ರತಿ

ಸಿಎಂ ಸೂಚನೆಗಳೇನು?

- ಈಗಿರುವ ಅನಧಿಕೃತ ಲೇಔಟ್ ಇತ್ಯರ್ಥಪಡಿಸಿ, ಹೊಸದಾಗಿ ತಲೆಎತ್ತದಂತೆ ಕ್ರಮವಹಿಸಿ
- ಮುಂದಿನ ಮೂರು ತಿಂಗಳಲ್ಲಿ ಎಲ್ಲ ಅನಧಿಕೃತ ಲೇಔಟ್‌ಗಳಿಗೆ ಬಿ-ಖಾತಾ ನೀಡಿ. ಈಗಾಗಲೇ ಮನೆ ಕಟ್ಟಿರುವವರಿಗೆ ಯಾವುದೇ ರೀತಿಯ ತೊಂದರೆ ಕೊಡಬೇಡಿ
- ಮಧ್ಯಮ ವರ್ಗ, ಬಡವರಿಗೆ ಅನುಕೂಲವಾಗುವ ಒಂದೇ ಬಾರಿಗೆ ಸಮಸ್ಯೆ ಬಗೆಹರಿಸಿ. ಮತ್ತೆ ಅನಧಿಕೃತ ಲೇಔಟ್ ತಲೆ ಎತ್ತಿದರೆ, ಸ್ಥಳೀಯ ಮಟ್ಟದ ಅಧಿಕಾರಿಗಳ ವಿರುದ್ಧ ಕ್ರಮ

ಕೇಂದ್ರ ಶಿಸ್ತು ಸಮಿತಿ ನೀಡಿದ್ದ ನೋಟಿಸ್‌ಗೆ ಉತ್ತರ ರೂಪದಲ್ಲಿ ಪ್ರಶ್ನೆಗಳ ಸುರಿಮಳೆ

ಯತ್ನಾಳ್ ಪ್ರಶ್ನೋತ್ತರ

ಸ್ಪಷ್ಟನೆ ನೀಡುವುದಕ್ಕಿಂತ ಹೆಚ್ಚಾಗಿ ವಿಜಯೇಂದ್ರ ವಿರುದ್ಧ ದೂರುಗಳ ಸರಮಾಲೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ಬಿಜೆಪಿಯ ಬಣ ರಾಜಕೀಯದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿದ್ದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ತಮಗೆ ನೀಡಿದ್ದ ಶೋಕಾಸ್ ನೋಟಿಸ್‌ಗೆ ಉತ್ತರಿಸುವ ನೆಪದಲ್ಲಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಮತ್ತೊಂದು ದೂರು ದಾಖಲಿಸುವ ಪ್ರಯತ್ನ ಮಾಡಿದ್ದಾರೆ.

ಕೇಂದ್ರ ಶಿಸ್ತು ಸಮಿತಿ ನೀಡಿದ್ದ ನೋಟಿಸ್‌ಗೆ ಸುದೀರ್ಘ ಒಂಬತ್ತು ಪುಟಗಳ ಇ-ಮೇಲ್ ಮೂಲಕ ಉತ್ತರ ನೀಡಿರುವ ಯತ್ನಾಳ್, ಮತ್ತೊಮ್ಮೆ ವಿಜಯೇಂದ್ರ ಹಾಗೂ ಯಡಿಯೂರಪ್ಪ ವಿರುದ್ಧ ಸ್ವಜನಪಕ್ಷಪಾತ, ಹೊಂದಾಣಿಕೆ ರಾಜಕೀಯದ ಗಂಭೀರ ಆರೋಪ ಮಾಡಿದ್ದಾರೆ. ಜತೆಗೆ ತಾನು ಯಾವುದೇ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಭಾಗವಹಿಸಿಲ್ಲ. ಬದಲಿಗೆ ಸಂಘಟನೆಗೆ ಸಹಾಯವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ ಎಂದು ಸಮರ್ಥನೆ ನೀಡಿದ್ದಾರೆ. ತಮಗೆ ನೀಡಿರುವ ನೋಟಿಸ್‌ಗೆ ಸ್ಪಷ್ಟನೆ ನೀಡುವುದಕ್ಕಿಂತ ಹೆಚ್ಚಾಗಿ ವಿಜಯೇಂದ್ರ ಹಾಗೂ ಬಣದ ಬಗ್ಗೆ ದೂರುಗಳ ಸರಮಾಲೆಯನ್ನೇ ಮಾಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬಣ ರಾಜಕೀಯ ಮಾಡುತ್ತಿದ್ದಾರೆ. ನಾನು ಯಾವುದೇ ಬಣ ರಾಜಕೀಯ ಮಾಡಿಲ್ಲ. ಪಕ್ಷದ ಶಿಸ್ತನ್ನು ನಾನು ಉಲ್ಲಂಘಿಸಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.

ಇನ್ನೊಂದೆಡೆ, ಫೆ.20ರಂದು ಎಲ್ಲವೂ ಸರಿಯಾಗಲಿದೆ ಎಂದು ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಅಲ್ಲದೆ ಫೆ.20ರಂದೇ ಬಸನಗೌಡ ಪಾಟೀಲ್ ಯತ್ನಾಳ್ ಬಣದ ಸದಸ್ಯರು ಕೂಡ ವಿಜಯೇಂದ್ರಗೆ ಸೆಡ್ಡು ಹೊಡೆಯಲು ತಂತ್ರ ಹೆಣೆದಿದ್ದು, ಬೆಂಗಳೂರಿನಲ್ಲಿರುವ ಕುಮಾರ್ ಬಂಗಾರಪ್ಪ ಅವರ ನಿವಾಸದಲ್ಲಿ ಸಭೆ ಸೇರಿ ಚರ್ಚಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

ವರಿಷ್ಠರಿಂದ ನಾಳೆ ಅಂತಿಮ ನಿರ್ಧಾರ?

ಕಳೆದ ವರ್ಷದಿಂದ ನಡೆಯುತ್ತಿದ್ದ ಬಿಜೆಪಿಯ ಆಂತರಿಕ ಕಲಹ ಐದಾರು ತಿಂಗಳಿಂದ ಬಹಿರಂಗಗೊಂಡು ಬಣಗಳಾಗಿ ವಾಕ್ಸಮರ ನಡೆದಿತ್ತು. ಈ ಸಂಬಂಧ ವಿಜಯೇಂದ್ರ ಸೇರಿದಂತೆ ಯತ್ನಾಳ್ ಬಣದ ಕಡೆಯವರೂ ದೆಹಲಿ ದಂಡಯಾತ್ರೆ ನಡೆಸಿದ್ದರು. ಸಂಡೂರಿನ ಚುನಾವಣೆ ಸಂಬಂಧ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್ ನೀಡಿದ ಹೇಳಿಕೆಯಿಂದ ಅಸಮಾಧಾನಗೊಂಡ ಶ್ರೀರಾಮುಲು ಕೂಡ ಭಿನ್ನ ಭಾವುಟ ಹಾರಿಸಿದ್ದರು. ಇದಾಗಿ ಕೇಂದ್ರದಿಂದ ಬುಲಾವ್ ಬಂದಿದ್ದರೂ ಇಲ್ಲಿಯವರೆಗೆ ಶ್ರೀರಾಮುಲು ವರಿಷ್ಠರನ್ನು ಭೇಟಿ ಮಾಡಿಲ್ಲ. ಅಲ್ಲದೆ ಮಿತ್ರರಾಗಿದ್ದ ಜನಾರ್ದನ ರೆಡ್ಡಿ ಕೂಡ ಕೆಲ ಆರೋಪ ಮಾಡಿದ್ದರು. ಮಾಜಿ ಸಿಎಂಗಳಾದ ಡಿ.ವಿ.ಸದಾನಂದಗೌಡ, ಬಸವರಾಜ ಬೊಮ್ಮಾಯಿ ಅಲ್ಲಲ್ಲಿ ಸಭೆ ಸೇರಿ ಪಕ್ಷದೊಳಗಿನ ಸಮಸ್ಯೆ ಬಗ್ಗೆ ಹಿತವಚನ ನುಡಿದಂತೆ ಕಂಡರೂ ಒಳಗೊಳಗೆ ರಾಜ್ಯಾಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದು ಬಹಿರಂಗಗೊಂಡಿತ್ತು. ಕೇಂದ್ರ ಕೃಷಿ ಸಚಿವ ಹಾಗೂ ರಾಜ್ಯ ಬಿಜೆಪಿ ಆಂತರಿಕ ಚುನಾವಣೆ ಉಸ್ತುವಾರಿ ಶಿವರಾಜ್ ಸಿಂಗ್ ಚೌಹಾಣ್ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಶೀಘ್ರ ಚುನಾವಣೆ ನಡೆಯಲಿದೆ ಎಂದು ಈ ಹಿಂದೆ ಹೇಳಿದ್ದರು. ಇದೆಲ್ಲದಕ್ಕೂ ಇತಿಶ್ರೀ ಹಾಡಲು ಫೆ.20 ರಂದು ನಿರ್ಧಾರ ಪ್ರಕಟಿಸಲು ಕೇಂದ್ರ ಸಮಿತಿ ನಿರ್ಧರಿಸಲಿದೆ ಎನ್ನಲಾಗಿದೆ.

ಪತ್ರದಲ್ಲಿನ ಪ್ರಮುಖಾಂಶ

- ಪಕ್ಷದ ಚೌಕಟ್ಟನಲ್ಲಿಯೇ ಕೆಲಸ ಮಾಡುತ್ತಿದ್ದು, ಪಕ್ಷ ವಿರೋಧಿ ಕಾರ್ಯದಲ್ಲಿ ತೊಡಗಿಲ್ಲ
- ಕರ್ನಾಟಕ ಬಿಜೆಪಿಯಲ್ಲಿ ಕುಟುಂಬ ರಾಜಕಾರಣ, ಸ್ವಜನಪಕ್ಷಪಾತ ಮಿತಿ ಮೀರಿದೆ
- ವಿಜಯೇಂದ್ರ ಅವರು ಹಿರಿಯ ನಾಯಕರನ್ನು ವಿಶ್ವಾಸಕ್ಕೆ ಪಡೆಯುವ ಕೆಲಸ ಮಾಡುತ್ತಿಲ್ಲ
- ಹೊಂದಾಣಿಕೆ ರಾಜಕೀಯದಿಂದ ಪಕ್ಷದ ಸಂಘಟನೆ ಸೊರಗುತ್ತಿದೆ
- ವಕ್ಫ್ ಹೋರಾಟವನ್ನು ಪಕ್ಷದ ವೇದಿಕೆಯಲ್ಲಿಯೇ ಮಾಡಿದ್ದು, ಇದಕ್ಕೆ ವರಿಷ್ಠರು ಶ್ಲಾಘಿಸಿದ್ದಾರೆ

ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುತ್ತೇನೆ. ರಾಜಕೀಯ ವಿಚಾರವಾಗಿಯೂ ಮಾತನಾಡುತ್ತೇನೆ. ಬಸನಗೌಡ ಪಾಟೀಲ್ ಯತ್ನಾಳ್ ಹಿರಿಯರಿದ್ದಾರೆ. ಸಭೆ ಕರೆದು ಪಕ್ಷ ಬಲಪಡಿಸುವ ಬಗ್ಗೆ ಚರ್ಚೆ ಮಾಡುತ್ತಾರೆ. ಅದಕ್ಕೆ ನಾನು ಯಾಕೆ ಬೇಡ ಎನ್ನಲಿ? ಭಿನ್ನಮತೀಯರ ಸಭೆಯ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಯಾರೇನೇ ಮಾಡಿದರೂ ಪಕ್ಷಕ್ಕೆ ಪೂರಕವಾಗಿ ಮಾಡುತ್ತಾರೆ ಎಂಬುದು ನನ್ನ ಅಭಿಲಾಷೆ.

- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸೊಂಪಾದ ಪುಟಗಳು

ಪೋಲಿ ಮಾತುಗಳನ್ನಾಡಿಸುವ ಟೂರೆಟ್ ಲಕ್ಷಣಾವಳಿ

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ನಮ್ಮ ಬೆಂಗಳೂರು, ನಮ್ಮದಾಗುವುದು ಯಾವಾಗ ?

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನಿಮ್ಮ ಪ್ರತಿ ಪ್ರಯತ್ನವೂ ಯಶಸ್ಸಾಗಿ ಪರಿವರ್ತನೆಯಾಗದೇ ಹೋಗಬಹುದು. ಆದರೆ ಪ್ರತಿ ಯಶಸ್ಸಿನ ಹಿಂದೆಯೂ ಸಾಕಷ್ಟು ಪ್ರಯತ್ನಗಳಿರುತ್ತವೆ. ಹೀಗಾಗಿ ಯಶಸ್ಸು ಸಿಗಲಿ ಬಿಡಲಿ ಪ್ರಯತ್ನವನ್ನಂತೂ ನಿಲ್ಲಿಸುವ ಹಾಗಿಲ್ಲ.

ವಕ್ರತುಂಡೋಕ್ತಿ

ನಿನ್ನನ್ನು ಹುಗಿದು ಹಾಕಿಬಿಡ್ತೀನಿ ಅಂತ ಕೆಲವರು ಹೇಳುತ್ತಾರೆ. ಅವರು ಅಂಥವರನ್ನು ನಿಧಿಗಳು ಎಂದು ಭಾವಿಸಿರುತ್ತಾರೆ.

ಶಿಂದೆ ಬಣದ 20 ಶಾಸಕರ ವೈ ಶ್ರೇಣಿ ಭದ್ರತೆ ರದ್ದು

ಮುಂಬೈ: ಡಿಸಿಎಂ ಏಕನಾಥ್ ಶಿಂದೆ ಬಣದ 20 ಶಾಸ ಕರಿಗೆ ನೀಡಲಾಗಿದ್ದ ವೈ ಶ್ರೇಣಿ ಭದ್ರತೆ ಯನ್ನು ಮಹಾರಾಷ್ಟ್ರ ಗೃಹ ಇಲಾಖೆ ಹಿಂತೆಗೆದುಕೊಂಡಿದೆ. 2022ರಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆಯಿಂದ ಪಕ್ಷಾಂತರ ಗೊಂಡ ನಂತರ ಈ ಶಾಸಕರಿಗೆ ವೈ ಶ್ರೇಣಿ ಭದ್ರತೆ ಒದಗಿಸಲಾಗಿತ್ತು. ಈ ಕುರಿತು ಬಿಜೆಪಿ ಸಮಜಾಯಿಷಿ ನೀಡಿದ್ದು, 'ಇದೇನೂ ವಿವಾದವಾಗುವಂತಹ ವಿಷಯವಲ್ಲ. ಶಿವಸೇನೆ ವಿಚಾರದಲ್ಲಷ್ಟೇ ಈ ಕ್ರಮ ಕೈಗೊಳ್ಳಲಾಗಿಲ್ಲ. ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯ ಕೆಲವು ಶಾಸಕರಿಗೂ ನೀಡಿದ್ದ ಭದ್ರತೆ ಕಡಿಮೆ ಮಾಡಲಾಗಿದೆ. ಸಂಪನ್ಮೂಲ ದುರ್ಬಳಕೆ ತಡೆಯುವ ಉಪಕ್ರಮದ ಭಾಗವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದೆ.

ಮಾತಂದ್ರೆ ಮಾತು

ಮುಖ್ಯ ಚುನಾವಣಾ ಆಯುಕ್ತರ ನೇಮಕವನ್ನು ತರಾತುರಿಯಲ್ಲಿ ಮಧ್ಯರಾತ್ರಿ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅಗೌರವ ತೋರಿದ್ದಾರೆ.

- ರಾಹುಲ್ ಗಾಂಧಿ
ಲೋಕಸಭೆ ಪ್ರತಿಪಕ್ಷದ ನಾಯಕ

ಫನ್‌ತರಂಗ

- ರಘುಪತಿ ಶೃಂಗೇರಿ -

'ವೆಲ್ ಫೈರ್' ಕಾರಲ್ಲಿ ಓಡಾಡಲು ಸಿಎಂ ನಿರ್ಧಾರ



ಉದಯಪುರ ಜಲ ಸಮೃದ್ಧಿ ಸಭೆಯಲ್ಲಿ ಕೇಂದ್ರಕ್ಕೆ ಡಿಕೆಶಿ ಮನವಿ

ನೀರಾವರಿ ಯೋಜನೆಗಳ ಬಾಕಿ ಅನುದಾನ ನೀಡಿ

ಉದಯಪುರ: ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ಹಾಗೂ ಬಾಕಿ ಅನುದಾನ ವನ್ನು ನೀಡಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದಾರೆ.

ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ '2047ರಲ್ಲಿ ಭಾರತ ಜಲ ಸಮೃದ್ಧಿ ರಾಷ್ಟ್ರ' ಎಂಬ 2ನೇ ಅಖಿಲ ಭಾರತ ರಾಜ್ಯಗಳ ಜಲಸಂಪನ್ಮೂಲ ಸಚಿವರ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯದ ಯೋಜನೆಗಳಿಗೆ ಕೇಂದ್ರ ಜಲಶಕ್ತಿ ಸಚಿವಾಲಯ ಆದ್ಯತೆ ಮೇರೆಗೆ ಅಗತ್ಯ ಕ್ರಮ ಕೈಗೊಂಡು ಅನುಮತಿ ಕೊಡಿಸಬೇಕು. ಮೇಕೆದಾಟು ಯೋಜನೆಗೆ ಡಿಪಿಆರ್ ಪರಿಗಣಿಸಿ, ಅನುಮತಿ ನೀಡುವಂತೆ ಸಿಡಬ್ಲ್ಯುಸಿಗೆ ನಿರ್ದೇಶನ ನೀಡಬೇಕು. ಇದರಿಂದ ತ.ನಾಡಿಗೆ ಪ್ರತಿ ತಿಂಗಳ ಲೆಕ್ಕಾಚಾರದ ನೀರು ನೀಡಬಹುದು. ಜತೆಗೆ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮತ್ತು ಬೆಂಗಳೂರಿನ ಕುಡಿಯುವ ನೀರಿನ ಅಗತ್ಯ ಪೂರೈಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. → 4

ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ 2ನೇ ಅಖಿಲ ಭಾರತ ರಾಜ್ಯಗಳ ಜಲಸಂಪನ್ಮೂಲ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಿದರು.

ಕುಂಭಮೇಳವಲ್ಲ ಮೃತ್ಯುಕುಂಭ: ದೀದಿ

ಕೋಲ್ಕತ್ತ: ಪ್ರಯಾಗರಾಜ್‌ನಲ್ಲಿನ ಮಹಾಕುಂಭಮೇಳವು ಮೃತ್ಯುಕುಂಭವಾಗಿ ಮಾರ್ಪಟ್ಟಿದೆ ಎಂದು ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಟೀಕಿಸಿದ್ದಾರೆ.

ಜ.29 ರಂದು ಕುಂಭಮೇಳದಲ್ಲಿ ಸಂಭವಿಸಿದ್ದ ಕಾಲ್ತುಳಿತ ಕುರಿತು ವಿಧಾನಸಭೆಯಲ್ಲಿ ಮಾತನಾಡಿ, ಇದು ಮೃತ್ಯುಕುಂಭ. ನಾನು ಮಹಾಕುಂಭ ವನ್ನು ಗೌರವಿಸುತ್ತೇನೆ. ಹಾಗೆಯೇ ಪವಿತ್ರ ಗಂಗಾ ಮಾತೆಯನ್ನು ಆರಾಧಿಸುತ್ತೇನೆ. ಆದರೆ, ಈ ಬಾರಿ ಕುಂಭ ಮೇಳದಲ್ಲಿ ನಡೆದ ಕಾಲ್ತುಳಿತ ದುರಂತವನ್ನು ಮರೆಯುವುದಿಲ್ಲ. ಶ್ರೀಮಂತರಿಗೆ, ವಿಐಪಿಗಳಿಗೆ ₹1 ಲಕ್ಷದವರೆಗೆ ಕ್ಯಾಂಪ್ (ಟೆಂಟ್) ಪಡೆಯಲು ವ್ಯವಸ್ಥೆ ಇದೆ. ಆದರೆ, ಬಡವರಿಗೆ ಕುಂಭದಲ್ಲಿ ಯಾವುದೇ ವ್ಯವಸ್ಥೆಗಳನ್ನು ಮಾಡಿಲ್ಲ ಎಂದು ಟೀಕಿಸಿದ್ದಾರೆ. ಮಮತಾ ಬ್ಯಾನರ್ಜಿ ಹೇಳಿಕೆ ಬಿಜೆಪಿ ಕಿಡಿಕಾರಿದೆ.

ಪ್ರಶ್ನೆಗಳ ಸೋರಿಕೆ: ಮೂವರ ಸೆರೆ

ಬೆಂಗಳೂರು: ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪರೀಕ್ಷೆಯ ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದ ಮೂವರನ್ನು ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಲಾರ ಜಿಲ್ಲೆಯ ಬಸವಶ್ರೀ ಕಾನೂನು ಕಾಲೇಜಿನ ಉಪಪ್ರಾಂಶುಪಾಲ ನಾಗರಾಜ್, ಅವರ ಕಾರು ಚಾಲಕ ಹಾಗೂ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಜಗದೀಶ್ ಹಾಗೂ ಬಂಗಾರಪೇಟೆಯ ಕಾನೂನು ಕಾಲೇಜೊಂದರ ವಿದ್ಯಾರ್ಥಿ ವರುಣ್ ಕುಮಾರ್ ಬಂಧಿತರು. ರಾಜ್ಯ ಕಾನೂನು ವಿಶ್ವವಿದ್ಯಾಲಯದಿಂದ ಜನವರಿ 23ರಂದು ನಿಗದಿಯಾಗಿದ್ದ ಕಾಂಟ್ರಾಕ್ಟ್ ಲಾ-1 ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳು ಟೆಲಿಗ್ರಾಂ ಮತ್ತು ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ವೈರಲ್ ಆಗಿದ್ದವು. ಉಪಪ್ರಾಂಶುಪಾಲ ನಾಗರಾಜ್ ಅವರ ಕಾರು ಚಾಲಕ ಹಾಗೂ ಅದೇ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಜಗದೀಶ್ ಎಂಬಾತ ನಾಗರಾಜ್ ಅವರ ಮೊಬೈಲ್ ಫೋನ್‌ನಲ್ಲಿದ್ದ ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗಳನ್ನು ತನ್ನ ಫೋನ್‌ಗೆ ವರ್ಗಾಯಿಸಿಕೊಂಡಿದ್ದ. ಬಳಿಕ ಅವುಗಳನ್ನು ಪರೀಕ್ಷಾರ್ಥಿಗಳಿಗೆ ಸೋರಿಕೆ ಮಾಡಿ ಅಕ್ರಮವಾಗಿ ಹಣ ಗಳಿಸುತ್ತಿದ್ದ ಎಂಬ ಆರೋಪವಿದೆ. ಪ್ರಕರಣದ ಮತ್ತೊಬ್ಬ ಆರೋಪಿ ಕೋಲಾರ ಜಿಲ್ಲೆಯ ಬಂಗಾರಪೇಟೆ ಕಾನೂನು ವಿದ್ಯಾಲಯವೊಂದರ ವಿದ್ಯಾರ್ಥಿ ವರುಣ್ ಕುಮಾರ್, ಪರೀಕ್ಷೆಯ ಹಿಂದಿನ ದಿನ ಕಾಲೇಜಿಗೆ ಬಂದ ಪ್ರಶ್ನೆ ಪತ್ರಿಕೆಗಳನ್ನು ತೆರೆದು, ಪ್ರಶ್ನೆಗಳನ್ನು ಮೊಬೈಲ್ ಫೋನ್‌ನಲ್ಲಿ ಕಾಪಿ ಮಾಡಿಕೊಂಡು ಹಣಕ್ಕಾಗಿ ಅವುಗಳನ್ನು ಆನ್‌ಲೈನ್‌ನಲ್ಲಿ ಸೋರಿಕೆ ಮಾಡಿದ್ದರು ಎಂದು ತಿಳಿದುಬಂದಿದೆ.

ಪ್ರಕರಣದ ತನಿಖೆ ಕೈಗೊಂಡ ಸೈಬರ್ ಕ್ರೈಂ ಠಾಣೆ ಪೊಲೀಸರು ತಾಂತ್ರಿಕ ಸಹಾಯದಿಂದ ಮಾಹಿತಿಗಳನ್ನು ಸಂಗ್ರಹಿಸಿ ಟೆಲಿಗ್ರಾಂ ಗ್ರೂಪ್‌ಗಳ ಮೂಲಕ ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದ ಮೂವರನ್ನು ಬಂಧಿಸಿದ್ದಾರೆ.

- ಬಿ.ದಯಾನಂದ್ ಬೆಂ.ನಗರ ಪೊಲೀಸ್ ಆಯುಕ್ತ

ಒಂದೇ ಕುಟುಂಬದ ಮೂವರು ಆತ್ಮಹತ್ಯೆ

ಮೈಸೂರು: ಹಣಕಾಸಿನ ವಿಚಾರದಲ್ಲಿ ಉಂಟಾದ ಕೌಟುಂಬಿಕ ಸಮಸ್ಯೆಯಿಂದ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಮ್ಮನಹಳ್ಳಿಯಲ್ಲಿ ಸೋಮವಾರ ರಾತ್ರಿ ಜೆಸ್ಸಿ ಆ್ಯಂಟೋನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಸಹೋದರ ಜೋಬಿ ಆ್ಯಂಟೋನಿ (45) ಹಾಗೂ ಜೋಬಿ ಅವರ ಪತ್ನಿ ಶರ್ಮಿಳಾ (40) ಶವ ವಿಜಯನಗರದ ಸಾರ್ವಜನಿಕ ಕ್ರೀಡಾಂಗಣದ ನೀರಿನ ಟ್ಯಾಂಕ್‌ನ ಏಣಿಯಲ್ಲಿ ಮಂಗಳವಾರ ಬೆಳಗ್ಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಜೋಬಿ ಆ್ಯಂಟೋನಿ ತನ್ನ ತಂಗಿ ಹೆಸರಿನಲ್ಲಿ ಬೆಟ್ಟಿಂಗ್‌ಗಾಗಿ ಲಕ್ಷಾಂತರ ಸಾಲ ಮಾಡಿದ್ದು, ಅದೇ ವಿಚಾರದಲ್ಲಿ ವಿವಾದ ಉಂಟಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಹೆಚ್ಚುವರಿ ತಂಬಾಕು ಮಾರಾಟಕ್ಕೆ ಒಪ್ಪಿಗೆ

ದೆಹಲಿ: ಭಾರಿ ಮಳೆಯಿಂದ ಹಾನಿಗೊಳಗಾದ ಕರ್ನಾಟಕದ 70 ಸಾವಿರ ತಂಬಾಕು ಬೆಳೆಗಾರರಿಗೆ ಹೆಚ್ಚುವರಿ ಶುಲ್ಕವಿಲ್ಲದೆ ಹೆಚ್ಚುವರಿ ಮತ್ತು ಅನಧಿಕೃತ ತಂಬಾಕನ್ನು ತಂಬಾಕು ಮಂಡಳಿಯ ಹರಾಜಿನಲ್ಲಿ ಮಾರಾಟ ಮಾಡಲು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಒಪ್ಪಿಗೆ ನೀಡಿದೆ. ಕೇಂದ್ರ ಸರಕಾರದ ಈ ನಿರ್ಧಾರವು 12,838 ಪರವಾನಗಿ ಪಡೆಯದ ತಂಬಾಕು ರೈತರಿಗೆ ಪ್ರಯೋಜನವಾಗಿದೆ.

ಸುಡಾನ್ ಸಂಘರ್ಷ: 200ಕ್ಕೂ ಹೆಚ್ಚು ಹತ್ಯೆ

ಪೋರ್ಟ್ ಸುಡಾನ್: ದೇಶದ ದಕ್ಷಿಣ ಭಾಗದ ಹಳ್ಳಿಗಳ ಮೇಲೆ ಮೂರು ದಿನ ದಾಳಿ ನಡೆಸಿದ ಅರೆಸೇನಾ ಪಡೆ, ಮಹಿಳೆಯರು- ಮಕ್ಕಳು ಸೇರಿ 200ಕ್ಕೂ ಹೆಚ್ಚು ಜನರನ್ನು ಕೊಂದಿದೆ. ಸೇನೆಯೊಂದಿಗೆ 2 ವರ್ಷಗಳಿಂದಲೂ ಸಂಘರ್ಷಕ್ಕಿಳಿದಿರುವ ಅರೆಸೇನಾ ಪಡೆಯ ಕ್ಷಿಪ್ರ ಬೆಂಬಲ ಪಡೆಯ (ಆರ್‌ಎಸ್‌ಎಫ್) ಯೋಧರು, ವೈಟ್ ನೈಲ್ ರಾಜ್ಯದ ಅಲ್-ಕದರಿಸ್ ಮತ್ತು ಅಲ್ ಖೆಲ್ವಾತ್ ಗ್ರಾಮಗಳಲ್ಲಿ ನಿರಾಯುಧ ಗ್ರಾಮಸ್ಥರ ಮೇಲೆ ದಾಳಿ ನಡೆಸಿದ್ದಾರೆ ಎಂದು ಆಂತರಿಕ ಸಂಘರ್ಷದ ಮೇಲ್ವಿಚಾರಣೆ ನಡೆಸುತ್ತಿರುವ ವಕೀಲರ ಗುಂಪು ತಿಳಿಸಿದೆ.

ಸ್ಥಳೀಯ ಸಂಸ್ಥೆಗಳ ಅಸಹಕಾರದ ನಡುವೆ ಡ್ರೋಣ್ ಮೂಲಕ ಕೆಲಸ ಮುಗಿಸಿದ ಸರ್ವೇ ಇಲಾಖೆ

12 ಸಾವಿರ ಕೆರೆಗಳ ಒತ್ತುವರಿ ಸಮೀಕ್ಷೆ ಪೂರ್ಣ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ರಾಜ್ಯದಲ್ಲಿ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಎಚ್ಚರಿಕೆಗಳ ನಂತರವೂ ಕೆರೆಗಳ ಒತ್ತುವರಿ ಹೆಚ್ಚಾಗುತ್ತಿದ್ದು, ಸರಕಾರದ ಸರ್ವೇ ಇಲಾಖೆ ಸದ್ದಿಲ್ಲದೆ ಕೆರೆಗಳ ಒತ್ತುವರಿಗಳನ್ನು ಪತ್ತೆ ಮಾಡಿದೆ.

ಮಾಜಿ ಮುಖ್ಯಮಂತ್ರಿಗಳ ವಿರುದ್ಧ ಸರಕಾರಿ ಜಮೀನು ಒತ್ತುವರಿ ಆರೋಪದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಸರ್ವೇ ಕಾರ್ಯಗಳನ್ನು ನಡೆಸುವ ಮೂಲಕ ಹೆಚ್ಚು ಸಕ್ರಿಯರಾಗಿರುವ ಸರ್ವೇ ಇಲಾಖೆಯು ಈಗ ಕೆರೆಗಳ ಒತ್ತುವರಿ ಕಡೆ ಗಮನ ಹರಿಸುತ್ತಿದೆ.

ಈ ತನಕ ಹಳೇ ಪದ್ಧತಿಯಲ್ಲಿ ಸರ್ವೇ ನಡೆಯುತ್ತಿದ್ದ ಕಾರಣ ಒತ್ತುವರಿ ಗುರುತಿಸುವುದು ತೀರಾ ವಿಳಂಬವಾಗುತ್ತಿತ್ತು. ಇದರಿಂದ ಕೆರೆಗಳ ಒತ್ತುವರಿ ಹಗಲು ದರೋಡೆಯಂತೆ ನಡೆಯುತ್ತಿತ್ತು. ಇದನ್ನು ಅಧಿಕಾರಿಗಳು ಪ್ರಶ್ನಿಸಿದರೆ, ಭೂಗಳ್ಳಲು ತಡೆಯಾಜ್ಞೆಗಳನ್ನು ತಂದು ಸರಕಾರಕ್ಕೆ ಸವಾಲಾಗುತ್ತಿದ್ದರು. ಇದನ್ನು ತಪ್ಪಿಸಲು ಸರ್ವೇ ಇಲಾಖೆಯು ಈಗ ಸುಧಾರಿತ ತಂತ್ರಜ್ಞಾನದ ರೋವರ್ ಉಪಕರಣ ಬಳಸಿ ಸರ್ವೇಗಳನ್ನು ನಡೆಸುತ್ತಿದ್ದು, ಆ ಮೂಲಕ ಕೆರೆಗಳ ದಾಖಲೆಗಳನ್ನು ಸಂರಕ್ಷಣೆ ಮಾಡುತ್ತಿದೆ. ಹಾಗೆಯೇ ಕೆರೆಗಳ ಒತ್ತುವರಿಗಳನ್ನೂ ಗುರುತಿಸಿ ಅವುಗಳ ಡಿಜಿಟಲ್ ದಾಖಲೆಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ರವಾನಿಸುತ್ತಿದೆ. ಹೀಗಾಗಿ ಈತನಕ ರಾಜ್ಯದಲ್ಲಿರುವ 42 ಸಾವಿರ ಕೆರೆಗಳ ಪೈಕಿ 12 ಸಾವಿರ ಕೆರೆಗಳು ಒತ್ತುವರಿಯಾಗಿರುವುದು ಪತ್ತೆಯಾಗಿದೆ. ಅಂದರೆ ಜಮೀನು ಮತ್ತು ಕೆರೆಗಳ ಒತ್ತುವರಿಯನ್ನು ಪತ್ತೆ ಮಾಡಲು ಹಳೇ ಸರಪಳಿ ಪದ್ಧತಿಯಿಂದ ಹೊರಬಂದಿರುವ ಸರ್ವೇ ಇಲಾ ಖೆಯು ಈಗ ಅತ್ಯಂತ ಕಡಿಮೆ ಅವಧಿಯಲ್ಲಿ ಅಳತೆ ಮಾಡಿ ಅವುಗಳ ದಾಖಲೆಗಳನ್ನು ಸಿದ್ಧಪಡಿಸುತ್ತಿದೆ. → 4

ಜಿಲ್ಲಾವಾರು ಮಾಹಿತಿ

ಜಿಲ್ಲೆಗಳು	ಕೆರೆಗಳು	ಒತ್ತುವರಿ ಕೆರೆಗಳು
ಬೆಂಗಳೂರು ನಗರ	837	730
ಬೆಂ.ಗ್ರಾಮಾಂತರ	710	643
ಮಂಡ್ಯ	962	448
ಮೈಸೂರು	2,991	1,506
ರಾಮನಗರ	1,496	735
ಹಾಸನ	6,902	1,534
ಶಿವಮೊಗ್ಗ	4,835	1,240
ಕೋಲಾರ	2,520	807
ತುಮಕೂರು	2,061	608
ಉತ್ತರ ಕನ್ನಡ	2,118	448

- ಕೆರೆಗಳ ಒತ್ತುವರಿಯನ್ನು ಪತ್ತೆ ಮಾಡಲು ಹಳೇ ಸರಪಳಿ ಪದ್ಧತಿಯಿಂದ ಹೊರಬಂದಿರುವ ಸರ್ವೇ ಇಲಾಖೆ
- ಕಡಿಮೆ ಅವಧಿಯಲ್ಲಿ ಅಳತೆ ಮಾಡಿ ದಾಖಲೆಗಳನ್ನು ಸಿದ್ಧಪಡಿಸಿ, ಡಿಜಿಟಲೀಕರಣಗೊಳಿಸುತ್ತಿರುವ ಇಲಾಖೆ

ರಾಜ್ಯದಲ್ಲಿ 42ಸಾವಿರ ಕೆರೆಗಳಿದ್ದು, ಅವುಗಳ ಪೈಕಿ ಈಗಾಗಲೇ ಸುಮಾರು 31 ಕೆರೆಗಳ ಸರ್ವೇ ಕಾರ್ಯ ಮುಗಿಸಲಾಗಿದೆ. ಉಳಿದ 11 ಸಾವಿರ ಕೆರೆಗಳನ್ನು ಆದಷ್ಟು ಶೀಘ್ರವೇ ಪೂರ್ಣಗೊಳಿಸಿ, ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿಡಲಾಗುತ್ತದೆ.

-ಜೆ.ಮಂಜುನಾಥ್ ಸರ್ವೇ ಇಲಾಖೆ ಆಯುಕ್ತರು

ಶಿಕ್ಷಣ ಸಂಸ್ಥೆಗೆ ಸರಕಾರದಿಂದ ಸೌಲಭ್ಯ: ಶ್ರೀಗಳ ಭರವಸೆ

ಕೊಲ್ಹಾರ: ಮಸನಗೂಳಿಯ ಸಂಗನಬಸವಶ್ರೀಗಳ ಹೆಸರಿನಿಂದ ರೋಣಿಹಾಳದಲ್ಲಿ ಪ್ರಾರಂಭವಾದಂತಹ ಈ ಶಿಕ್ಷಣ ಸಂಸ್ಥೆಗೆ ಸರಕಾರದಿಂದ ಸೌಲಭ್ಯಗಳನ್ನು ಕೊಡಿಸಲಾಗುವುದು ಎಂದು ಮಸನಗೂಳಿಯ ಪೀಠಾಧಿಪತಿ ಸಂಸ್ಥಾನದ ಷ.ಬ್ರ. ಅಭಿನವ ಸಂಗನಬಸವ ಶಿವಾಚಾರ್ಯರು ಹೇಳಿದರು.

ತಾಲೂಕಿನ ರೋಣಿಹಾಳದಲ್ಲಿ ಸಂಗನಬಸವ ವಿದ್ಯಾವರ್ಧಕ ಸಂಘದ ಸಂಗನಬಸವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಕನ್ನಡ ಮತ್ತು ಆಂಗ್ಲ ಮಾಧ್ಯಮದ 10ನೇ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಮತ್ತು ರಾಜ್ಯ ಮಟ್ಟದ ಸಂಗನಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯಸಾನಿಧ್ಯ ವಹಿಸಿ ಜ್ಯೋತಿ ಬೆಳಗಿಸಿ ಆಶೀರ್ವಚನ ನೀಡಿದರು.

ಈ ಶಾಲೆ ಕೇವಲ ಮಕ್ಕಳಿಗೆ ಜ್ಞಾನ ಹಾಗೂ ನೃತ್ಯವನ್ನುಕಲಿಸುತ್ತಿಲ್ಲ. ಇಲ್ಲಿ ಮುರಾರ್ಜಿ, ನವೋದಯ, ಸೈನಿಕ ಸೇರಿದಂತೆ ವಿವಿಧ ವಸತಿ ಶಾಲೆಗಳಿಗೆ ಮಕ್ಕಳನ್ನು ತಯಾರಿ ಮಾಡುವಂತಹಕೇಂದ್ರವಾಗಿದೆ. ಬಡವರ ಮಕ್ಕಳಿಗೆ ವಿಶೇಷ ಆದ್ಯತೆಯನ್ನು ನೀಡಲಾಗುತ್ತಿದೆ. ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಪ್ರೌಢ ಶಾಲೆ ಯನ್ನುಪ್ರಾರಂಭಿಸಲಾಗಿದೆ ಇದರಿಂದ ಈ ಭಾಗದ ಸುತ್ತ ಮುತ್ತಲಿನ ಮಕ್ಕಳಿಗೆ ವಿದ್ಯೆಯನ್ನು ಕಲಿಯುವುದಕ್ಕೆ ಬಹಳಷ್ಟು ಅನುಕೂಲವಾಗಿದೆ ಎಂದರು. ನಂದಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸವರಾಜ ಪೂಜಾರಿ, ಸಂಸ್ಥೆಯ ಅಧ್ಯಕ್ಷ ಶ್ರೀಶೈಲ ಪಾರಗೊಂಡ ಮಾತನಾಡಿದರು. ಈ ವೇಳೆ ರಾಜ್ಯ ಮಟ್ಟದ ಸಂಗನಬಸವ ಶ್ರೀಪ್ರಶಸ್ತಿ ಪಡೆದ ಶಿಕ್ಷಕ ಸಿದ್ದರಾಮಬಿರಾದಾರ, ಶಿಕ್ಷಣ ಗೌರಕ್ಕ್ಯಾಗಡಿ, ರೈತ ಮುಖಂಡ ಸೋಮುಬಿರಾದಾರ, ಪತ್ರಕರ್ತ ಅರುಣ ಚಿರನಂಗಾರವರನ್ನು ಹಾಗೂ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದಂತಹ ವಿದ್ಯಾರ್ಥಿಗಳನ್ನು ಅಭಿನವ ಸಂಗನಬಸವಶ್ರೀಗಳು ಹಾಗೂ ಗಣ್ಯರುಸನ್ಮಾನಿಸಿ ಪ್ರಶಸ್ತಿ ವಿತರಿಸಿಶುಭಕೋರಿದರು.

10 ಕಂಟ್ರಿ ಪಿಸ್ತೂಲ್, 24 ಸಜೀವ ಗುಂಡು ವಶ: ವಿಜಯಪುರ ಎಸ್ಪಿ ಲಕ್ಷ್ಮಣ ನಿಂಬರಗಿ

ಅಕ್ರಮ ಪಿಸ್ತೂಲ್ ಹೊಂದಿದ ಹತ್ತು ಆರೋಪಿಗಳ ಬಂಧನ

ವಿಜಯಪುರ: ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳಿಗೆ ಬಳಸಲಾಗುತ್ತಿದ್ದ ಅಕ್ರಮ ನಾಡಾ ಪಿಸ್ತೂಲ್ ಗಳ ಜಾಲು ಹಿಡಿಯಲು ವಿಜಯಪುರ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ, ಜಿಲ್ಲಾದ್ಯಂತ ಅಕ್ರಮವಾಗಿ ಪಿಸ್ತೂಲ್ ಪಡೆದ ಒಟ್ಟು 10 ಆರೋಪಿಗಳನ್ನು ಬಂಧಿಸಿ ಅವರಿಂದ 10 ಕಂಟ್ರಿ ಪಿಸ್ತೂಲ್ ಹಾಗೂ 24 ಸಜೀವ ಗುಂಡುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ನಗರದ ಪೊಲೀಸ್ ಸಮುದಾಯ ಭವನದಲ್ಲಿ ಮಂಗಳವಾರ ಈ ಕುರಿತು ವಿಜಯಪುರ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು.

ಕಳೆದ ಜ.28 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಅರಕೇರಿ ತಾಂಡಾ 1 ರಲ್ಲಿ ಸತೀಶ ರಾಠೋಡ ಕೊಲೆ ಪ್ರಕರಣ ನಡೆದಿತ್ತು. ಇದೇ ಗ್ರಾಮದ ರಮೇಶ ಲಮಾಣಿ ಎಂಬಾತ ಮಗಳನ್ನು ಮದುವೆ ಮಾಡಿಕೊಡುವಂತೆ ಸತೀಶ ರಾಠೋಡ ರಮೇಶ ಲಮಾಣಿಯನ್ನು ಕೇಳಿದ್ದಾಗ ಆತ ನಿರಾಕರಿಸಿದ್ದ. ಇದೇ ಕಾರಣಕ್ಕೆ ಇಬ್ಬರ ನಡುವೆ ಜಗಳ ಮತ್ತುಗಾಗಿದ್ದು, ಮಗಳ ಸಾವಿಗೆ ಸತೀಶನೇ ಕಾರಣವೆಂದು ತಂದೆ ರಮೇಶ ಲಮಾಣಿ ಸತೀಶ ರಾಠೋಡನನ್ನು ಪಿಸ್ತೂಲ್ ನಿಂದ ಗುಂಡು ಹಾರಿಸಿ, ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದ. ಈ ಸಂಬಂಧ 6 ಜನರನ್ನು ಬಂಧಿಸಲಾಗಿತ್ತು.

ಸತೀಶ ರಾಠೋಡ ಕೊಲೆ ಮಾಡಲು ಪ್ರಕರಣದ 5 ನೇ ಆರೋಪಿಯಾಗಿರುವ ಸಾಗರ ಅಲಿಯಾಸ್ ಸುರೇಶ ರಾಠೋಡ ಎಂಬಾತ ರಮೇಶ ಲಮಾಣಿಗೆ ಅಕ್ರಮ ಪಿಸ್ತೂಲ್ ಪೂರೈಸಿದ್ದ. ಆರೋಪಿ ಸಾಗರ ಪೊಲೀಸ್ ವಿಚಾರಣೆ ವೇಳೆ ಜಿಲ್ಲೆಯಲ್ಲಿ ಹಲವಾರು ಜನರಿಗೆ ಅಕ್ರಮ ಪಿಸ್ತೂಲ್ ಪೂರೈಸಿರುವುದಾಗಿ ನೀಡಿದ ಮಾಹಿತಿ ಆಧರಿಸಿ ಪೊಲೀಸರು ಜಿಲ್ಲೆಯ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಸುರೇಶನಿಂದ ಅಕ್ರಮವಾಗಿ ಪಿಸ್ತೂಲ್ ಪಡೆದವರ ಮೇಲೆ ದಾಳಿ ನಡೆಸಿ, ಒಟ್ಟು 10 ಕಂಟ್ರಿ ಪಿಸ್ತೂಲ್, 24 ಸಜೀವ ಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಎಸ್ಪಿ ತಿಳಿಸಿದರು.

ಅಕ್ರಮ ಪಿಸ್ತೂಲ್ ನೀಡಿದ್ದ ಸಾಗರ ರಾಠೋಡನ ಸೇರಿ ಈತನಿಂದ ಅಕ್ರಮ ಪಿಸ್ತೂಲ್ ಪಡೆದಿದ್ದ ವಿಜಯಪುರ ಹಂಚಿನಾಳ ತಾಂಡಾದ ಪ್ರಕಾಶ ರಾಠೋಡ, ಕರಾಡದೊಡ್ಡಿಯ ಅಶೋಕ ಪಾಂಡ್ರೆ, ತುಳಜಾಪುರದ ಸುಜಿತ ರಾಠೋಡ, ವಿಜಯಪುರ ನಗರ ಸಾಯಿ ಪಾರ್ಕ್ ನ ಸುಖದೇವ ರಾಠೋಡ, ಸಿಂದಗಿ ನಾಗಾವಿ ತಾಂಡಾದ ಪ್ರಕಾಶ ರಾಠೋಡ, ಬಸನವ ಬಾಗೇವಾಡಿಯ ಗಣೇಶ ಶೆಟ್ಟಿ, ಹುಬ್ಬಳ್ಳಿಯ ಚನ್ನಪ್ಪ ನಾಗನೂರ, ತಿಕೋಟಾ ಲೋಹಗಾಂವ ತಾಂಡಾದ ಸಂತೋಷ ರಾಠೋಡ ಹಾಗೂ ಸಾಂಗ್ಲಿಯ ಜನಾರ್ಧನ ಪವಾರನನ್ನು ವಿಜಯಪುರ ಪೊಲೀಸರು ಬಂಧಿಸಿ, ಪಿಸ್ತೂಲ್, ಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಅಕ್ರಮ ಪಿಸ್ತೂಲ್ ಪೂರೈಸುತ್ತಿದ್ದ ಸಾಗರ ಅಲಿಯಾಸ್ ಸುರೇಶ ರಾಠೋಡ ಈ ಹಿಂದೆ ಟ್ರಕ್ ಚಾಲಕನಾಗಿ ಕೆಲಸ ಮಾಡುತ್ತಿದ್ದ ವೇಳೆ ಐದಾರೂ ವರ್ಷಗಳಿಂದ ಮಧ್ಯಪ್ರದೇಶದ ವ್ಯಕ್ತಿಯೊಬ್ಬನೊಂದಿಗೆ ಸಂಪರ್ಕ ಹೊಂದಿ ಆತನಿಂದ ಅಕ್ರಮವಾಗಿ ಪಿಸ್ತೂಲ್ ಗಳನ್ನು ಖರೀದಿಸಿ ಇತರರಿಗೆ ಸುಮಾರು 50 ಸಾವಿರದಿಂದ ಒಂದು ಲಕ್ಷ ಹಣಕ್ಕೆ ಪಿಸ್ತೂಲ್ ಮಾರುತ್ತಿದ್ದನು ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಜಯಪುರ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಮಾತನಾಡಿದರು.

ಪ್ರಶಂಸನಾ ಪತ್ರ ನೀಡಿ ಶ್ಲಾಘನೆ

ವಿಜಯಪುರ ಅಡಿಷನಲ್ ಎಸ್ಪಿಗಳಾದ ಶಂಕರ ಮಾರಿಹಾಳ ಹಾಗೂ ರಾಮನಗೌಡ ಹಟ್ಟಿ ಅವರ ಮಾರ್ಗದರ್ಶನದಲ್ಲಿ ಅಕ್ರಮ ಪಿಸ್ತೂಲ್ ಜಾಲ ಹಿಡಿಯುವ ಯಶಸ್ವಿ ಕಾರ್ಯಾಚರಣೆಯಲ್ಲಿ ಕರ್ತವ್ಯ ನಿರ್ವಹಿಸಿದ ಡಿಎಸ್ಪಿ ಗಿರಿಮಲ್ಲ ತಳಕಟ್ಟಿ, ಬಸವರಾಜ ಯಲಿಗಾರ, ಹೆಚ್.ಎಸ್.ಜಗದೀಶ, ಬಲ್ಲಪ್ಪ ನಂದಗಾವಿ, ಪೊಲೀಸ್ ಇನಸ್ಪೆಕ್ಟರ್ ಗಳಾದ ರಾಯಗೊಂಡ ಜಾನರ, ಮಲ್ಲಯ್ಯ ಮಠಪತಿ, ನಾನಾಗೌಡ ಪಾಟೀಲ, ಗುರುಶಾಂತ ದಾಶ್ಯಾಳ, ಪರಶುರಾಮ ಮನಗೂಳಿ, ಪಿಎಸ್ಐಗಳಾದ ವಿನೋದ ದೊಡ್ಡಮನಿ, ಎಸ್.ಎ.ಉಪ್ಪಾರ, ಶ್ರೀಕಾಂತ್ ಕಾಂಬಳೆ, ಆರೀಫ್ ಮುಶಾಪುರಿ, ದೇವರಾಜ ಉಳ್ಳಾಗಡ್ಡಿ, ಸೀತಾರಾಮ ಲಮಾಣಿ, ಡಿ.ಎಂ. ಸಂಗಾಪುರ, ಬಿ.ಎ.ತಿಪ್ಪರೆಡ್ಡಿ ಸೇರಿದಂತೆ ಎಲ್ಲಾ ಪೊಲೀಸ್ ಸಿಬ್ಬಂದಿಯನ್ನು ಎಸ್ಪಿ ಲಕ್ಷ್ಮಣ ನಿಂಬರಗಿ ಪ್ರಶಂಸನಾ ಪತ್ರ ನೀಡಿ ಶ್ಲಾಘಿಸಿದರು.

ಅಕ್ರಮ ಪಿಸ್ತೂಲ್ ಹೊಂದಿದ 10 ಆರೋಪಿಗಳು .

ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಕೆ ಅಗತ್ಯ: ಸಚಿವ ಪಾಟೀಲ

ಸಿಂದಗಿ: ಭಾರತದ ಭೂಮಿ ಎಲ್ಲ ಬೆಳೆಗಳನ್ನು ಬೆಳೆಯುವ ಪವಿತ್ರ ಭೂಮಿ ಆದರೆ ನಮ್ಮ ರೈತರು ವೈಜ್ಞಾನಿಕ ಕೃಷಿ ಪದ್ದತಿಯನ್ನು ಅನುಸರಿಸುತ್ತಿಲ್ಲ. ಇದರಿಂದ ಹೆಚ್ಚು ಕೃಷಿ ಕ್ಷೇತ್ರದಲ್ಲಿ ನಷ್ಟವನ್ನು ಎದುರಿಸುತ್ತಿದ್ದಾರೆ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ಬಂದಾಳ ರಸ್ತೆಯ ಅನ್ನಪೂರ್ಣೇಶ್ವರಿ ನಗರದಲ್ಲಿ ಸಿಂದಗಿ, ಆಲಮೇಲ, ದೇವರ ಹಿಪ್ಪರಗಿ ತಾಲೂಕಿನ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ, ಅರ್ಬನ್ ಬ್ಯಾಂಕು ಹಾಗೂ ಕ್ರೆಡಿಟ್, ಸೌಹಾರ್ದ ಸಹಕಾರಿ ಸಂಘಗಳ ಸಹಯೋಗದೊಂದಿಗೆ ಹಮ್ಮಿಕೊಂಡ ಸಹಕಾರ ಭವನ ಕಟ್ಟಡದ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡಿದ ಅವರು, ವಿಜಯಪುರ ಜಿಲ್ಲೆಯ ಭೂಮಿ ಬರಡು ಭೂಮಿ ನಿಜ ಆದರೆ ಮುಂದೊಂದು ದಿನ ಈ ಭೂಮಿ ಬಂಗಾರದ ಕಡ್ಡಿಯಾಗಲಿದೆ. ಈ ಮೊದಲು ಶೇ 60–70 ರಷ್ಟಿರುವ ಒಕ್ಕಲುತನ ಇಂದು ಶೇ 20 ಕ್ಕೆ ಇಳಿದಿದೆ ಇದು ದೊಡ್ಡ ದುರಂತ ಎಂದರು. ಈ ವೇಳೆ ಶಾಸಕ ಅಶೋಕ ಮನಗೂಳಿ, ಸಹಕಾರಿ ಸಮಿತಿ ಅಧ್ಯಕ್ಷ ರಾಮರಾವ ನಾಯಕ, ಶ್ರೀಮಂತ ಇಂಡಿ, ಶಿವಕುಮಾರ ಗುಂದಗಿ ಮಾತನಾಡಿದರು. ಸಾನಿಧ್ಯ ವಹಿಸಿದ ಸಾರಂಗಮಠ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ ಆಲಮೇಲ ಪಟ್ಟಣ ಪಂಚಾಯತ ಅಧ್ಯಕ್ಷ ಸಾಧಿಕ ಸುಂಬಡ, ಕೆಡಿಪಿ ಸದಸ್ಯೆ ಮಹಾನಂದ ಬಮ್ಮಣ್ಣಿ, ಹಣಮಂತ್ರಾಯಗೌಡ ಪಾಟೀಲ, ಗುರುಶಾಂತ ನೀಡೋಣಿ, ಸಹಾಯಕ ನಿಬಂಧಕ ಕೆ.ಎಚ್.ವಡ್ಡರ ಪುರಸಭೆ ಅಧ್ಯಕ್ಷ ಶಾಂತವೀರ ಬಿರಾದಾರ, ಪ್ರಕಾಶ ಕೋರಿ, ರವಿ ನಾಗೂರ, ವಿವೇಕಾನಂದ ಪಾಟೀಲ, ಸುರೇಶ ಮಲಗೊಂಡ ಸೇರಿದಂತೆ ಸಿಂದಗಿ, ಆಲಮೇಲ ಹಾಗೂ ದೇವರಹಿಪ್ಪರಗಿ ತಾಲೂಕಿನ ಸಹಕಾರಿ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.

ಸಹಕಾರ ಭವನ ಕಟ್ಟಡದಭೂಮಿ ಪೂಜೆಯನ್ನು ಸಚಿವ ಶಿವಾನಂದ ಪಾಟೀಲ ನೆರವೇರಿಸಿ ಮಾತನಾಡಿದರು.

ಇಂಗಳಗಿ ಸಹಕಾರಿ ಸಂಘದಲ್ಲಿ ಅಕ್ರಮ: ಆನಂದ ಆರೋಪ

ಪತ್ರಿಕಾಗೋಷ್ಠಿಯಲ್ಲಿ ಆನಂದ ಪವಾರ ಮಾತನಾಡಿದರು.

ಇಂಡಿ: ತಾಲೂಕಿನ ಇಂಗಳಗಿ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘ ನಿಯಮಿತ ಇಂಗಳಗಿ ಚುನಾವಣೆ ಯಾದಿಯಲ್ಲಿ ಸಾಕಷ್ಟು ಅಕ್ರಮವೆಸಗಲಾಗಿದೆ ಎಂದು ಸಂಘದ ಅ ವರ್ಗದ ಸದಸ್ಯ ಆನಂದ ಪವಾರ್ ಸೇರಿದಂತೆ ಹಲವರು ಆರೋಪಿಸಿದ್ದಾರೆ.

ಮಂಗಳವಾರ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂತಿಮ ಶೇರುದಾರರ ಪಟ್ಟಿಯಲ್ಲಿ ಅಪೂರ್ಣ ಶೇರ್ ಹೊಂದಿದ ಸದಸ್ಯರ ಹೆಸರು ಸಹ ಇವೆ. ಅಲ್ಲದೆ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಮೂರಕ್ಕಿಂತ ಹೆಚ್ಚು ಸಹಿ ಮಾಡಿದ್ದರೂ ಸಹ ಅಂತಹವರ ಹೆಸರುಗಳನ್ನು ಕೈ ಬಿಡಲಾಗಿದೆ. ಅಚಿತಿಮ ಯಾದಿಯಲ್ಲಿನ ಸದಸ್ಯತ್ವ ಸಂಖ್ಯೆ ಹಾಗೂ ಸಂಘದ ಗಣಕಯಂತ್ರದಲ್ಲಿನ ಸದಸ್ಯತ್ವ ಸಂಖ್ಯೆಗಳನ್ನು ಪರಿಶೀಲಿಸಿದಾಗ ಎರಡೂ ಸಹ ಬೇರೆ–ಬೇರೆ ಇವೆ. ಹಿಂದಿನ ಆಡಳಿತ ಮಂಡಳಿ ಅಧ್ಯಕ್ಷರ ಕುಮ್ಮಕ್ಕಿನಿಂದ ಸಂಘದ ಮುರ್ಕಯ ಕಾರ್ಯನಿರ್ವಹಣಾಧಿಕಾರಿ ವಿಷ್ಣು ವಾಘಮೋರೆ ದೊಡ್ಡ ಪ್ರಮಾಣದ ಅಕ್ರಮವೆಸಗಿದ್ದಾರೆ ಎಂದು ಆರೋಪಿಸಿದರು.

ಚುನಾವಣೆ ಪ್ರಕ್ರಿಯೆ ಫೆ. 15 ರಿಂದ ಆರಂಭವಾಗಿದ್ದು ಅದಕ್ಕಿಂತಲೂ ಒಂದು ದಿನ ಮುಂಚೆಯೇ ನೋಟಿಸ್ ಭೋರ್ಡಿಗೆ ಅರ್ಹ ಮತದಾರರ ಯಾದಿ ಹಾಗೂ ಚುನಾವಣೆ ಮಾಹಿತಿ ಅಚಿಟಿಸಬೇಕಿತ್ತು. ಆದರೆ ಅಂದು ನೋಟಿಸ್ ಬೋರ್ಡಿಗೆ ಹಚ್ಚದ ಕಾರಣ ಸಾರ್ವಜನಿಕರು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಫೆ. 15 ರಂದು ಕೇಳಿದಾಗ ಅಂದು ಬೆಳಿಗ್ಗೆ ನೋಟಿಸ್ ಬೋರ್ಡಿಗೆ ಮಾಹಿತಿ ಅಂಟಿಸಿದ್ದಾರೆ. ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ಕೃತ್ಯಗಳು ನಡೆಯುತ್ತಿದ್ದು ಬಲಾಢ್ಯರೇ ಮತ್ತೆ, ಮತ್ತೆ ಅಧಿಕಾರ ಹಿಡಿಯುಂತಾಗಿದೆ.

ಈ ಕುರಿತು ಸಹಾಯಕ ಉಪನಿಬಂಧಕರ ಕಾರ್ಯಾಲಯಕ್ಕೆ ಹಾಗೂ ಜಿಲ್ಲಾ ಸಹಾಯಕ ಉಪನಿಬಂಧಕರ ಕಾರ್ಯಾಲಯಕ್ಕೆ ಮನವಿ ಸಲ್ಲಿಸಿದರು ಸಹ ಯಾವೊಬ್ಬ ಅಧಿಕಾರಿಗಳು ತನಿಖೆಯಾಗಲಿ, ಅಥವಾ ಸ್ಥಳಕ್ಕೆ ಬಂದು ಚೌಕಾಸಿ ಮಾಡುತ್ತಿಲ್ಲ, ಇದರಿಂದ ನೇರವಾಗಿ ಆಡಳಿತ ನಡೆಸುವವರು ಲಂಚದ ಬಲೆಯಲ್ಲಿ ಬಿದ್ದಿದ್ದಾರೆಂಬುದು ತಿಳಿಯುತ್ತದೆ. ಮುಗ್ಧ ರೈತರ ಸಂಘದಲ್ಲಿಯೂ ನೀಚ ರಾಜಕಾರಣ ಮಾಡುತ್ತಿರುವುದು ಯಾವ ಪುರುಷಾರ್ಥಕ್ಕೆ? ಇದರ ಹಿಂದೆ ದೊಡ್ಡ–ದೊಡ್ಡ ರಾಜಕಾರಣಿಗಳ ಕೈವಾಡವೂ ಇದೆ ಎಂದು ಆರೋಪಿಸಿದರು.

ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಈ ಕುರಿತು ಪರಿಶೀಲಿಸಿ ಯಾದಿಯನ್ನು ತಯಾರು ಮಾಡಿ ಗ್ರಾಮದ ಜನತೆಗೆ ಅನುಕೂಲ ಮಾಡಿಕೊಡಬೇಕು, ಇಲ್ಲವಾದರೆ ಸಾರ್ವಜನಿಕರೆಲ್ಲರೂ ಸೇರಿ ಉಗ್ರ ಹೋರಾಟಕ್ಕೆ ಅಣಿಯಾಗುತ್ತೇವೆ ಅದಕ್ಕೆ ನೇರವಾಗಿ ತಾಲೂಕಾಡಳಿತವೇ ಹೊಣೆಯಾಗಲಿದೆ ಎಂದು ಎಚ್ಚರಿಸಿದರು.

IIFL FINANCE

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಇ-ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ ಆನ್‌ಲೈನ್ ಮೂಲಕ **22.02.2025** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು / ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ವಿಫಲವಾದಲ್ಲಿ ಅದನ್ನು **05.03.2025** ರಂದು ಯಾವುದೇ ಸೂಚನೆ ಇಲ್ಲದೆ ಜಿಲ್ಲಾ ಮಟ್ಟದಲ್ಲಿ ನಿಗದಿತ ಜಿಲ್ಲಾ ಕೇಂದ್ರದಲ್ಲಿ ಮರು ಹರಾಜು ಮಾಡಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಅದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಬಿಜಾಪುರ-ಜಿಎಲ್ - #1541, 1ನೇ ಮಹಡಿ, ಹೊಸ ವಿಟ್ಟಲ್ ಮಂದಿರ ರಸ್ತೆ, ಬಿದ್ರಿ ಎದುರು ಆಸ್ಪತ್ರೆ, ಹಳೆ ಕುಂಬಾರ ಗಲ್ಲಿ, ಕೆನರಾ ಬ್ಯಾಂಕ್ ಹತ್ತಿರ, ವಿಜಯಪುರ-586101

ಶಾಖೆಯ ಹೆಸರು: ಬಿಜಾಪುರ-ಜಿಎಲ್. ತಾಲೂಕು - ಬಿಜಾಪುರ
ಚಿನ್ನದ ಸಾಲದ ಖಾತೆ ಸಂಖ್ಯೆ: GL23906217, GL29564566, GL33298850, GL33473000, GL33482922, GL33579112, GL33593600, GL33626357, GL33630604, GL33646294, GL33833870, GL33865657
ಶಾಖೆಯ ಹೆಸರು: ವಿಜಯಪುರ-ಸಿಂದಗಿ ಜಿಎಲ್. ತಾಲೂಕು - ಸಿಂದಗಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL31114766, GL31385268, GL31713829, GL33039364, GL33059075, GL33076276, GL33089832, GL33252582, GL33263269, GL33313394, GL33555731, GL33571748, GL33658990, GL33683465, GL33716268, GL33725880, GL33745524, GL33846368, GL33865783, GL33929456, GL33942626, GL33988388, GL33996543
ಶಾಖೆಯ ಹೆಸರು: ವೈಜಾಪುರ-ತಾಳಿಕೋಟಿ ಜಿಎಲ್. ತಾಲೂಕು - ಬಿ.ಬಾಗೇವಾಡಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL26615534, GL27206408, GL31572166, GL31583184, GL31614894, GL31630013, GL31658313, GL31677668, GL31813871, GL31904017, GL31942596, GL31964668, GL31966339, GL31975476, GL32017164, GL32141830, GL32184041, GL32222625, GL32476248, GL32642432, GL32653245, GL32664864, GL32666694, GL32714336, GL32827862, GL32882468, GL32897364, GL32904546, GL32907115, GL32925710, GL32925908, GL33035935, GL33060635, GL33066620, GL33394164, GL33523839, GL33543737, GL33640281, GL33651274, GL33782295, GL33803125, GL33928445, GL33941999

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್ಎಲ್‌ಗುಣಮಟ್ಟ ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.

ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 19.02.2025
ಸ್ಥಳ: ವಿಜಯಪುರ

ಎಸ್‌ಡಿ/-
ಅಧಿಕೃತಸಹಿ
ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್

IIFL FINANCE

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಇ-ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ ಆನ್‌ಲೈನ್ ಮೂಲಕ **22.02.2025** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಇ-ಪ್ರೊಕ್ಯೂರ್ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು / ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ಅಪೇಕ್ಷಿತ ಪ್ರತಿಸ್ಪಂದನವನ್ನು ಪಡೆಯಲು ವಿಫಲವಾದರೆ, ಜಿಲ್ಲಾ ಮಟ್ಟದಲ್ಲಿ ಯಾವುದೇ ಮುಂದಿನ ಸೂಚನೆ ನೀಡದೆ **05.03.2025** ದಂದು ಅವನ್ನು ನಿರ್ದಿಷ್ಟಪಡಿಸಲಾದ ಜಿಲ್ಲಾ ಕೇಂದ್ರದಲ್ಲಿ ಹರಾಜು ಮಾಡಲಾಗುತ್ತದೆ, ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಅದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಬೆಳಗಾವಿ-ಗೋಕಾಕ ಜಿಎಲ್ - ಸಿ ಟಿ ಎಸ್ ನಂ. 2982, 1ನೇ ಮಹಡಿ, ಬಫ್ನಾ ಚೌಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ರವಿವಾರಪೇಟೆ, ಗೋಕಾಕ್ ಟೌನ್, ಬೆಳಗಾವಿ ಜಿಲ್ಲೆ, ಗೋಕಾಕ್ -591307.

ಶಾಖೆಯ ಹೆಸರು: ಬೆಳಗಾವಿ-ಅಥಣಿ ಜಿಎಲ್. ತಾಲೂಕು - ಅಥಣಿ
ಚಿನ್ನದ ಸಾಲದ ಖಾತೆ ಸಂಖ್ಯೆ : GLL24140505, GLL26722194, GLL31036252, GLL31140455, GLL31154514, GLL31165419, GLL31178187, GLL31698193, GLL31868442, GLL32237416, GLL32259009, GLL32818553, GLL33278546, GLL33294958, GLL33299460, GLL33323359, GLL33528047, GLL33556538, GLL33558700, GLL33717981, GLL33833536, GLL33865570, GLL33953022
ಶಾಖೆಯ ಹೆಸರು: ಬೆಳಗಾವಿ-ಬೈಲಹೊಂಗಲ. ತಾಲೂಕು - ಬೈಲಹೊಂಗಲ
ಚಿನ್ನದ ಸಾಲದ ಖಾತೆ ಸಂಖ್ಯೆ. : GLL31663410, GLL31766177, GLL31782954, GLL32767318, GLL33166173, GLL33177704, GLL33218144, GLL33481732, GLL33492312, GLL33500537, GLL33516104, GLL33518020, GLL33651058, GLL33682719, GLL33748608, GLL33753736, GLL33771047, GLL33771239, GLL33790576, GLL33799410, GLL33837663, GLL33865271, GLL33899146, GLL33908397, GLL33915751, GLL33927710, GLL33929250, GLL33941509, GLL33962075, GLL33984819
ಶಾಖೆಯ ಹೆಸರು: ಬೆಳಗಾವಿ-ಬೆಳಗಾವಿ ಜಿಎಲ್. ತಾಲೂಕು - ಬೆಳಗಾವಿ
ಚಿನ್ನದ ಸಾಲದ ಖಾತೆ ಸಂಖ್ಯೆ : GLL27591823, GLL30969905, GLL31638818, GLL31652702, GLL31802175, GLL31804509, GLL31810309, GLL33050117, GLL33471168, GLL33475047, GLL33819094, GLL33826290, GLL33849897, GLL33864253, GLL33936339, GLL33942821
ಶಾಖೆಯ ಹೆಸರು: ಬೆಳಗಾವಿ-ಗೋಕಾಕ ಜಿಎಲ್. ತಾಲೂಕು - ಗೋಕಾಕ್
ಚಿನ್ನದ ಸಾಲದ ಖಾತೆ ಸಂಖ್ಯೆ : GL31660521, GL31678090, GL32785678, GL33391971, GL33400885, GL33500074, GL33518318, GL33599715, GL33618665, GL33755438, GL33770720, GL33926646, GL33942274
ಶಾಖೆಯ ಹೆಸರು: ಬೆಳಗಾವಿ-ಮೂಡಲಗಿ ಜಿಎಲ್. ತಾಲೂಕು - ಗೋಕಾಕ್
ಚಿನ್ನದ ಸಾಲದ ಖಾತೆ ಸಂಖ್ಯೆ : GL30929441, GL30951282, GL31611262, GL31629070, GL31765469, GL31782864, GL32981544, GL33136977, GL33277206, GL33294833, GL33757243, GL33791165, GL33832616, GL33862305, GL33879661, GL33908065
ಶಾಖೆಯ ಹೆಸರು: ಬೆಳಗಾವಿ-ರಾಯಬಾಗ ಜಿಎಲ್. ತಾಲೂಕು - ರಾಯಬಾಗ
ಚಿನ್ನದ ಸಾಲದ ಖಾತೆ ಸಂಖ್ಯೆ : GL31639851, GL31722783, GL32837555, GL32936712, GL33366063, GL33636741, GL33645035, GL33714680, GL33717100, GL33745010, GL33813166, GL33825570, GL33877425
ಶಾಖೆಯ ಹೆಸರು: ಬೆಳಗಾವಿ-ರಾಮದುರ್ಗ ಜಿಎಲ್. ತಾಲೂಕು - ರಾಮದುರ್ಗ
ಚಿನ್ನದ ಸಾಲದ ಖಾತೆ ಸಂಖ್ಯೆ : GL24916159, GL33030170, GL33060826, GL33306674, GL33321885, GL33436862, GL33451433, GL33463861, GL33736516, GL33746134, GL33754969, GL33770431, GL33872771, GL33877798, GL33892857, GL33899733, GL33914559, GL33919969, GL33980181, GL33980716
ಶಾಖೆಯ ಹೆಸರು: ಬೆಳಗಾವಿ-ಸಂಕೇಶ್ವರ ಜಿಎಲ್. ತಾಲೂಕು - ಹುಕೇರಿ
ಚಿನ್ನದ ಸಾಲದ ಖಾತೆ ಸಂಖ್ಯೆ : GL31721342, GL31768020, GL32982160, GL32992338, GL33126948, GL33222068, GL33436841, GL33694249, GL33711861, GL33719993, GL33732170, GL33737441, GL33791949, GL33799909, GL33820317, GL33826772, GL33846657, GL33862796, GL33873339, GL33891807, GL33922973, GL33950494, GL33968129, GL33975043, GL33986759
ಶಾಖೆಯ ಹೆಸರು: ಬೆಳಗಾವಿ-ಹುಕ್ಕೇರಿ ಜಿಎಲ್. ತಾಲೂಕು - ಹುಕೇರಿ
ಚಿನ್ನದ ಸಾಲದ ಖಾತೆ ಸಂಖ್ಯೆ : GL26465537, GL31159583, GL32416253, GL32444413, GL33069702, GL33193969, GL33198829, GL33689744, GL33704825, GL33744583, GL33907937, GL33955552, GL33958183, GL33968332, GL33970891
ಶಾಖೆಯ ಹೆಸರು: ಕಿತ್ತೂರು ಜಿಎಲ್. ತಾಲೂಕು - ಬೈಲಹೊಂಗಲ
ಚಿನ್ನದ ಸಾಲದ ಖಾತೆ ಸಂಖ್ಯೆ : GL31328626, GL31344957, GL31638786, GL31642512, GL31652725, GL31761500, GL31761901, GL31782728, GL31804108, GL32051068, GL32791862, GL32800179, GL33028831, GL33145089, GL33270339, GL33295644, GL33313736, GL33327040, GL33476032, GL33496925, GL33523773, GL33575820, GL33789628, GL33975819
ಶಾಖೆಯ ಹೆಸರು: ಚಿಕ್ಕೋಡಿ-ಚಿಕೋಡಿ ಜಿಎಲ್. ತಾಲೂಕು - ಚಿಕ್ಕೋಡಿ
ಚಿನ್ನದ ಸಾಲದ ಖಾತೆ ಸಂಖ್ಯೆ : GL29440969, GL31313704, GL31662716, GL31677463, GL31749397, GL33077445, GL33170746, GL33177558, GL33385097, GL33898592, GL33927363, GL33932871, GL33942553
ಶಾಖೆಯ ಹೆಸರು: ನಿಪ್ಪಾಣಿ-ನಿಪ್ಪಾಣಿ ಜಿಎಲ್. ತಾಲೂಕು - ಚಿಕ್ಕೋಡಿ
ಚಿನ್ನದ ಸಾಲದ ಖಾತೆ ಸಂಖ್ಯೆ : GL26062958, GL26963627, GL32754038, GL32824770, GL32876488, GL32893560, GL32903097, GL32925139, GL33282213, GL33369266, GL33373480, GL33690011, GL33710087, GL33840743, GL33863180, GL33898811, GL33936350, GL33976001, GL33994287

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್ಎಲ್ ಗುಣಮಟ್ಟ ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.

ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 19.02.2025
ಸ್ಥಳ: ಬೆಳಗಾವಿ

ಎಸ್‌ಡಿ/-
ಅಧಿಕೃತಸಹಿ
IIFL ಫೈನಾನ್ಸ್ ಲಿಮಿಟೆಡ್

IIFL FINANCE

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಇ-ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ ಆನ್‌ಲೈನ್ ಮೂಲಕ **22.02.2025** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಇ-ಪ್ರೊಕ್ಯೂರ್ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು / ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ಅಪೇಕ್ಷಿತ ಪ್ರತಿಸ್ಪಂದನವನ್ನು ಪಡೆಯಲು ವಿಫಲವಾದರೆ, ಜಿಲ್ಲಾ ಮಟ್ಟದಲ್ಲಿ ಯಾವುದೇ ಮುಂದಿನ ಸೂಚನೆ ನೀಡದೆ **05.03.2025** ದಂದು ಅವನ್ನು ನಿರ್ದಿಷ್ಟಪಡಿಸಲಾದ ಜಿಲ್ಲಾ ಕೇಂದ್ರದಲ್ಲಿ ಹರಾಜು ಮಾಡಲಾಗುತ್ತದೆ, ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಅದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಬಾಗಲಕೋಟ-ಹುನಗುಂದ ಜಿಎಲ್ - #192-1 ಬಿ -1, 'ಕಡಪಟ್ಟಿ ಕಾಂಪ್ಲೆಕ್ಸ್ '1ನೇ ಮಹಡಿ, ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹತ್ತಿರ, ವಿ ಎಂ ಸರ್ಕಲ್, ಬಾಗಲಕೋಟೆ ಜಿಲ್ಲೆ, ಹುನಗುಂದ - 587118. ಕರ್ನಾಟಕ

ಶಾಖೆಯ ಹೆಸರು: ಚನ್ನಪಟ್ಟಣ-ಬಾಗಲಕೋಟ-ಬಾದಾಮಿ ಜಿಎಲ್. ತಾಲೂಕು - ಬಾದಾಮಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL24200473, GL24206045, GL30156092, GL30916344, GL30927568, GL31189471, GL31202391, GL31474418, GL32535395, GL32629106, GL32639438, GL32970092, GL32988621, GL33036576, GL33218980, GL33219932, GL33226073, GL33235723, GL33238424, GL33276447, GL33284318, GL33295570, GL33371244, GL33391695, GL33401442, GL33405505, GL33406179, GL33434267, GL33471874, GL33484095, GL33528037, GL33543058, GL33719266, GL33744935, GL33753293, GL33759186, GL33764513, GL33767213, GL33771001, GL33771855, GL33783338, GL33797931, GL33831263, GL33878934
ಶಾಖೆಯ ಹೆಸರು: ಬಾಗಲಕೋಟ-ಬಾಗಲಕೋಟ ಜಿಎಲ್. ತಾಲೂಕು - ಬಾಗಲಕೋಟೆ
ಚಿನ್ನದ ಸಾಲದ ಖಾತೆ ಸಂಖ್ಯೆ: GGL29019413, GL30916879, GL31735992, GL32784439, GL33186916, GL33198065, GL33655865, GL33837099, GL33864669, GL33985472, GL33996383
ಶಾಖೆಯ ಹೆಸರು: ಬಾಗಲಕೋಟ-ಬನಹಟ್ಟಿ ಜಿಎಲ್. ತಾಲೂಕು - ಜಮಖಂಡಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL24144313, GL30071882, GL31260744, GL31278488, GL31462576, GL31636985, GL31652872, GL31804023, GL31810728, GL33747480, GL33806469, GL33812205, GL33819696, GL33821984, GL33825955, GL33826733, GL33827028, GL33922368
ಶಾಖೆಯ ಹೆಸರು: ಬಾಗಲಕೋಟ-ಹುನಗುಂದ ಜಿಎಲ್. ತಾಲೂಕು - ಹುನಗುಂದ
ಚಿನ್ನದ ಸಾಲದ ಖಾತೆ ಸಂಖ್ಯೆ: GL24148389, GL30024174, GL31149918, GL31178366, GL32694935, GL32712664, GL33144231, GL33150109, GL33227459, GL33304944, GL33453651, GL33562193, GL33704691, GL33763804, GL33809462, GL33882718, GL33893540, GL33899349
ಶಾಖೆಯ ಹೆಸರು: ಬಾಗಲಕೋಟ-ಇಳಕಲ್ ಜಿಎಲ್. ತಾಲೂಕು - ಹುನಗುಂದ
ಚಿನ್ನದ ಸಾಲದ ಖಾತೆ ಸಂಖ್ಯೆ: GL24116170, GL26403047, GL31158328, GL31178729, GL31230485, GL31773798, GL32966726, GL33093315, GL33121481, GL33669709, GL33681591, GL33834364, GL33944708
ಶಾಖೆಯ ಹೆಸರು: ಬಾಗಲಕೋಟ-ಜಮಖಂಡಿ ಜಿಎಲ್. ತಾಲೂಕು - ಜಮಖಂಡಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL25128764, GL26487054, GL31749343, GL33393725, GL33560433, GL33725175, GL33725652, GL33733268, GL33746953, GL33747033, GL33747052, GL33750226, GL33782197, GL33839505, GL33865293, GL33958035, GL33969330
ಶಾಖೆಯ ಹೆಸರು: ಬಾಗಲಕೋಟ-ಕೆರೂರು ಜಿಎಲ್. ತಾಲೂಕು - ಬಾದಾಮಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL31630464, GL31688669, GL31708237, GL31775864, GL33714453, GL33719830, GL33723590, GL33745907, GL33875608, GL33891443, GL33920113, GL33920268, GL33946489, GL33988115
ಶಾಖೆಯ ಹೆಸರು: ಬಾಗಲಕೋಟ-ಮಹಾಲಿಂಗಪುರ ಜಿಎಲ್. ತಾಲೂಕು - ಜಮಖಂಡಿ
ಚಿನ್ನದ ಸಾಲದ ಖಾತೆ ಸಂಖ್ಯೆ: GLL25821085, GLL31568429, GLL31584256, GLL32734623, GLL32745463, GLL33076568, GLL33214505, GLL33309395, GLL33867830, GLL33892506
ಶಾಖೆಯ ಹೆಸರು: ಬಾಗಲಕೋಟ-ಮುಧೋಳ ಜಿಎಲ್. ತಾಲೂಕು - ಮುಧೋಳ
ಚಿನ್ನದ ಸಾಲದ ಖಾತೆ ಸಂಖ್ಯೆ: GLL26020846, GLL26804447, GLL30199326, GLL31103811, GLL31231522, GLL31313938, GLL31843787, GLL31853814, GLL32880814, GLL32895166, GLL33240880, GLL33533141, GLL33649487, GLL33722828, GLL33727137, GLL33734824, GLL33831050, GLL33837559, GLL33864737, GLL33865185, GLL33934751, GLL33960280

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್ಎಲ್‌ಗುಣಮಟ್ಟ ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.

ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 19.02.2025
ಸ್ಥಳ: ಬಾಗಲಕೋಟ

ಎಸ್‌ಡಿ/-
ಅಧಿಕೃತಸಹಿ
ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

ಛತ್ರಪತಿ ಶಿವಾಜಿ ಜಯಂತಿ ಇಂದು

ಬಾಗಲಕೋಟೆ: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಫೆ.19 ರಂದು ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆಯನ್ನು ಬೆಳಗ್ಗೆ 9:30 ಗಂಟೆಗೆ ನವನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ. ಇಂದು ಬೆಳಗ್ಗೆ 9:30ಕ್ಕೆ ಜಿಲ್ಲಾಡಳಿತ ಭವನದಿಂದ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪ್ರಾರಂಭವಾಗಿ ನವನಗರದ ಬಸ್ ನಿಲ್ದಾಣ ಎಲ್.ಐ.ಸಿ ವೃತ್ತ ಮಾರ್ಗವಾಗಿ ಭವ್ಯ ಮೆರವಣಿಗೆ ಮೂಲಕ ಡಾ. ಬಿ.ಆರ್.ಅಂಬೇಡ್ಕರ್ ಭವನ ತಲುಪುವುದು. ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪುರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎಚ್.ವೈ.ಮೇಟಿ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶೇಷ ಉಪನ್ಯಾಸಕರಾಗಿ ಶಿರೂರಿನ ಸಿದ್ದೇಶ್ವರ ಪ್ರೌಢಶಾಲೆಯ ಸಹಶಿಕ್ಷಕರಾದ ಸಂಜಯ ನಡುವಿನಮನಿ ಭಾಗವಹಿಸಲಿದ್ದಾರೆ.

ಉದ್ಯೋಗ ಮೇಳ ನಾಳೆ

ಬಾಗಲಕೋಟೆ: ಇಲ್ಲಿನ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಫೆ.20 ರಂದು ಬೆಳಗ್ಗೆ 10.30 ರಿಂದ ಸಂಜೆ 3ರ ವರೆಗೆ ನೇರ ಉದ್ಯೋಗ ಮೇಳ ಆಯೋಜಿಸಿದೆ. ಹಲವಾರು ಖಾಸಗಿ ಕಂಪನಿಗಳು ಪಾಲ್ಗೊಂಡು, ತಮ್ಮ ಸಂಸ್ಥೆಗಳ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿವೆ. 19 ರಿಂದ 35 ವರ್ಷದ ವಯೋಮಿತಿಯೊಳಗಿನ ಎಸ್‌ಎಸ್ ಎಲ್‌ಸಿ, ಪಿಯುಸಿ, ಐಟಿಐ ಮತ್ತು ಪದವೀಧರರು ಈ ಸಂದರ್ಶನದಲ್ಲಿ ಭಾಗವಹಿಸಬಹುದು. ಆಸಕ್ತ ಅಭ್ಯರ್ಥಿಗಳು ತಮ್ಮ ಬಯೋಡೆಟಾ ಹಾಗೂ ಮೂಲ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬಹುದು. ಮಾಹಿತಿಗೆ ದೂ ಸಂ. 08354-235337 ಸಂಪರ್ಕಿಸಬಹುದು ಎಂದು ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಹಾರ ವಿಭಾಗಕ್ಕಿಲ್ಲ ಶಿರಸ್ತೇದಾರರು

ರಬಕವಿ-ಬನಹಟ್ಟಿ: ತಾಲೂಕಾಡಳಿತದ ಆಹಾರ ವಿಭಾಗ ಸಾರ್ವಜನಿಕರಿಗೆ ಮಾರಕವಾಗುವಲ್ಲಿ ಕಾರಣವಾಗಿದೆ. ಕಳೆದ ಏಳೆಂಟು ತಿಂಗಳಿಂದ ಹೊಸ ಅರ್ಜಿ, ತಿದ್ದುಪಡಿ, ಸೇರ್ಪಡೆ ಹಾಗು ಮರಣ ಹೀಗೆ ಹಲವಾರು ಸೇವೆಗಳಿಗಾಗಿ ಸಾರ್ವಜನಿಕರು ಅಲೆದು ಸುಸ್ತಾಗುವಲ್ಲಿ ಕಾರಣವಾಗಿದೆ. ಆಹಾರ ವಿಭಾಗದಲ್ಲಿ ಶಿರಸ್ತೆದಾರರಿಲ್ಲದೆ ಕೇವಲ ಆಹಾರ ನಿರೀಕ್ಷಕರಿಂದ ಸೇವೆ ಮುಂದುವರೆದಿದ್ದು, ಜನಸಾಮಾನ್ಯರಿಗೆ ದೊರಕಬೇಕಾದ ಸೌಲಭ್ಯಗಳು ಸಾಧ್ಯವಾಗುತ್ತಿಲ್ಲ. ಕಣ್ಮುಚ್ಚಿ ಕುಳಿತ ಅಧಿಕಾರಿಗಳು: ತಾಲೂಕಿನಾದ್ಯಂತ ಪಡಿತರದಾರಿಂದ ಸಮರ್ಪಕವಾಗಿ ಪಡಿತರ ವಿತರಣೆಯಾಗುತ್ತಿಲ್ಲವೆಂದು ದೂರು ನೀಡಿದರೂ ಯಾವದೇ ಕ್ರಮ ಕೈಗೊಳ್ಳದಿರುವದು ಸೋಜಿಗದ ಸಂಗತಿಯಾಗಿದೆ. ಒಟ್ಟಾರೆ ಸಾರ್ವಜನಿಕ ಸೇವೆಗೆ ಇರಬೇಕಾದ ಆಹಾರ ಇಲಾಖೆಯು ಜನತೆಗೆ ಮಾರಕವಾಗುವಲ್ಲಿ ಕಾರಣವಾಗಿದೆ. 'ಜನಸಾಮಾನ್ಯರ ಕಾರ್ಯ ನಡೆಯುವಲ್ಲಿ ತಾಲೂಕಾಡಳಿತ ವಿಫಲತೆ ಕಾಣುತ್ತಿದೆ. ಶೀಘ್ರ ಪೂರ್ಣ ಪ್ರಮಾಣದಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳ ನೇಮಕವಾಗಬೇಕು.

ಮಹಾಶಿವರಾತ್ರಿ ಮಹೋತ್ಸವ 26ಕ್ಕೆ

ಜಮಖಂಡಿ: ಮಹಾಶಿವರಾತ್ರಿ ಅಂಗವಾಗಿ ಫೆ.20 ರಿಂದ ಫೆ.25 ರವರೆಗೆ ಪ್ರತಿದಿನ ಬೆಳಗ್ಗೆ 5.30 ರಿಂದ 6.30 ರವರೆಗೆ ಜಪಯೋಗ ಹಮ್ಮಿಕೊಳ್ಳಲಾಗುವುದು. ಫೆ.26 ರಂದು ಬೆಳಗ್ಗೆ 5.00 ಗಂಟೆಗೆ ಮಹಾಪೂಜೆ ಹಾಗೂ ಸಾಮೂಹಿಕ ಲಿಂಗಪೂಜೆಜರುಗಲಿದೆ. ಅದೇ ದಿನ ಸಂಜೆ 5.00 ಗಂಟೆಗೆ ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮ ಏರ್ಪಡಿಸಲಾಗುವುದು. ಫೆ.26 ರ ಸಂಜೆ 6.00 ಗಂಟೆಗೆ ವಿಶೇಷ ಕಾರ್ಯಕ್ರಮಗಳು ಜರುಗಲಿವೆ. ವಿಜಯಪುರಜ್ಞಾನಯೋಗಾಶ್ರಮದ ಬಸವಲಿಂಗ ಮಹಾಸ್ವಾಮಿಗಳು ದಿವ್ಯಸಾನ್ನಿಧ್ಯ ವಹಿಸುವರು. ಆಲಮಟ್ಟಿಯ ಪುರವರ ಮಠದರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು, ಜಮಖಂಡಿಯ ಮುತ್ತಿನಕಂತಿ ಹಿರೇಮಠದ ಶಿವಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು.ಮನ್ನಿಕೇರಿಯ ಮಹಾಂತಲಿಂಗೇಶ್ವರ ಮಠದ ವಿಜಯಮಹಾಂತೇಶ್ವರ ಮಹಾಸ್ವಾಮಿಗಳು ಹಾಗೂ ಮೈಗೂರಿನ ಶಿವಾನಂದ ಮಠದಗುರುಪ್ರಸಾದ ಮಹಾಸ್ವಾಮಿಗಳು ಅನುಭಾವ ಹಂಚಿಕೊಳ್ಳುವರು. ಶಾಸಕ ಜಗದೀಶಗುಡಗುಂಟಿ, ತೇರದಾಳ ಶಾಸಕ ಸಿದ್ದು ಸವದಿ, ವಿಧಾನ ಪರಿಷತ್ ಮಾಜಿ ಶಾಸಕ ಜಿ.ಎಸ್. ನ್ಯಾಮಗೌಡ, ಮಾಜಿ ಶಾಸಕ ಆನಂದ ನ್ಯಾಮಗೌಡ, ಉದ್ದಿಮೆದಾರ ಸಂಗಮೇಶ ನಿರಾಣಿ, ಅರ್ಬನ್ ಬ್ಯಾಂಕ್‌ಅಧ್ಯಕ್ಷರಾಹುಲ ಕಲೂತಿ, ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಶ್ರೀಮಠದ ಸರ್ವಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮಹಾಶಿವರಾತ್ರಿ ಮಹೋತ್ಸವವನ್ನು ಯಶಸ್ವಿಗೊಳಿಸಲು ತಿಳಿಸಿದ್ದಾರೆ.

{ಸಂತೋಷ್ ಲಾಡ್} ಸಚಿವ

ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ರಾಜಣ್ಣ ವಿಚಾರ ಅವರವರಿಗೆ ಬಿಟ್ಟಿದ್ದು. ಯಾರೂ ಹೊಸ ಸಿಎಂ ವಿಚಾರವನ್ನು ತೇಲಿಬಿಟ್ಟಿದ್ದಾರೆಯೋ ಅವರನ್ನೇ ಸುದ್ದಿಗಾರರು ಪ್ರಶ್ನಿಸಿ. ನನಗೆ ಸಂಬಂಧವಿಲ್ಲದ ಅಥವಾ ತಿಳಿಯದೇ ಇರುವ ವಿಚಾರದ ಬಗ್ಗೆ ಮಾತನಾಡುವುದು ಸೂಕ್ತವಲ್ಲ. ನಾನು ಯಾರ ಪರವೂ ಅಲ್ಲ, ವಿರೋಧವೂ ಅಲ್ಲ. ನಾನು ಕಾಂಗ್ರೆಸ್ ಪಕ್ಷದ ಪರ.

ಮುಧೋಳದಲ್ಲಿ ಮೂರು ದಿನ ವಿವಿಧ ಕಾರ್ಯಕ್ರಮಗಳ ಆಯೋಜನೆ । ಪ್ರತಿ ದಿನ ಸಂಗೀತ ಸಂಜೆ ಕಾರ್ಯಕ್ರಮ

ಫೆ.22ರಿಂದ 24ರವರೆಗೆ ರನ್ನ ವೈಭವ

ಬಾಗಲಕೋಟೆ: ಜಿಲ್ಲೆಯ ಮುಧೋಳದಲ್ಲಿ ಫೆ.22 ರಿಂದ 24ರ ವರೆಗೆ ಮೂರು ದಿನ ರನ್ನ ವೈಭವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 22 ರಂದು ಮುಧೋಳ ತಾಲೂಕಿನ ರನ್ನ ಬೆಳಗಲಿಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದ್ದು, 23 ಹಾಗೂ 24 ರಂದು ಮುಧೋಳದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

22 ರಂದು ರನ್ನ ಬೆಳಗಲಿಯಲ್ಲಿ ಸಂಜೆ 6ಕ್ಕೆ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವರಾದ ಡಾ. ಎಚ್.ಸಿ.ಮಹಾದೇವಪ್ಪ, ಪ್ರಿಯಾಂಕ್ ಖರ್ಗೆ, ಶಿವಾನಂದ ಪಾಟೀಲ, ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಎಸ್.ಎಸ್.ಮಲ್ಲಿಕಾರ್ಜುನ ಆಗಮಿಸಲಿದ್ದಾರೆ. ನಂತರ ರಾತ್ರಿ 9 ರಿಂದ ಸಂಗೀತ ನಿರ್ದೇಶಕ ಗುರುಕಿರಣ್ ಅವರ ತಂಡದವರಿಂದ ಸಂಗೀತ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

23 ರಂದು ಬೆಳಗ್ಗೆ 10ಕ್ಕೆ ಮುಧೋಳದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಸ್ಥಳೀಯ 45 ಜನಪದ ವಾಹಿನಿ ಕಲಾ ತಂಡಗಳು ಸೇರಿ ಹೊರ ರಾಜ್ಯದ 5 ಕಲಾ ತಂಡಗಳೊಂದಿಗೆ ಭವ್ಯ ಮೆರವಣಿಗೆ ಜರುಗಲಿದೆ. ನಂತರ 11ಕ್ಕೆ ರನ್ನ ಭವನದಲ್ಲಿ ಸಂಶೋಧಕ ಡಾ. ವಿ.ಎಸ್.ಮಾಳಿ ಅಧ್ಯಕ್ಷತೆಯಲ್ಲಿ ವಿಚಾರಗೋಷ್ಠಿ ಜರುಗಲಿದ್ದು, ನಂತರ 2 ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಬಾಗಲಕೋಟೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಂ .ಮಾತನಾಡಿದರು. ಜಿಪಂ ಸಿಇಒ ಶಶಿಧರ ಕುರೇರ್ ಹಾಗೂ ಎಡಿಸಿ ಪರಶುರಾಮ ಶಿನ್ನಾಳಕರ್ ಇದ್ದರು.

ರನ್ನ ಕ್ರೀಡಾಂಗಣದಲ್ಲಿ ಸಂಜೆ 4 ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, 8ಕ್ಕೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಜರುಗಲಿದ್ದು, ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗೃಹ ಸಚಿವ ಡಾ. ಜಿ.ಪರಮೇಶ್ವರ, ಸಚಿವರಾದ ರಾಮಲಿಂಗಾ ರೆಡ್ಡಿ, ಜಮೀರ್ ಅಹ್ಮದ್ ಖಾನ್, ಶಿವರಾಜ ತಂಗಡಗಿ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ. ನಂತರ ಗಾಯಕ ರಾಜೇಶ ಕೃಷ್ಣನ್ ಹಾಗೂ ಸಂಗೀತ ನಿರ್ದೇಶಕ ಅರ್ಜುನ ಜನ್ಯ ತಂಡದವರಿಂದ ಸಂಗೀತ ಲಹರಿ ಕಾರ್ಯಕ್ರಮ ಜರುಗಲಿದೆ ಎಂದರು.

24 ರಂದು ಡಾ. ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 11ಕ್ಕೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ. 11ಕ್ಕೆ ಕವಿ ಬಿ.ಆರ್.ಪೊಲೀಸ್ ಪಾಟೀಲ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಲಿದ್ದು, ಜತೆಗೆ ರನ್ನ ಪ್ರತಿಷ್ಠಾನದಿಂದ ಮುದ್ರಣಗೊಂಡ ಕಾವ್ಯತೇಜ ಎಂಬ ಕವನ ಸಂಕಲನ ಬಿಡುಗಡೆಗೊಳ್ಳಲಿದೆ ಎಂದು ತಿಳಿಸಿದರು.

ಸಂಜೆ 4ಕ್ಕೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದ್ದು, ವಿಧಾನಸಭೆ ಸಭಾಪತಿ ಯು.ಟಿ.ಖಾದರ್, ಸಚಿವರಾದ ಎಂ.ಬಿ.ಪಾಟೀಲ, ಸತೀಶ ಜಾರಕಿಹೊಳಿ, ಸಂತೋಷ ಲಾಡ್ ಹಾಗೂ ಶಾಸಕ ವಿನಯ್ ಕುಲಕರ್ಣಿ ಪಾಲ್ಗೊಳ್ಳಲಿದ್ದಾರೆ. ಸಂಜೆ 7.45 ರಿಂದ ರನ್ನನ ಗದಾಯುದ್ಧ ನಾಟಕ ಹಾಗೂ ಸೂತ್ರದ ಗೊಂಬೆಯಾಟ ಪ್ರದರ್ಶನಗೊಳ್ಳಲಿದೆ. ರಾತ್ರಿ 10 ರಿಂದ ಸಂಗೀತ ಸೌರಭ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

ಅಂದು ಸಂಜೆ 6.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಕವಿಚಕ್ರವರ್ತಿ ರನ್ನ ಪ್ರತಿಷ್ಠಾನದಿಂದ ನೀಡಲಾಗುವ ರನ್ನ ಹಳಗನ್ನಡ ಪ್ರಶಸ್ತಿಯನ್ನು ಸಿಎಂ ಸಿದ್ದರಾಮಯ್ಯ ಪ್ರದಾನ ಮಾಡಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ವಹಿಸಲಿದ್ದಾರೆ. ರನ್ನ ಪ್ರತಿಷ್ಠಾನದಿಂದ ಪ್ರಕಟಣೆಗೊಂಡ ಶ್ರೀ ಮುಕುಡ ಸ್ಮರಣ ಸಂಚಿಕೆಯನ್ನು ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಗುತ್ತದೆ ಎಂದು ತಿಳಿಸಿದರು.

ಜಿಪಂ ಸಿಇಒ ಶಶಿಧರ ಕುರೇರ್ ಹಾಗೂ ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ್ ಇದ್ದರು.

ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನೇಮಕ

ರನ್ನ ವೈಭವದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಒಟ್ಟು 4 ಡಿವೈಎಸ್ಪಿ, 17 ಸಿಪಿಐ ಹಾಗೂ 60ಕ್ಕೂ ಹೆಚ್ಚು ಪಿಎಸ್ಐ, 4 ಕೆಎಸ್‌ಆರ್‌ಪಿ ತುಕಡಿ ಹಾಗೂ ಹೋಂ ಗಾರ್ಡ್ ಸೇರಿ ಒಟ್ಟು ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ಬಳಸಿಕೊಳ್ಳಲಾಗುತ್ತಿದೆ. ಮುಧೋಳದಲ್ಲಿ ಉತ್ಸವ ನಡೆಯುವ ಸ್ಥಳಗಳಲ್ಲಿ ಸಿಸಿ ಟಿವಿ ವ್ಯವಸ್ಥೆ, ಕಾರ್ಯಕ್ರಮಕ್ಕೆ ಆಗಮಿಸುವ ವಾಹನಗಳಿಗೆ ಪಾರ್ಕಿಂಗ್ ಸೇರಿದಂತೆ ಎಲ್ಲ ವ್ಯವಸ್ಥೆ ಮಾಡಲಾಗಿದೆ. ಜತೆಗೆ ಮೂರು ದಿನ ಜನರು ಕಾರ್ಯಕ್ರಮದಲ್ಲಿ ಭಾಗಿಯಾಗುವುದರಿಂದ ಕಳ್ಳತನ ಪ್ರಕರಣಗಳು ಹೆಚ್ಚಾಗದಂತೆ ತಡೆಗಟ್ಟಲು ಹಗಲಿರುಳು ಪೊಲೀಸ್ ಸಿಬ್ಬಂದಿ ಗಸ್ತು ತಿರುಗಲಿದ್ದಾರೆ ಎಂದು ಎಸ್ಪಿ ಅಮರನಾಥ ರೆಡ್ಡಿ ತಿಳಿಸಿದರು.

1.30 ಕೋಟಿ ರು. ಸಂಗ್ರಹ

ರನ್ನ ವೈಭವಕ್ಕೆ ಸಾರ್ವಜನಿಕರಿಂದ ದೇಣಿಗೆ ಸಂಗ್ರಹ ಮಾಡಲಾಗುತ್ತಿದ್ದು, ಇಲ್ಲಿಯವರೆಗೆ ಒಟ್ಟು 1.40 ಕೋಟಿ ರು. ದೇಣಿಗೆ ಸಂಗ್ರಹವಾಗಿದೆ. ಕೇಂದ್ರ ಸರಕಾರದಿಂದ 50 ಲಕ್ಷ ರು. ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ 20 ಲಕ್ಷ ರು. ಈಗಾಗಲೇ ಬಂದಿದೆ. ಹೆಚ್ಚಿನ ಅನುದಾನಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಶೈಕ್ಷಣಿಕ ಪ್ರಗತಿ ಹೆಚ್ಚಿಸುವ ಕಲಿಕಾ ಹಬ್ಬ

ಬೀಳಗಿ: ನಮ್ಮ ದೇಶದ ಮಹಾನ್ ರಾಷ್ಟ್ರನಾಯಕರ ಪರಿಚಯ ಹಾಗೂ ನಮ್ಮ ದೇಶದ ಸಂಸ್ಕೃತಿ ಮತ್ತು ಇತಿಹಾಸವನ್ನು ಕಲಿಕಾ ಹಬ್ಬದ ಮೂಲಕ ಶಿಕ್ಷಕರು ಮಕ್ಕಳಿಗೆ ತಿಳಿಸುವದರಿಂದ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್ ಎಸ್ ಆದಾಪೂರ ಹೇಳಿದರು.

ತಾಲೂಕಿನ ಗಿರಿಸಾಗರ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಕಂದಗಲ್ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಆಧಾರಿತ ಕಲಿಕಾ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು. ಗ್ರಾ. ಪಂ ಅಧ್ಯಕ್ಷೆ ಶಾಂತಾ ಬಂಡಿವಡ್ಡರ, ಮಾಜಿ ತಾ.ಪಂ. ಸದಸ್ಯ ಶ್ರೀಕಾಂತ್ ಸಂದಿಮನಿ, ಗ್ರಾ. ಪಂ. ಸದಸ್ಯ ಪ್ರಕಾಶ್ ಹೆಗ್ಗೂರ, ಹಿರಿಯರಾದ ಹನುಮಂತ ಜಲ್ಲಿ, ರಾಷ್ ಶೇಖರ್ ಕಾಖಂಡಕಿ, ಮಲ್ಲಿಕಾರ್ಜುನ್ ಚಿತ್ರಭಾನುಕೋಟೆ, ಎಮ್ ಪಿ ಎಸ್ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ನಂದೆಪ್ಪ ತೊರವಿ, ಉಪಾಧ್ಯಕ್ಷೆ ಸುಜಾತ ನವಲಗನ್ನ, ಸದಸ್ಯರಾದ ಗಂಗಾ ಬಂಡಾರಿ, ಯಶೋಧ ಅರಮನಿ, ಶಕುಂತಲಾ ತೆಗ್ಗಿ, ಹನುಮಂತ್ ಬಜಂತ್ರಿ, ಈರಯ್ಯ ಮಠಪತಿ,ನಿಂಗಪ್ಪ ಬೊಮ್ಮನ್ನವರ್, ಪರಶುರಾಮ್ ಕಟಗಿ, ಸಂಗಪ್ಪ ಅಗಸರ, ಬಾಲಕಿಯರ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಸುರೇಶ್ ಹೊನ್ಯಾಳ, ರವಿ ಅರಮನಿ ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಎಂ ಬಿ ಕಣಬೂರ, ಜಗದೀಶ್ ಖೋತ ಇದ್ದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಅಕ್ಷರ ಬಂಡಿಯನ್ನು ಸಕಲ ವಾದ್ಯ ವೈಭವಗಳೊಂದಿಗೆ, ಮಕ್ಕಳಿಗೆ ರಾಷ್ಟ್ರ ನಾಯಕರ ವೇಷಭೂಷಣ ತೊಡಿಸಿ ಟ್ರ್ಯಾಕ್ಟರನಲ್ಲಿ ಸಡಗರ ಸಂಭ್ರಮದಿಂದ ಮೆರವಣಿಗೆ ಮಾಡಲಾಯಿತು ಹಿರಿಯರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಶಿಕ್ಷಣ ಇಲಾಖೆಯ ಅಧಿಕಾರಿಗಳು ಕ್ಲಸ್ಟರ್ ನ ಎಲ್ಲಾ ಸರಕಾರಿ ಶಾಲೆಯ ನೂರಾರು ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ತಾಲೂಕಿನ ಗಿರಿಸಾಗರ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಕಂದಗಲ್ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಆಧಾರಿತ ಕಲಿಕಾ ಹಬ್ಬ ಆಚರಿಸಲಾಯಿತು.

ಮಕ್ಕಳಿಗೆ ಪಠ್ಯಪುಸ್ತಕದೊಂದಿಗೆ ಕ್ರೀಡಾ ಚಟುವಟಿಕೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಸಾಮಾನ್ಯ ಜ್ಞಾನದ ಜಾಗೃತಿ ಮೂಡಿಸಬೇಕು.
– ಆರ್ ಎಸ್ ಆದಾಪೂರ, ಶಿಕ್ಷಣಾಧಿಕಾರಿ

ಮೃತ ನೇಕಾರರಿಗೆ ಪರಿಹಾರ ಧನ ನೀಡಿ

ರಬಕವಿ-ಬನಹಟ್ಟಿ: ರಾಜ್ಯದಲ್ಲಿರುವ ನೇಕಾರರ ಸಾಲಬಾಧೆಯಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಇದುವರೆಗೆ ಅಂದಾಜು 53 ಜನರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದು ದುಃಖದ ಸಂಗತಿಯಾಗಿದೆ. ಆದ್ದರಿಂದ ಆತ್ಮಹತ್ಯೆಯನ್ನು ಮಾಡಿಕೊಂಡ ನೇಕಾರರ ಕುಟುಂಬಕ್ಕೆ ಸರಕಾರ ಸೂಕ್ತ ಪರಿಹಾರ ಧನವನ್ನು ನೀಡಬೇಕು ಎಂದು ಬಾಗಲಕೋಟ ಜಿಲ್ಲಾ ಬಿಜೆಪಿ ನೇಕಾರ ಪ್ರಕೋಷ್ಠದ ಸಂಚಾಲಕ ಮಂಜುನಾಥ ಹಣಗಿ ಸರಕಾರವನ್ನು ಆಗ್ರಹಿಸಿದರು.

ಅವರು ಸೋಮವಾರ ಆತ್ಮಹತ್ಯೆಯನ್ನು ಮಾಡಿಕೊಂಡ ನೇಕಾರ ಸಂಗಮೇಶ ಮುರಗೋಡ ಅವರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿ ಪತ್ರಿಕೆಯ ಜತೆಗೆ ಮಾತನಾಡಿದರು.

ಈ ನಾಡಿನಲ್ಲಿಯ ನೇಕಾರರು ಮತ್ತು ನೇಕಾರಿಕೆಯ ವೃತ್ತಿಯು ಉಳಿಯಬೇಕಾದರೆ ಜವಳಿ ಇಲಾಖೆಗೆ ಸರಕಾರ ಸಾಕಷ್ಟು ಅನುದಾನವನ್ನು ನೀಡಬೇಕು. ನೇಕಾರರ ನೇಯ್ಗೆ ಮಾಡಿದಂತಹ ಸೀರೆ ಮತ್ತು ಬಟ್ಟೆಯನ್ನು ಸರಕಾರವೇ ಖರೀದಿ ಮಾಡಬೇಕು. ಮುಂದಿನ ಬಜೆಟ್ ನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಈ ನಿಟ್ಟಿನಲ್ಲಿ ಗಮನ ನೀಡಬೇಕು ಎಂದು ಹಣಗಿ ಆಗ್ರಹಿಸಿದರು.

ನೇಕಾರ ಮುಖಂಡ ಮಹಾದೇವ ನುಚ್ಚಿ ಮಾತನಾಡಿ, ಸರಕಾರ ಆದಷ್ಟು ಬೇಗನೆ ಮೃತ ಸಂಗಮೇಶ ಮುರಗೋಡರ ಕುಟುಂಬದ ನಿರ್ವಹಣೆಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ನೇಕಾರ ಮುಖಂಡರಾದ ಶ್ರೀಶೈಲ ಬೀಳಗಿ, ಪ್ರವೀಣ ಧಬಾಡಿ, ಆನಂದ ಜಗದಾಳ, ಕಾಡಪ್ಪ ಬುದ್ನಿ ಸೇರಿದಂತೆ ಅನೇಕರು ಇದ್ದರು.

ಬನಹಟ್ಟಿಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದ ಸಂಗಮೇಶ ಮುರಗೋಡ ಅವರ ಮನೆಗೆ ಜಿಲ್ಲಾ ನೇಕಾರ ಪ್ರಕೋಷ್ಠ ಘಟಕದ ಸಂಚಾಲಕ ಮಂಜುನಾಥ ಹಣಗಿ ಭೇಟಿ ನೀಡಿ ಮೃತರ ಕುಟುಂಬಕ್ಕೆ ಸ್ವಾಂತನ ಹೇಳಿದರು.

ತಾಯಿ-ಮಗು ಆಸ್ಪತ್ರೆಗೆ ಟೆಂಡರ್

ಸಾರ್ವಜನಿಕ ಆರೋಗ್ಯ ಘಟಕ ಪ್ರಯೋಗಾಲಯ(ಬಿಪಿಎಚ್‌ಯು) ಕಟ್ಟಡದ ಉದ್ಘಾಟನೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೆರವೇರಿಸಿದರು.

ಮುಧೋಳ: ನಗರದಲ್ಲಿ ಆರಂಭಿಸಲು ಉದ್ದೇಶಿಸಿರುವ ತಾಯಿ-ಮಗುವಿನ ಆಸ್ಪತ್ರೆಗೆ 50 ರಿಂದ 100 ಬೆಡ್‌ಗೆ ವಿಸ್ತರಿಸಿ ಶೀಘ್ರದಲ್ಲಿ ಟೆಂಡರ್ ಕರೆಯಲಾಗುವದು, ಬಾಗಲಕೋಟೆ ಜಿಲ್ಲೆಯ ಮುಧೋಳ, ಬೆಳಗಾವಿಯ ಅಥಣಿ ಸೇರಿದಂತೆ ಒಟ್ಟು ಮೂರು ಆಸ್ಪತ್ರೆಗಳನ್ನು ಆರಂಭಿಸಲಾಗುವದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಜಿಲ್ಲಾ ಆಡಳಿತ, ಜಿಪಂ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ, ಎಂಜಿನಿಯರಿಂಗ್ ಘಟಕ ಬೆಂಗಳೂರು ಇವರ ಸಹಯೋಗದಲ್ಲಿ ಮುಧೋಳ ತಾಲೂಕು ಆಸ್ಪತ್ರೆ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಸಾರ್ವಜನಿಕ ಆರೋಗ್ಯ ಘಟಕ ಪ್ರಯೋಗಾಲಯ(ಬಿಪಿಎಚ್‌ಯು) ಕಟ್ಟಡದ ಉದ್ಘಾಟನಾ ಸಮಾರಂಭ ನೆರವೇರಿಸಿ ಸುದ್ದಿಗಾರರ ಜತೆ ಅವರು ಮಾತನಾಡಿದರು.

ರಾಜ್ಯದ ಸರಕಾರಿ ಆಸ್ಪತ್ರೆಯಲ್ಲಿರುವ ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲಿ ಭರ್ತಿ ಮಾಡಿಕೊಳ್ಳಲಾಗುವುದು, ಈ ಕುರಿತು ಸಿಎಂ. ಗಮನ್ನಕ್ಕೆ ತರಲಾಗಿದೆ. ಬಜೆಟ್ ಪೂರ್ವದಲ್ಲೇ ನೇಮಕ ಮಾಡಿಕೊಳ್ಳಲಾಗುವುದು ಎಂದರು.

ಜಮಖಂಡಿ ಮಾಜಿ ಶಾಸಕ ಆನಂದ ನ್ಯಾಮಗೌಡ, ಕಾಂಗ್ರೆಸ್ ಮುಖಂಡ ಎಚ್.ಬಿ. ತಿಮ್ಮಾಪುರ, ಅಧ್ಯಕ್ಷ ಅಶೋಕ ಕಿವಡಿ, ರಘು ಮೊಕಾಶಿ, ಎಪಿಎಂಸಿ. ಅಧ್ಯಕ್ಷ ಸಂಗಪ್ಪ ಇಮ್ಮನ್ನವರ, ಸದುಗೌಡ ಪಾಟೀಲ, ಮುನೀರ ಖಾಜಿ, ಬಶೀರ ಅತ್ತಾರ, ಟಿಎಚ್‌ಒ. ವೆಂಕಟೇಶ ಮಲಘಾಣ, ವೈದ್ಯಾಧಿಕಾರಿ ಅಶೋಕ ಸೂರ್ಯವಂಶಿ, ಡಾ.ಬಿ.ವ್ಹಿ. ಬಿ.ಪಾಟೀಲ, ಡಾ.ಸಚಿನ್ ಪೂಜಾರಿ, ರವಿ ಹೊಸಗೌಡರ ಇತರರಿದ್ದರು.

ರನ್ನ, ಜನ್ನ, ಪೊನ್ನ, ಮಹಾನ್ ಇತಿಹಾಸಕಾರ ಕವಿಗಳು, ಫೆ.22. ರಿಂದ ಜರುಗಲಿರುವ ರನ್ನ ವೈಭವ ಸಾಹಿತ್ಯಕ ಇತರೆ ಮನರಂಜನಾ ಕಾರ್ಯಕ್ರಮ ಚೆನ್ನಾಗಿ ನಡೆಯಲಿ ಸಾಧ್ಯವಾದರೆ ನಾನೂ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸುವದಾಗಿದೆ.
– ದಿನೇಶ್ ಗುಂಡೂರಾವ್, ಸಚಿವ

ಲಸಿಕಾ ಉಗ್ರಾಣ ಕಟ್ಟಡ ಲೋಕಾರ್ಪಣೆ



ಬಾಗಲಕೋಟೆ: ನವನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ಜಿಲ್ಲಾ ಲಸಿಕಾ ಉಗ್ರಾಣ ಕಟ್ಟಡವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಲೋಕಾರ್ಪಣೆಗೊಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಲಸಿಕಾ ಉಗ್ರಾಣ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂದಾಜು 86.68 ಲಕ್ಷ ರು.ಗಳ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಇದರಲ್ಲಿ ವ್ಯಾಕ್ಸಿನ್ ಉಗ್ರಾಣ ಕೋಣೆ, ಕೋಲ್ಡಚೈನ್, ಪ್ಯಾಕಿಂಗ್, ಆಫೀಸ್, ಕಂಪ್ಯೂಟರ ಕೋಣೆ ಒಳಗೊಂಡಿದೆ ಎಂದರು.

ಎಚ್.ವೈ.ಮೇಟಿ, ಜಾನಕಿ ಕೆ.ಎಂ, ರೆಡ್ಡಿ, ಡಾ.ಮಂಜುನಾಥ.ಡಿ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಅರವಿಂದ ಪಟ್ಟಣಶೆಟ್ಟಿ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಕುಸುಮಾ ಮಾಗಿ, ದಯಾನಂದ ಕರೇನ್ನವರ, ಸುವರ್ಣ ಕುಲಕರ್ಣಿ, ಡಾ.ಶಿವನಗೌಡರ ಪಾಟೀಲ ಇತರರಿದ್ದರು.

ಸಮಾಚಾರ ಸಣ್ಣದಲ್ಲ

ಜಿಬಿಎಸ್ ರೋಗಕ್ಕೆ ಚಿಕ್ಕೋಡಿ ವ್ಯಕ್ತಿ ಸಾವು

ಚಿಕ್ಕೋಡಿ: ಕಳೆದ 2 ತಿಂಗಳ ಅವಧಿಯಲ್ಲಿ ದೇಶದ 5 ರಾಜ್ಯಗಳಲ್ಲಿ 18 ಜನರನ್ನು ಬಲಿ ಪಡೆದಿರುವ ನರಸಂಬಂಧಿ ವ್ಯಾಧಿಯಾದ ಗುಯಿಲಿನ್ ಬರ್ರೆ ಸಿಂಡ್ರೋಮ್ (ಜಿಬಿಎಸ್)ಗೆ ಇದೀಗ ಕರ್ನಾಟಕದ

ಮೊದಲ ವ್ಯಕ್ತಿ ಬಲಿಯಾಗಿದ್ದಾರೆ. ಮಹಾರಾಷ್ಟ್ರದ ಕೊಲ್ಹಾಪುರದ ತ್ರಪತಿ ಪ್ರಿಮಿಲೆರಾಜೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲೂಕಿನ ದೋನೆವಾಡಿ ಗ್ರಾಮದ ಯೆತಿಲ್ ಬಾಳಗೊಂಡ ಪಾಟೀಲ್ (64) ಮೃತಪಟ್ಟಿದ್ದಾರೆ. ಕಳೆದ 8 ದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿ ಆಗದೆ ಮೃತಪಟ್ಟಿದ್ದು, ರಾಜ್ಯದಲ್ಲೇ ಜಿಬಿಎಸ್ ಸೋಕಿಂಗೆ ಮೃತಪಟ್ಟ ಮೊದಲ ಘಟನೆ ಇದಾಗಿದೆ.

ವಿರಾಮ
ಪ್ರತಿ ಭಾನುವಾರ

ಆನ್‌ಲೈನ್ ಬೆಟ್ಟಿಂಗ್: ಒಂದೇ ಕುಟುಂಬದ ಮೂವರ ಸಾವು

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ದುರಂತಗಳ ಸರಮಾಲೆ

48 ಗಂಟೆಯಲ್ಲಿ ಹಣಕಾಸಿನ ಮುಗ್ಗಟ್ಟಿಗೆ ಏಳು ಮಂದಿ ಬಲಿ

ಮೈಸೂರು: ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆ ಮಾಡಿಕೊಂಡ 24 ತಾಸುಗಳ ಅಂತರದಲ್ಲೇ ಮೈಸೂರಿನಲ್ಲಿ ಮತ್ತೊಂದು ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಎರಡೂ ಪ್ರತ್ಯೇಕ ಘಟನೆಗಳಾದರೂ ಹಣದ ವಿಚಾರವೇ ಎರಡು ಕುಟುಂಬಗಳ ಏಳು ಮಂದಿಯ ಸಾವಿಗೆ ಕಾರಣವಾಗಿದೆ. ಐಪಿಎಲ್ ಬೆಟ್ಟಿಂಗ್ ಎಂಬ ಪೆಡಂಭೂತ ಇಡೀ ಕುಟುಂಬವನ್ನು ಬಲಿ ತೆಗೆದುಕೊಂಡಿದೆ.

ದಂಪತಿ, ಹಿರಿಯಣ್ಣ ಆತ್ಮಹತ್ಯೆ: ವಿಜಯನಗರ ಬಳಿಯ ಮುಡಾ ಕ್ರೀಡಾಂಗಣದಲ್ಲಿ ವಾಟರ್‌ಟ್ಯಾಂಕಿಗೆ ಅಳವಡಿಸಿದ್ದ ಕಬ್ಬಿಣದ ಮೆಟ್ಟಿಲುಗಳ ಬಳಿ ದಂಪತಿ ಸಾವಿಗೆ ಶರಣಾಗಿದ್ದಾರೆ. ಇದಕ್ಕೂ ಕೆಲವೇ ಗಂಟೆಗಳಿಗೆ ಮುನ್ನ ಇದೇ ಕುಟುಂಬದ ಹಿರಿಯಣ್ಣ ಕೂಡ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯರಗನಹಳ್ಳಿ ಬಡಾವಣೆಯ ಜೋಬಿ ಆಂಟೋನಿ (40) ಮತ್ತು ಶರ್ಮಿಳಾ ಅಲಿಯಾಸ್ ಸ್ವಾತಿ (35) ಒಟ್ಟಿಗೆ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಜೋಬಿ ಆಂಟೋನಿ ಅವರ ಅಣ್ಣ ಜೋಷಿ ಆಂಟೋನಿ ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದರು.

ಆತ್ಮಹತ್ಯೆಗೆ ಕಾರಣವೇನು..?: ಪೊಲೀಸರ ತನಿಖೆ ಪ್ರಕಾರ ಫೆ.17ರಂದು ಜೋಬಿ ಆಂಟೋನಿಯ ಸಹೋದರ ಜೋಷಿ ಆತ್ಮಹತ್ಯೆ ಮಾಡಿಕೊಂಡಿದ್ದರು. ತನ್ನ ಸಾವಿಗೆ ಜೋಬಿ ಆಂಟೋನಿ ಹಾಗೂ ಶರ್ಮಿಳಾ ಕಾರಣವೆಂದು ಜೋಷಿ ವಿಡಿಯೊ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದರು. ದಕ್ಷಿಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದರ ಬೆನ್ನಲ್ಲೇ ಪೊಲೀಸರು ತಮ್ಮನ್ನು ಬಂಧಿಸಬಹುದು ಎಂಬ ಭಯದಿಂದ ಜೋಬಿ ದಂಪತಿ, ತಾವು ಪ್ರೀತಿಸಿದ ಸ್ಥಳವಾದ ವಾಟರ್‌ಟ್ಯಾಂಕ್ ಬಳಿ ಮಂಗಳವಾರ ಬೆಳಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜೋಷಿ ಹೆಸರಿನಲ್ಲಿದ್ದ ಮನೆಯ ಮೇಲೆ ಮೃತ ದಂಪತಿ ಸಾಲಮಾಡಿ, ಆನ್‌ಲೈನ್ ಜೂಜಾಟದಲ್ಲಿ ಹಣ ಕಳೆದುಕೊಂಡಿದ್ದರು. ಇದರಿಂದ ನೊಂದ ಸಹೋದರ ಭಾನುವಾರ ನನ್ನ ಸಾವಿಗೆ ಅಣ್ಣ -ಅತ್ತಿಗೆ ಕಾರಣ. ಅವರು ನನ್ನ ಹೆಸರಿನಲ್ಲಿದ್ದ ಮನೆಯ ಮೇಲೆ ಸಾಲಮಾಡಿದ್ದು, ಸಾಲಗಾರರು ಕಿರುಕುಳ ನೀಡುತ್ತಿದ್ದಾರೆ ಎಂದು ಹೇಳಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಆನ್‌ಲೈನ್ ಬೆಟ್ಟಿಂಗ್‌ಗೆ ಕುಟುಂಬವೇ ಬಲಿ

ಆನ್‌ಲೈನ್ ಗೇಮ್, ಹಣ ಡಬ್ಲಿಂಗ್ ಆಸೆಗೆ ಇಡೀ ಕುಟುಂಬವೇ ಬಲಿಯಾದಂತಾಗಿದೆ. ಜೋಬಿ ಆಂಟೋನಿ ಹಾಗೂ ಜೋಷಿ ಆಂಟೋನಿ ಅವಳಿ-ಜವಳಿ ಮಕ್ಕಳು. ಜೋಬಿ ಆಂಟೋನಿ ದಂಪತಿ ಆನ್‌ಲೈನ್ ಬೆಟ್ಟಿಂಗ್ ಗಾಗಿ 80 ಲಕ್ಷ ಸಾಲ ಮಾಡಿಕೊಂಡಿದ್ದರು. ಸಾಲಗಾರರ ಕಾಟ ತಾಳಲಾರದೆ ಸೋಮವಾರ ಅಣ್ಣ ಜೋಷಿ ಆಂಟೋನಿ ಆತ್ಮಹತ್ಯೆಗೆ ಶರಣಾಗಿದ್ದರು. ಸಾವಿಗೆ ಮುನ್ನ ವಿಡಿಯೊ ರೆಕಾರ್ಡ್ ಮಾಡಿ ತಂಗಿಗೆ ಕಳುಹಿಸಿದ್ದ. ತಂಗಿ ಮೇರಿ ಶರ್ಲೈನ್ ಗೂ ಆತ್ಮಹತ್ಯೆ ಮಾಡಿಕೋ, ಮಗುವನ್ನು ಕೊಲ್ಲು ಎಂದು ಜೋಷಿ ಆಂಟೋನಿ ಪ್ರಚೋದಿಸಿದ್ದ ಎನ್ನಲಾಗಿದೆ. ಈ ಕಾರಣಕ್ಕೆ ತಂಗಿ ಮೇರಿ ಶರ್ಲೈನ್ ಅವರು ಜೋಬಿ ಆಂಟೋನಿ ಹಾಗೂ ಸ್ವಾತಿ ವಿರುದ್ಧ ಆತ್ಮಹತ್ಯೆ ಪ್ರಚೋದನೆ ಕೇಸ್ ದಾಖಲಿಸಿದ್ದರು. ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ದಡ ಸೇರಿದ 12 ಸಾವಿರ ಕೆರೆಗಳ ಒತ್ತುವರಿ ಸಮಸ್ಯೆ

← ಮೊದಲಪುಟದಿಂದ

ಅಷ್ಟೇ ಅಲ್ಲದೆ, ಆ ದಾಖಲೆಗಳು ಸರ್ವ ಕಾಲಕ್ಕೂ ಸಿಗುವಂತಾಗಲು ಡಿಜಿಟಲೀಕರಣಗೊಳಿಸಿ ಸಂಗ್ರಹಿಸುತ್ತಿದೆ. ಹೀಗಾಗಿ ಇಲಾಖೆ ಆಯುಕ್ತರು ಮತ್ತು ಇತರ ಅಧಿಕಾರಿಗಳ ಕಾರ್ಯವನ್ನು ಸರಕಾರ ಮೆಚ್ಚಿಕೊಂಡಿದ್ದು, ಕೆರೆಗಳ ಒತ್ತುವರಿ ಸರ್ವೇ ಕಾರ್ಯವನ್ನು ಮುಂದುವರಿಸುವಂತೆ ಸೂಚಿಸಿದ್ದಾರೆ.

ಆದರೆ ಬೇಸರದ ಸಂಗತಿ ಎಂದರೆ, ಸರ್ವೇ ಇಲಾಖೆ ಪತ್ತೆ ಮಾಡಿರುವ ಒತ್ತುವರಿಗಳನ್ನು ತೆರವುಗೊಳಿಸುವಲ್ಲಿ ಸಂಬಂಧಿಸಿದ ಇಲಾಖೆಗಳು ಆಸಕ್ತಿ ತೋರಿಸುತ್ತಿಲ್ಲ ಎಂದು ತಿಳಿದುಬಂದಿದೆ. ಅದರಲ್ಲೂ ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಕೆರೆಗಳ ಒತ್ತುವರಿ ಹೆಚ್ಚಾಗಿದ್ದು, ಇದರ ಬಗ್ಗೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಒತ್ತುವರಿ ತೆರವುಗೊಳಿಸಲು ಮುಂದಾಗದೆ ಹೊಂದಾಣಿಕೆಯೊಂದಿಗೆ ಒತ್ತುವರಿ ಮುಂದುವರಿಯುಂತೆ ಮಾಡಿದ್ದಾರೆ ಎನ್ನುವ ದೂರುಗಳು ಸರಕಾರಕ್ಕೆ ಸಲ್ಲಿಕೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆರೆಗಳೇ ಮಾಯ, ದಾಖಲೆಗಳಿಗೆ ಗಾಯ: ರಾಜ್ಯದಲ್ಲಿ 100 ಎಕರೆ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ಕೆರೆಗಳು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಸೇರುತ್ತವೆ. ಹೆಚ್ಚಿನ ವಿಸ್ತೀರ್ಣ ಇರುವ ಕೆರೆಗಳು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತವೆ. ಆದರೆ ರಾಜ್ಯದಲ್ಲಿ ಸಾವಿರಾರು ಕೆರೆಗಳಿದ್ದರೂ ಅವುಗಳಿಗೆ ಸೂಕ್ತ ದಾಖಲೆಗಳಿಲ್ಲದೆ ಅವುಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅನೇಕ ಕಡೆ ಕೆರೆಗಳೇ ಮಾಯವಾಗಿದ್ದು, ಇರುವ ಚೂರುಪಾರು ದಾಖಲೆಗಳಿಗೂ ಗಾಯವಾಗಿದೆ. ಇದೇ ಪರಿಸ್ಥಿತಿ ರಾಜ್ಯಾದ್ಯಂತ ಇದೆ. ಅದರಲ್ಲೂ ಬಿಬಿಎಂಪಿ ವ್ಯಾಪ್ತಿಯಲ್ಲಿ 202 ಕೆರೆಗಳಿದ್ದು, ಅವುಗಳ ಪೈಕಿ 159 ಕೆರೆಗಳಲ್ಲಿ ಒತ್ತುವರಿ ಇರುವುದನ್ನು ಗುರುತಿಸಲಾಗಿದೆ. ಇದನ್ನು ಮನಗಂಡಿರುವ ಸರ್ವೇ ಇಲಾಖೆ ರೋವರ್ ಎಂಬ ಹೊಸ ತಂತ್ರಜ್ಞಾನದ ಮೂಲಕ ಕೆರೆಗಳ ಸರ್ವೇ ನಡೆಸಿ ಅವುಗಳ ಸುತ್ತ 30 ಮೀಟರ್ ಬಫರ್ ವಲಯಗಳನ್ನೂ ಸೇರಿದಂತೆ ಗಡಿ ಗುರುತಿಸಿ ದಾಖಲೆಗಳನ್ನು ಸಿದ್ಧಪಡಿಸಿದೆ.

ಏನಿದು ರೋವರ್ ತಂತ್ರಜ್ಞಾನ?: ಕೆರೆ ಸೇರಿದಂತೆ ವಿವಿಧ ರೀತಿಯ ಜಮೀನುಗಳ ಸರ್ವೇ ಕಾರ್ಯವನ್ನು ಹಳೇ ಕಾಲದ ಸರಪಳಿ ವ್ಯವಸ್ಥೆ ಬದಲು ಡ್ರೋಣ್ ಬಳಸಿ ಚಿತ್ರಗಳನ್ನು ತೆಗೆದು ಆಸ್ತಿಗಳ ಗಡಿ ಗುರುತಿಸುವ ಸುಧಾರಿತ ವ್ಯವಸ್ಥೆಯೇ ರೋವರ್. ಅಂದರೆ ಸುಮಾರು 120 ಮೀಟರ್ ಎತ್ತರದಿಂದ ಡ್ರೋಣ್ ಕ್ಯಾಮೆರಾದ ಮೂಲಕ ಚಿತ್ರಗಳನ್ನು ತೆಗೆದು, ಅದಕ್ಕೆ ಕೋಡ್ ಸ್ಟೇಷನ್‌ಗಳ ಮೂಲಕ ಗಡಿ ಗುರುತಿಸಲಾಗುತ್ತದೆ. ಅದನ್ನು ಸುಧಾರಿತ ಸರ್ವೇ ಯಂತ್ರವಾದ ರೋವರ್‌ಗೆ ಲಿಂಕ್ ಮಾಡಿ, ಆ ಮೂಲಕ ಆಸ್ತಿಯ ನಾಲ್ಕೂ ಮೂಲೆಗಳ ಗಡಿಯನ್ನು ಗುರುತಿಸಿ ಅದನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲಾಗುತ್ತಿದೆ. ಹೀಗಾಗಿ ರಾಜ್ಯದಲ್ಲಿ ಒಂದು ವರ್ಷದಲ್ಲಿ ನಡೆಯಬೇಕಿರುವ ಸರ್ವೇ ಕಾರ್ಯಗಳನ್ನು ಕೆಲವೇ ತಿಂಗಳಲ್ಲಿ ಪೂರ್ಣಗೊಳಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

...ಬಾಕಿ ಅನುದಾನ ನೀಡಿ

← ಮೊದಲಪುಟದಿಂದ

2023-24 ರ ಕೇಂದ್ರ ಬಜೆಟ್‌ನಲ್ಲಿ ಮಧ್ಯ ಕರ್ನಾಟಕದ ಬರಪೀಡಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರು. ಅನುದಾನ ಘೋಷಿಸಿದ್ದರೂ ಈವರೆಗೂ ಹಣ ಬಿಡುಗಡೆಯಾಗಿಲ್ಲ. ಹೀಗಾಗಿ ಬೇಗನೆ ಯೋಜನೆ ಪೂರ್ಣಗೊಳಿಸಲು ಹಣ ಬಿಡುಗಡೆ ಮಾಡಬೇಕು. 2011ರ ಸೆ.16ರಂದು ನೀಡಿರುವ ತೀರ್ಪಿನಲ್ಲಿ ಕೆಲವು ಬದಲಾವಣೆ ಮಾಡಲು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಜತೆಗೆ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ ನೀಡಿರುವ ತೀರ್ಪಿನ ಅನ್ವಯ ತನಗೆ ಮೀಸಲಾಗಿರುವ ನೀರನ್ನು ಕರ್ನಾಟಕ ಬಳಸಿಕೊಳ್ಳಲು ಗೆಜೆಟ್ ಅಧಿಸೂಚನೆ ಹೊರಡಿಸಬೇಕು ಎಂದು ವಿನಂತಿಸಿಕೊಳ್ಳುತ್ತೇನೆ ಎಂದು ಹೇಳಿದರು.

ಮಹದಾಯಿ ವಿವಾದ ಬಗೆಹರಿಸಿ: ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಮೇಲೆ ಒತ್ತಡ ತಂದು, 2018ರ ಆಗಸ್ಟ್‌ನಲ್ಲಿ ಮಹದಾಯಿ ಜಲ ವಿವಾದ ನ್ಯಾಯಮಂಡಳಿ ನೀಡಿದ ತೀರ್ಪಿನ ಅನ್ವಯ ಕಳಸಾ ನಾಲಾ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮತಿ ದೊರಕಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಜಲಶಕ್ತಿ ಸಚಿವಾಲಯವು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ಮೇಲೆ ಒತ್ತಡ ಹೇರಿ, ನದಿ ಜೋಡಣೆ ಯೋಜನೆಯಡಿ ಗೋದಾವರಿ- ಕಾವೇರಿ ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಪಾಲನ್ನು ಮರುಪರಿಶೀಲನೆ ಮಾಡಬೇಕು. ಈ ಯೋಜನೆಯಡಿ ಪ್ರಸ್ತುತ ಕರ್ನಾಟಕಕ್ಕೆ ಕೇವಲ 15.891 ಟಿಎಂಸಿ (ಶೇ. 10.74) ನೀರನ್ನು ಮಾತ್ರ ಹಂಚಿಕೆ ಮಾಡಲಾಗಿದೆ ಎಂದರು.

> **ಕರ್ನಾಟಕ ಪರಿಣಾಮಕಾರಿ ನಿರ್ವಹಣೆ ಮತ್ತು ನೀರಿನ ಬಳಕೆಯ ದಕ್ಷತೆಯನ್ನು ಸಾಧಿಸಲು ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿದೆ. ನೀರಾವರಿ ಮತ್ತು ಕುಡಿಯುವ ನೀರಿನ ಕಾಮಗಾರಿಗಳಿಂದ ಅಕ್ರಮವಾಗಿ ನೀರು ಬಳಸಿಕೊಳ್ಳುವುದನ್ನು ತಡೆಯಲು ಕಾಯಿದೆ ರೂಪಿಸಲಾಗಿದೆ. ಕಾಲುವೆಗಳ ಮೂಲಕ ಅಕ್ರಮವಾಗಿ ನೀರು ಮೇಲೆತ್ತುವುದನ್ನು ತಪ್ಪಿಸಿ, ಕಾಲುವೆ ಕೊನೆ ಭಾಗದ ರೈತರಿಗೆ ನೀರು ಹೋಗುವಂತೆ ಮಾಡಲು ಈ ತಿದ್ದುಪಡಿ ಮಾಡಲಾಗಿದೆ.**
>
> - **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಇಂದಿನಿಂದ ಬಿ ಖಾತಾ ಅಭಿಯಾನ ಆರಂಭ

← ಮೊದಲಪುಟದಿಂದ

ಅನಧಿಕೃತ ಬಡಾವಣೆಗಳು ಮತ್ತೆ ತಲೆ ಎತ್ತಿದರೆ ಜಿಲ್ಲಾಧಿಕಾರಿ, ಮುಖ್ಯ ಅಧಿಕಾರಿ, ನಗರ ಯೋಜನಾ ಅಧಿಕಾರಿಗಳನ್ನು ಜವಾಬ್ದಾರಿ ಮಾಡಲಾಗುವುದು ಮತ್ತು ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು. ಮಧ್ಯವರ್ತಿಗಳಿಗೆ ಕಚೇರಿಗಳಿಂದ ತಕ್ಷಣವೇ ಗೇಟ್ ಪಾಸ್ ನೀಡಿ. ಕಾಯಿದೆಯ ದೂರದೃಷ್ಟಿಯನ್ನು ಎಲ್ಲ ಅಧಿಕಾರಿಗಳು ಸ್ಪಷ್ಟವಾಗಿ, ಖಚಿತವಾಗಿ ಅರ್ಥ ಮಾಡಿಕೊಳ್ಳಬೇಕು. ರಾಜ್ಯದಲ್ಲಿ ಇನ್ನು ಮುಂದೆ ಎಲ್ಲಿಯೂ ಅನಧಿಕೃತ ಬಡಾವಣೆಗಳು, ರೆವಿನ್ಯೂ ಬಡಾವಣೆಗಳು ತಲೆ ಎತ್ತಬಾರದು ಎಂದು ತಾಕೀತು ಮಾಡಿದರು.

ಎರಡು ಪಟ್ಟು ದಂಡ ಪಾವತಿ

ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಹಂಚಿಕೆ ಪ್ರಕ್ರಿಯೆ ವೇಳೆ ದಂಡದ ಸ್ವರೂಪದಲ್ಲಿ ದುಪ್ಪಟ್ಟು ತೆರಿಗೆ ಸಂಗ್ರಹಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ. ಈ ಮೂಲಕ ಸರಕಾರಕ್ಕೆ ಭಾರಿ ಮೊತ್ತದ ಅನುದಾನ ನಿರೀಕ್ಷಿಸಲಾಗಿದೆ. ಆದರೆ ಈವರೆಗೆ ಆಸ್ತಿಮಾಲೀಕರು ತೆರಿಗೆ ಪಾವತಿಸದೇ ಇರುವುದರಿಂದ ಒಂದೇ ಬಾರಿಗೆ ಆಸ್ತಿ ತೆರಿಗೆಯನ್ನು ದಂಡದ ಸ್ವರೂಪದಲ್ಲಿ ಪಡೆಯಲಾಗುತ್ತಿದೆ ಎಂದು ಸರಕಾರ ಸಮರ್ಥಿಸಿಕೊಂಡಿದೆ.

ಅತ್ತೆಯನ್ನು ಕೊಲೆಗೈದ ಅಳಿಯ ನೇಣಿಗೆ ಶರಣು

ಚಿಕ್ಕಮಗಳೂರು: ಮೂಡಿಗೆರೆ ತಾಲೂಕಿನ ಭಾರತೀಬೈಲ್ ಗ್ರಾಮದಲ್ಲಿ ಅತ್ತೆಯನ್ನು ಹತ್ಯೆಮಾಡಿ ಪರಾರಿಯಾಗಿದ್ದ ಆರೋಪಿ ಕಾಫಿ ತೋಟದಲ್ಲಿ ನೇಣಿಗೆ ಶರಣಾಗಿ

ದ್ದಾನೆ. ನೇಣಿಗೆ ಶರಣಾದ ವ್ಯಕ್ತಿಯನ್ನು ಶಶಿಧರ್ ಎಂದು ಗುರುತಿಸಲಾಗಿದೆ. ಆತ ತನ್ನ ಸಹೋದರನ ಅತ್ತೆಯಾಗಿದ್ದ ಯಮುನಾ (65) ತಲೆಗೆ ಸೋಮವಾರ ಸುತ್ತಿಗೆಯಿಂದ ಹೊಡೆದು ಕೊಲೆಗೈದಿದ್ದ. ಕುಡಿದ ಮತ್ತಿನಲ್ಲಿದ್ದ ಆತನಿಗೆ ಮಹಿಳೆ ತಿಳಿವಳಿಕೆ ಹೇಳಿದ್ದಕ್ಕೆ ಈ ಕೃತ್ಯ ಎಸಗಿದ ಎಂದು ತಿಳಿದು ಬಂದಿದೆ. ಪರಾರಿಯಾಗಿದ್ದ ಶಶಿಧರ್‌ಗಾಗಿ ಬಣಕಲ್ ಪೊಲೀಸರು ತೀವ್ರ ಶೋಧನೆ ನಡೆಸಿದ್ದರು. ಆತನ ಶವ ಭಾರತೀಬೈಲ್‌ನ ಕಾಫಿತೋಟದಲ್ಲಿ ಮಂಗಳವಾರ ಮುಂಜಾನೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಕುಂಭ ಮೇಳಕ್ಕೆ ಹೋಗುತ್ತಿದ್ದ ಬೀದರ್ ವ್ಯಕ್ತಿ ಸಾವು

ಬೀದರ್: ಪ್ರಯಾಗ್‌ರಾಜ್‌ಲ್ಲಿ ನಡೆಯುತ್ತಿರುವ ಮಹಾ ಕುಂಭ ಮೇಳಕ್ಕೆ ತೆರಳುತ್ತಿದ್ದ ಚಿಲ್ಲರ್ಗಿಯ ವ್ಯಕ್ತಿಯೊಬ್ಬರು ಮಹಾರಾಷ್ಟ್ರ ನಾಗಪುರದಿಂದ 70 ಕಿ.ಮೀ. ಅಂತರದಲ್ಲಿ ಮಂಗಳವಾರ ನಸುಕಿನ ಜಾವ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ರಂಗಾರೆಡ್ಡಿ ಮಾಣಿಕರೆಡ್ಡಿ ಸುಧಾ (60) ಮೃತ ಪಟ್ಟವರು. ಸಂಬಂಧಿಕರೊಂದಿಗೆ ಬೀದರ್‌ನಿಂದ ಕ್ರೂಸರ್ ವಾಹನದಲ್ಲಿ ಮಹಾ ಕುಂಭ ಮೇಳಕ್ಕೆ ಹೋಗುತ್ತಿದ್ದರು. ಕ್ರೂಸರ್ ವಾಹನ ಮುಂದೆ ಸಾಗುತ್ತಿದ್ದ ಕಂಟೇನರ್ ಲಾರಿಗೆ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ. ಘಟನೆಯಲ್ಲಿ ರಂಗಾರೆಡ್ಡಿ ಸ್ಥಳದಲ್ಲೇ ಮೃತಪಟ್ಟರೆ, ಅವರ ಪತ್ನಿ ಆರತಿ ಸೇರಿ ಇಬ್ಬರ ಕೈ, ಕಾಲಿಗೆ ಗಂಭೀರ ಗಾಯಗಳಾಗಿವೆ. ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ.
ಆಕಾಶವಾಣಿ ರಸ್ತೆ, ಸಿ.ಕೆ. ಪುರ, ಚಿತ್ರದುರ್ಗ.
e-mail:cuda.cta@rediffmail.com, ದೂರವಾಣಿ ಸಂಖ್ಯೆ: 08194-222984
ಕ್ರ.ಸಂ.ಚಿನಪ್ರಾ/ಸಕಾಅ/ಟೆಂಡರ್/2024-2025 ದಿನಾಂಕ:17-02-2025
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ 2 ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:24-02-2025 ಸಂಜೆ 5.30 ಗಂಟೆಯವರೆಗೆ, ಹೆಚ್ಚಿನ ವಿವರಗಳು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮುಖಾಂತರ ನೋಡಬಹುದು.
DIPR/CTA/KSMCA/611/2024-25
ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಬೆಂಗಳೂರು ಉತ್ತರ ತಾಲ್ಲೂಕು
ಮಿನಿ ವಿಧಾನಸೌಧ, 2ನೇ ಮಹಡಿ, ಯಲಹಂಕ ಬೆಂಗಳೂರು-560064.
ಸಂಖ್ಯೆ: ಬೆಂಉತಾಪಂ/ಲೆಶಾ/ಎಬಿಸಿ/2024-25 ದಿನಾಂಕ: 18.02.2025
ಅಲ್ಪಾವಧಿ ಟೆಂಡರ್ ಇಂಡೆಂಟ್ ಸಂಖ್ಯೆ: RDPR/2024-25/SE2049/CALL-3
(kppp.karnataka.gov.in ಮೂಲಕ ಮಾತ್ರ)
ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯಿತಿಗಳಲ್ಲಿ ಬೀದಿ ನಾಯಿಗಳ ಸಂತಾನ ನಿಯಂತ್ರಣಕ್ಕೆ ಹಾಗೂ ರೋಗಗ್ರಸ್ಥ ನಾಯಿಗಳ ಚಿಕಿತ್ಸೆ ಮತ್ತು ಆರೈಕೆ ಸಂಬಂಧ ಆಸಕ್ತ ಸಂಸ್ಥೆ/ಏಜೆನ್ಸಿಗಳಿಂದ ಇ-ಟೆಂಡರ್ ವೆಬ್‌ಸೈಟ್ kppp.karnataka.gov.in ನಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತ ಸಂಸ್ಥೆ/ಏಜೆನ್ಸಿ ರವರು ಮೇಲಿನ ಟೆಂಡರ್ ಇಂಡೆಂಟ್ ಸಂಖ್ಯೆಯನ್ನು ಡೌನ್ ಲೋಡ್ ಮಾಡಿಕೊಂಡು ದಿನಾಂಕ: 28.02.2025 ರೊಳಗೆ ಇ-ಟೆಂಡರ್ ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲಿನ ಕಛೇರಿಯ ವಿಳಾಸಕ್ಕೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/- ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬೆಂಗಳೂರು ಉತ್ತರ ತಾಲ್ಲೂಕು.
ವಾಸಾಸಂಇ/ವಾಪ್ರ/5135/ಎಸ್‌ಎಸ್‌ಸಿ/2024-25

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 21/2024-25 ದಿನಾಂಕ: 15.02.2025
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-I & II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ಏಕ ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 17.03.2025ರ 16.30 ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 18.03.2025ರಂದು 4.35 ನಂತರ. (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಹಿಂದಿರುಗಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:387/ಕೆಎಸ್‌ಎಂಸಿಎ/2024-25

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 27/24-25 ದಿನಾಂಕ: 15.02.2025
ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ, 5054-03-101-0-02-132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳ ನಿರ್ವಹಣೆ, 5054-04-337-0-01-154 ರಾಜ್ಯ ಹೆದ್ದಾರಿ ಸುಧಾರಣೆಗಳು, 5054-04-337-0-01-154 ಜಿಲ್ಲಾ ಮತ್ತು ಇತರ ರಸ್ತೆಗಳು - ಸುಧಾರಣೆಗಳು, 5054-04-337-0-01-160 ಜಿಲ್ಲಾ ಮುಖ್ಯ ರಸ್ತೆ ಮತ್ತು ಇತರೆ ರಸ್ತೆಗಳು ನವೀಕರಣ, 5054-03-337-0-16-154 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, ಅಡಿಯಲ್ಲಿನ ಒಟ್ಟು 11 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಹಾಗೂ 05 ಕಾಮಗಾರಿಗಳಿಗೆ ಮ್ಯಾನ್ಯುಯಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW - 1, 2 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.1.80 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.365.00 ಲಕ್ಷಗಳು ಆಗಿರುತ್ತವೆ.ಮ್ಯಾನ್ಯುಯಲ್ ಮೂಲಕ ಅರ್ಹ ಗುತ್ತಿಗೆದಾರರು ದಿನಾಂಕ: 24.02.2025 ರಿಂದ 27.02.2025 ರವರೆಗೆ ನಿಗಧಿತ ಶುಲ್ಕ ಪಾವತಿಸಿ ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಬೇಕು. ದಿನಾಂಕ:05.03.2025 ರಂದು ಖಾಲಿ ಟೆಂಡರ್ ಫಾರಂ ಪಡೆದು, ದಿನಾಂಕ:10.03.2025 ರಂದು ಸಂಜೆ 5.00 ರವರೆಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಬೇಕು ಹಾಗೂ ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 11 ಕಾಮಗಾರಿಗಳಿಗೆ (ಇ.ಸಂಖ್ಯೆ.:18612 (2ನೇ ಕರೆ),19575,19584, 19561, 18640, 18691, 19502, 19380, 18148 (2ನೇ ಕರೆ) ದಿನಾಂಕ:25.02.2025, ಇ.ಸಂಖ್ಯೆ:18669, 19513 ದಿನಾಂಕ:06.03.2025 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24-25/164/1674

ಕರ್ನಾಟಕ ಸರ್ಕಾರ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
214, 2ನೇ ಮಹಡಿ, ಜಿಲ್ಲಾಡಳಿತ ಭವನ,
ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ 571313
E-mail: dtwoffice.217@gmail.com Phone & Fax: 08226-226070
ಇ-ಪ್ರಕ್ಯೂರ್ಮೆಂಟ್ ಟೆಂಡರ್ ಪ್ರಕಟಣೆ
ಸಂ : ಜಿಪವಕಅ/ತಸ/ಆಶಾ/ಮೂಸೌ/ಸಿಆರ್/2024-25 ದಿನಾಂಕ: 17-02-2025
2024-25ನೇ ಸಾಲಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಗೊಳಪಡುವ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ರೂ.60.00 ಲಕ್ಷಗಳಿಗೆ ಅರ್ಹ ವ್ಯಕ್ತಿ/ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ (www.kppp.karnataka.gov.in) ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು ದಿನಾಂಕ 17.02.2025 ರಿಂದ 25.02.2025ರ ಸಾಯಂಕಾಲ 4.00 ಗಂಟೆಯೊಳಗೆ ಅರ್ಹ ವ್ಯಕ್ತಿ/ ಸಂಸ್ಥೆಗಳಿಂದ ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸಂಬಂಧಪಟ್ಟ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ # 214, 2ನೇ ಮಹಡಿ, ಜಿಲ್ಲಾಡಳಿತ ಭವನ ಚಾಮರಾಜನಗರ ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.
ಸಹಿ/- ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಸಂ: ವಾಸಾಸಂಇ/ಚಾನಗರ/630/2024-25

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ಎಸ್.ಆರ್.ಎಸ್. ಎದುರು, ಹೈಟೆನ್ಷನ್ ಜೋಡಿರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ -570018
ಸಹಾಯವಾಣಿ ಸಂಖ್ಯೆ: 0821-2001737
ka.hootagalli.cmc@gmail.com
ಸಂ:ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್-20/2024-25
ದಿನಾಂಕ:15.02.2025
ಟೆಂಡರ್ ಪ್ರಕಟಣೆ
ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. 2000ರ ಪ್ರಕಾರ KW-2 ನಿಯಮದಂತೆ KPP ಪೋರ್ಟಲ್ ಮೂಲಕ ಐಟಂವಾರು ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in ಮೂಲಕ ಸಲ್ಲಿಸಬಹುದಾಗಿದೆ. DMA/2024-25/WS/WORK_INDENT 36299 ಅಂದಾಜು ಮೊತ್ತ ರೂ.26.00 ಲಕ್ಷಗಳು ಹಾಗೂ ಇ.ಎಂ.ಡಿ. ರೂ.50,000/-ಗಳು, ಟೆಂಡರ್ ಸಲ್ಲಿಸುವ ಕೊನೆಯ ದಿ: 03.03.2025 ಸಂಜೆ 5.30 ಗಂಟೆಯವರೆಗೆ, ಟೆಂಡರ್ ತೆರೆಯುವ ದಿ: 05.03.2025 ಬೆಳಗ್ಗೆ 10.30 ಗಂಟೆಗೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ ಹಾಗೂ ಜಿ.ಎಸ್.ಟಿ.ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.
ಸಹಿ/- ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ
DIPR/DDMYS/1308/KSMCA/937/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192-264669
ಇ-ಮೇಲ್: eebcddvg@yahoo.co.in
ಟೆಂಡರ್ ಪ್ರಕಟಣೆ
ಉಲ್ಲೇಖ:- 1) No: EE/KNNL/BCD-5/DVG/PB.1/4701ಭದ್ರಾ/2024-25/2302, Date:10-02-2025.
2) No: EE/KNNL/BCD-5/DVG/PB.1/4701ಭದ್ರಾ/2024-25/2303, Date:10-02-2025.
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಟೆಂಡರ್ ಪ್ರಕಟಣೆಗಳಲ್ಲಿ ಲೆಕ್ಕ ಶೀರ್ಷಿಕೆ 4701 ಭದ್ರಾ ಅಡಿಯಲ್ಲಿನ ಕಾಮಗಾರಿಗಳಿಗೆ KW-4, & KW-2 ಗಳಲ್ಲಿ ಏಕ ಲಕೋಟೆ ಮತ್ತು ದ್ವೀ ಲಕೋಟೆ ಪದ್ಧತಿಯಲ್ಲಿ ಕೆಪಿಪಿ-ಪೋರ್ಟ್‌ಲ್ ಮುಖಾಂತರ ಟೆಂಡರ್‌ನ್ನು ಅಹ್ವಾನಿಸಿದ್ದು, ಟೆಂಡರ್‌ಗಿಟ್ಟ ಮೊತ್ತ ರೂ. 25.10 ಲಕ್ಷಗಳಿಂದ ರೂ.294.22 ಲಕ್ಷಗಳವರೆಗೆ ಇರುತ್ತದೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿ-ಪೋರ್ಟ್‌ಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿ: 13.02.2025 ರಿಂದ ಡೌನಲೋಡ್ ಮಾಡಿಕೊಂಡು ದಿ: 20.02.2025 ರ ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: 17-02-2025 ರಂದು 4.00 ಘಂಟೆವರೆಗೆ, ಪ್ರಿ ಬಿಡ್ ಸಭೆ ದಿ: 17-02-2025 ರಂದು ಬೆಳ್ಳಿಗ್ಗೆ 11.00 ಘಂಟೆಗೆ ಈ ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ ನೆರವೇರಿಸಲಾಗುವುದು ಮತ್ತು ತಾಂತ್ರಿಕ/ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 21.02.2025 ರಂದು ಸಂಜೆ 5.10 ಘಂಟೆಗೆ ತೆರೆಯಲಾಗುಗಿವುದು.
ಒಟ್ಟು ಕಾಮಗಾರಿ ಸಂಖ್ಯೆ :- 08 ಸಂಖ್ಯೆಗಳು.
ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿ-ಪೋರ್ಟ್‌ಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.
ವಾಸಾಇ/ಡಿವಿಜಿ/759/ಕೆಎಸ್‌ಎಂಸಿಎ/2024-25
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ
ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.
ಕಛೇರಿ ವಿಳಾಸ: ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರಕಾರ್ಯಾಲಯ, ಹೆಚ್.ಆರ್.ಜಿ. ವೃತ್ತ, ಬಳ್ಳಾರಿ-583101.
ದೂ.ಸಂ: 08392-273731, E-Mail: combudably@gmail.com. Web: www.bellary.uda.gov.in
NO:No: BUDA/BLY/Engg/ 01/Actionplan/2024-25 DATE:17/ 02 /2025
ಟೆಂಡರ್ ಪ್ರಕಟಣೆ
ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ಸರ್ಕಾರದ ಅನುಮೋದಿತ ಆಯವ್ಯಯದಂತೆ ಪ್ರಾಧಿಕಾರದ ಸಭೆಯ ದಿನಾಂಕ:07.03.2024 ವಿಷಯ ಸಂಖ್ಯೆ:155 ರ ನಿರ್ಣಯದಂತೆ ಈ ಕೆಳಕಂಡ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಪದ್ಧತಿಯಲ್ಲಿ ಕೆಡಬ್ಲ್ಯೂ-3 ರನ್ವಯಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಿ.ಡಬ್ಲ್ಯೂಡಿ ನೋಂದಾಯಿತ ಸಿವಿಲ್ ಗುತ್ತೇದಾರರಿಗೆ ಟೆಂಡರ್‌ಅಹ್ವಾನಿಸಲಾಗಿದೆ. ಟೆಂಡರ್‌ನಲ್ಲಿನ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಅಥವಾ **www.KPPP.karnataka.gov.in** ವೆಬ್ ಸೈಟ್‌ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ:08392-273731 ರವರಿಂದ ಪಡೆಯಬಹುದಾಗಿದೆ. ನಿಬಂಧನೆಗಳು 1)ಯಾವುದೇ ಕಾರಣಕ್ಕೂ ನಿಗಧಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಅನ್‌ಲೈನ್)ಸಿಗದಿದ್ದರೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ 2)ಯಾವುದೇ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಅಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ಇವರು ಕಾಯ್ದಿರಿಸಿಕೊಂಡಿರುತ್ತಾರೆ ಹಾಗೂ ಇನ್ನುಳಿದ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.
Details of Work: 1.Improvements to Road in Kappagallu Road 2nd Cross,Development of Walking Track and Electrification in Gandhi Nagar,Ballari City. **Estimated Cost (Rs. in Lakhs):** 99.60. 2.Improvements of Road from opposite Kunithana masjid uptoJavari street, Cowl bazaar, Ballari. **Estimated Cost (Rs. in Lakhs):** 99.95. 3.Improvements of Roads, Development of Compound Wall and Marking of Parking Lane at BUDA Premises, Ballari City, Ballari.**Estimated Cost (Rs. in Lakhs):** 49.95
The Tender Events are as under:b).ಟೆಂಡರ್ ಆಕ್ಷೇಪಣೆ ಸಲ್ಲಿಸಲು (ಇ-ಪ್ರಕ್ಯೂರ್‌ಮೆಂಟ್‌ಮುಖಾಂತರ): 03-03-2025 up to 16:30 Hrs.. c).ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04-03-2025 up to 16:30 Hrs.d). ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06-03-2025 at 11:30 Hrs. e).ಆರ್ಥಿಕ ಬಿಡ್ ತೆರೆಯುವ ದಿನಾಂಕ: 13-03-2025 at 11:30 Hrs.
ಸಹಿ/- ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/933/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ-3/.ಟೆಂಡರ್.ಅಧಿಸೂಚನೆ/2024-25/6975 ದಿನಾಂಕ: 18-02-2025
:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::
1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ Appendix-E 5054 (ಠೇವಣಿ)ಯಲ್ಲಿ (09) ಮತ್ತು 4059-80-051-0-29-386 ಇಲಾಖಾ ಕಟ್ಟಡಗಳು ನಿರ್ಮಾಣ ಯೋಜನೆಯಡಿ (1). ಒಟ್ಟು (10) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 18972,19029,18025,18029,18030,17644, 15966,15967,17991 ಮತ್ತು **18222** 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 300.00 ಲಕ್ಷಗಳು ಗರಿಷ್ಠ ರೂ. 500.00 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಎರಡನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ: **ಕನಿಷ್ಠ ರೂ. 3,74,159.00 ಗರಿಷ್ಠ ರೂ. 6,34,568.00,** 5) ಪ್ರೀ ಬಿಡ್ ಮೀಟಿಂಗ್: **27.02.2025 (11.00 Hrs),** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **28.02.2025 (17.30 Hrs),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **03.03.2025 (16.00 Hrs)**, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04.03.2025 (16.30 Hrs)**, 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **07.03.2025 (16.30 Hrs),** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ: ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ: **https://kppp.karnataka.gov.in,** 13) ಗಮನಿಸಬೇಕಾದ ಅಂಶಗಳು: **ಟಿಪ್ಪಣಿ:** 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/976/ಕೆ.ಎಸ್.ಎಂ.ಸಿ.&ಎ/2024-25

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಬಿ' ಖಾತಾ ಅಭಿಯಾನದ ಮೂಲಕ ರಾಜ್ಯದ ಪಟ್ಟಣ ಮತ್ತು ನಗರಪಾಲಿಕೆ ವ್ಯಾಪ್ತಿಯ ಅನಧಿಕೃತ ಬಡಾವಣೆಗಳಿಗೆ ಅಂತ್ಯ ಹಾಡುತ್ತಿದ್ದೇವೆ. ಇದೊಂದು ಬಾರಿ ಕೊನೆಯದಾಗಿ ಸರಕಾರ ಅನಧಿಕೃತ ಬಡಾವಣೆಗಳಿಗೆ 'ಬಿ' ಖಾತಾ ನೀಡುತ್ತಿದೆ. ಮುಂದೆ ಎಲ್ಲಿಯೂ ಅನಧಿಕೃತ ಬಡಾವಣೆಗಳು ತಲೆ ಎತ್ತಬಾರದು, ಎತ್ತಿದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವುದು ನಿಶ್ಚಿತ.

ನಾಮಿನೇನಿ ನರೇಶ್, ಬೆಂಗಳೂರು

ಇರೋಕೆ ಮನೆ ಇಲ್ಲ, ಒಂದು ಗುಂಟೆ ಜಮೀನು ಇಲ್ಲ ಸರ್. ಆದರೂ ಬಿಪಿಎಲ್ ರೇಷನ್ ಕಾರ್ಡ್ ಸಿಗಲ್ಲ. ವಿಕಲಚೇತನರಿಗೆ ಪಿಂಚಣಿ ಬರಲ್ಲ. ಹಿರಿಯ ನಾಗರಿಕರಿಗೆ ಪೆನ್ಷನ್ ಬರಲ್ಲ. ಯಾವ ಸೌಲಭ್ಯವೂ ಸಿಗುತ್ತಿಲ್ಲ ಸರ್.

ವಿಶ್ವವಾಣಿ ಕ್ಲಬ್ ಹೌಸ್
19.02.2025
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀ ನಾ ಸೋಮೇಶ್ವರ
ವಿಷಯ
ಕನ್ನಡ ಕೋಗಿಲೆ ಮುದ್ದಣ್ಣ
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಗದಗ**

ಸಮಸ್ಯೆಯೇನು..?

- ಗದಗ ಜಿಲ್ಲೆಯ ಗಜೇಂದ್ರಗಡ ತಾ ಬೈರಾಪುರ ಗ್ರಾಮದ ವಿಶೇಷ ಚೇತನ ಮಹಿಳೆ ಲಕ್ಷ್ಮವ್ವ, ಮಹಿಳೆಗೆ ಮೂಲಸೌಲಭ್ಯ ದೊರಕಿಸುವ ಬಗ್ಗೆ
- **ಪರಿಹಾರ:** ಗದಗ ಜಿಲ್ಲೆಯ ಗಜೇಂದ್ರಗಡ ತಾ ಬೈರಾಪುರ ಗ್ರಾಮದ ವಿಶೇಷ ಚೇತನ ಮಹಿಳೆ ಲಕ್ಷ್ಮವ್ವ ಮನೆಗೆ ಅಧಿಕಾರಿಗಳು ಭೇಟಿ ನೀಡಿದ್ದು, ಮಹಿಳೆಗೆ ಮೂಲಸೌಲಭ್ಯ ನೀಡಲು ಕ್ರಮಕೈಗೊಳ್ಳಲಾಗಿದೆ.

ಸಮಾಚಾರ ಸಣ್ಣದಲ್ಲ

10 ನಾಡ ಪಿಸ್ತೂಲ್ ಜಪ್ತಿ: 10 ಮಂದಿ ಸೆರೆ

ವಿಜಯಪುರ: ಜಿಲ್ಲಾ ಪೊಲೀಸರು ಕೈಗೊಂಡ ಭರ್ಜರಿ ಕಾರ್ಯಾಚರಣೆಯಲ್ಲಿ ಮಧ್ಯಪ್ರದೇಶದಿಂದ ಪೂರೈಕೆಯಾಗಿದ್ದ 10 ನಾಡ ಪಿಸ್ತೂಲ್ ಹಾಗೂ 24 ಜೀವಂತ ಗುಂಡುಗಳನ್ನು ಜಪ್ತಿಮಾಡಿ, 10 ಆರೋಪಿಗಳನ್ನು ಬಂಧಿಸಲಾಗಿದೆ. ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದ ಸತೀಶ ರಾಠೋಡ್ ಕೊಲೆ ಪ್ರಕರಣದ ತನಿಖೆ ವೇಳೆ ಮಧ್ಯಪ್ರದೇಶದಿಂದ ನಾಡ ಪಿಸ್ತೂಲ್ ಪೂರೈಕೆ ಆಗುತ್ತಿದ್ದ ವಿಷಯ ಬಯಲಾಗಿದೆ. ಜ.28 ರಂದು ಸತೀಶ್ ನನ್ನು ಅದೇ ಗ್ರಾಮದ ರಮೇಶ ಗೇಮು ಲಮಾಣಿ ಹಾಗೂ ಇತರರು ಪಿಸ್ತೂಲ್‌ನಿಂದ ಗುಂಡು ಹಾರಿಸಿ, ಚಾಕುವಿನಿಂದ ಇರಿದು ಕೊಲೆಮಾಡಿದ್ದರು. ವಿಜಯಪುರ ಗ್ರಾಮೀಣ ಠಾಣೆ ಪೊಲೀಸರು ಆರು ಆರೋಪಿಗಳನ್ನು ಬಂಧಿಸಿದ್ದರು. ಇದೇ ಪ್ರಕರಣದಲ್ಲಿ 5ನೇ ಆರೋಪಿ ಯಾದ ಸಾಗರ ಆಲಿಯಾಸ್ ಸುರೇಶ ರಾಠೋಡ್ ಎಂಬಾತ ರಮೇಶ ಲಮಾಣಿಗೆ ಅಕ್ರಮ ಪಿಸ್ತೂಲ್ ಪೂರೈಸಿದ್ದು ಗೊತ್ತಾಗಿತ್ತು. ಸುರೇಶನನ್ನು ವಿಚಾರಣೆಗೆ ಒಳಪಡಿಸಿದಾಗ ವಿಜಯಪುರ ಜಿಲ್ಲೆಯ ಹಲವರಿಗೆ ಅಕ್ರಮವಾಗಿ ಪಿಸ್ತೂಲ್ ಪೂರೈಸಿದ್ದಾಗಿ ಬಾಯಿಬಿಟ್ಟಿದ್ದ. ಈ ಮಾಹಿತಿ ಆಧರಿಸಿ, ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸುರೇಶ್‌ನಿಂದ ಅಕ್ರಮವಾಗಿ ಪಿಸ್ತೂಲ್‌ಗಳನ್ನು ಪಡೆದವರ ಮೇಲೆ ದಾಳಿಮಾಡಿ 10 ನಾಡ ಪಿಸ್ತೂಲ್‌ಗಳು ಹಾಗೂ 24 ಸಜೀವ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಕರುವಿನ ಮೇಲೆ ಮಚ್ಚಿನಿಂದ ದಾಳಿ

ಹಾಸನ: ಹಾಸನ ಜಿಲ್ಲೆಯ ಸಕಲೇಶ ಪುರ ತಾಲ್ಲೂಕಿನ ಅರೆಕೆರೆಯ ಕೊಟ್ಟಿಗೆಯಲ್ಲಿ ಕಟ್ಟಿದ್ದ ಕರುವಿನ ಮೇಲೆ ದುಷ್ಕರ್ಮಿಗಳು ಮಚ್ಚಿನಿಂದ ಮನಬಂದಂತೆ ದಾಳಿ ನಡೆಸಿದ್ದಾರೆ. ನವೀನ್ ಎಂಬುವವರಿಗೆ ಸೇರಿದ ಕರುವನ್ನು ದುರುಳರು ಮಚ್ಚಿನಿಂದ ಕೊಚ್ಚಿದ್ದು, ಗಂಭೀರವಾಗಿ ಗಾಯಗೊಂಡಿರುವ ಕರುವಿಗೆ ವೈದ್ಯರು ಚಿಕಿತ್ಸೆ ನೀಡಿದ್ದಾರೆ.

ಧಾರ್ಮಿಕ ದತ್ತಿ ಇಲಾಖೆಯಿಂದ ಏಳು ಆಗಮ ಶಿಕ್ಷಣ। ಈ ಬಾರಿ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ। ಮೈಸೂರಿನಲ್ಲಿ ಶುಕ್ರವಾರ ನಡೆಯಲಿರುವ ಘಟಿಕೋತ್ಸವ

ಎರಡು ದಶಕದ ಬಳಿಕ ಘಟಿಕೋತ್ಸವ

ಬೆಂಗಳೂರು: ಮುಜರಾಯಿ ಇಲಾಖೆ ಹಾಗೂ ರಾಜ್ಯ ದತ್ತಿ ಪರಿಷತ್‌ನ ಪ್ರಮುಖ ಯೋಜನೆಗಳಲ್ಲಿ ಒಂದಾಗಿರುವ ಆಗಮ ಶಿಕ್ಷಣದಲ್ಲಿ ಉತ್ತೀರ್ಣರಾದ ಸಾವಿರಾರು ವಿದ್ಯಾರ್ಥಿಗಳಿಗೆ ಬರೋಬ್ಬರಿ 20 ವರ್ಷದ ಬಳಿಕ ಘಟಿಕೋತ್ಸವದ ಮೂಲಕ ಪ್ರಮಾಣಪತ್ರವನ್ನು ವಿತರಿಸಲು ಇಲಾಖೆ ಮುಂದಾಗಿದೆ.

ರಾಜ್ಯ ಧಾರ್ಮಿಕ ಪರಿಷತ್‌ನಡಿ ರಾಜ್ಯದ ವಿವಿಧೆಡೆ 37 ಆಗಮ ಶಾಲೆಗಳಿವೆ. ಈ ಶಾಲೆಗಳಲ್ಲಿ ದೇವಾಲಯಗಳಲ್ಲಿ ಪ್ರತಿನಿತ್ಯವೂ ಪೂಜೆ ಸಲ್ಲಿಸುವ ಅರ್ಚಕ ವೃತ್ತಿಗೆ ಆಗಮ ಶಾಸ್ತ್ರ ರೀತಿ ಪೂಜಾ ವಿಧಿ-ವಿಧಾನಗಳನ್ನು ನಡೆಸಲು ಪೂರಕವಾಗುವಂತೆ ಆಗಮ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಆಗಮ ಪಾಠಶಾಲೆಗಳಲ್ಲಿ ತರಗತಿಗಳನ್ನು ನಡೆಸಲಾಗುವುದು. ಈ ರೀತಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ 'ಆಗಮ ಪ್ರಸಿದ್ಧ' ಪರೀಕ್ಷೆ ನಡೆಸಿ ಅಂಕಪಟ್ಟಿ ಹಾಗೂ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ನಡೆಸಿ ಪ್ರಮಾಣಪತ್ರ ವಿತರಿಸಲಾಗುತ್ತಿತ್ತು. ಆದರೆ ಕಳೆದ 20 ವರ್ಷಗಳಿಂದ ಈ ಘಟಿಕೋತ್ಸವವನ್ನೇ ಸ್ಥಗಿತಗೊಳಿಸಲಾಗಿತ್ತು. ಆದರೀಗ ಪುನಃ ಘಟಿಕೋತ್ಸವ ಆರಂಭಿಸಲು ಇಲಾಖೆ ತೀರ್ಮಾನಿಸಿದೆ.

ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಕಾರ್ಯಕ್ರಮ

ಎರಡು ದಶಕದ ಬಳಿಕ ಘಟಿಕೋತ್ಸವ ನಡೆಯುತ್ತಿರುವುದರಿಂದ ರಾಜ್ಯದ ವಿವಿಧ ಭಾಗದ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲು ತೀರ್ಮಾನಿಸಲಾಗಿದೆ. ಶುಕ್ರವಾರದಂದು ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಘಟಿಕೋತ್ಸವ ನಡೆಯಲಿದ್ದು, ವಿದ್ವಾಂಸ ಡಾ. ಭಾಷ್ಯಂ ಸ್ವಾಮೀಜಿ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

2019ರಿಂದ 2 ಬಾರಿ ಪರೀಕ್ಷೆ: ಪ್ರಮುಖವಾಗಿ ವಿವಿಧ ಆಗಮ ಪ್ರವರ ಮತ್ತು ಪ್ರವೀಣ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರಕ್ಕೆ ನೀಡಲಾಗುವುದು. 2019ರಿಂದ ಈವರೆಗೆ ಎರಡು ಬಾರಿ ಮಾತ್ರ ಪರೀಕ್ಷೆ ನಡೆಸಲಾಗಿದೆ. ಕರೋನಾ ಕಾರಣದಿಂದ 2019-20, 2020-21, 2021-22ನೇ ಸಾಲಿನ ಸರ್ವಾಗಮ ಪ್ರಸಿದ್ಧ ಪರೀಕ್ಷೆಗಳನ್ನು 2022ರಲ್ಲಿ ನಡೆಸಲಾಯಿತು. ಈ ಸಾಲಿನಲ್ಲಿ ಸರ್ವಾಗಮ ಪ್ರವರ ಪ್ರಸಿದ್ಧ ಪರೀಕ್ಷೆಯನ್ನು ಒಟ್ಟು 2258 ವಿದ್ಯಾರ್ಥಿಗಳು ತೆಗೆದುಕೊಂಡು, 936 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇನ್ನು ಸರ್ವಾಗಮ ಪ್ರವೀಣ ಪ್ರಸಿದ್ಧ ಪರೀಕ್ಷೆ ತೆಗೆದುಕೊಂಡ 593 ವಿದ್ಯಾರ್ಥಿಗಳಲ್ಲಿ 348 ಮಂದಿ ಉತ್ತೀರ್ಣರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2022-23, 2023-24ನೇ ಸಾಲುಗಳ ಸರ್ವಾಗಮ ಪ್ರಸಿದ್ಧ ಪರೀಕ್ಷೆಗಳನ್ನು 2024ರಲ್ಲಿ ನಡೆಸಲಾಗಿದ್ದು, ಈ ಸಾಲಿನಲ್ಲಿ ಸರ್ವಾಗಮ ಪ್ರವರ ಪ್ರಸಿದ್ಧ ಪರೀಕ್ಷೆಗಳನ್ನು ತೆಗೆದುಕೊಂಡ 1245 ವಿದ್ಯಾರ್ಥಿಗಳ ಪೈಕಿ 419 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅದೇ ರೀತಿ ಸರ್ವಾಗಮ ಪ್ರವೀಣ ಪ್ರಸಿದ್ಧ ಪರೀಕ್ಷೆ ತೆಗೆದುಕೊಂಡ 462 ವಿದ್ಯಾರ್ಥಿಗಳಲ್ಲಿ 216 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ವಿಶ್ವವಾಣಿ ವಿಶೇಷ

ಯಾವೆಲ್ಲ ಆಗಮ ಶಿಕ್ಷಣ ರಾಜ್ಯದಲ್ಲಿದೆ?

ರಾಜ್ಯದಲ್ಲಿ ಏಳು ಆಗಮ ಶಿಕ್ಷಣವನ್ನು ನೀಡಲಾಗುತ್ತಿದ್ದು, ಅದರಲ್ಲಿ ಶಿವ ದೇವಾಲಯದ ಪೂಜಾ ವಿಧಿ-ವಿಧಾನಕ್ಕೆ ಶೈವಾಗಮ, ವೀರಶೈವಾಗಮ ಹಾಗೂ ವಾತುಲಾಗಮ ಎನ್ನುವ ತರಬೇತಿ ನೀಡಲಾಗು ತ್ತದೆ. ಇನ್ನು ವಿಷ್ಣು ಸಂಬಂಧಿತ ದೇವಾಲಯದಲ್ಲಿ ಪೂಜಾ ಕೈಂಕರ್ಯಕ್ಕೆ ಪಾಂಚರಾತ್ರಾಗಮ, ವೈಖಾನಸಾಗಮ ಹಾಗೂ ತಂತ್ರಸಾರಾಗಮ ತರಬೇತಿ ನೀಡಲಾಗುವುದು. ಇವುಗಳೊಂದಿಗೆ ಜೈನಾಗಮ ವಿಧಿ-ವಿಧಾನವನ್ನು ಅವರವರ ಧರ್ಮ-ಮತಕ್ಕನುಗುಣವಾಗಿ ಆಯಾ ಆಗಮದಲ್ಲಿ ಅಧ್ಯಯನ ಪೀಠದಲ್ಲಿ ನೀಡಲಾಗುತ್ತಿದೆ.

ಕಳೆದ ಎರಡು ದಶಕದಿಂದ ವಿವಿಧ ಕಾರಣಗಳಿಂದಾಗಿ ಆಗಮ ಶಾಸ್ತ್ರ ಅಧ್ಯಯನ ಘಟಿಕೋತ್ಸವ ನಡೆದಿರಲಿಲ್ಲ. ಆದ್ದರಿಂದ ಧಾರ್ಮಿಕ ದತ್ತಿ ಪರಿಷತ್ ಸಭೆಯಲ್ಲಿ ಚರ್ಚಿಸಿ, ಈ ಬಾರಿ ಆಯೋಜಿಸಲು ತೀರ್ಮಾನಿಸಿದ್ದೇವೆ. ಮುಂದಿನ ಮೂರು ತಿಂಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರವನ್ನು ನೀಡಲಾಗುವುದು.

-ರಾಮಲಿಂಗಾರೆಡ್ಡಿ, ಮುಜರಾಯಿ ಇಲಾಖೆ ಸಚಿವ

3 ತಿಂಗಳಲ್ಲಿ ಎಲ್ಲರಿಗೂ ಪ್ರಮಾಣಪತ್ರ

ಕಳೆದ 20 ವರ್ಷಗಳಿಂದ ದತ್ತಿ ಪರಿಷತ್ತಿನ ವತಿಯಿಂದ ನಡೆದ ಸರ್ವಾಗಮ ಪ್ರವರ ಮತ್ತು ಪ್ರವೀಣ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಈವರೆಗೆ ಪ್ರಮಾಣಪತ್ರ ವಿತರಿಸಲಾಗಿಲ್ಲ. ಇದೀಗ ಈ ಎಲ್ಲ ಅಭ್ಯರ್ಥಿಗಳಿಗೆ ಮುಂದಿನ ಮೂರು ತಿಂಗಳಲ್ಲಿ ಪ್ರಮಾಣಪತ್ರ ನೀಡಲು ಧಾರ್ಮಿಕ ದತ್ತಿ ಪರಿಷತ್ ತೀರ್ಮಾನಿಸಿದೆ. ಇದರೊಂದಿಗೆ ಮುಂದಿನ ದಿನದಲ್ಲಿ ಪ್ರತಿವರ್ಷ ಘಟಿಕೋತ್ಸವ ನಡೆಸುವ ಮೂಲಕ ಪ್ರಮಾಣಪತ್ರವನ್ನು ಸರಿಯಾದ ಸಮಯಕ್ಕೆ ವಿತರಿಸಲು ಸೂಚನೆ ನೀಡಲಾಗಿದೆ.

ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚೆ, ಪರಿಹಾರಕ್ಕೆ ಮನವಿ

ಖರ್ಗೆ ನಿವಾಸಕ್ಕೆ ಕೈ ಪಡೆ ಪರೇಡ್

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿನ ಗೊಂದಲ ಮುಗಿಯುವ ಮನ್ಸೂಚನೆ ಸಿಗುತ್ತಿಲ್ಲ. ಒಂದೆಡೆ ಡಿ.ಕೆ.ಶಿವಕುಮಾರ್ ಪರವಾಗಿ ಡಿ.ಕೆ.ಸುರೇಶ್ ಸೇರಿದಂತೆ ಹಲವರು ಬ್ಯಾಟ್ ಬೀಸುತ್ತಿದ್ದರೆ, ಇನ್ನೊಂದೆಡೆ ಸಿದ್ದರಾಮಯ್ಯ ಪರವಾಗಿ ಹಲವು ಸಚಿವರು ಬ್ಯಾಟಿಂಗ್ ಮಾಡುತ್ತಿದ್ದಾರೆ. ಈ ನಡುವೆ ದೆಹಲಿಗೆ ತೆರಳಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರ ನಡೆ ಹಲವು ಕುತೂಹಲಕ್ಕೆ ಕಾರಣವಾಗಿದೆ.

ಈ ನಡುವೆ ಬೆಂಗಳೂರಿ ನಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮಂಗಳ ವಾರ ಮಾಜಿ ಸಂಸದ ಡಿ.ಕೆ.ಸುರೇಶ್ ಭೇಟಿಯಾಗಿದ್ದರೆ, ಇನ್ನೊಂದೆಡೆ ಸಿದ್ದರಾಮಯ್ಯ ಆಪ್ತ ಸಚಿವ ಜಮೀರ್ ಅಹ್ಮದ್ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿರುವುದು ಕೂತು ಹಲಕ್ಕೆ ಕಾರಣವಾಗಿದೆ. ಮೂಲಗಳ ಪ್ರಕಾರ ಇಬ್ಬರೂ ಖರ್ಗೆ ಅವರ ಬಳಿ, ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದು ಗೊಂದಲಗಳಿಗೆ ಪರಿಹಾರ ನೀಡುವಂತೆ ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಖರ್ಗೆ ಅವರು ಬೆಂಗಳೂರಿನಲ್ಲಿ ವಿಶ್ರಾಂತಿಯಲ್ಲಿರುವುದರಿಂದ ಇನ್ನು ಹಲವು ನಾಯಕರು ಭೇಟಿಯಾಗುವ ಪ್ರಯತ್ನ ಮಾಡಿದ್ದಾರೆ. ಆದರೆ ಭೇಟಿಗೆ ಜಮೀರ್ ಹಾಗೂ ಸುರೇಶ್‌ಗೆ ಮಾತ್ರ ಅವಕಾಶ ನೀಡಿದ್ದರಿಂದ ಈ ಇಬ್ಬರು ನಾಯಕರು ಭೇಟಿಯಾಗಿ ಚರ್ಚಿಸಿ ದ್ದಾರೆ. ಇದಕ್ಕೂ ಮೊದಲು ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಭೇಟಿಯಾಗಿದ್ದರು.

ಈ ನಡುವೆ ಕಾಂಗ್ರೆಸ್ ಹೈಕಮಾಂಡ್ ಬುಲಾವ್ ಮೇರೆಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ ಮಂಗಳವಾರ ದೆಹಲಿಗೆ ತೆರಳಿರುವುದು ಇನ್ನಷ್ಟು ಕುತೂಹಲಕ್ಕೆ ಕಾರಣವಾಗಿದೆ. ರಾಜ್ಯ ಕಾಂಗ್ರೆಸ್‌ನಲ್ಲಿ ದಲಿತ ಸಚಿವರುಗಳೆಲ್ಲಾ ಒಗ್ಗೂಡಿ ಉಪಾಹಾರ ಸಭೆಗಳನ್ನು ನಡೆಸಿ, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಲಾಬಿ ನಡೆಸಿದ್ದರು. ಜತೆಗೆ ಸಚಿವರುಗಳಾದ ಸತೀಶ್ ಜಾರಕಿಹೊಳಿ, ಕೆ.ಎನ್. ರಾಜಣ್ಣ ಇವರೆಲ್ಲಾ ದೆಹಲಿ ಯಾತ್ರೆ ಕೈಗೊಂಡು ವರಿಷ್ಠ ನಾಯಕರನ್ನು ಭೇಟಿ ಮಾಡಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ದಲಿತ ಸಮುದಾಯವನ್ನು ಪರಿಗಣಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೇ ಮುಖ್ಯ ಮಂತ್ರಿಯನ್ನಾಗಿ ಮುಂದುವರಿಸಬೇಕು ಎಂಬ ಬೇಡಿಕೆಗಳನ್ನು ಇಟ್ಟು, ಏಕ ವ್ಯಕ್ತಿ, ಏಕ ಹುದ್ದೆ ನಿಯಮವನ್ನು ಅನ್ವಯಿಸಬೇಕು ಎಂದು ಹೇಳಿದ್ದರು.

ಈ ಬಣ ಸಂಘರ್ಷ ಆಂತರಿಕ ಗುದ್ದಾಟ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆ ಸೇರಿ ದಂತೆ ಎಲ್ಲ ವಿಚಾರಗಳಿಗೂ ತೆರೆ ಎಳೆಯಲು ಹೈಕಮಾಂಡ್ ಮುಂದಾಗಿದ್ದು, ದಲಿತ ಸಚಿವರಲ್ಲಿ ಮುಂಚೂಣಿಯಲ್ಲಿರುವ ಪರಮೇಶ್ವರ ಅವರೊಂದಿಗೆ ಚರ್ಚಿಸಿ, ಎಲ್ಲ ಬಿಕ್ಕಟ್ಟನ್ನು ಸರಿಪಡಿಸಲು ತೀರ್ಮಾನಿಸಲಾಗಿದೆ ಎನ್ನಲಾಗಿದೆ.

ಹೈಕಮಾಂಡ್ ತೀರ್ಮಾನವೇ ಅಂತಿಮ

ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಕೆ.ಎನ್.ರಾಜಣ್ಣರವರ ನಡುವೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುವ ಬಗ್ಗೆ ನಡೆಯುತ್ತಿರುವ ವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ರಾಜಣ್ಣ ಹಾಗೂ ಡಿಸಿಎಂ ರವರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಈ ವಿಷಯದ ಬಗ್ಗೆ ಪಕ್ಷದ ಹೈಕಮಾಂಡ್ ನ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದರು.

ಮಕ್ಕಳಿಂದ ಚರಂಡಿ ಸ್ವಚ್ಛತೆಗೆ ಆಕ್ರೋಶ

ಯಾದಗಿರಿ: ಸರಕಾರಿ ಶಾಲೆಯ ಮುಖ್ಯ ಶಿಕ್ಷಕರೊಬ್ಬರು ಮಕ್ಕಳಿಂದ ಕೊಳಚೆಯಿಂದ ತುಂಬಿದ್ದ ಬೋರವೆಲ್ ಚರಂಡಿ ನೀರನ್ನು ಸ್ವಚ್ಛ ಮಾಡಿಸಿದ್ದಾರೆ ಎನ್ನಲಾದ ವಿಡಿಯೊ ವೈರಲ್ ಆಗಿದ್ದು, ಸಾರ್ವಜನಿಕರಿಂದ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ವಡಗೇರಾ ತಾಲೂಕಿನ ಕಾಡಮಗೇರಾ (ಬಿ) ಪಂಚಾಯಿತಿಯ ವ್ಯಾಪ್ತಿಯ ಕ್ಯಾತನಾಳ ಗ್ರಾಮದ ಸರಕಾರಿ ಶಾಲೆಯಲ್ಲಿ ಈ ಘಟನೆ ನಡೆದಿದೆ. ಮುಖ್ಯಶಿಕ್ಷಕ ಶರಣಪ್ಪ ಬಾಗ್ಲಿ ಮಕ್ಕಳಿಂದ ಕೊಳಚೆ ಬೋರ್‌ವೆಲ್ ಶುಚಿಗೊಳಿಸಿದ ಆರೋಪ ಎದುರಿಸುತ್ತಿದ್ದಾರೆ.

ಶಾಲೆಯಲ್ಲಿ ಚೆನ್ನಾಗಿ ಓದಿ ತಮಗೆ ಕೀರ್ತಿ ತರಲಿ ಎನ್ನುವ ಮಹದಾಸೆಯಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವ ಪಾಲಕರು ಘಟನೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸ್ವತಃ ಬಾಗ್ಲಿ ಮುಂದೆ ನಿಂತು ಮಕ್ಕಳಿಂದ ಚರಂಡಿ ಸ್ವಚ್ಛತೆ ಮಾಡಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಕೂಡಲೇ ಅಧಿಕಾರಿಗಳು ಕಾಡಮಗೇರಾ ಶಾಲೆಯ ಮುಖ್ಯಗುರುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಕ್ಷಣಾ ವೇದಿಕೆಯ ಯಾದಗಿರಿ ಜಿಲ್ಲಾಧ್ಯಕ್ಷ ಟಿ.ಎನ್.ಭೀಮುನಾಯಕ್ ಆಗ್ರಹಿಸಿದ್ದಾರೆ. ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿಕ್ಕೆ ಒತ್ತಾಯಿಸಿದ್ದಾರೆ.

ಎಲ್ಲ ವಿಚಾರಗಳಿಗೆ ಹೈಕಮಾಂಡ್ ಸುಪ್ರೀಂ

ವಿಜಯಪುರ: ಡಿಸಿಎಂ ಡಿಕೆಶಿ, ಸಚಿವ ಕೆ ಎನ್ ರಾಜಣ್ಣ ಮಧ್ಯೆ ವಾಕ್ಸಮರ ಸೇರಿದಂತೆ ಪಕ್ಷದ ವಿದ್ಯಮಾನಗಳನ್ನು ಹೈಕಮಾಂಡ್ ಗಮನಿಸುತ್ತಿದೆ. ಪಕ್ಷದಲ್ಲಿ ಎಲ್ಲಾ ವಿಚಾರಗಳಲ್ಲೂ ವರಿಷ್ಠರೇ ಸುಪ್ರೀಂ ಎಂದು ಸಚಿವ ಎಂ.ಬಿ. ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ,ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರು ಏನೇ ವಿಚಾರ ಬರಲಿ ಹೈಕಮಾಂಡ್ ಸುಪ್ರೀಂ. ಇನ್ನುಳಿದ ಎಲ್ಲವೂ ಅಪ್ರಸ್ತುತ. ಸಿಎಂ ಕುರ್ಚಿ ಖಾಲಿ ಇಲ್ಲ. ಇದಕ್ಕಿಂತ ಹೆಚ್ಚಿಗೆ ಮಾತನಾ ಡಲು ಆಗಲ್ಲ ಎಂದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ಬದಲಾವಣೆ ಆಗುತ್ತಾರೆ ಎನ್ನುವುದು ಹೈಕಮಾಂಡ್ ಗೆ ಬಿಟ್ಟಿದ್ದು. ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳುವ ಅಧಿಕಾರ ಇರುವುದು ವರಿಷ್ಠರಿಗೆ ಮಾತ್ರ. ಎಐಸಿಸಿ ಅಧ್ಯಕ್ಷರಿಗೆ ಕೇಳುವ ಪ್ರಶ್ನೆ ನನಗೆ ಕೇಳಿದರೆ ಹೇಗೆ ..?

-ಎಂ.ಬಿ.ಪಾಟೀಲ್, ಸಚಿವ

ರಾಜ್ಯ ಉಸ್ತುವಾರಿ ಬದಲು ವರಿಷ್ಠರ ನಿರ್ಧಾರಕ್ಕೆ: ಗೃಹಲಕ್ಷ್ಮಿ ಯೋಜನೆಯ ಹಣ ಮೂರು ತಿಂಗಳ ಬಿಡುಗಡೆ ಆಗಿಲ್ಲ ಎನ್ನುವ ವಿಚಾರಕ್ಕೆ ಯಾಕೆ ಬಂದಿಲ್ಲ ಎಂದು ನಾನು ಪರಿಶೀಲಿಸುವೆ ಎಂದಷ್ಟೇ ಎಂ.ಬಿ.ಪಾಟೀಲ ಹೇಳಿದರು.

ಸಚಿವ ಕೆ.ಎನ್. ರಾಜಣ್ಣ ಶೋಷಿತರ ಸಮಾವೇಶ ಮಾಡ್ತೇವೆ ಎಂದಿರುವ ವಿಚಾರಕ್ಕೆ, ಎಸ್‌ಸಿ-ಎಸ್‌ಟಿ ಅಥವಾ ಯಾವುದೇ ಸಮಾವೇಶ ಮಾಡುವುದು ತಪ್ಪಲ್ಲ. ರಾಜಕೀಯ ಗೊಂದಲ ಸೃಷ್ಟಿ ಆಗಬಾರದು. ಹೈಕಮಾಂಡ್ ಗಮನಕ್ಕೆ ತರಬೇಕು. ಲಿಂಗಾಯತ ಸಮಾವೇಶ ಮಾಡಿದರೂ ಹೈಕಮಾಂಡ್ ಗಮನಕ್ಕೆ ತಂದೇ ಮಾಡಬೇಕು ಎಂದರು.

ಮೋದಿಗೆ ಸಚಿವ ಸಂತೋಷ್ ಲಾಡ್ ಒತ್ತಾಯ

ಪ್ರಧಾನಿ ಹುದ್ದೆ ಬಿಟ್ಟುಕೊಡಲಿ

ಗದಗ: ಪ್ರಧಾನಿ ಮೋದಿಯಿಂದ ದೇಶದ ಪರಿಸ್ಥಿತಿ ದಿವಾಳಿ ಎದ್ದುದ್ದು, ನಿತೀನ್ ಗಡ್ಕರಿಯಂತಹ ಸೂಕ್ತ ವ್ಯಕ್ತಿಗೆ ಪ್ರಧಾನಿ ಹುದ್ದೆಯನ್ನು ಬಿಟ್ಟುಕೊಡುವಂತೆ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಧ್ವನಿ ಎತ್ತಬೇಕೆಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಕರೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ದೇಶದ ಪರಿಸ್ಥಿತಿ ಸರಿಹೋಗಬೇಕೆಂದರ ಮೋದಿ ಪ್ರಧಾನಿ ಹುದ್ದೆ ತೊರೆಯಬೇಕೆಂದು ಅಭಿಪ್ರಾಯ ಪಟ್ಟರು.

ರಾಜ್ಯ ಹಾಗೂ ದೇಶದ ಸಮಸ್ಯೆಗಳ ವಿಷಯಗಳಿಗೆ ಹೆಚ್ಚು ಆದ್ಯತೆ ಕೊಡಬೇಕೇ ವಿನಃ ಸಚಿವ ಸಂಪುಟ ಸರ್ಜರಿ ಹಾಗೂ ಇತರ ವಿಷಯಗಳಿಗೆ ಮಹತ್ವ ನೀಡಬಾರದು. ಜನರ ಸಮಸ್ಯೆಗಳಿಗಿಂತ ಅಭಿವೃದ್ಧಿಗಿಂತ ಸಚಿವ ಸಂಪುಟದ ವಿಷಯವೇನಷ್ಟೂ ಮಹತ್ವದ್ದಲ್ಲ ಎಂದರು.

ಕುಂಭಮೇಳದಲ್ಲಿ ಸಾವಿರಾರು ಜನರಿಗೆ ಅನಾನುಕೂಲವಾಗಿದೆ. ಈ ಬಗ್ಗೆ ಕೇಂದ್ರ ಸರಕಾರ ಸೂಕ್ತ ಕ್ರಮ ಕೈಗೊಂಡು ಭಕ್ತರಿಗೆ ನೆರವಾಗುವಂತೆ ಸುದ್ದಿಗಾರರು ಪ್ರಶ್ನೆ ಮಾಡಬೇಕು ಎಂದು ಸಚಿವ ಲಾಡ್ ತಾಕೀತು ಮಾಡಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ರಾಜಣ್ಣ ವಿಚಾರ ಅವರವರಿಗೆ ಬಿಟ್ಟದ್ದು. ಯಾರೂ ಹೊಸ ಸಿಎಂ ವಿಚಾರವನ್ನು ತೇಲಿಬಿಟ್ಟಿದ್ದಾರೆಯೋ ಅವರನ್ನೇ ಸುದ್ದಿಗಾರರು ಪ್ರಶ್ನಿಸಿ. ನನಗೆ ಸಂಬಂಧವಿಲ್ಲದ ಅಥವಾ ತಿಳಿಯದೇ ಇರುವ ವಿಚಾರದ ಬಗ್ಗೆ ಮಾತನಾಡುವುದು ಸೂಕ್ತವಲ್ಲ. ನಾನು ಯಾರ ಪರವೂ ಅಲ್ಲ, ವಿರೋಧವೂ ಅಲ್ಲ. ನಾನು ಕಾಂಗ್ರೆಸ್ ಪಕ್ಷದ ಪರ.

-ಸಂತೋಷ್ ಲಾಡ್, ಕಾರ್ಮಿಕ ಸಚಿವ

ಕೆಪಿಸಿಸಿ ಹುದ್ದೆ ಖಾಲಿ ಇಲ್ಲ

ದಾವಣಗೆರೆ: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ. ಜತೆಗೆ, ಕೆಪಿಸಿಸಿ ಹುದ್ದೆ ಖಾಲಿಯೂ ಆಗಿಲ್ಲ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ರಾಜಣ್ಣ ಬಗ್ಗೆ ಸುರ್ಜೇವಾಲಾ, ಖರ್ಗೆಯವರಿಗೆ ದೂರು ಸಲ್ಲಿಸಿದ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಲು ನಿರಾಕರಿಸಿ ದರು. ಪಂಚ ಗ್ಯಾರಂಟಿ ಯೋಜನೆಗಳಿಗೂ ಬೆಲೆ ಏರಿಕೆಗೂ ಸಂಬಂಧ ಇಲ್ಲ. ಬೆಲೆ ಏರಿಕೆ ಹಾಗೂ ನಿರುದ್ಯೋಗವಾಗುತ್ತಿರುವುದು ಕೇಂದ್ರ ಸರಕಾರದಿಂದ. ಕೇಂದ್ರಕ್ಕೆ ಆದಾಯ ಕೊಡುವುದರಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದರು.

ರಾಜ್ಯದಲ್ಲಿ ಎಲ್ಲೂ ಲೋಡ್ ಶೆಡ್ಡಿಂಗ್ ಎನ್ನುವ ಮಾತೇ ಇಲ್ಲ. ಕೆಲ ಕಡೆ ನಿರ್ವಹಣೆ ಸಮಸ್ಯೆ ಇದ್ದಾಗ ಮಾತ್ರ ತೊಂದರೆಯಾಗಿರಬಹುದು ಅಷ್ಟೇ ಎಂದು ಇಂಧನ ಸಚಿವರು ಸ್ಪಷ್ಟಪಡಿಸಿದರು.

ವೈಯಕ್ತಿಕ ಪ್ರತಿಷ್ಠೆಗಾಗಿ ಕೆಲವರು ಮಾತನಾಡುವುದು ಸರಿಯಲ್ಲ: ದಿನೇಶ್ ಗುಂಡೂರಾವ್

ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಸಮಸ್ಯೆ ಇಲ್ಲ

ಬೆಳಗಾವಿ: ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಸಮಸ್ಯೆ ಇಲ್ಲ. ಸಣ್ಣ ಪುಟ್ಟ ಗೊಂದಲ ಇದ್ದು ಇದನ್ನು ಸರಿಪಡಿಸಿಕೊಂಡರೆ ಒಳ್ಳೆಯದಾಗುತ್ತದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ನಾಯಕರು ಸಾರ್ವಜನಿಕವಾಗಿ ಮಾತನಾಡಿದರೆ ಯಾವುದೇ ಉಪಯೋಗ ಇಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಹಿರಂಗವಾಗಿ ಪಕ್ಷದ ಬಗ್ಗೆ ಮಾತನಾ ಡದಂತೆ ಸೂಚಿಸಿದರೂ ವೈಯಕ್ತಿಕ ಪ್ರತಿಷ್ಠೆಗಾಗಿ ಕೆಲವರು ಮಾತನಾಡುವುದು ಸರಿಯಲ್ಲ ಎಂದರು.

ಸಚಿವ ಸಂಪುಟ ಪುನರ್ ರಚನೆಯ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಯಾವಾಗ ಮಾಡಬೇಕೆಂದು ಅವಾಗ ಮಾಡುತ್ತಾರೆ ಎಂದರು. ಪ್ರಕಾಶ ಹುಕ್ಕೇರಿ ಹಿರಿಯರಿದ್ದಾರೆ. ಅವರಿಗೆ ಸಿಎಂ ಸ್ಥಾನ ಸಿಗಬೇಕಿತ್ತು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆಯ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಸಾಮರ್ಥ್ಯ ಬಹಳಷ್ಟು ಜನರಿಗೆ ಇರುತ್ತದೆ. ಸಿಎಂ ಆಗುವುದು ಒಬ್ಬರೇ ತಾನೆ ಎಂದರು.

ಕಾಂಗ್ರೆಸ್ ನಲ್ಲಿ ಬಣಗಳು ಇಲ್ಲ. ಪ್ರತಿಷ್ಠೆ ಇದೆ. ಬಿಜೆಪಿಯಲ್ಲಿ ಪ್ರತಿಷ್ಠೆ ಹಾಗೂ ಬಣ ಜತೆಗೆ ದೊಡ್ಡ ಬಿರುಕು ಮೂಡಿದೆ. ನಮ್ಮಲ್ಲಿ ಎಲ್ಲ ಶಾಸಕರು, ಕಾರ್ಯಕರ್ತರು ಎಲ್ಲರೂ ಸರಿಯಾಗಿ ಆರೋಗ್ಯಕರವಾಗಿದ್ದೇವೆ. ನಮ್ಮಲ್ಲಿರುವ ಸಣ್ಣಪುಟ್ಟ ಭಿನ್ನಾಭಿಪ್ರಾಯ ಪಕ್ಷದ ವರಿಷ್ಠರು ಬಗೆಹರಿಸುತ್ತಾರೆ ಎಂದರು.

ರಾಜ್ಯದಲ್ಲಿ ಸಿಎಂ ಬದಲಾವಣೆ ಆಗುವ ಪ್ರಶ್ನೆಯೇ ಇಲ್ಲ. ಅದರ ಬಗ್ಗೆ ಚರ್ಚೆಯಾಗಬಾರದು. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಒಳ್ಳೆಯ ಆಡಳಿತ ಕೊಡುತ್ತಿದ್ದೇವೆ. ಕೆಲವರಿಗೆ ಆಸೆ ಆಕಾಂಕ್ಷಿಗಳು ಇರುತ್ತದೆ. ಹಲವಾರು ಕಾರಣಗಳಿಂದ ಸಿಎಂ ಆಗುತ್ತಾರೆ. 30 ಜನ ಸಚಿವರಾಗಬಹುದು. ಸಿಎಂ ಮಾತ್ರ ಒಬ್ಬರೇ ಅದನ್ನ ನಾವು ಅಷ್ಟು ಸುಲಭವಾಗಿ ಆಗುತ್ತದೆ ಎಂದು ಹೇಳಲು ಆಗದು. ಎಲ್ಲರೂ ಕೂಡಿ ಒಮ್ಮತವಾಗಿ ಆಯ್ಕೆ ಮಾಡುವ ನಿರ್ಣಯ. ಈಗ ಒಬ್ಬರು ಸಿಎಂ ಇದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದು ಅನಗತ್ಯ.

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಹೃದಯಜ್ಯೋತಿ ವಿಸ್ತರಣೆಗೆ ಚಿಂತನೆ

ಪುನೀತ್ ರಾಜಕುಮಾರ ಹೃದಯ ಜ್ಯೋತಿ ಯೋಜನೆಯನ್ನು ಎಲ್ಲಾ ತಾಲೂಕಿನಲ್ಲಿ ವಿಸ್ತರಿಸಲು ಚಿಂತನೆ ಮಾಡಲಾಗಿದೆ. ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ಮಾಡಲಾಗಿದೆ. ಡಯಾಲಿಸಿಸ್ ಕೇಂದ್ರವನ್ನು ಬದಲಾವಣೆ ಮಾಡಲಾಗಿದೆ. ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಟೆಕ್ ಕೇರ್ ಕಿಮೋಥೆರಪಿ ಕೇಂದ್ರಗಳನ್ನು ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಆದಷ್ಟು ಶೀಘ್ರದಲ್ಲೇ ಮುಖ್ಯಮಂತ್ರಿ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಾ.6ಕ್ಕೆ ತೇಜಸ್ವಿ ವಿವಾಹ

ಬೆಂಗಳೂರು: ಅತ್ಯಂತ ಕಿರಿಯ ಸಂಸದ ಎಂಬ ಹೆಗ್ಗಳಿಕೆ ಪಾತ್ರವಾಗಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸತತ ಎರಡನೇ ಬಾರಿಗೆ ಆಯ್ಕೆಯಾಗಿರುವ ಸಂಸದ ತೇಜಸ್ವಿ ಸೂರ್ಯ ಅವರ ವಿವಾಹ ಮಾ.6ಕ್ಕೆ ನಿಗದಿಯಾಗಿದೆ.

ತೇಜಸ್ವಿ ಸೂರ್ಯ ಅವರು ಚೆನ್ನೈ ಮೂಲಕ ಶಿವಶ್ರೀ ಸ್ಕಂದಪ್ರಸಾದ್ ಅವರನ್ನು ವರಿಸಲಿದ್ದಾರೆ. ಶಿವಶ್ರೀ ಅವರು ಶಾಸ್ತ್ರೀಯ ಸಂಗೀತ ಗಾಯಕಿ ಮತ್ತು ಭರತನಾಟ್ಯ ಕಲಾವಿದೆ. ಅವರು ಬಯೋ ಎಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. ಮಾ.5 ಮತ್ತು 6ರಂದು ಕನಕಪುರ ರಸ್ತೆಯ ಖಾಸಗಿ ರೆಸಾರ್ಟ್‌ನಲ್ಲಿ ವಿವಾಹ ನಡೆಯಲಿದ್ದು, ತೇಜಸ್ವಿ ಸೂರ್ಯ ಅವರು ಶಿವಶ್ರೀ ಸ್ಕಂದಪ್ರಸಾದ್ ಅವರನ್ನು ವರಿಸಲಿದ್ದಾರೆ. ಮಾ.5ರ ಬುಧವಾರ ಸಂಜೆ ವರಪೂಜೆ ಕಾರ್ಯಕ್ರಮ ನಡೆಯಲಿದೆ. ಮಾ.6ರ ಗುರುವಾರ ಬೆಳಗ್ಗೆ ಕಾಶಿಯಾತ್ರೆ, ಜೀರಿಗೆ ಬೆಲ್ಲ, ಮುಹೂರ್ತ ಹಾಗೂ ಲಾಜಾ ಹೋಮ ನಡೆಸಲಾಗುತ್ತದೆ. ಬಳಿಕ ಅದೇ ದಿನ ಬೆಳಗ್ಗೆ 9.30 ರಿಂದ 10.15ರ ನಡುವಿನ ತುಲಾ ಲಗ್ನದಲ್ಲಿ ವಿವಾಹ ಕಾರ್ಯ ನೆರವೇರಲಿದೆ. ಮಾ.9ರಂದು ಭಾನುವಾರ ಆರತಕ್ಷತೆ ಸಮಾರಂಭ ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ನಡೆಯಲಿದೆ. ಬೆಳಗ್ಗೆ 10.30ರಿಂದ 1.30 ರವರೆಗೆ ಆರತಕ್ಷತೆ ನೆರವೇರಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಹೆಜ್ಜೇನು ದಾಳಿ: ಮೂವರಿಗೆ ಗಾಯ

ಮಂಗಳೂರು: ಶಾಲೆಯಲ್ಲಿ ವಿದ್ಯಾರ್ಥಿಗಳ ಮೇಲೆ ಹೆಜ್ಜೇನು ದಾಳಿ ನಡೆಸಿದ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕಕ್ಕಿಂಜೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಪ್ರಾರ್ಥನೆ ಮುಗಿಸಿ ಶಾಲೆ ಒಳಗೆ ಹೋಗುವಾಗ ಹೆಜ್ಜೇನು ದಾಳಿ ನಡೆಸಿದೆ. 15 ವಿದ್ಯಾರ್ಥಿಗಳ ಮೇಲೆ ಹೆಜ್ಜೇನು ದಾಳಿ ಮಾಡಿದೆ. ಮೂವರು ವಿದ್ಯಾರ್ಥಿಗಳಿಗೆ ಗಂಭೀರ ಗಾಯಗಳಾಗಿವೆ. ಹೆಜ್ಜೇನು ದಾಳಿಗೊಳಗಾದ ಮಕ್ಕಳಿಗೆ ಕಕ್ಕಿಂಜೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಸುರಕ್ಷತಾ ದೃಷ್ಟಿಯಿಂದ ಶಾಲೆಗೆ ರಜೆ ನೀಡಲಾಗಿದೆ.



ವಿಶೇಷಚೇತನ ಮಗುವನ್ನು ಕಸದತೊಟ್ಟಿಗೆ ಎಸೆದಿದ್ದ ಪ್ರಕರಣ। ಬೆಳಗಾವಿಯ ವಿವೇಕಾನಂದ ಪ್ರತಿಷ್ಠಾನದ ಆರೈಕೆಯಲ್ಲಿದ್ದ ಶಿಶುವಿಗೆ ಆಸರೆ

ಅನಾಥ ಕಂದ ಇಟಲಿ ತಾಯಿಯ ಮಡಿಲಿಗೆ

ವಿನಾಯಕ ಮಠಪತಿ ಬೆಳಗಾವಿ

ಮಕ್ಕಳಿಗಾಗಿ ಅದೆಷ್ಟೋ ದೇವರ ಹರಕೆ ಹೊತ್ತು ಸಂತಾನ ಭಾಗ್ಯ ಪಡೆಯುವವರ ಮಧ್ಯೆ ಅಂಗವೈಕಲ್ಯದ ಕಾರಣಕ್ಕೆ ಸ್ವಂತ ಗರ್ಭದಲ್ಲಿ ಜನಿಸಿದ್ದ ಮಗುವನ್ನೇ ಕಸದತೊಟ್ಟಿಯಲ್ಲಿ ಎಸೆದಿದ್ದ ದುರುಳರ ಕುಡಿ, ಸದ್ಯ ಇಟಲಿಯ ತಾಯಿಯೊಬ್ಬರ ಮಡಿಲಿಗೆ ಸೇರಿ ಬೆಚ್ಚಗಿನ ಆಸರೆ ಪಡೆದ ಅಪರೂಪದ ಘಟನೆ ಕುಂದಾನಗರಿಯಲ್ಲಿ ನಡೆದಿದೆ.

ಹುಟ್ಟಿದ ಮಗು ಅಂಗವೈಕಲ್ಯದಿಂದ ಕೂಡಿದೆ ಎಂಬ ಕಾರಣಕ್ಕೆ ಕಳೆದ ಎರಡು ವರ್ಷಗಳ ಹಿಂದೆ ಪೋಷಕರು ಕಸದತೊಟ್ಟಿಗೆ ಎಸೆದಿದ್ದರು. ಸ್ಥಳೀಯರು ಮಗುವನ್ನು ಬೆಳಗಾವಿಯ ಜಿಲ್ಲಾಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದಿದ್ದರು. ವೈದ್ಯರು ಮಗುವಿಗೆ ಚಿಕಿತ್ಸೆ ನೀಡಿ ತಮ್ಮ ಆರೈಕೆಯಲ್ಲೇ ಉಳಿಸಿಕೊಂಡಿದ್ದರು. ನಂತರ ಕಂದಮ್ಮ ಸ್ವಾಮಿ ವಿವೇಕಾನಂದ ಸೇವಾ ಪ್ರತಿಷ್ಠಾನದ ಗಂಗಮ್ಮ ಚಿಕ್ಕುಂಬಿಮಠ ಕೇಂದ್ರದ ಆರೈಕೆಯಲ್ಲಿತ್ತು.

ಶಬರಿಯಂತೆ ಕಾದಿದ್ದ ಇಟಲಿ ದಂಪತಿ: ಕಳೆದ ಆರು ವರ್ಷಗಳಿಂದಲೂ ಇಟಲಿಯ ಪಿಸಿಷಿಯನ್ ಡಾ.ಕೂಸ್ಟಾಂಜಾ ಮತ್ತು ಬುಯಾರ್ ಡೆಡೆ ದಂಪತಿ ಭಾರತದ ಒಂದು ಮಗುವನ್ನು ದತ್ತು ಪಡೆಯಬೇಕೆಂಬ ದೃಢ ಸಂಕಲ್ಪದಲ್ಲಿದ್ದರು. ಈ ಕುರಿತು ಕಾನೂನು ಪ್ರಕಾರ ಅರ್ಜಿ ಸಲ್ಲಿಸಿದ್ದರು. ವರ್ಷದ ಹಿಂದೆಯಷ್ಟೇ ಸೇವಾ ಪ್ರತಿಷ್ಠಾನದಲ್ಲಿ ಆಶ್ರಯ ಪಡೆಯುತ್ತಿದ್ದ ಮಗುವಿನ ಮಾಹಿತಿ ಈ ದಂಪತಿ ಗಮನಕ್ಕೆ ಬಂದಿತ್ತು.



ದತ್ತು ಪಡೆದ ಮಗುವಿನ ಜೊತೆ ಇಟಲಿ ದಂಪತಿಯ ಸಂಭ್ರಮ.

ವಿದೇಶಕ್ಕೆ ಹಾರಿದ 13ನೇ ಮಗು

ಸಮಾಜದಲ್ಲಿ ನಾನಾ ಕಾರಣಕ್ಕೆ ಹೆತ್ತವರಿಂದ ದೂರವಾಗಿ ಆಶ್ರಯವಿಲ್ಲದೆ ಅನಾಥವಾಗಿದ್ದವರ ಪಾಲಿಗೆ ಬೆಳಗಾವಿಯ ಸ್ವಾಮಿ ವಿವೇಕಾನಂದ ಸೇವಾ ಪ್ರತಿಷ್ಠಾನದ ಗಂಗಮ್ಮ ಚಿಕ್ಕುಂಬಿಮಠ ಬಾಲಕಲ್ಯಾಣ ಕೇಂದ್ರ ಸಂಜೀವಿನಿಯಾಗಿದೆ. ಇಲ್ಲಿ ಬೆಳೆದ ಸಾವಿರಾರು ಮಕ್ಕಳು ವಿವಿಧ ರಂಗದಲ್ಲಿ ಗುರುತಿಸಿಕೊಂಡಿದ್ದಾರೆ. ಅಲ್ಲದೆ , ಸುಂದರ ಬದುಕು ಕಟ್ಟಿಕೊಂಡಿದ್ದಾರೆ. ಈವರೆಗೆ 13 ಮಕ್ಕಳನ್ನು ವಿದೇಶಗಳ ದಂಪತಿ ದತ್ತು ಪಡೆದು ಆಶ್ರಯ ನೀಡುತ್ತಿರುವುದು ಈ ಸಂಸ್ಥೆಯ ಹೆಗ್ಗಳಿಕೆಯಾಗಿದೆ.

ಅಂಗವೈಕಲ್ಯದಿಂದ ಬಳಲುತ್ತಿದ್ದ ಮಗು ಚಿಕಿತ್ಸೆ ಪಡೆಯುತ್ತಿರುವುದನ್ನು ಗಮನಿಸಿದ್ದ ಇಟಲಿ ಮೂಲದ ದಂಪತಿ ಆರ್ಥಿಕ ಸಹಾಯ ಮಾಡುತ್ತಿದ್ದರು. ಮಗು ಆದಷ್ಟು ಬೇಗ ಗುಣಮುಖವಾಗಿ ತಮ್ಮ ಮಡಿಲು ತುಂಬಿಸಿಕೊಳ್ಳುವ ಉತ್ಸುಕತೆಯಲ್ಲಿ ಈ ಕುಟುಂಬ ಶಬರಿ ರಾಮನಿಗೆ ಕಾಯ್ದಂತೆ ಮಗುವಿಗಾಗಿ ಕಾಯುತ್ತಿದ್ದರು. ಕೊನೆಗೂ ದತ್ತು ಪಡೆಯುವ ಇಟಲಿ ದಂಪತಿ ಕನಸು ನನಸಾಗುವ ಸಮಯ ಬಂದೊದಗಿದೆ. ಹೆತ್ತವರಿಗೆ ಬೇಡವಾಗಿ ಕಸದತೊಟ್ಟಿಗೆ ಸೇರಿದ್ದ ಮಗು ಈಗ ದೂರದ ಇಟಲಿ ದಂಪತಿಯ ಆಸರೆ ಪಡೆದಿದೆ. ಪುಟ್ಟ ಕಂದಮ್ಮನನ್ನು ಎದೆಗೆ ಅಪ್ಪಿಕೊಂಡ ತಾಯಿ ಹೃದಯದ ಕಣ್ಣಲ್ಲಿ ಸಂತೃಪ್ತಿ ಎದ್ದು ಕಾಣುತ್ತಿದೆ. ಕಾನೂನು ಪ್ರಕ್ರಿಯೆಯ ಮೂಲಕ ಸದ್ಯ ಮಗು ಇಟಲಿ ದಂಪತಿ ಕೈ ಹಿಡಿದಿದೆ.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮಗು ಕೇವಲ 7 ತಿಂಗಳಲ್ಲಿ ಜನಿಸಿದ್ದರಿಂದ ಈ ಸಮಸ್ಯೆ ಎದುರಾಗಿತ್ತು. ಮಗುವಿನ ತೂಕ 1.3 ಕೆ.ಜಿ ಇದ್ದ ಕಾರಣ ಆರೋಗ್ಯದಲ್ಲಿ ಸಾಕಷ್ಟು ಸಮಸ್ಯೆಗಳು ಇದ್ದವು. ಕೆಎಲ್‌ಇ ಆಸ್ಪತ್ರೆಯಲ್ಲಿ ಒಂದು ತಿಂಗಳು ಚಿಕಿತ್ಸೆ ಕೊಡಿಸಿದ್ದೇವೆ. ಅಲ್ಲದೇ ಮಗುವಿಗೆ ನಾವು ಬಹಳಷ್ಟು ಆರೈಕೆ ಮಾಡಿದ್ದು, ಸದ್ಯ ಇಟಲಿ ದಂಪತಿಗಳ ಆಶ್ರಯ ಪಡೆದಿದ್ದು ಖಿಷಿ ಸಂಗತಿ.

ಡಾ. ಮನೀಷಾ ಭಾಂಡನಕರ್, ಚಿಕ್ಕುಂಬಿಮಠ ಬಾಲಕಲ್ಯಾಣ ಕೇಂದ್ರದ ಅಧ್ಯಕ್ಷೆ

ನಂಬಿಕಸ್ಥರು ಮತ್ತು ಸುಸಂಸ್ಕೃತರೆಂಬ ಕಾರಣಕ್ಕೆ ಭಾರತೀಯ ಮಗುವನ್ನು ದತ್ತು ಪಡೆಯುತ್ತಿದ್ದೇವೆ. ವಿಶೇಷ ಚೇತನ ಮಗುವಿನ ಭವಿಷ್ಯ ರೂಪಿಸಿದ ಧನ್ಯತೆಯ ಕಾರಣಕ್ಕೆ ನಮ್ಮ ಆಯ್ಕೆ ಇದಾಗಿದೆ. ಈ ಕಂದನ ಭವಿಷ್ಯ ಉಜ್ವಲವಾಗಿಸಲು ನಾವು ಪ್ರಯತ್ನಿಸುತ್ತೇವೆ. ಮಗುವನ್ನು ನಮ್ಮ ಜತೆ ಕರೆದೊಯ್ಯಲು ಬಹಳ ಸಂತೋಷವೆನಿಸುತ್ತಿದೆ.

-ಇಟಲಿಯ ದಂಪತಿ

ವಿಶ್ವವಾಣಿ

ಸಂಪಾದಕೀಯ

ಮೈಮರೆವು ದುಬಾರಿಯಾಗಬಲ್ಲದು

ಆ ಕೆಟ್ಟ ಕನಸನ್ನು ಮರೆಯಲುಂಟೇ? 2019ರ ಅಂತ್ಯದಲ್ಲಿ ವಕ್ಕರಿಸಿಕೊಂಡ ಕರೋನಾ ಎಂಬ ಮಹಾಮಾರಿ ನೋಡನೋಡುತ್ತಿದ್ದಂತೆಯೇ ಜಗತ್ತಿನ ವಿವಿಧ ದೇಶಗಳ ಜನರ ಆರೋಗ್ಯಭಾಗ್ಯಕ್ಕೆ ಕೊಳ್ಳಿಯಿಟ್ಟದ್ದರ ಜತೆಗೆ ಅವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನೂ ಹೈರಾಣು ಮಾಡಿಬಿಟ್ಟಿತು. ಭಾರತವು ಸಕಾಲದಲ್ಲಿ ಇದಕ್ಕೆ ಲಸಿಕೆಯನ್ನು ಕಂಡುಕೊಂಡಿದ್ದರಿಂದ ಮತ್ತು ಸಾಕಷ್ಟು ದೇಶಗಳಿಗೂ ಅದನ್ನು ರವಾನಿಸಿದ್ದರಿಂದ, ಸಾವುನೋವುಗಳ ಸಂಖ್ಯೆಯಲ್ಲಿ ಸಾಕಷ್ಟು ಇಳಿಕೆ ಕಂಡುಬಂತು ಎನ್ನಬಹುದು. ಆದರೆ ಅದಕ್ಕೂ ಮುಂಚಿನ ಅವಧಿಯಲ್ಲಿ, ವಿಶ್ವದ ವಿವಿಧೆಡೆ ಜನರು ಅನುಭವಿಸಿದ ತಲ್ಲಣವನ್ನು ಪದಗಳಲ್ಲಿ ಹಿಡಿದಿಡಲಾಗದು. ಈ ಸಂದರ್ಭವನ್ನು ಮತ್ತೊಮ್ಮೆ ನೆನಪಿಸಿಕೊಳ್ಳುತ್ತಿರುವುದಕ್ಕೆ ಕಾರಣ 'ಗಿಲ್ಲಿಯನ್ ಬೆರ್ರೆ ಸಿಂಡ್ರೋಮ್' (ಜಿಬಿಎಸ್) ಕಾಯಿಲೆ. ಮಹಾರಾಷ್ಟ್ರದಲ್ಲಿ 15 ಮಂದಿಯ ಸಾವಿಗೆ ಕಾರಣವಾಗಿರುವ ಈ ಕಾಯಿಲೆಯು (ಸಾಲದೆಂಬಂತೆ 200ಕ್ಕೂ ಹೆಚ್ಚು ಪ್ರಕರಣ ದಾಖಲಾಗಿವೆಯಂತೆ), ತಮಿಳುನಾಡು, ಅಸ್ಸಾಂ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಈಗಾಗಲೇ ತನ್ನ ಕರಾಮತ್ತನ್ನು ತೋರಿಸಿದೆ. ಕರ್ನಾಟಕದಲ್ಲೂ ಇದರ ಪ್ರಕರಣವೊಂದು ವರದಿಯಾಗಿದೆ. ಇಂಥ ಸೋಂಕು ತಗಲುತ್ತಿರುವ ಮಾಹಿತಿ ಬಯಲಾದಾಗಲೆಲ್ಲಾ, ಜನರು ತಲ್ಲಣಗೊಳ್ಳುವುದು ಸಹಜ. ಯಾವ ರೀತಿಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು, ಔಷಧಿ/ಲಸಿಕೆಯೇನಾದರೂ ಇದೆಯೇ? ಎಂಬೆಲ್ಲಾ ವಿಷಯಗಳಿಗೆ ಸಂಬಂಧಿಸಿ ಅವರಲ್ಲಿ ಗೊಂದಲ ಮೂಡುವುದಿದೆ. ಕರೋನಾ ಕಾಲಘಟ್ಟದಲ್ಲಿ ಜನರು ಅನುಭವಿಸಿದ ಕಹಿಯೇ ಇಂಥ ಗೊಂದಲದ ಮರುಕಳಿಕೆಗೆ ಕಾರಣ. ಇಂಥ ಸಂದರ್ಭದಲ್ಲಿ ಜನರಲ್ಲಿ ವಿಶ್ವಾಸ ಮೂಡಿಸಬೇಕಾದ್ದು ಆಳುಗ ವ್ಯವಸ್ಥೆಗಳ ಹೊಣೆ 'ಜಿಬಿಎಸ್' ಸಂಬಂಧಿತ ರೋಗಲಕ್ಷಣಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಸರಳ ರೀತಿಯಲ್ಲಿ ಜನರಿಗೆ ತಿಳಿಸಿಕೊಟ್ಟು, ಅನುಸರಿಸಬೇಕಾದ ಕ್ರಮಗಳ ಕುರಿತು ಅವರನ್ನು ಮಾಹಿತಿವಂತರನ್ನಾಗಿ ಮಾಡಬೇಕಾಗುತ್ತದೆ. ಈ ಕೆಲಸ ಸಮರೋಪಾದಿಯಲ್ಲಿ ನಡೆಯಲಿ ಎಂಬುದು ಸಹೃದಯಿಗಳ ಆಶಯ.

ಸೊಂಪಾದಕೀಯ

ಮೂಷಿಕನ ಆರಾಧನೆ

ದಾವಣಗೆರೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಇಲಿಗೆ ಪೂಜೆ ಮಾಡುತ್ತಾರಂತೆ. ಇದರಲ್ಲಿ ಏನು ವಿಶೇಷ, ಮಧ್ಯಮ ವರ್ಗದ ಜನ ತಮ್ಮ ಮನೆಯ ಸಂದಿ-ಗೊಂದಿಗಳಲ್ಲಿ ಸಿಗುವ ಇಲಿಗಳಿಗೆ ತಕ್ಕ ಪೂಜೆ ಮಾಡುವುದು ಮಾಮೂಲಿ ವಿಷಯ ಅಲ್ಲವೇ ಅಂತ ನೀವು ಕೇಳಬಹುದು. ಮನೆಗಳ ಮೂಲೆಗಳಲ್ಲಿ ಅಡಗಿ ಕುಳಿತ ಇಲಿಗಳನ್ನು ಹಿಡಿಯಲು ಬೋನುಗಳನ್ನು ಹಾಕುವುದು ಬೇರೆ ವಿಷಯ. ಆದರೆ ಇದು ಇಲಿಯ ಪೂಜೆ ಅಂದರೆ ಆರಾಧನೆಗೆ ಸಂಬಂಧಪಟ್ಟ ವಿಷಯ. ಇಲಿಯನ್ನು ಆರಾಧಿಸುತ್ತಾರಾ ಎಂದು ನೀವು ಆಶ್ಚರ್ಯದಿಂದ ಕೇಳಬಹುದು. ಇದು ಮೇಲ್ನೋಟಕ್ಕೆ ಪೂಜೆ, ಆರಾಧನೆ ಎನಿಸಿದರೂ, ಇಲ್ಲಿನ ಉದ್ದೇಶ ಮನೆಯಲ್ಲಿರುವ ಕಿರಿಕಿರಿಕಾರಕ ಇಲಿಗಳನ್ನು ತಡೆಗಟ್ಟುವುದೇ ಆಗಿದೆ. ಆದರೆ ಇಲ್ಲಿ 'ದಂಡಂ ದಶಗುಣಂ' ಎನ್ನುವ ಮಂತ್ರ ಬಳಸದೆ ಇಲಿಗಳನ್ನು ಪೂಜೆ ಮಾಡಿ ಬೇಡಿಕೊಳ್ಳುವ ಶಾಂತಿ-ತಂತ್ರ ಅನುಸರಿಸುತ್ತಾರೆ ಅಷ್ಟೇ. ಗಣೇಶನ ಹಬ್ಬದ ಸಮಯದಲ್ಲಿ ದೇಶದಾದ್ಯಂತ ಎಲ್ಲರೂ ಗಣೇಶನ ಮೂರ್ತಿಗೆ ಪೂಜೆ ಮಾಡಿದರೆ ಇಲ್ಲಿ ಮಾತ್ರ ವಿಘ್ನ ವಿನಾಯಕನ ವಾಹನಕ್ಕೆ 'ನಮಗೆ ಏನೂ ತೊಂದರೆ ಕೊಡ ಬೇಡಪ್ಪ' ಅಂತ ಬೇಡಿಕೊಳ್ಳಲಾಗುತ್ತದೆ. ಅಸಲಿಗೆ ಈ ಪೂಜೆ ಮಾಡುವವರು ಬಟ್ಟೆ ವ್ಯಾಪಾರಿಗಳಂತೆ. ಅವರು ತಮ್ಮ ಮನೆಯಲ್ಲಿ ಬಟ್ಟೆಯ ದಾಸ್ತಾನು ಮಾಡಿಟ್ಟುಕೊಂಡಿರುತ್ತಾರೆ. ಆದರೆ ಈ ಬಟ್ಟೆಗಳಿಗೆ ಇಲಿಗಳಿಂದ ಸಿಕ್ಕಾಪಟ್ಟೆ ಕಾಟ ಇದೆಯಂತೆ. ಈ ಕಿಡಿಗೇಡಿ ಇಲಿಗಳಿಂದಾಗಿ ತಮ್ಮ ಹೊಟ್ಟೆಪಾಡಿಗೆ ನಡೆಸುತ್ತಿರುವ ಬಟ್ಟೆ ಉದ್ಯಮಕ್ಕೆ ತೊಂದರೆ ಆಗುತ್ತದೆ ಅನ್ನುವುದು ಇಲ್ಲಿನ ವ್ಯಾಪಾರಿಗಳ ಅಳಲು. ಒಂದೊಂದೇ ಇಲಿಗಳನ್ನು ಹುಡುಕಿ ಹೊಡೆಯುವುದು ಹರಸಾಹಸ ಎನ್ನುವುದಕ್ಕೋ ಏನೋ ಅವರು ಈ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವ ದಾರಿ ಹುಡುಕಿಕೊಂಡಿದ್ದಾರೆ. ಹಾಗಾಗಿ ದಾಸ್ತಾನು ಮಾಡಿಟ್ಟುಕೊಂಡ ಬಟ್ಟೆಗಳನ್ನು ಕಡಿದು ಹಾಳುಮಾಡುವ ಇಲಿಗಳಿಗೆ ಇವರು ವಿಶೇಷ ಪೂಜೆ ಮಾಡುತ್ತಾರೆ. ಈ ಸಮಯದಲ್ಲಿ 'ನಮ್ಮ ಬಟ್ಟೆಗಳನ್ನು ಹಾಳುಮಾಡಿ ನಮ್ಮ ಉದ್ಯಮಕ್ಕೆ ತೊಂದರೆ ಕೊಡಬೇಡ' ಎಂದು ಮೂಷಿಕ ಮಹಾನುಭಾವರನ್ನು ಬೇಡಿ ಕೊಳ್ಳಲಾಗುತ್ತದಂತೆ. ಇದಕ್ಕೆ ಇಲಿಗಳಿಂದ ತಕ್ಕ ಸ್ಪಂದನೆ ಸಿಗುತ್ತದೆ ಎಂಬ ನಂಬಿಕೆ ಇವರದ್ದು. ಅಂತೂ ಕೋಲು, ಪೊರಕೆ, ಬೋನುಗಳ ಬಡಪೆಟ್ಟಿಗೆ ಬಗ್ಗದ ಇಲಿರಾಯ ಪೂಜೆ ಆರಾಧನೆಗೆ ಬಗ್ಗುತ್ತಾನೆ ಅನ್ನೋದೇ ಇದರ ವಿಶೇಷ.

ಸಂಪಾದಕರ ಸದ್ಯಶೋಧನೆ

ಬೇರೆಯವರ ಜೀವನದಲ್ಲೂ ನೆಲೆಸುವುದು

ಜಪಾನಿನಲ್ಲಿ ಯಾರನ್ನೇ ಆಗಲಿ, ದಾರಿ ಕೇಳಿದರೆ, ಅವರು ಎಷ್ಟೇ ಅವಸರದಲ್ಲಿದ್ದರೂ ದಾರಿ ತೋರಿಸುವುದಷ್ಟೇ ಅಲ್ಲ, ನಾವು ಹೋಗಬೇಕೆಂದಿರುವ ತಾಣದ ತನಕವೂ ಬಂದು ಬಿಟ್ಟು ಹೋಗುತ್ತಾರೆ ಎಂಬುದು ಗೊತ್ತು. ನನ್ನ ಸ್ನೇಹಿತರು ನನಗೆ ಇನ್ನೊಂದು ಪ್ರಸಂಗವನ್ನು ಹೇಳಿದರು. ಅವರು ಹದಿನೈದು ದಿನಗಳ ಕಾಲ ಕಂಪನಿ ಕೆಲಸದ ನಿಮಿತ್ತ ಮೊದಲ ಬಾರಿ ಟೋಕಿಯೋಕ್ಕೆ ಹೋಗಿದ್ದರು. ಅಲ್ಲಿಗೆ ಹೋದಾಗ, ''ಓಪನ್ ರೆಸ್ಟೋರೆಂಟಿಗೆ (ಯತೈಸ್) ಹೋಗಲು ಮರೆಯಬೇಡಿ'' ಎಂದು ಅವರ ಸಹೋದ್ಯೋಗಿ ಮಿತ್ರ ಹೇಳಿದ್ದನಂತೆ. ಹೀಗಾಗಿ ಅವರು ಯತೈಸ್ ರೆಸ್ಟೋರೆಂಟನ್ನು ಹುಡುಕಿಕೊಂಡು ಹೋಗಿದ್ದರು. ಅಲ್ಲಿಗೆ ಹೋದಾಗ, ಅವರಿಗೆ ಯಾವ ಆಹಾರವನ್ನು ಆರ್ಡರ್ ಮಾಡಬೇಕು ಎಂಬುದು ತಿಳಿಯಲಿಲ್ಲ. ಕಾರಣ ಅವರು ಶುದ್ಧ ಸಸ್ಯಾಹಾರಿ. ಜೀವನದಲ್ಲಿ ಮೊಟ್ಟೆ ಅಥವಾ ಮೊಟ್ಟೆಯಿಂದ ಮಾಡಿದ ಖಾದ್ಯವನ್ನೂ ಅವರು ಸೇವಿಸಿದವರಲ್ಲ. ಅಲ್ಲಿನ ಮೆನು ನೋಡಿ ಅವರಿಗೆ ಮತ್ತಷ್ಟು ಗೊಂದಲವಾಯಿತು. ಕಾರಣ ಇಡೀ ಮೆನು ಜಪಾನೀಸ್ ಭಾಷೆಯಲ್ಲಿತ್ತು. ಅಷ್ಟೇ ಅಲ್ಲ, ಹೋಟೆಲಿನಲ್ಲಿ ಯಾರಿಗೂ ಇಂಗ್ಲಿಷ್ ಬರುತ್ತಿರಲಿಲ್ಲ. ಅವರು ಕೆಲ ಹೊತ್ತು ಅಲ್ಲಿಯೇ ಇದ್ದರು. ಅಷ್ಟೊಲ್ಲಿಗೆ ಅಲ್ಲಿಗೆ ಇಬ್ಬರು ಯುವಕ-ಯುವತಿ ಬಂದರು. ಅವರಿಗೆ ಇಂಗ್ಲಿಷ್ ಬರಬಹುದು ಎಂಬ ಅವರ ನಿರೀಕ್ಷೆ ನಿಜವಾಗಿತ್ತು. ಅವರಿಬ್ಬರ ಮುಂದೆ ತಮ್ಮ ಸಮಸ್ಯೆಯನ್ನು ತೋಡಿಕೊಂಡರು. ಆಗ ಅವರಿಬ್ಬರೂ ವೆಜಿಟೇರಿಯನ್ ಆಹಾರಗಳ ಹೆಸರುಗಳನ್ನು ಹೇಳಿ, ಅವುಗಳನ್ನು ತೆಗೆದುಕೊಳ್ಳಿ ಎಂದು ಹೇಳಬಹುದಿತ್ತು. ಆದರೆ ಅವರು ಅಡುಗೆ ಭಟ್ಟ (ಶೆಫ್)ನನ್ನು ಕರೆದು, ಪರಿಸ್ಥಿತಿಯನ್ನು ವಿವರಿಸಿದರು. ಆ ಅಡುಗೆಭಟ್ಟನಿಗೂ ಇಂಗ್ಲಿಷ್ ಬರುತ್ತಿರಲಿಲ್ಲ. ಆ ಯುವಕ-ಯುವತಿ, ನನ್ನ ಸ್ನೇಹಿತನ ಕೋರಿಕೆಯ ಪ್ರಕಾರ ಅವನಿಗೆ ಬೇಕಾದ ಆಹಾರವನ್ನು ಸಿದ್ಧಪಡಿಸಲು ಅಡುಗೆಭಟ್ಟನನ್ನು ಒಪ್ಪಿಸಿದರು. ಆತ ಇಪ್ಪತ್ತು ನಿಮಿಷ ಕಾಯುವಂತೆ ಹೇಳಿದ. ಆಯಿತು ಎಂದು ನನ್ನ ಸ್ನೇಹಿತರು ಕಾಯುತ್ತಾ ಕುಳಿತರು. ಆ ಯುವಕ-ಯುವತಿ ತಮ್ಮ ಊಟ ಮುಗಿಸಿದ್ದರು. ಆದರೂ ಕುಳಿತೇ ಇದ್ದರು. ಅಷ್ಟೊತ್ತಿಗೆ ಅಲ್ಲಿಗೆ ನನ್ನ ಸ್ನೇಹಿತರು ಆರ್ಡರ್ ಮಾಡಿದ ಆಹಾರ ಬಂದಿತು. ಅದನ್ನು ಅವರು ಸುಮಾರು ಅರ್ಧ ಗಂಟೆ ಮೆಲ್ಲುತ್ತಾ ಸವಿದರು. ಅಷ್ಟು ಹೊತ್ತೂ ಅವರಿಬ್ಬರೂ ಅಲ್ಲಿಯೇ ತುಸು ದೂರದಲ್ಲಿ ಕುಳಿತಿದ್ದರು. ಅವರಿಬ್ಬರೂ ಅಲ್ಲಿ ಅವರ ಮಾತುಕತೆಯಲ್ಲಿ ನಿರತರಾಗಿದ್ದಾರೆ ಎಂದು ನನ್ನ ಸ್ನೇಹಿತರು ಭಾವಿಸಿದ್ದರು. ಇನ್ನೇನು ಹೊರಡಲಿರುವಾಗ, ಅವರಿಬ್ಬರೂ ಬಂದು ''ಇನ್ನೇನಾದರೂ ಬೇಕಿತ್ತಾ? ಬೇಕಾದರೆ ಹೇಳಿ, ನಾವು ಅಡುಗೆಭಟ್ಟರಿಗೆ ಹೇಳಿ ನಿಮಗೆ ಬೇಕಾದ ಆಹಾರವನ್ನು ಸಿದ್ಧಪಡಿಸಿ ಕೊಡುವಂತೆ ಹೇಳುತ್ತೇವೆ'' ಎಂದು ಹೇಳಿದರು. ಅಷ್ಟೇ ಅಲ್ಲ, ಅಡುಗೆಭಟ್ಟನನ್ನು ಕರೆದು, ''ಇವರು ಬಯಸಿದರೆ ಬೇರೇನನ್ನು ಮಾಡಿಕೊಡ್ತೀರಿ?'' ಎಂದು ಕೇಳಿದರು. ಆದರೆ ನನ್ನ ಸ್ನೇಹಿತರಿಗೆ ಹೊಟ್ಟೆ ಭರ್ತಿಯಾಗಿತ್ತು. ಆ ಒಬ್ಬರೂ ಯುವಕ- ಯುವತಿಯರು ಅಷ್ಟರೊಳಗೆ ನಾಳೆಗೆ ಬೇಕಾದ ಉಪಾಹಾರವನ್ನು ಸಿದ್ಧಪಡಿಸುವಂತೆ ಹೇಳಿ, ನನ್ನ ಸ್ನೇಹಿತನಿಗೆ ಕೊಡುತ್ತಾ, ''ನಾಳೆ ಬೆಳಗ್ಗೆ ನಿಮಗೆ ಸಮಸ್ಯೆ ಆಗಬಹುದು ಎಂದು ಭಾವಿಸಿ, ಅಡುಗೆಭಟ್ಟನಿಂದ ವಿಶೇಷ ಬ್ರೇಕ್ ಫಾಸ್ಟ್ ತಯಾರಿಸಿದ್ದೇವೆ. ನಾಳೆ ಬೆಳಗ್ಗೆ ಇದನ್ನು ಸೇವಿಸಿ. ನೀವು ಇಷ್ಟಪಡ್ತೀರಿ'' ಎಂದರು. ನನ್ನ ಸ್ನೇಹಿತನ ಬಾಯಿಯಿಂದ ಮಾತುಗಳೇ ಹೊರಡಲಿಲ್ಲ. ಅಡುಗೆಭಟ್ಟನನ್ನು ಪರಿಚಯಿಸಿ ಅವರು ಹೊರಡಬಹುದು ಅಥವಾ ಅವರ ಕೆಲಸದಲ್ಲಿ ಮಗ್ನರಾಗಿರಬಹುದು ಎಂಬ ನನ್ನ ಸ್ನೇಹಿತರ ಊಹೆ ಸುಳ್ಳಾಗಿತ್ತು. ಅವರಿಬ್ಬರೂ ಈತನಿಗಾಗಿಯೇ ಅಲ್ಲಿ ಉಳಿದಿದ್ದರು. ನನ್ನ ಸ್ನೇಹಿತ ಊಟ ಮುಗಿಸಿ, ಮರುದಿನದ ಬ್ರೇಕ್ ಫಾಸ್ಟ್ ತೆಗೆದುಕೊಂಡು ಇನ್ನೇನು ಹೊರಡಬೇಕು ಎನ್ನುವಾಗ ಅವರಿಬ್ಬರೂ, ''ಇದು ನಮ್ಮ ಮೊಬೈಲ್ ನಂಬರ್. ನಿಮಗೇನಾದರೂ ಸಮಸ್ಯೆ ಆದರೆ ನಮಗೆ ಫೋನ್ ಮಾಡಿ'' ಎಂದು ಹೇಳಿ ಮೊಬೈಲ್ ನಂಬರ್ ಕೊಟ್ಟರು. ನನ್ನ ಸ್ನೇಹಿತನೂ ಜಗತ್ತನ್ನು ಸುತ್ತಿದವನೇ. ಆದರೆ ಈ ರೀತಿಯ ಅನುಭವ ಅವನಿಗೆ ಯಾವ ದೇಶ ದಲ್ಲಿಯೂ ಆಗಿರಲಿಲ್ಲ. ಇದು ಜಪಾನಿನಲ್ಲಿ ಮಾತ್ರ ಕಾಣುವ ವಿಶೇಷ ಉಪಚಾರ. 'ಬೇರೆಯವರ ಜೀವನದಲ್ಲೂ ನೆಲೆಸಬೇಕು' ಎನ್ನುವ ಜಪಾನಿನ ಜೀವನದರ್ಶನ ಆ ಯುವಕ-ಯುವತಿಯಲ್ಲಿ ಅಕ್ಷರಶಃ ಮೂರ್ತರೂಪ ಪಡೆದಂತಿತ್ತು. ಜಪಾನಿಯರು ತಮಗಾಗಿ ಮಾತ್ರ ಜೀವಿಸುವುದಿಲ್ಲ. ಬೇರೆಯವರ ಬದುಕಿನ ಭಾಗವಾಗುವ ಅವಕಾಶವನ್ನು ಕಳೆದುಕೊಳ್ಳುವುದಿಲ್ಲ.

ಪೋಲಿ ಮಾತುಗಳನ್ನಾಡಿಸುವ ಟೂರೆಟ್ ಲಕ್ಷಣಾವಳಿ

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

'ಹಿಚ್ಕಿ' ಎನ್ನುವ ಹಿಂದಿ ಚಿತ್ರವು 2018ರಲ್ಲಿ ಬಿಡುಗಡೆಯಾಯಿತು. ಈ ಚಿತ್ರದಲ್ಲಿ ರಾಣಿ ಮುಖರ್ಜಿಯವರು ಪ್ರಧಾನ ಪಾತ್ರವನ್ನು ನಿರ್ವಹಿಸಿದ್ದರು. ಸಿದ್ಧಾರ್ಥ ಪಿ.ಮಲ್ಹೋತ್ರ ನಿರ್ದೇಶಿಸಿದ ಈ ಚಿತ್ರಕ್ಕೆ ಆರಂಭದಲ್ಲಿ ಹಣತೊಡಗಿಸಲು ಯಾರೂ ಮುಂದೆ ಬರಲಿಲ್ಲ. ಆದರೆ ಕೊನೆಗೆ ಆದಿತ್ಯ ಚೋಪ್ರಾ ಹಣವನ್ನು ತೊಡಗಿಸಿದರು. 20 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಾಣವಾದ ಈ ಚಿತ್ರವು, 215 ಕೋಟಿ ರುಪಾಯಿ ಲಾಭವನ್ನು ಗಳಿಸಿತು. ವಿಮರ್ಶಕರ ಮೆಚ್ಚುಗೆಯನ್ನು ಗಳಿಸಿದ ಈ ಚಿತ್ರದಲ್ಲಿ, ರಾಣಿ ಮುಖರ್ಜಿಯವರು 'ನೈನಾ' ಮಾಥುರ್ ಎಂಬ ಟುರೆಟ್ ಸಿಂಡ್ರೋಮ್ ಗ್ರಸ್ತ (ಟಿಎಸ್) ಅಧ್ಯಾಪಿಕೆಯಾಗಿ ನೀಡಿದ ಅಭಿನಯ ಅತ್ಯಂತ ಮನೋಜ್ಞ.

ಹಿಚ್ಕಿ ಚಿತ್ರಕ್ಕೆ ಸ್ಫೂರ್ತಿ ಅಮೆರಿಕದ ಪ್ರೇರಣದಾಯಿ ಭಾಷಣಕಾರ ಬ್ರಾಡ್ ಕೋಹೆನ್ ಅವರ ಆತ್ಮಕಥೆ 'ಫ್ರಂಟ್ ಆಫ್ ದ ಕ್ಲಾಸ್: ಹೌ ಟುರೆಟ್ ಸಿಂಡ್ರೋಮ್ ಮೇಡ್ ಮಿ ದ ಟೀಚರ್ ಐ ನೆವರ್ ಹ್ಯಾಡ್'. ಈತನ ಆತ್ಮಕಥೆಯು ಯೂಟ್ಯೂಬಿನಲ್ಲಿ 'ಫ್ರಂಟ್ ಆಫ್ ದಿ ಕ್ಲಾಸ್' ಎಂಬ ಹೆಸರಿನಲ್ಲಿ ಲಭ್ಯವಿದೆ. ಈ ಚಿತ್ರವನ್ನು ದಯವಿಟ್ಟು ನೋಡಿ (https://www.youtube.com/watch?v=EsPTGIW_hGQ), ಒಂದು ಹೊಸ ಜಗತ್ತು ನಿಮ್ಮ ಮುಂದೆ ತೆರೆದುಕೊಳ್ಳುತ್ತದೆ. ಹೃದಯ ತುಂಬಿ ಬರುತ್ತದೆ.

ಹಿಚ್ಕಿ ಎಂದರೆ ಬಿಕ್ಕಳಿಕೆ. ಕಥಾನಾಯಕಿಯು ಟಿಎಸ್ ಪೀಡಿತಳು. ಟುರೆಟ್ ಎನ್ನುವುದು ಓರ್ವ ನರವೈದ್ಯನ ಹೆಸರು. ಈತನ ಪೂರ್ಣ ಹೆಸರು ಜಾರ್ಜಸ್ ಆಲ್ಬರ್ಟ್ ಎಡ್ವರ್ಡ್ ಬ್ರೂಟಸ್ ಜಯೋಸ್ ದಲ ಟುರೆಟ್ (1857-1904). ಫ್ರಾನ್ಸ್ ದೇಶದ ನರವೈದ್ಯ. ಮಿದುಳಿನ ಬೆಳವಣಿಗೆಗೆ ಸಂಬಂಧಿಸಿದಂಥ ಒಂದು ವಿಶಿಷ್ಟ ಲಕ್ಷಣಾವಳಿಯನ್ನು ಈತನು ಮೊದಲ ಬಾರಿಗೆ ವಿವರಿಸಿದ ಕಾರಣ, ಈ ಲಕ್ಷಣಾವಳಿಗೆ ಈತನ ಹೆಸರನ್ನೇ ನೀಡಲಾಗಿದೆ. ಈ ವೈಪರೀತ್ಯದ ಮುಖ್ಯ ಲಕ್ಷಣ 'ಟಿಕ್'. ಟಿಕ್ ಎಂದರೆ 'ಅನಿಯಂತ್ರಿತ, ಸ್ವಯಂಚಾಲಿತ, ಮತ್ತೆ ಮತ್ತೆ ಮರುಕಳಿಸುವ, ಅಂಗಾಂಗ ಚಲನೆ ಹಾಗೂ ಉದ್ಗಾರಗಳು'. ರಾಣಿ ಮುಖರ್ಜಿ 'ಚ ಚ ಚ' ಎಂಬ ತ್ವರಿತ ಉದ್ಗಾರದೊಡನೆ ತನ್ನ ಕುತ್ತಿಗೆಯನ್ನು ಎಡಕ್ಕೆ ಮತ್ತೆ ಮತ್ತೆ ತ್ವರಿತವಾಗಿ ತಿರುಗಿಸುತ್ತಾರೆ. ಈ ಲಕ್ಷಣಾವಳಿಯಲ್ಲಿ ಯಾವ ರೀತಿಯ ಅನಿಯಂತ್ರಿತ ಶಬ್ದಗಳು ಹೊರಬರಬಹುದು ಹಾಗೂ ಶರೀರದ ಯಾವ ಸ್ನಾಯುಗಳು ತ್ವರಿತ ಮತ್ತು ಅನಿಯಂತ್ರಿತ ಚಲನೆಗಳನ್ನು ತೋರಬಹುದು ಎನ್ನುವುದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಇಂಗ್ಲಿಷಿನಲ್ಲಿ 'ವಿನ್ಸೆಂಟ್ ವಿಲ್ ಮೀರ್', ದಿ ರೋಡ್ ವಿತಿನ್, ಮೇಜ್, ದಿ ಟಿಕ್ ಕೋಡ್, ಐ ಹ್ಯಾವ್ ಟೂರೆಟ್ಸ್, ಟೂರೆಟ್ಸ್ ಡಸಂಟ್ ಹ್ಯಾವ್ ಮಿ' ಮುಂತಾದ ಚಿತ್ರಗಳು ನಿರ್ಮಾಣವಾಗಿವೆ. ಆದರೆ ಭಾರತೀಯ ಭಾಷೆಗಳಲ್ಲಿ ಹಿಚ್ಕಿ ಮೊದಲನೆಯ ಚಿತ್ರವಾಗಿದೆ.

ಷಾರ್ಕೋ: 19ನೆಯ ಶತಮಾನದ ಯುರೋಪಿನಲ್ಲಿ ನರ ವಿಜ್ಞಾನಕ್ಕೆ ಸಂಬಂಧಿಸಿದ ಅದ್ಭುತ ಸಂಶೋಧನೆಗಳು ನಡೆದವು. ಅದರ ಫಲವಾಗಿ ಅನೇಕ ನರರೋಗಗಳು ಹಾಗೂ ನರ ವೈಪರೀತ್ಯಗಳು ಬೆಳಕಿಗೆ ಬಂದವು. ಇಂಥ ಸಂಶೋಧಕರ ಪೈಕಿ ಮುಂಚೂಣಿಯಲ್ಲಿದ್ದವನು ಜೀನ್ ಮಾರ್ಟಿನ್ ಷಾರ್ಕೋ (1825-1893). ಈತನನ್ನು 'ಆಧುನಿಕ ನರವಿಜ್ಞಾನದ ಪಿತಾಮಹ' ಎಂದೂ ಕರೆಯುವುದುಂಟು. ಈತನು ಪ್ಯಾರಿಸ್ ನಗರದ ಪ್ರಖ್ಯಾತ ಸಾಲ್ಪೆತ್ರಿಯ ಆಸ್ಪತ್ರೆಯಲ್ಲಿ ಕೆಲಸವನ್ನು ಮಾಡುತ್ತಿದ್ದ. ನರವೈದ್ಯಕೀಯದಲ್ಲಿ ಅಪಾರ ಪರಿಣತಿಯನ್ನು ಪಡೆದಿದ್ದ ಈತನ ಬಳಿ ಕಲಿಯಲು ಯುವ ವೈದ್ಯರು ಹಾಗೂ ಚಿಕಿತ್ಸೆಯನ್ನು ಪಡೆಯಲು ಅಸಂಖ್ಯ ರೋಗಿಗಳು ಬರುತ್ತಿದ್ದರು. ಈತನ ಜನಪ್ರಿಯತೆಯನ್ನು ಕಂಡ ಆಸ್ಪತ್ರೆಯ ಆಡಳಿತ ವರ್ಗದವರು ಈತನನ್ನು ಆಸ್ಪತ್ರೆಯ ನಿರ್ದೇಶಕನನ್ನಾಗಿ ಆಯ್ಕೆ ಮಾಡಿದರು. ಈತನ ಬಳಿ ಶಿಷ್ಯವೃತ್ತಿ ಬಯಸಿ ಬಂದವರಲ್ಲಿ ಆಧುನಿಕ ಮನೋವಿಜ್ಞಾನಕ್ಕೆ ದೊಡ್ಡ ತಿರುವನ್ನು ಕೊಟ್ಟ ಸಿಗ್ಮಂಡ್ ಫ್ರಾಯ್ಡ್ ಒಬ್ಬನಾಗಿದ್ದ. ಮತ್ತೋರ್ವ ಪ್ರಖ್ಯಾತ ಶಿಷ್ಯನೆಂದರೆ ಜಯೋಸ್ ದಲ ಟೂರೆಟ್. ಈತನು ಮೊದಲ ಬಾರಿಗೆ ವಿವರಿಸಿದ ಲಕ್ಷಣಾವಳಿಯು, ಈತನ ಹೆಸರಿನಲ್ಲಿಯೇ 'ಟುರೆಟ್ ಲಕ್ಷಣಾವಳಿ' ಎಂದು ಪ್ರಸಿದ್ಧವಾಗಿದೆ.

ಫ್ರಾನ್ಸ್ ದೇಶದ ಒಂದು ಪುಟ್ಟ ಹಳ್ಳಿಯಲ್ಲಿ ಟುರೆಟ್, ಅಕ್ಟೋಬರ್ 30, 1857ರಲ್ಲಿ ಹುಟ್ಟಿದ. ಈತನ ಬಾಲ್ಯದ ಬಗ್ಗೆ ಹೆಚ್ಚಿಗೆ ಏನೂ ತಿಳಿದಿಲ್ಲ. 1873-76ರವರೆಗೆ ಪಾಯಟರೀಸ್ ಮತ್ತು ಪ್ಯಾರಿಸ್ ನಗರಗಳಲ್ಲಿ ವೈದ್ಯಕೀಯ ಶಿಕ್ಷಣವನ್ನು ಪಡೆದ. ನಂತರ ಡಾ. ಷಾರ್ಕೋ ಅವರ ನೇತೃತ್ವದಲ್ಲಿ ಸಾಲ್ಪೆತ್ರಿಯ ಆಸ್ಪತ್ರೆಯಲ್ಲಿ ಉನ್ನತ ತರಬೇತಿಯನ್ನು ಪಡೆದ. ಉನ್ಮಾದ (ಹಿಸ್ಟೀರಿಯ), ವಶೀಕರಣ ವಿದ್ಯೆ (ಹಿಪ್ನೋಸಿಸ್),

ತತ್ತರಿಕೆ (ಅಟಾಕ್ಸಿಯ, ಅಂಗಾಂಗಳ ಚಲನೆಯ ನಡುವೆ ಹೊಂದಾಣಿಕೆ ಇಲ್ಲದಿರುವಿಕೆ) ಮುಂತಾದ ಪ್ರಕರಣಗಳನ್ನು ಅಧ್ಯಯನ ಮಾಡಿ ಅವುಗಳ ಮೇಲೆ ಪ್ರಭುತ್ವವನ್ನು ಸಾಧಿಸಿದ. ಆಗ ಷಾರ್ಕೋ, ಅಸಹಜ ಅನಿರೀಕ್ಷಿತ ಅಂಗಾಂಗ ಚಲನಾ ವೈಪರೀತ್ಯಗಳಿಗೆ (ಪ್ಯಾರಾಕ್ಸಿಸಮಲ್ ಮೂವ್ಮೆಂಟ್ ಡಿಸಾರ್ಡರ್) ಸಂಬಂಧಿಸಿದಂತೆ ಅಧ್ಯಯನವನ್ನು ಮಾಡಲು ಟುರೆಟನಿಗೆ ಸೂಚಿಸಿದ. 1884. ಟುರೆಟ್ ಇನ್ನೂ, ಷಾರ್ಕೋವಿನ ಬಳಿ ನರವೈದ್ಯಕೀಯವನ್ನು ಕಲಿಯುತ್ತಿದ್ದ ವಿದ್ಯಾರ್ಥಿಯಾಗಿದ್ದ. ಆಗಲೇ ಆತನ ಹೆಸರನ್ನು ಹೊರಲಿರುವ ಹೊಸ ಲಕ್ಷಣಾವಳಿಯ ಸಮಗ್ರ ವಿವರಣೆಯನ್ನು ಮೊದಲ ಬಾರಿಗೆ ಗಮನಿಸಿ, ದಾಖಲಿಸಿ, ಒಂದು ಸ್ಪಷ್ಟ ಚಿತ್ರವನ್ನು ಕೊಡುವ ಅಪೂರ್ವ ಅವಕಾಶವನ್ನು ಷಾರ್ಕೋ, ಟುರೆಟನಿಗೆ ವಹಿಸಿದ.

ಟುರೆಟ್, 1885ರ ಜನವರಿ ತಿಂಗಳಿನಲ್ಲಿ 'ಮ್ಯಾಲಡಿ ದೆಸ್ ಟಿಕ್' ಎಂಬ ಪ್ರಬಂಧವನ್ನು 'ಆರ್ಕೈವ್ಸ್ ದ ನ್ಯೂರಾಲಜಿ' ಪತ್ರಿಕೆಯಲ್ಲಿ ಪ್ರಕಟಿಸಿದ. ಈ ಪ್ರಬಂಧವು 9 ರೋಗಿಗಳ ಅಧ್ಯಯನ ಸಾರಾಂಶವನ್ನು ಒಳಗೊಂಡಿತ್ತು. ಈ 9 ರೋಗಿಗಳ ಅಧ್ಯಯನದಲ್ಲಿ ಹಲವು ನಿರ್ದಿಷ್ಟ ರೋಗ ಲಕ್ಷಣಗಳನ್ನು ದಾಖಲಿಸಿದ. ಮೊದಲನೆಯದು ಈ ಲಕ್ಷಣಾವಳಿಯು ಬಾಲ್ಯದಲ್ಲಿಯೇ ಕಂಡುಬರುತ್ತದೆ. ಕುಟುಂಬಗಳಲ್ಲಿ ಆನುವಂಶಿಕವಾಗಿ ವ್ಯಾಪಿಸುತ್ತದೆ. ರೋಗಲಕ್ಷಣಗಳು ಕೆಲವು ಸಲ ಉಗ್ರವಾಗಿ, ಕೆಲವು ಸಲ ಸೌಮ್ಯವಾಗಿ, ಏರಿಳಿಯುತ್ತಲೇ ಇರುತ್ತವೆ. ಪ್ರತಿಸಲವೂ ಏಕರೂಪದ ಅಂಗಾಂಗಗಳ ಅಸಹಜ, ಪುನರಾವರ್ತಿತ, ತ್ವರಿತ ಚಲನೆಗಳು ಕಂಡುಬರುತ್ತವೆ. ಇವು ಬರಲಿವೆ ಎಂಬ ಮುನ್ಸೂಚನೆಯು (ಪ್ರಿಮಾನಿಶನ್) ಈ ವ್ಯಕ್ತಿಗಳಿಗೆ ದೊರೆಯುತ್ತದೆ. ಮಾರ್ಮರುನುಡಿಯುವಿಕೆ (ಎಕೋಲಾಲಿಯ) ಅಂದರೆ, ಹೇಳಿದ ಮಾತನ್ನೇ ಮತ್ತೆ ಮತ್ತೆ ಪುನರಾವರ್ತಿಸುವುದು (ಆ ಮಾತಿಗೆ ಅರ್ಥವಿರಲೇಬೇಕಾಗಿಲ್ಲ) ಹಾಗೂ ಅಸಭ್ಯನುಡಿಯುವಿಕೆ (ಕೋಪ್ರೋಲಾಲಿಯ) ಮುಖ್ಯವಾದವು. ಅಸಭ್ಯನುಡಿಗಳೆಂದರೆ, ಕೆಟ್ಟ ನುಡಿಗಳು ಹಾಗೂ ಪೋಲಿ ನುಡಿಗಳು. ಜನ ನಾಚಿ ತಲೆಯನ್ನು ಬಾಗಿಸಬೇಕಾದಂಥ ಅಶ್ಲೀಲ ಬೈಗುಳ. ಸಮಾಜವು ಟುರೆಟ್ ಲಕ್ಷಣಾವಳಿಯಿರುವ ಜನರನ್ನು ಅಷ್ಟು ಸಹಾನುಭೂತಿಯಿಂದ ನೋಡಲು ಹಿಂದೆಗೆಯಲು ಕಾರಣ ಈ ಸೊಂಟದ ಕೆಳಗಿನ ಮಾತುಗಳು. ಆದರೆ ಈ ಎಲ್ಲ ಕೆಟ್ಟನುಡಿಗಳು ಅಪ್ರಜ್ಞಾಪೂರ್ವಕವಾಗಿ ಹೊರಡುತ್ತವೆ ಎನ್ನುವ ವಿಚಾರವನ್ನು ನೆನಪಿನಲ್ಲಿಡಬೇಕು. ಹಾಗೆಯೇ ಎಲ್ಲ ಟಿಎಸ್ ಜನರಲ್ಲಿ ಎಲ್ಲ ಲಕ್ಷಣಗಳು ಕಾಣಲೇಬೇಕೆಂಬ ನಿಯಮವು ಇರುವುದಿಲ್ಲ ಎನ್ನುವುದನ್ನು ಮರೆಯಬಾರದು.

ಟುರೆಟ್, ತನ್ನ 'ಮ್ಯಾಲಡಿ ದೆಸ್ ಟಿಕ್' ಪ್ರಬಂಧವನ್ನು ಪ್ರಕಟಿಸಿದ ಮರುವರ್ಷ, 1886ರಲ್ಲಿ ಪೂರ್ಣಪ್ರಮಾಣದ ವೈದ್ಯನಾದ. ಈತನು ಸಾಲ್ಪೆತ್ರಿಯ ಆಸ್ಪತ್ರೆಯನ್ನು ಬಿಟ್ಟು ಇತರ ಆಸ್ಪತ್ರೆಗಳಲ್ಲಿ ಕೆಲಸವನ್ನು ಮಾಡಿದ. ತಾನು ಹೋದ ಕಡೆಗಳಲ್ಲೆಲ್ಲ ಉನ್ಮಾದ, ವಶೀಕರಣ ವಿದ್ಯೆ, ತತ್ತರಿಕೆ, ಟಿಎಸ್ ಬಗ್ಗೆ ಅಧ್ಯಯನವನ್ನು ಮುಂದುವರಿಸಿದ. ಹಾಗೆಯೇ ತನ್ನ ವೈಯುಕ್ತಿಕ ಆಸಕ್ತಿಯ ಕ್ಷೇತ್ರಗಳಾದ ಕಲೆ, ಸಾಹಿತ್ಯ ಮತ್ತು ಕಾನೂನಿಗೆ ಸಂಬಂಧಿಸಿದ ಹಾಗೆ ಲೇಖನಗಳನ್ನು ಪ್ರಕಟಿಸಿದ.

1893. ಟುರೆಟ್‌ನ ಪಾಲಿಗೆ ಒಂದು ಕೆಟ್ಟವರ್ಷ. ಆ ವರ್ಷದಲ್ಲಿ ಟುರೆಟ್ಟಿನ ಮಗ ಮರಣಿಸಿದ. ಅವನಿಗೆ ನರವೈದ್ಯಕೀಯವನ್ನು ಕಲಿಸಿದ ಗುರುಗಳಾದ ಷಾರ್ಕೋ ನಿಧನವಾದ. ರೋಸ್ ಕ್ಯಾಂಪರ್ ಎಂಬ ಮಹಿಳೆಯು ಟುರೆಟ್ಟಿನ ತಲೆಗೆ ಗುಂಡನ್ನು ಹಾರಿಸಿದಳು. ಗುಂಡು ತಲೆಗೆ ಸಾಕಷ್ಟು ಹಾನಿಯನ್ನು ಮಾಡಿದರೂ, ಜೀವವನ್ನು ತೆಗೆಯಲಿಲ್ಲ. ಸಾಲ್ಪೆತ್ರಿಯ ಆಸ್ಪತ್ರೆಯವರು ತನ್ನನ್ನು ವಶೀಕರಣಕ್ಕೊಳಪಡಿಸಿರುವ ಕಾರಣ, ತಾನು ತನ್ನ ಜೀವನವನ್ನು ಸಮಾಧಾನಕರವಾಗಿ ನಿರ್ವಹಿಸುತ್ತಲೂ ಆಗುತ್ತಿಲ್ಲ ಎಂಬುದು ಆಕೆಯ ದೂರು. ಈ ಕೊರಗಿನ ಹಿನ್ನೆಲೆಯಲ್ಲಿ ಆಕೆ ಗುಂಡು ಹಾರಿಸಿದಳು. ಈ ಗುಂಡೇಟಿನ ಕಾರಣ, ತನ್ನ ವೈದ್ಯಕೀಯ ವೃತ್ತಿಯನ್ನು ಮುಂದುವರಿಸಲಾಗದ ಸ್ಥಿತಿಯನ್ನು ತಲುಪಿದ. ತಾನು ಕೆಲಸ ಮಾಡುತ್ತಿದ್ದ ಆಸ್ಪತ್ರೆಗಳನ್ನು ಅವನು ಬಿಟ್ಟು ಹೊರಬರಬೇಕಾಯಿತು. ಕೊನೆಗೆ ಅವನೇ ಖಿನ್ನತೆ (ಡಿಪ್ರೆಶನ್) ಮತ್ತು ಚಿತ್ತವಿಕಲತೆಗೆ (ಡಿಮೆನ್ಶಿಯ) ತುತ್ತಾದ. 1901-02ರಲ್ಲಿ ಆತನು ಸ್ವಿಜರ್ಲ್ಯಾಂಡಿನ ಲಸಾನ ಆಸ್ಪತ್ರೆಯ ಮನೋರೋಗಿಗಳ ವಿಭಾಗದಲ್ಲಿ ದಾಖಲಾದ. ಅವನ ಆರೋಗ್ಯವು ದಿನೇ ದಿನೇ ಕ್ಷೀಣಿಸಿತು. ಕೊನೆಗೆ ಮೇ 22, 1904ರಂದು ಮರಣಿಸಿದ.

ಮೊದಲಲ್ಲ: ಟಿಎಸ್ ಅನ್ನು ಮೊದಲ ಬಾರಿಗೆ ಜಯೋಸ್ ದಲ ಟೂರಿಟ್ ಮೊದಲ ಬಾರಿಗೆ ಗುರುತಿಸಿದನೇ ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ, ಅವನಿಗಿಂತಲೂ ಮೊದಲೇ ಹಲವರು ಗುರುತಿಸಿದ್ದರು ಎನ್ನುವ ಮಾಹಿತಿಯು ದೊರೆಯುತ್ತದೆ. ಆದರೆ ಅವರಲ್ಲಿ ಯಾರೂ ಟಿಎಸ್ ಅನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ನಿಖರವಾದ ಮಾಹಿತಿಯನ್ನು ನೀಡಿರಲಿಲ್ಲ. ಜಾಕೋಬ್ ಸ್ಪ್ರಂಗರ್ ಮತ್ತು ಹೆನ್ರೀಚ್ ಕ್ರೇಮರ್ 1498ರ 'ಮ್ಯಾಲಿಯಸ್ ಮ್ಯಾಲಿಕಾರಮ್' (ಮಾಟಗಾತಿಯ ಸುತ್ತಿಗೆ) ಎನ್ನುವ ತಮ್ಮ ಕೃತಿಯಲ್ಲಿ ಒಬ್ಬ ಪುರೋಹಿತನಲ್ಲಿ ಟಿಎಸ್ ಲಕ್ಷಣಗಳಿವೆ ಎಂದು ದಾಖಲಿಸಿದ್ದಾರೆ. ಟಿಎಸ್‌ಗೆ ಕಾರಣ ಸೈತಾನ/ಮಾಟ/ದುಷ್ಟ ಶಕ್ತಿಯ ಕಾಟ ಹೀಗೆಲ್ಲ ಅಂದಿನ ಜನರು ನಂಬಿದ್ದರು. 1825ರಲ್ಲಿ ಜೀನ್ ಮಾರ್ಕ್ ಗ್ಯಾಸ್ಪರ್ಡ್ ಇಟಾರ್ಡ್ ಎಂಬ ಫ್ರೆಂಚ್ ವೈದ್ಯನು, ಪ್ಯಾರಿಸ್ ನಗರದ ಶ್ರೀಮಂತ ವಲಯದಲ್ಲಿ ಮಾರ್ಕೀಸ್ ದಾಂಪಿಯರ್ ಎಂಬ ಮಹಿಳೆಯು ಹಠಾತ್ತನೆ ಅನೈಚ್ಛಿಕ ಚಲನವಲನದೊಡನೆ ಕೆಟ್ಟ ಕೆಟ್ಟ ಮಾತುಗಳನ್ನು ಅಪ್ರಯತ್ನವಾಗಿ ಆಡುತ್ತಿದ್ದುದರ ಬಗ್ಗೆ ಬರೆದಿದ್ದಾನೆ. 1885ರಲ್ಲಿ ಟುರೆಟ್ ಅಧ್ಯಯನ ಮಾಡಿದ 9 ಪ್ರಕರಣಗಳಲ್ಲಿ ಈಕೆಯೂ ಸೇರಿದ್ದಳು. ಆರ್ಮಂಡ್ ಟ್ರೌಸ್ಯೂ (1801-1867) ಹ್ಯೂಲಿಂಗ್ಸ್ ಜಾಕ್ಸನ್ (1835-1911) ಇವರೂ ಈ ಲಕ್ಷಣಾವಳಿಯ ಬಗ್ಗೆ ದಾಖಲಿಸಿರುವರು.

ಹ್ಯಾಲೋಪೆರಿಡಾಲ್: 1960-70ರ ದಶಕದವರೆಗೆ ನರವೈದ್ಯಕೀಯ ಜಗತ್ತಿನಲ್ಲಿ ಪಾರ್ಕಿನ್ಸನ್ ಕಾಯಿಲೆ ಹಾಗೂ ಆಲ್ಜೈಮರ್ ಕಾಯಿಲೆಗಳು ವೈದ್ಯರ ಗಮನವನ್ನು ಸೆಳೆದ ಕಾರಣ, ಯಾರೂ ಟಿಎಸ್ ಬಗ್ಗೆ ತಲೆಯನ್ನು ಕೆಡಿಸಿಕೊಳ್ಳಲಿಲ್ಲ. ನಂತರ ಆರ್ಥರ್ ಕೆ ಶಪೀರೋ (1923-1995) ಮತ್ತು ಸಂಗಡಿಗರು ನಡೆಸಿದ ಅಧ್ಯಯನಗಳ ಕಾರಣ, ಹ್ಯಾಲೋಪೆರಿಡಾಲ್ ಎನ್ನುವ ಔಷಧ ಟಿಎಸ್ ಲಕ್ಷಣಗಳನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸುತ್ತದೆ ಎನ್ನುವುದನ್ನು ತೋರಿಸಿಕೊಟ್ಟರು. 1972ರ ಹೊತ್ತಿಗೆ ಅಮೆರಿಕದಲ್ಲಿ ಟುರೆಟ್ ಲಕ್ಷಣಾವಳಿಯವರ ಸಂಘಟನೆಯೊಂದು ಆರಂಭವಾಯಿತು. 1984ರ ನಂತರ ಟುರೆಟ್ ಲಕ್ಷಣಾವಳಿಯ ಬಗ್ಗೆ ಸಂಶೋಧನೆಯನ್ನು ನಡೆಸಲು ಹಣಕಾಸಿನ ನೆರವು ದೊರೆಯಿತು. ಈ ಅಧ್ಯಯನಗಳ ಕಾರಣ, ಟಿಎಸ್ ಏಕೆ ಬರುತ್ತದೆ, ಹೇಗೆ ಬರುತ್ತದೆ, ಅದನ್ನು ಗುಣಪಡಿಸಲಾಗದಿದ್ದರೂ ಹೇಗೆ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು ಎನ್ನುವುದರ ಬಗ್ಗೆ ಹೆಚ್ಚಿನ ಮಾಹಿತಿಯು ದೊರೆಯಿತು.

'ಡಯಾಗ್ನೋಸ್ಟಿಕ್ ಆ್ಯಂಡ್ ಸ್ಟಾಟಿಸ್ಟಿಕಲ್ ಮ್ಯಾನ್ಯುಯಲ್ ಆಫ್ ಮೆಂಟಲ್ ಡಿಸಾರ್ಡರ್' (ಡಿಎಸ್ಎಂ) ಎಂಬ ಮಾರ್ಗದರ್ಶಕ ಕೈಪಿಡಿಯು ಇಂದು ಲಭ್ಯವಿದೆ. ಇದು ಟಿಎಸ್ ಅನ್ನು 'ಕ್ರಾನಿಕ್ ಮೋಟಾರ್ ಆರ್ ವೋಕಲ್ ಟಿಕ್ ಡಿಸಾರ್ಡರ್' ಎಂಬ ವೈಪರೀತ್ಯಗಳ ಗುಂಪಿಗೆ ಸೇರಿಸಿದೆ. ಈಗ ಟಿಎಸ್ ಇರುವ ಸುಮಾರು ಅರ್ಧದಷ್ಟು ರೋಗಿಗಳಲ್ಲಿ, ಟಿಎಸ್ ಜತೆಯಲ್ಲಿ ಇತರ ಮನೋವೈದ್ಯಕೀಯ ಸಮಸ್ಯೆಗಳು (ಉದಾ: ಗೀಳು ಕಾಯಿಲೆ (ಒಸಿಡಿ), ಚಂಚಲತೆ ಮತ್ತು ಅತಿ ಚಟುವಟಿಕೆ ಕಾಯಿಲೆ (ಎಡಿಎಚ್‌ಡಿ), ವಿಪರೀತ ಕೋಪ ಹಾಗೂ ಹಠಾತ್ ಮತ್ತು ಅನಿಯಂತ್ರಿತ ಚಟುವಟಿಕೆಗಳು) ಇರುವುದನ್ನು ಗುರುತಿಸಿದ್ದಾರೆ. ಈಗ ಟಿಎಸ್ ವರ್ಗೀಕರಣದ ಬಗ್ಗೆ ಗೊಂದಲವೆದ್ದಿದೆ. ನರ/ಮನೋ/ನರಮನೋ/ನರವರ್ತನಾ ರೋಗಗಳಲ್ಲಿ ಯಾವ ಗುಂಪಿಗೆ ಸೇರಿಸಬೇಕು ಎನ್ನುವುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ. 1000 ಮಕ್ಕಳಲ್ಲಿ 3 ಮಕ್ಕಳಿಗೆ ಈ ಸಮಸ್ಯೆ ಬರಬಹುದು. ಇದನ್ನು ಗುಣಪಡಿಸುವ ಔಷಧವಿಲ್ಲ. ನಿಯಂತ್ರಿಸುವ ಪ್ರಯತ್ನಗಳು ನಡೆದಿವೆ. ಶಸ್ತ್ರಚಿಕಿತ್ಸೆಯನ್ನು ಮಾಡುವ ಪ್ರಯತ್ನಗಳೂ ನಡೆದಿವೆ. ಟಿಎಸ್ ಇಂದಿಗೂ ವೈದ್ಯರಿಗೆ ಒಂದು ಸವಾಲಿನ ಲಕ್ಷಣಾವಳಿಯಾಗಿದೆ.

ನಿಲ್ಲದ ಕೆಸರೆರಚಾಟ, ಜನರು ಕಂಗಾಲು!

ಮೆಟ್ರೋ ಒಂದು ಸ್ವಾಯತ್ತ ಸಂಸ್ಥೆ. ಅದಕ್ಕೆ ಅದರದ್ದೇ ಆದ ಇತಿಮಿತಿಗಳಿವೆ, ಒಂದಷ್ಟು ಸ್ವಾತಂತ್ರ್ಯವಿದೆ. ಹಾಗೆಂದ ಮಾತ್ರಕ್ಕೆ ಎರ್ರಾಬಿರ್ರಿ ಬೆಲೆ ಏರಿಸುವುದು ತರವಲ್ಲ. ಈ ವಿಷಯದಲ್ಲಿನ ರಾಜ್ಯ ಮತ್ತು ಕೇಂದ್ರ ಸರಕಾರಗಳ ದಿವ್ಯಮೌನವು ಜನರ ಪಾಲಿಗೆ ಅಸಹನೀಯವಾಗಿದೆ!



ಕ್ರಿಯಾಲೋಪ

ರವೀ ಸಜಂಗದ್ದೆ
vveditoped@gmail.com

ಎಲ್ಲರದೂ ಇದೇ ಹಣೆಬರಹ! ಜನಸಾಮಾನ್ಯರ ಹಿತ ಕಾಪಾಡಬೇಕಾದವರು, ಬೆಲೆಯೇರಿಕೆಯ ಸಂದರ್ಭದಲ್ಲಿ ಜನರ ಕಷ್ಟ ಮತ್ತು ತೊಂದರೆಗಳ ಬಗ್ಗೆ ಯಾವ ಯೋಚನೆಯನ್ನೂ ಮಾಡದೆ, ಕೇವಲ ಸರಕಾರದ ಬೊಕ್ಕಸ ತುಂಬಿಸಿಕೊಳ್ಳುವ, ತನ್ಮೂಲಕ ತಮ್ಮನ್ನು ಚುನಾಯಿಸಿದವರ ಮೇಲೇ ಗದಾಪ್ರಹಾರ ಮಾಡುವ ಪ್ರವೃತ್ತಿ ಕಾಣಬರುತ್ತಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಯಾವುದೇ ಸರಕಾರ ಬಂದರೂ ಈ ಪರಿಸ್ಥಿತಿಯಲ್ಲೇನೂ ಬದಲಾಗದು!

ಜನರ ಸಂಕಷ್ಟ-ಸಮಸ್ಯೆಗಳಿಗೆ ದನಿಯಾಗಿ ಪರಿಹಾರ ಕಲ್ಪಿಸ ಬೇಕಾದ ಜನಪ್ರತಿನಿಧಿಗಳು ಮತ್ತು ಸರಕಾರಗಳು, ಜನರ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿರುವ ಸಾಕಷ್ಟು ವಸ್ತುಗಳು ಮತ್ತು ಸೇವೆಗಳ ಬೆಲೆ/ಶುಲ್ಕವನ್ನು ಕಾಲಕಾಲಕ್ಕೆ, ಅವೈಜ್ಞಾನಿಕವಾಗಿ ಹೆಚ್ಚಿಸುತ್ತಾ ಹೋಗುವ ಪ್ರವೃತ್ತಿ ಮಾಮೂಲಾಗಿಬಿಟ್ಟಿದೆ. ರಾಜ್ಯದಲ್ಲಂತೂ ಕಳೆದೆರಡು ವರ್ಷ ಗಳಲ್ಲಿ ಬಹುತೇಕ ಸರಕು-ಸೇವೆಗಳ ಬೆಲೆ ದುಬಾರಿಯಾಗಿ ಬಿಟ್ಟಿದೆ. ಈ ಬೆಲೆಯೇರಿಕೆ ಪಟ್ಟಿಗೆ ಹೊಸ ಸೇರ್ಪಡೆ 'ಬೆಂಗಳೂರು ಮೆಟ್ರೋ ಪ್ರಯಾಣದರ'ದಲ್ಲಿನ ವಿಪರೀತ ಏರಿಕೆ.

ಮೆಟ್ರೋ ಪ್ರಯಾಣದರ ಏರಿಕೆಯ ವಿಚಾರವಾಗಿ ರಾಜ್ಯ ಸರಕಾರವು ಕೇಂದ್ರದ ಮೇಲೆ, ಕೇಂದ್ರವು ರಾಜ್ಯ ಸರಕಾರದ ಮೇಲೆ ಗೂಬೆ ಕೂರಿಸುವ ಹಾಗೂ ಬೆಲೆಯೇರಿಕೆಯ ವಿಷಯದಲ್ಲಿ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೆಲಸವನ್ನು ಬಹಳ ಚೆನ್ನಾಗಿ ಮಾಡುತ್ತಿವೆ! ಒಂದು ನೂರು ಮೀಟರ್‌ನಷ್ಟು ಡಾಮರೀಕರಣ ಮಾಡಿದರೂ (ಅದರ ಕಾಮಗಾರಿ ಕಳಪೆ ಯಾಗಿದ್ದರೂ)

ಕಾರ್ಪೊರೇಟರ್‌ನಿಂದ ಮೊದಲ್ಗೊಂಡು ಸಂಸದರವರೆಗೆ ಕ್ರೆಡಿಟ್ ತೆಗೆದುಕೊಳ್ಳುವ, ಡಾಮರ್ ಆದ ರಸ್ತೆಯ ಇಕ್ಕೆಲಗಳಲ್ಲೂ ಪೋಸ್ಟರ್ ಹಾಕಿ ಪೋಸು ಕೊಡುವ ಈ ನಾಯಕರು, ಮೆಟ್ರೋ ಪ್ರಯಾಣದರ ಏರಿಕೆ ವಿಷಯದಲ್ಲಿ ಹಾವು ತುಳಿದಂತೆ, ಅದಕ್ಕೂ ತಮಗೂ ಸಂಬಂಧವಿಲ್ಲ ವೆಂಬಂತೆ ಆಡುತ್ತಿರುವುದು, ಅಸಂಬದ್ಧ ಹೇಳಿಕೆಗಳನ್ನು ಕೊಡುತ್ತಿರುವುದು ರೇಜಿಗೆ ಹುಟ್ಟಿಸುವಂತಿದೆ. ಇವರೆಲ್ಲರಲ್ಲೂ ಜನಪರ ಕಾಳಜಿ ಶೂನ್ಯವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇಂಥ ವಿಚಾರಗಳಲ್ಲಿ ಜನರ ಪರವಾಗಿ ನಿಲ್ಲಬೇಕಾದ ಸಂಸದರು ಮತ್ತು ರಾಜ್ಯ ಸರಕಾರದ ಸಚಿವರು, ತಂತಮ್ಮ ಪಕ್ಷ ಗಳಲ್ಲಿ ಪ್ರಭುತ್ವ ಸ್ಥಾಪಿಸಲು ಹೆಚ್ಚೆಚ್ಚು ಮುನ್ನೆಲೆಗೆ ಬರಲೆಂದು ಬಣ ರಾಜಕೀಯ ಮಾಡುವುದರಲ್ಲಿ, ಆಯಕಟ್ಟಿನ ಸ್ಥಾನಗಳ ಬದಲಾವಣೆಯ ಕಸರತ್ತಿನಲ್ಲಿ ಸಂಪೂರ್ಣ ವ್ಯಸ್ತರಾಗಿಬಿಟ್ಟಿದ್ದಾರೆ! ಜನಸಾಮಾನ್ಯರ ವಿಷಯ ಯಾರಿಗೂ ಬೇಡ! ಯಾಕೆಂದರೆ ಮುಂದಿನ 3 ವರ್ಷಗಳ ಕಾಲ ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಯಾವುದೇ ಚುನಾವಣೆ ಇಲ್ಲವಲ್ಲಾ! ಅಲ್ಲಿಗೆ, 'ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು'!

ರಾಜ್ಯದಲ್ಲಿ ಕಳೆದೆರಡು ವರ್ಷಗಳಲ್ಲಿ ಬೆಲೆಯೇರಿಕೆಯನ್ನು ಕಂಡಿರುವ ವಸ್ತುಗಳು ಮತ್ತು ಸೇವೆಗಳ ಪಟ್ಟಿಯನ್ನೊಮ್ಮೆ ನೋಡಿದರೆ ಗಾಬರಿಯಾಗುತ್ತದೆ. ವಿದ್ಯುತ್ ದರ ಶೇ.14.5 ರಷ್ಟು, ಬಸ್ಸಿನ ಪ್ರಯಾಣ ದರ ಮತ್ತು ಹಾಲಿನ ದರ ಶೇ.15 ರಷ್ಟು, ಆಸ್ತಿ ನೋಂದಣಿ ದರ/ತೆರಿಗೆ ಶೇ.25ರಷ್ಟು, ಆಸ್ತಿ ಮೌಲ್ಯಾಂಕನ ದರ ಶೇ.30ರಷ್ಟು ವಾಹನ ನೋಂದಣಿ ಶುಲ್ಕ ಶೇ.10ರಷ್ಟು, ರಾಜ್ಯ ಸರಕಾರ ಪ್ರಾಯೋಜಿತ ಕಾಲೇಜು ಶುಲ್ಕ ಶೇ.10 ರಷ್ಟು, ವಿದ್ಯುತ್ ಚಾಲಿತ ವಾಹನದ ಮೇಲಿನ ತೆರಿಗೆ ಶೇ.10ರಷ್ಟು ಹೀಗೆ ಪಟ್ಟಿಯು ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತದೆ. ಇನ್ನು ಆಸ್ತಿ ನೋಂದಣಿ ಶುಲ್ಕ, ಆಸ್ಪತ್ರೆ ಶುಲ್ಕ, ಜನನ-ಮರಣ ನೋಂದಣಿ ಮತ್ತು ಪ್ರಮಾಣೀಕರಣ ಶುಲ್ಕಗಳೂ ಈ ಯಾದಿಗೆ ಸೇರುತ್ತವೆ. ಇಷ್ಟೆಲ್ಲಾ ಆಗಿಯೂ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ವರು ಅಧಿಕಾರ ಹಂಚಿಕೆ ಮತ್ತು ಆಂತರಿಕ ಸಂಘರ್ಷದಲ್ಲೇ ಮುಳುಗಿದ್ದಾರೆ. ಊಹೂಂ! ಜನಸಾಮಾನ್ಯರ ಗೋಳು ಯಾರಿಗೂ ಬೇಡ, ಅದನ್ನು ಕೇಳುವವರೇ ಇಲ್ಲ.

ಮೆಟ್ರೋ ಪ್ರಯಾಣದರ ಏರಿಕೆಯ ವಿಚಾರವನ್ನೇ ನೋಡುವುದಾದರೆ, ಮೆಟ್ರೋ ಒಂದು ಸ್ವಾಯತ್ತ ಸಂಸ್ಥೆ. ಅದಕ್ಕೆ ಅದರದ್ದೇ ಆದ ಇತಿಮಿತಿಗಳಿವೆ ಮತ್ತು ಒಂದಷ್ಟು ಸ್ವಾತಂತ್ರ್ಯವಿದೆ. ಹಾಗೆಂದ ಮಾತ್ರಕ್ಕೆ ಎರ್ರಾಬಿರ್ರಿ ಬೆಲೆಯೇರಿಸುವುದು ತರವಲ್ಲ. ಈ ಬೆಲೆಯೇರಿಕೆಯ ವಿಷಯದಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರಗಳ ದಿವ್ಯಮೌನವು ಜನರ ಪಾಲಿಗೆ ತೀರಾ ಅಸಹನೀಯವಾಗಿದೆ! ಮೆಟ್ರೋ ಪ್ರಯಾಣ ದರವು ಶೇ.45ರಿಂದ ಶೇ.75ರಷ್ಟು ಏರಿಕೆಯಾಗಿರುವುದು ಒಪ್ಪತಕ್ಕ ವಿಚಾರವೇ ಅಲ್ಲ!

ಸದ್ಯಕ್ಕಿರುವ ಮಾಹಿತಿಯ ಪ್ರಕಾರ, ಮೆಟ್ರೋ ಪ್ರಯಾಣ ದರವನ್ನು ನಿಗದಿ ಮಾಡುವುದು ಕೇಂದ್ರ ಸರಕಾರವು ನೇಮಕ ಮಾಡಿರುವ ಸಮಿತಿ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರತಿನಿಧಿಗಳು ಇರುತ್ತಾರೆ. ರಾಜ್ಯ ಸರಕಾರವು ದರ ಹೆಚ್ಚಳದ ಪ್ರಸ್ತಾವನೆಯನ್ನು ಈ ಸಮಿತಿಗೆ ಸಲ್ಲಿಸುತ್ತದೆ. ಈ ಸ್ವಾಯತ್ತ ಸಮಿತಿಯು ಸದರಿ ಪ್ರಸ್ತಾವನೆಯನ್ನು ಪರಾಮರ್ಶಿಸಿ, ಅಂತಿಮ ಶಿಫಾರಸನ್ನು ಕೇಂದ್ರದ ತತ್ಸಂಬಂಧಿ ಇಲಾಖೆಗೆ ಸಲ್ಲಿಸುತ್ತದೆ. ಆ ಇಲಾಖೆಯೋ, ಹೆಚ್ಚಿನ ವಿವರ ಪಡೆದುಕೊಳ್ಳುವ, ಪರಾಮರ್ಶಿಸುವ ಗೋಜಿಗೆ ಹೋಗದೆ, ದರ ಹೆಚ್ಚಳದ ಶಿಫಾರಸನ್ನು ಯಥಾವತ್ತಾಗಿ ಅಂಗೀಕರಿಸಿ, ಆದೇಶ ಹೊರಡಿಸಲು 'ನಮ್ಮ ಮೆಟ್ರೋ'ಗೆ ಅನುಮೋದನೆ ನೀಡಿದೆ, ಇಷ್ಟೇ ಆದದ್ದು! ವಿಷಯ ಹೀಗಿರುವಾಗ, ಈ ಅವೈಜ್ಞಾನಿಕ ಮತ್ತು ಅಸಂಬದ್ಧ ದರ ಏರಿಕೆಗೆ ರಾಜ್ಯ ಮತ್ತು ಕೇಂದ್ರದ ಎರಡೂ ಸರಕಾರಗಳು ನೇರ ಹೊಣೆಗಾರರು. ಮೆಟ್ರೋದ ಕಾರ್ಯಾಚರಣಾ ವೆಚ್ಚವನ್ನು ಒಂದಷ್ಟು ಸರಿದೂಗಿಸಲು ಈ ದರ ಏರಿಕೆ ಅನಿವಾರ್ಯ ಎಂಬುದು ಮೆಟ್ರೋ ಅಧಿಕಾರಿಗಳ ಸಮಜಾಯಿಷಿ. ಅದು ಹೌದಾ ದರೂ, ಈ ಪರಿಯ ಏರಿಕೆಯನ್ನು ಖಂಡಿತ ಒಪ್ಪಲಾಗದು.

ಈ ದರ ಏರಿಕೆಯ ಕುರಿತು ರಾಜ್ಯ ಮತ್ತು ಕೇಂದ್ರ ಸರಕಾರಗಳು, ಬೆಂಗಳೂರು ನಗರದ ಸಂಸದರು ಕಾರ್ಯಪ್ರವೃತ್ತರಾಗಿ, ಜನರ ದನಿಯಾಗಿ ಸಂಘಟಿತ ಹೋರಾಟವನ್ನು ನಡೆಸಬೇಕಿದೆ. ಆದರೆ ದರ ಏರಿಕೆಯಾಗಿ ಎರಡೂವರೆ ವಾರಗಳು ಕಳೆದರೂ ಇವರ್‍ಯಾರೂ ಈ ಸಮಸ್ಯೆಯ ಪರಿಹಾರಕ್ಕೆ ಅಷ್ಟೊಂದು ಆಸಕ್ತಿಯನ್ನು ತೋರಿಸಿದಂತೆ ಕಾಣುತ್ತಿಲ್ಲ. ಎಲ್ಲರೂ ಸಾಮಾಜಿಕ ಮಾಧ್ಯಮಗಳಲ್ಲಿ 'ಉತ್ತರ ಕುಮಾರನ ಪೌರುಷ'ವನ್ನು ಮೆರೆಯುತ್ತಿದ್ದಾರೆ. ಒಂದಿಬ್ಬರು ಜನಪ್ರತಿ ನಿಧಿಗಳು ಮಾತ್ರ ತಮ್ಮ ಆಪ್ತ ಸಹಾಯಕರಿಗೆ ಹೇಳಿ, ಲೆಟರ್‌ಹೆಡ್‌ನಲ್ಲಿ ಚೆಂದದ ಪತ್ರವನ್ನು ಪ್ರಿಂಟ್ ಮಾಡಿಸಿ, ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ತೇಲಿಬಿಟ್ಟು ಕೈತೊಳೆದುಕೊಂಡಿದ್ದಾರೆ.

ವರ್ಷಕ್ಕೊಮ್ಮೆ ಒಂದಂಕಿ ಪರ್ಸೆಂಟೇಜಿನಲ್ಲಿ ಸಂಬಳ ಏರಿಕೆ ಭಾಗ್ಯ ಸಿಗುವ (ಕೆಲವೊಮ್ಮೆ ಅದೂ ಖಾತ್ರಿಯಿಲ್ಲ!) ಈ ಕಾಲಮಾನದಲ್ಲಿ, ಇತರೆಲ್ಲಾ ಬಾಬತ್ತುಗಳ ಬೆಲೆಯೇರಿಕೆಯ ಬಿಸಿಗೆ ಈಗಾಗಲೇ ಹೈರಾಣಾಗಿರುವ ಬೆಂಗಳೂರು ನಿವಾಸಿಗಳ ಮೇಲೆ ಅತಿರೇಕದ ಪ್ರಮಾಣದಲ್ಲಿ ಮೆಟ್ರೋ ಪ್ರಯಾಣದರ ವನ್ನು ಏರಿಸಿದ್ದು ಸರ್ವಥಾ ಸ್ವೀಕಾರಾರ್ಹವಲ್ಲ. ಜನಪ್ರತಿನಿಧಿ ಗಳೆಲ್ಲರೂ ಪರಸ್ಪರ ಕೆಸರೆರಚಾಟವನ್ನು ಕೈಬಿಟ್ಟು, ಈ ದರ ಏರಿಕೆಯನ್ನು ಒಕ್ಕೊರಲಿನಿಂದ ಖಂಡಿಸಬೇಕಿದೆ, ಜನರ ಮೇಲಿನ ಹೊರೆಯನ್ನು ತಗ್ಗಿಸಲು ಯತ್ನಿಸಬೇಕಿದೆ.

ಸದ್ಯದ ಮಟ್ಟಿಗೆ ಈ ದರ ಏರಿಕೆಯಿಂದ ಮೆಟ್ರೋ ನಿಗಮವು ದಿನಕ್ಕೆ ಸರಾಸರಿ ಒಂದು ಕೋಟಿ ರುಪಾಯಿಯಷ್ಟು ಹೆಚ್ಚಿನ ಆದಾಯದ ಸಂಗ್ರಹದ ನಿರೀಕ್ಷೆಯಲ್ಲಿದೆ. ಅಂದರೆ ವರ್ಷಕ್ಕೆ 365 ಕೋಟಿ ರುಪಾಯಿಗಳು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಮೆಟ್ರೋದ ಲಾಭವನ್ನು ಸಮನಾಗಿ ಹಂಚಿ ಕೊಂಡಂತೆ, ಈ ವೆಚ್ಚವನ್ನು ಸರಿದೂಗಿಸಲು ತಲಾ 185 ಕೋಟಿ ರುಪಾಯಿಗಳನ್ನು ಎತ್ತಿಡುವ ನಿಟ್ಟಿನಲ್ಲಿ ಯೋಚಿಸ ಬೇಕು. ಹಾಗಾದಾಗ ಮಾತ್ರವೇ ಜನರ ಮೇಲಿನ ಹೊರೆ ತಗ್ಗಿ ಕೊಂಚ ನಿರಾಳವಾದೀತು. ಒಂದು ಸರಕಾರಕ್ಕೆ ಈ ಮೊತ್ತ (185 ಕೋಟಿ) ಏನೇನೂ ಅಲ್ಲ. ಆದ್ದರಿಂದ, ಸರಕಾರಗಳು ಮತ್ತು ಜನಪ್ರತಿನಿಧಿಗಳು ಇಚ್ಛಾಶಕ್ತಿಯನ್ನು ತೋರಿಸಬೇಕು. ಹಾಗಾದಾಗ ಮಾತ್ರವೇ 'ಜನಸೇವೆ' ಮತ್ತು 'ಜನಸೇವಕರು' ಎಂಬ ಪರಿಕಲ್ಪನೆಗೆ ಅರ್ಥ ಬಂದೀತು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮುನ್ನೆಚ್ಚರಿಕೆ ಅಗತ್ಯ

ಪ್ರಯಾಗರಾಜ್‌ನ ಮಹಾಕುಂಭಮೇಳದಲ್ಲಿ, ದೆಹಲಿ ರೈಲ್ವೆ ನಿಲ್ದಾಣದಲ್ಲಿ ಸಂಭವಿಸಿದ ಭೀಕರ ಕಾಲ್ತುಳಿದ ದುರಂತಗಳು ನಿಜಕ್ಕೂ ನೋವು ತರುವಂಥವು. ಇವಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡುವುದು ಎಂಬುದು ನಂತರದ ಪ್ರಶ್ನೆ. ಅದಕ್ಕೂ ಮೊದಲು, ಇಂಥ ದುರಂತಗಳು ಮುಂದೆ ನಡೆಯದಂತೆ ಎಚ್ಚರವಹಿಸಬೇಕಾದ ಮತ್ತು ಈ ನಿಟ್ಟಿನಲ್ಲಿ ವಿಚಾರ ವಿನಿಮಯ ನಡೆಸಬೇಕಾದ ಅನಿವಾರ್ಯತೆ ಒದಗಿದೆ. ಪ್ರಯಾಗರಾಜ್‌ನಲ್ಲಿ ಕಾಲ್ತುಳಿತ ಸಂಭವಿಸಿದ ಮರುದಿನ ನಾವು ಅಯೋಧ್ಯೆಯ ಬಾಲರಾಮನ ದರ್ಶನಕ್ಕೆ ಹೋಗಿದ್ದೆವು. ಒಂದು ಸಂದರ್ಭದಲ್ಲಂತೂ ಅಲ್ಲಿಯೂ ಅದೆಂಥಾ ನೂಕುನುಗ್ಗಲು ಉಂಟಾಯಿತೆಂದರೆ, ಅಲ್ಲಿನ ರಕ್ಷಣಾ ಸಿಬ್ಬಂದಿಗಳು ಎತ್ತರದ ಸ್ಥಾನಗಳನ್ನೇರಿ ಕೈಮುಗಿಯುತ್ತಾ, 'ಸಾವಧಾನವಾಗಿ ಬನ್ನಿ' ಎಂದು ಪ್ರಾರ್ಥಿಸಬೇಕಾಗಿ ಬಂತು. ಅಂತೂ ಇಂತೂ ಪರಿಸ್ಥಿತಿ ತಹಬಂದಿಗೆ ಬಂದಿತು. ಅಷ್ಟರಲ್ಲಿ ಸಿಬ್ಬಂದಿಗಳು ಎಳೆಯ ಮಕ್ಕಳನ್ನು ಸುರಕ್ಷಿತ ಸ್ಥಳಕ್ಕೆ ಸೇರಿಸಿಬಿಟ್ಟರು. ನಾನು ಹೇಳಲು ಬಯಸುವುದೇನೆಂದರೆ, ಮುಖ್ಯವಾಗಿ ಜನರು ಎಂಥದೇ ಪರಿಸ್ಥಿತಿಯಲ್ಲೂ ಎರ್ರಾಬಿರ್ರಿ ಓಡುವುದು, ನುಗ್ಗುವುದು, ಕಿರುಚುವುದು ಮಾಡಬಾರದು. ಇಂಥ ಸಂದರ್ಭಗಳಲ್ಲಿ ಸಾಮೂಹಿಕ ಶಿಸ್ತನ್ನು ಪಾಲಿಸುವುದು ಬಹುಮುಖ್ಯ. ಬಸ್ಸು ಮತ್ತು ರೈಲು ನಿಲ್ದಾಣಗಳಲ್ಲಿಯೂ ಮುಖ್ಯವಾಗಿ ಯುವಜನರು ಹೇಗೆಂದರೆ ಹಾಗೆ, ಎಲ್ಲೆಂದರೆ ಅಲ್ಲಿ ಒಳನುಸುಳುವುದು, ಸೀಟುಗಳನ್ನು ಆಕ್ರಮಿಸುವುದು ಬಹುತೇಕ ಕಡೆ ಕಂಡುಬರುವ ಪರಿಪಾಠ. ಈ ಅಶಿಸ್ತು ಹೋಗಬೇಕು, ಜನರು ಸ್ವಯಂಶಿಸ್ತನ್ನು ಅಳವಡಿಸಿಕೊಳ್ಳಬೇಕು. ಇಂಥ ಅಭ್ಯಾಸದಿಂದಾಗಿ ಕಾಲ್ತುಳಿತ ದಂಥ ದುರಂತಗಳು ಸಂಭವಿಸುವುದು ಕೊಂಚವಾದರೂ ತಗ್ಗುತ್ತದೆ.

-**ರಾಘವೇಂದ್ರ ರಾಯಲಪಾಡು**, ಬೂರಗಮಾಕಲಹಳ್ಳಿ

ಏಕೀ ತಾರತಮ್ಯ?

ರಾಜ್ಯದ ವಿವಿಧ ಇಲಾಖೆಗಳಿಂದ 6 ಸಾವಿರ ಕೋಟಿ ರುಪಾಯಿಯಷ್ಟು ವಿದ್ಯುತ್ ಬಿಲ್ ಮೊತ್ತ ಬಾಕಿ ಇರುವುದಾಗಿ ರಾಜ್ಯ ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಅವರು ಮಾಧ್ಯಮಗಳ ಮುಂದೆ ಬಹಿರಂಗಪಡಿಸಿದ್ದಾರೆ ಮತ್ತು ಈ ಬಾಕಿಯನ್ನು ವಸೂಲಿ ಮಾಡುವ ನಿಟ್ಟಿನಲ್ಲಿ ಆಯಾ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿಯೂ ಹೇಳಿಕೆ ನೀಡಿದ್ದಾರೆ. ಜನಸಾಮಾನ್ಯರು ತಮ್ಮ ಮನೆಯ ವಿದ್ಯುತ್ ಬಿಲ್ ಮೊತ್ತದ ಪಾವತಿಯನ್ನು ಕೇವಲ ಒಂದು ತಿಂಗಳು ಬಾಕಿ ಉಳಿಸಿಕೊಂಡರೆ ಸಾಕು, ಅವರು ಯಾವುದೋ ಗುರುತರ ಅಪರಾಧ ಮಾಡಿದ್ದಾರೇನೋ ಎಂಬ ರೀತಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ ವರ್ತಿಸುತ್ತಾರೆ ಮತ್ತು ಮನೆಯ ವಿದ್ಯುತ್ ಸಂಪರ್ಕವನ್ನು ಮುಲಾಜಿಲ್ಲದೆ ಕಡಿತಗೊಳಿಸುತ್ತಾರೆ. ಹೀಗೆ ಕಡಿತಗೊಳಿಸಿರುವುದು ಅಕ್ಕಪಕ್ಕದ ಮನೆಯವರಿಗೂ ತಿಳಿಯಲಿ ಎಂಬಂತೆ ಜೋರುದನಿಯಲ್ಲಿ ಅದನ್ನು ಹೇಳಿ, ಸಂಬಂಧಪಟ್ಟವರನ್ನು ಒಂದು ರೀತಿಯಲ್ಲಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಾರೆ. ಆದರೆ ಬಹಳ ದಿನಗಳಿಂದ ಸಾವಿರಾರು ಕೋಟಿ ರುಪಾಯಿಗಳ ಬಾಕಿ ಉಳಿಸಿಕೊಂಡಿರುವ ಇಲಾಖೆಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಲ್ಲಿ ಇದೇ ಪೌರುಷವನ್ನು ತೋರುವುದಿಲ್ಲವೇಕೆ? ನಿಯಮ ಎಲ್ಲರಿಗೂ ಒಂದೇ ಅಲ್ಲವೇ?

-**ಬೂಕನಕೆರೆ ವಿಜೇಂದ್ರ**, ಮೈಸೂರು

ನಿರಾಶೆಗೊಳಿಸಿದ ಕೇಜ್ರಿವಾಲ್

ಭ್ರಷ್ಟತೆಯ ನಿರ್ಮೂಲನಕ್ಕೆ ಪಣತೊಟ್ಟು ದೇಶಾದ್ಯಂತ ಜನಜಾಗೃತಿಗೆ ಕರೆಕೊಟ್ಟ ಅಣ್ಣಾ ಹಜಾರೆಯವರ ಚಳವಳಿಯಲ್ಲಿ ಅಗ್ರಪಾತ್ರ ವಹಿಸಿದ್ದವರು ಅರವಿಂದ ಕೇಜ್ರಿವಾಲ್. ಇವರು ದೊಡ್ಡ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸಿ, ಆಡಳಿತದಲ್ಲಿನ ಭ್ರಷ್ಟತೆಯ ಕರಾಳತೆಯನ್ನು ಆಮೂಲಾಗ್ರವಾಗಿ ಅರಿತಿದ್ದವರು. ಇದರ ನಿರ್ಮೂಲನೆಗೆ ಕೇವಲ ಚಳವಳಿ ಸಾಲದು, ರಾಜಕೀಯ ಶಕ್ತಿಯೂ ಬೇಕು ಎಂದು ರಾಜಕಾರಣಕ್ಕಿಳಿದು ಜನರಲ್ಲಿ ರೋಮಾಂಚನ ಉಂಟುಮಾಡಿದರು. ಇವರ ಶುದ್ಧ ನಡೆ-ನುಡಿಯನ್ನು ಕಂಡ ಮತದಾರರು, 'ಈತ ಭ್ರಷ್ಟತೆಯನ್ನು ಬೇರುಸಹಿತ ಕಿತ್ತು ಹೊಸ ಸಮಾಜವನ್ನು ಸೃಷ್ಟಿಸುತ್ತಾರೆ' ಎಂದು ಭಾವಿಸಿ ಅಭೂತಪೂರ್ವ ಬಹುಮತವನ್ನು ಕೊಟ್ಟರು. ಕೇಜ್ರಿವಾಲರ ಎದುರು ರಾಷ್ಟ್ರೀಯ ಪಕ್ಷಗಳು ಧೂಳೀಪಟವಾದವು. ಜನರ ನಿರೀಕ್ಷೆಯೂ ಆರಂಭದಲ್ಲಿ ಹುಸಿಯಾಗಲಿಲ್ಲ. ಆದರೆ ಕ್ರಮೇಣ ಭ್ರಷ್ಟತೆಯೇ ಕೇಜ್ರಿವಾಲರನ್ನು ಆಪೋಶನ ತೆಗೆದುಕೊಂಡಿದ್ದು ವಿಪರ್ಯಾಸ! ಹೀಗಾದಲ್ಲಿ ಯಾರನ್ನ ನಂಬೋದು?

-**ಸತ್ಯಬೋಧ**, ಬೆಂಗಳೂರು

ಭಟ್ಟರ್ ಸ್ಕಾಚ್

- **ರಂಗದೊರೆ, ಮೇಲುಕೋಟೆ**
ಭಟ್ರೇ, ವಿಶ್ವವಾಣಿಗೆ ಹತ್ತು ತುಂಬಿದಾಗ ಲೋಕವೇ ಭಟ್ಟರನ್ನು ಕೊಂಡಾಡಿತು. ಆದರೂ ಕೆಲವರಿಂದ ಹೊಗಳಿಸಿಕೊಳ್ಳಲು ಭಟ್ರು ಯಾಕೆ ಇಷ್ಟಪಡಲಿಲ್ಲ?
– **ಅಂಥವರ ಹೊಗಳಿಕೆಗೆ ಮಹತ್ವವಿಲ್ಲವೆಂದು!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಇಲ್ಲೊಬ್ರು 'ಹೋಟೆಲ್ ದೇವರೇ ಗತಿ' ಎಂದು ಹೆಸರಿಟ್ಟಿದ್ದಾರಲ್ಲಾ?
– **ಇದಕ್ಕಿಂತ ನೇರವಾಗಿ ಆ ಹೋಟೆಲ್ ತಿಂಡಿಯ ಬಗ್ಗೆ ಹೇಳಲು ಸಾಧ್ಯವಿಲ್ಲ!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ವಿದೇಶಕ್ಕೆ ಹೋದಾಗಲೆಲ್ಲ ಅಲ್ಲಿನ ಆಹಾರವನ್ನೇ ಬಯಸುವ ಭಟ್ಟರು ಅಲ್ಲಿನ ಉಡುಗೆಗಳನ್ನು ಏಕೆ ತೊಡುವುದಿಲ್ಲ?
– **ತೊಟ್ಟರೂ ಆ ಫೋಟೋವನ್ನೇಕೆ ಪೋಸ್ಟ್ ಮಾಡುವುದಿಲ್ಲ ಅಂತ ಕೇಳಬೇಕಿತ್ತು!**

- **ಚಂಚು ಚಿಟಗುಪ್ಪಿ, ಮೈಸೂರು**
ಭಟ್ರೇ, ಪತ್ರಿಕೋದ್ಯಮ ಕುರಿತಂತೆ ನಿಮ್ಮೊಂದಿಗೆ ವಾಗ್ಯುದ್ಧಕ್ಕೆ ಬರಬೇಕೆಂದಿದ್ದೇನೆ. ನೀವು ಬೌನ್ಸರುಗಳನ್ನು ಸಾಕಿಕೊಂಡಿಲ್ಲ ತಾನೇ?
– **ನಿನ್ನಂಥವರನ್ನು ಎದುರಿಸಲು ನಮ್ಮ ಅಟೆಂಡರ್ ಸಾಕು!**

- **ರಾಘಣ್ಣ, ಮೈಸೂರು**
ಭಟ್ರೇ, ಮೋದಿ ಇಂಗ್ಲಿಷ್ ಕಲಿಬೇಕಿತ್ತು ಎನ್ನುವವರಿಗೆ ನಿಮ್ಮ ಉತ್ತರ?
– **ಆಗ ಗುಜರಾತಿ ಇಂಗ್ಲಿಷ್ ಎಂಬ ಹೊಸ ಪ್ರಕಾರ ಶುರು ಆಗ್ತಾ ಇತ್ತು!**

- **ಜನಾರ್ದನ ಸಾಗರ, ಸಾಗರ**
ಭಟ್ರೇ, ಕನ್ನಡದ ಹಳೆ ನಟಿಯರೆಲ್ಲ ದಪ್ಪ ಆಗಿದ್ದಾರಲ್ಲ?
– **ವೀಕ್ ಆದ ಬಳಿಕ ಹಾಗೆ ಕಾಣಿಸುತ್ತಿದ್ದಾರೆ!**

- **ವಿ.ನಾಗೇಶ, ಸಂಜಯನಗರ**
ಭಟ್ರೇ, 'ವಿಶ್ವವಾಣಿ'ಯಲ್ಲಿ ಕೆಲಸ ಮಾಡಬೇಕೆಂದಿರುವೆ, ಕೆಲಸ ಕೊಡ್ತೀರಾ?
– **ನಮ್ಮಲ್ಲಿ ಕೆಲಸ ಇಲ್ಲ, ಬದುಕು ಕಟ್ಟಿಕೊಳ್ಳುವವರಿಗಷ್ಟೇ ಅವಕಾಶ!**

- **ಸೌಮ್ಯ, ಮೈಸೂರು**
ಭಟ್ರೇ, ಕವಿಗಳ ಸ್ನೇಹ ಮಾಡಬಹುದಾ?
– **ಕವನ ಓದುತ್ತೇನೆ ಅಂತ ಕೊಲ್ಲಬಹುದು ಹುಷಾರು!**

- **ಕರುಣಾಕರ ಹೆಗ್ಡಾಲ, ಬೆಂಗಳೂರು**
ಭಟ್ರೇ, ಮನುಷ್ಯನಿಗೆ ಯಾವಾಗ ಬುದ್ಧಿ ಬರುತ್ತದೆ?
– **ಬಂದರೂ ಅದು ಆಗಾಗ ಹೋಗುತ್ತಿರುತ್ತದಲ್ಲ?!**

- **ನಿರ್ಮಲ ಚಂದ್ರು, ನಂಜನಗೂಡು**
ಭಟ್ರೇ, ನಿನ್ನ ಪ್ರೀತಿಗೆ ರಾಜೀನಾಮೆ ಕೊಡ್ತೀನಿ ಅಂತ ಹೇಳಲಾ?
– **ಒಳಒಪ್ಪಂದ ಮಾಡ್ಕೊಂಡು ಹಾಗೆ ಹೇಳಬಹುದು!**

ನಮ್ಮ ಬೆಂಗಳೂರು, ನಮ್ಮದಾಗುವುದು ಯಾವಾಗ?

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಮುಂಬೈಗೆ ಹೋಗಿದ್ದಾಗ ಗೆಳೆಯರೊಬ್ಬರ ಬಳಿ ಪ್ರಾಸಂಗಿಕವಾಗಿ ಮಾತನಾಡುತ್ತಾ ಬೆಂಗಳೂರು ಮತ್ತು ಮುಂಬಯಿಗೆ ಇರುವ ವ್ಯತ್ಯಾಸ ಏನೆಂದು ಕೇಳಿದ್ದೆ. ಅವರು ಈ ಎರಡೂ ನಗರಗಳ ಬದುಕನ್ನು ಹತ್ತಿರದಿಂದ ಕಂಡವರು. ಅವರು ಹೇಳಿದ್ದಿಷ್ಟೇ– ''ಮುಂಬೈನಲ್ಲಿ ಅತಿ ಶ್ರೀಮಂತರೂ ಬದುಕಬಹುದು, ಕಡು ಬಡವರೂ ಘನತೆಯಿಂದ ಬದುಕಬಹುದು. ಬೆಂಗಳೂರು ಈಗ ಬಡವರ ಪಾಲಿಗೆ ದುಬಾರಿಯಾಗಿದೆ.

ಇದಕ್ಕೆ ಸಮರ್ಥನೆಯಾಗಿ ಅವರು ನೀಡಿದ ವಿವರಣೆ ಏನೆಂದರೆ, ಮುಂಬೈ ಲೋಕಲ್ ಟ್ರೇನ್‌ಗಳಲ್ಲಿ ಶ್ರೀಮಂತರೂ ಸಂಚರಿಸುತ್ತಾರೆ. ಬಡವರೂ ಸಂಚರಿಸುತ್ತಾರೆ. ಲೋಕಲ್ ಟ್ರೇನ್ ಇಲ್ಲಿ ಎಲ್ಲರನ್ನೂ ಒಂದುಗೂಡಿಸಿದೆ. ಬಡವರನ್ನು ಕಂಡರೆ ಮುಖ ಕಿವುಚುವ, ತಾತ್ಸಾರದಿಂದ ಕಾಣುವ ಮನೋಭಾವ ಮುಂಬೈನಲ್ಲಿಲ್ಲ. ಲೋಕಲ್ ಟ್ರೇನ್ ಮುಂಬೈ ನಗರದ ಜೀವನಾಡಿ. ಈ ಟ್ರೇನ್ ಇಲ್ಲಿನ ಲಕ್ಷಾಂತರ ಜನರ ಬದುಕನ್ನು ರೂಪಿಸಿದೆ. ಹಾಗೆಯೇ ಇಲ್ಲಿನ ಜನರನ್ನೂ ಬೆಸೆದಿದೆ.

ಬೆಂಗಳೂರನ್ನು ನೆನಪಿಸಿಕೊಂಡು ಅವರು ಹೇಳಿದ್ದು, ''ಬೆಂಗಳೂರು ಈಗ ಮೊದಲಿನಂತಿಲ್ಲ. ನಗರ ತುಂಬಾ ಹೈ ಫೈ ಆಗಿ ಕಾಣಿಸ್ತಾ ಇದೆ. ಮೆಟ್ರೋದಲ್ಲಿ ಸಂಚರಿಸಿದರೆ ಬೆಂಗಳೂರಿನಲ್ಲಿ ಬಡವರೇ ಇಲ್ಲ ಎಂದೆನಿಸುತ್ತದೆ. ನಗರದ ಎಲ್ಲ ಸೌಕರ್ಯಗಳನ್ನು ಉಳ್ಳವರಿಗೆಂದೇ ಮೀಸಲಿಟ್ಟಂತೆ ಕಾಣುತ್ತಿದೆ. ಸರಕಾರ ಬಡವರ ಕೈಗೆ ನೇರವಾಗಿ ದುಡ್ಡು ಕೊಡುವ ಬದಲು ಅವರ ಜೀವನ ಮಟ್ಟ ಸುಧಾರಣೆಗೆ ಅನುಕೂಲವಾಗುವ ಯೋಜನೆಗಳನ್ನು ಕ್ರಮ ಕೈಗೊಂಡಿದ್ದರೆ ನಗರ ಜೀವನ ಎಲ್ಲರಿಗೂ ಸಹ್ಯವಾಗಿರುತ್ತಿತ್ತು.''

ಗೆಳೆಯನ ಈ ಮಾತು 'ನಮ್ಮ ಮೆಟ್ರೋ' ಅತಾರ್ಕಿಕವಾಗಿ ಟಿಕೆಟ್ ದರವನ್ನು ಹೆಚ್ಚಿಸುವ ಮುನ್ನ ಹೇಳಿದ್ದು. ಈಗ ಈ ಮಾತುಗಳು ಇನ್ನಷ್ಟು ನಿಜ ಅನಿಸುತ್ತಿದೆ. ನಮ್ಮ ನಾಯಕರಿಗೆ, ಅಧಿಕಾರಿಗಳಿಗೆ ಬಡವರ ಪರ ಈ ರೀತಿಯ ಕಾಳಜಿಯೊಂದು ಇರುತ್ತಿದ್ದರೆ ಇಡೀ ದೇಶದಲ್ಲಿ ಎಲ್ಲೂ ಇಲ್ಲದಷ್ಟು ಪ್ರಮಾಣದಲ್ಲಿ ಮೆಟ್ರೋ ಟಿಕೆಟ್ ದರವನ್ನು ಏರಿಸುತ್ತಿರಲಿಲ್ಲ. ಏರಿಸಿದ ಬಳಿಕವೂ 'ಅವರು ಇವರತ್ತ, ಇವರು ಅವರತ್ತ' ಬೊಟ್ಟು ಮಾಡಿ ತೋರಿಸುವ ನಿರ್ಲಜ್ಜ ಮತ್ತು ನಿರ್ಲಕ್ಷ್ಯದ ಧೋರಣೆ ಪ್ರದರ್ಶಿಸುತ್ತಿರಲಿಲ್ಲ. ಹೊಸ ಮೆಟ್ರೋ ಮಾರ್ಗ ಉದ್ಘಾಟನೆಯ ಹಂತಕ್ಕೆ ಬಂದಾಗ ನಮ್ಮ ಸಾಧನೆ ಎಂದು ಬೆನ್ನು ತಟ್ಟಿಕೊಳ್ಳುವವರು, ದರ ಏರಿಕೆ ವಿಚಾರದಲ್ಲಿ ಮಾತ್ರ ನಾವಲ್ಲ, ನಾವಲ್ಲ ಎಂದು ಕೇಂದ್ರ ಮತ್ತು ರಾಜ್ಯ ನಾಯಕರು ಒಬ್ಬರನ್ನೊಬ್ಬರು ಬೊಟ್ಟು ಮಾಡುತ್ತಿರುವುದು 'ಮಕ್ಕಳಾಟ'ದಂತೆ ಕಾಣುತ್ತಿದೆ.

ಮರೆಯಾದ ಸಬ್ ಕಾ ವಿಕಾಸ್

ನಗರವೊಂದರ ಅಭಿವೃದ್ಧಿಗೆ ವಿಮಾನ ನಿಲ್ದಾಣ, ಮೆಟ್ರೋ, ಐಟಿ ಪಾರ್ಕ್‌ನಿಂದ ಹಿಡಿದು ಶಾಲೆ, ಕ್ರೀಡಾಂಗಣ, ಉದ್ಯಾನವನದವರೆಗೆ ಎಲ್ಲವೂ ಬೇಕು. ಆದರೆ ಈ ಎಲ್ಲ ಯೋಜನೆಗಳ ಫಲ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ನೋಡಿಕೊಳ್ಳಬೇಕಾಗಿರುವುದು ಸರಕಾರದ ಆದ್ಯ ಕರ್ತವ್ಯ. ಈ ದೇಶದ ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ 'ಸಮಾಜವಾದಿ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯ'ದ ಮೂಲ ಉದ್ದೇಶವೂ ಇದೇ. ಚುನಾವಣೆ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ಪುನರುಚ್ಚರಿಸುವ 'ಸಮಪಾಲು, ಸಮಬಾಳು' ನೀತಿ ಮತ್ತು ಪ್ರಧಾನಿ ಮೋದಿಯವರ 'ಸಬ್‌ಕಾ ಸಾಥ್ ಸಬ್ ಕಾ ವಿಕಾಸ್' ಘೋಷಣೆಯ ಅರ್ಥವೂ ಇದೇ ಆಗಿದೆ.

ಆದರೆ ಈ ಘೋಷಣೆಗಳಿಗೆ ವಿರುದ್ಧವಾಗಿ, ಅಭಿವೃದ್ಧಿಯ ಸಂಕೇತವಾದ ಹೆದ್ದಾರಿಗಳು ಟೋಲ್ ರಸ್ತೆಗಳಾಗಿ ಉಳ್ಳವರಿಗಷ್ಟೇ ಸೀಮಿತವಾಗುತ್ತಿವೆ. ಮೆಟ್ರೊ ರೈಲು ಮಾರ್ಗ 'ಮೆಟ್ರೊ' ಮಂದಿಗಾಗಿಯೇ ನಿರ್ಮಿಸಿದಂತೆ ಕಾಣುತ್ತಿದೆ. ನಗರದಲ್ಲಿ ದಿನ ಬೆಳಗಾದರೆ ತಲೆ ಎತ್ತುತ್ತಿರುವ ಮಾಲ್‌ಗಳು, ಮಲ್ಟಿಪ್ಲೆಕ್ಸ್‌ಗಳು, ಇಲ್ಲಿನ ಪಾರ್ಕಿಂಗ್ ತಾಣಗಳು, ಸಾರ್ವಜನಿಕ ಸಾರಿಗೆಯ ಸುಖಾಸೀನ ಬಸ್‌ಗಳಲ್ಲಿ ಮಧ್ಯಮ ವರ್ಗಕ್ಕಿಂತ ಮೇಲಿನ ಜನರಷ್ಟೇ ಕಾಣಿಸಿಕೊಳ್ಳುತ್ತಿದ್ದಾರೆ. ತಮಿಳುನಾಡಿನಲ್ಲಿ ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರದರ್ಶಿಸುವ ಸಿನಿಮಾಗಳಿಗೂ ಗರಿಷ್ಠ ದರ ನಿಗದಿಪಡಿಸಲಾಗಿದೆ. ಆದರೆ ಕರ್ನಾಟಕದ ಮಟ್ಟಿಗೆ ಎಲ್ಲವೂ 'ಸ್ಪೆಶಲ್ ರೇಟ್'. ಇಲ್ಲಿ ಯಾವುದೇ ಸೇವೆಗೆ ಅನಿರ್ಬಂಧಿತ ದರ ವಿಧಿಸಲು ಸರಕಾರವೇ ಮುಕ್ತ ಸ್ವಾತಂತ್ರ್ಯ ನೀಡಿದೆ. ಬಡವರಿಗಾಗಿ ಗ್ಯಾರಂಟಿ ಯೋಜನೆಗಳನ್ನು ನೀಡಲಾಗಿದೆ. ಉಳಿದವರು ಎಷ್ಟೇ ಮೊತ್ತವಾದರೂ ಪಾವತಿಸಲು ಶಕ್ತರು ಎನ್ನುವುದು ಸರಕಾರದ ನಿಲುವು ಆಗಿರಬಹುದು.

ದಶಕಗಳ ಹಿಂದೆ ಬಡತನದ ಬೇಗೆಯ ಕಾರಣಕ್ಕೆ ರಾಜ್ಯದ ಕರಾವಳಿ ಬಿಟ್ಟು ಮುಂಬೈ, ಮದ್ರಾಸ್ ಸೇರಿದವರು ಇಂದು ಸಿರಿವಂತ ಉದ್ಯಮಿಗಳಾಗಿದ್ದಾರೆ. ಎಲ್ಲರನ್ನೂ ಸಲಹುವ ಮುಂಬಯಿ, ಚೆನ್ನೈ ನಗರಗಳು ಇವರಿಗೂ ಬದುಕು ಕಟ್ಟಿಕೊಟ್ಟಿವೆ. ಇದಕ್ಕೆ ಮುಖ್ಯ ಕಾರಣ ಈ ನಗರಗಳು ಎಂದೂ ಬಡವರನ್ನು ದೂರಕ್ಕೆ ತಳ್ಳಲಿಲ್ಲ. ಇಲ್ಲಿನ ಲೋಕಲ್ ಟ್ರೇನ್‌ಗಳಲ್ಲಿ ಇವರು ನಗರದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸಂಚರಿಸಲು ಸಾಧ್ಯವಿತ್ತು. ಕೇವಲ ಹತ್ತಿಪ್ಪತ್ತು ರು.ಗಳಿಗೆ ನವಿ ಮುಂಬಯಿನಿಂದ ಶಿವಾಜಿ ಟರ್ಮಿನಸ್ ತನಕವೂ ಮುಕ್ತವಾಗಿ ಸಂಚರಿಸಬಹುದಿತ್ತು.

ಈಗಲೂ ಅಷ್ಟೇ. ಮುಂಬಯಿಯ ಲೋಕಲ್ ಟ್ರೇನ್‌ಗಳಲ್ಲಿ 40–50 ಕಿ.ಮೀ ದೂರದ ಪ್ರಯಾಣದ ಮಾಸಿಕ ಪಾಸ್ ದರ 300 ರು. ದಾಟಿಲ್ಲ. ಕ್ಲಾಸ್ ಒನ್ ಬೋಗಿಗಳಲ್ಲಿ ಸಂಚರಿಸಿದರೂ ಮಾಸಿಕ ಪಾಸ್ ದರ ಸಾವಿರ ರು. ಒಳಗೆ ಇದೆ. ಲೋಕಲ್ ಟ್ರೇನ್ ಒಂದು ದಿನ ರದ್ದಾದರೂ ವಾಣಿಜ್ಯ ರಾಜಧಾನಿಯ ನೂರಾರು ಕಚೇರಿಗಳ ಕೆಲಸ ಅಸ್ತವ್ಯಸ್ತಗೊಳ್ಳುತ್ತವೆ. ಲೋಕಲ್ ಟ್ರೇನ್‌ಗಳೇ ಈ ನಗರದ ಜೀವನಾಡಿ.

ಅಗ್ಗದ ಸಾರ್ವಜನಿಕ ಸಾರಿಗೆಯ ಕಾರಣಕ್ಕಾಗಿಯೇ ಇಂದು ಮುಂಬೈ ಮತ್ತು ಚೆನ್ನೈ ಇಷ್ಟೊಂದು ವಿಸ್ತಾರವಾಗಿ ಬೆಳೆದಿದೆ.

ಇಲ್ಲಿ ಟ್ರೇನ್‌ಗಳಲ್ಲಿಯೇ ತಿಂಡಿ ಪೊಟ್ಟಣ ತೆಗೆದು ತಿನ್ನುವವರನ್ನು, ತಲೆ ಬಾಚಿಕೊಂಡು, ಲಿಪ್‌ಸ್ಟಿಕ್ ಬಳಿದುಕೊಳ್ಳುವವರನ್ನು ನೋಡಿ ಇತರ ಪ್ರಯಾಣಿಕರು ಅಚ್ಚರಿಯಿಂದ ಕಣ್ಣರಳಿಸುವುದಿಲ್ಲ. ಚಾಯ್‌ವಾಲಾಗಳು, ಸೊಪ್ಪು, ತರಕಾರಿ ಮಾರುವವರು ಬಂದಾಗ ಸಿಡುಕುವುದಿಲ್ಲ. ಏಕೆಂದರೆ ಮುಂಬಯಿ, ಚೆನ್ನೈ ಇಂದಿಗೂ ಎಲ್ಲರ ನಗರಿಯಾಗಿ ಉಳಿದಿವೆ.

ದುಬಾರಿ ಬೆಂಗಳೂರು

ಇದನ್ನೇ ಸದ್ಯದ ಬೆಂಗಳೂರಿಗೆ ಹೋಲಿಸಿ ನೋಡಿ. ಮುಂಬೈನ ತಿಂಗಳ ಮಾಸಿಕ ಪಾಸ್ ದರ ಇಲ್ಲಿ ಒಂದು ದಿನದ ಪ್ರಯಾಣದ ವೆಚ್ಚ. ಇಷ್ಟಾಗಿಯೂ ಬಸ್ಸಿನಲ್ಲಿ ಹೋದರೆ ಸರಿಯಾದ ಟೈಮಿಗೆ ತಲುಪುವುದು ಕಷ್ಟ. ಮೆಟ್ರೊ ಸ್ಟೇಶನ್ ಒಳಗೆ ನುಗ್ಗಿ ಟೋಕನ್ ಪಡೆದು, ಲಗೇಜ್ ಜೊತೆ ತಪಾಸಣೆಗೊಳಪಟ್ಟು, ಸ್ವೈಪ್ ಮಾಡಿ, ಟ್ರೇನ್ ಹಿಡಿದರೆ ಪ್ರಯಾಣವೇನೋ ಆರಾಮ ಎನಿಸುತ್ತದೆ. ಆದರೆ ಕೆಂಪೇಗೌಡರ ಊರಿನಲ್ಲಿ ಸ್ಥಳೀಯ 'ಕೆಂಪೇಗೌಡ'ರ ಧಿರಿಸಿನಲ್ಲಿ ಬಂದರೆ ತಾತ್ಸಾರ ಭಾವ. 25 ಕಿಲೋ ಒಳಗಿನ ಲಗೇಜು ಎಂದರೆ ಬ್ಯಾಗ್‌ಗಳಲ್ಲಿಯೇ ಇರಬೇಕು. ಗೋಣಿ ಚೀಲದಲ್ಲಿ ಕಟ್ಟಿ ತರುವಂತಿಲ್ಲ. ಮಾಸಿದ ಬಟ್ಟೆಯ ಹಿರಿ ಜೀವಗಳು ಮೆಟ್ರೊ ಹತ್ತಲು ಹಿಂದೆ ಮುಂದೆ ನೋಡಬೇಕು. ಹತ್ತುವ, ಇಳಿಯುವ ಧಾವಂತದಲ್ಲಿ ಇಲ್ಲಿ ಯಾವ ನಂಟಿಗೂ ಸ್ಥಾನವಿಲ್ಲ.

ನಿಜ. ಸಾವಿರಾರು ಕೋಟಿ ರು. ವೆಚ್ಚದಲ್ಲಿ ಅತ್ಯಾಧುನಿಕ ಯಂತ್ರಗಳನ್ನು ಬಳಸಿ ನಿರ್ಮಾಣಗೊಂಡ ಮೆಟ್ರೊ ರೈಲು ವ್ಯವಸ್ಥೆಯನ್ನು 60–70ರ ದಶಕದಲ್ಲಿಯೇ ನಿರ್ಮಾಣಗೊಂಡ ಮುಂಬಯಿ ಮತ್ತು ಚೆನ್ನೈನ ಲೋಕಲ್ ಟ್ರೇನ್ ಸಂಚಾರ ವ್ಯವಸ್ಥೆಗೆ ಹೋಲಿಸುವಂತಿಲ್ಲ. ಅಲ್ಲಿನ ಸಂಚಾರ ವ್ಯವಸ್ಥೆಗೆ ಸರಕಾರವೇ ಪೂರ್ತಿಯಾಗಿ ಬಂಡವಾಳ ತೊಡಗಿಸಿದೆ. ಮೆಟ್ರೊದಂತೆ ಖಾಸಗಿ ಬ್ಯಾಂಕ್‌ಗಳಿಂದ ಸಾಲ ಪಡೆದಿಲ್ಲ. ಹೆಸರಿಗೆ ಕೇಂದ್ರ ಮತ್ತು ರಾಜ್ಯ ಸರಕಾರದ ಪಾಲುದಾರಿಕೆಯಾದರೂ, ಸರಕಾರವೇ ಗ್ಯಾರಂಟಿ ನೀಡಿ ಬಾಹ್ಯ ಸಾಲದ ಮೂಲಕ ಮೆಟ್ರೊದಲ್ಲಿ ಹಣ ತೊಡಗಿಸಿದೆ. ಈ ಹಣವನ್ನು ತೀರಿಸಬೇಕಾದರೆ ಮೆಟ್ರೊ ಕಂಪನಿಗಳ ಮಾದರಿಯಲ್ಲಿಯೇ ನಡೆಯಬೇಕು. ಆದರೆ ಮೆಟ್ರೊಗಾಗಿ ಜಾಗ ಬಿಟ್ಟುಕೊಟ್ಟ, ಸೂರು, ಅಂಗಡಿ, ಮುಂಗಟ್ಟುಗಳನ್ನು ಕಳೆದುಕೊಂಡ ನೂರಾರು ಸಂತ್ರಸ್ತರಿಗೂ ಇದರ ಅನುಕೂಲ ಸಿಗಬೇಕಲ್ಲವೇ ?

ಮುಂಬಯಿ, ಚೆನ್ನೈ ಮಾದರಿಯಲ್ಲಿ 60–70ರ ದಶಕಗಳಲ್ಲಿಯೇ ಬೆಂಗಳೂರಿನ ಭವಿಷ್ಯದ ಸಾರಿಗೆ ವ್ಯವಸ್ಥೆಯನ್ನು ರೂಪಿಸುವ ಅವಕಾಶ ಕನ್ನಡಿಗರಿಗೂ ಇತ್ತು. ಸಿಎಂ ಪೂಣಚ್ಚ ಅವರಿಂದ ಹಿಡಿದು ಡಿ.ವಿ. ಸದಾನಂದ ಗೌಡರ ತನಕ ಕರ್ನಾಟಕದ ಆರೇಳು ಮಂದಿ ನಾಯಕರು ರೈಲ್ವೆ ಸಚಿವರಾಗಿದ್ದರು. ಆದರೆ ಈಗ ನಮ್ಮ ನಾಯಕರೂ ಕಚ್ಚಾಡುವಂತೆ ಆಗಿನ ನಮ್ಮ ನಾಯಕರೂ ಪರಸ್ಪರ ಕಚ್ಚಾಡಿದ್ದೇ ಹೆಚ್ಚು. ಪಕ್ಷ ಭೇದವಿಲ್ಲದೆ ಕೇಂದ್ರದ ಮುಂದೆ ಒಗ್ಗಟ್ಟಿನಿಂದ ರಾಜ್ಯದ ಬೇಡಿಕೆಗಳನ್ನು ಎಂದೂ ಮುಂದಿಟ್ಟರಲಿಲ್ಲ.

ಒಂದು ವೇಳೆ ಇದು ಸಾಧ್ಯವಾಗಿದ್ದರೆ 70ರ ದಶಕದಲ್ಲಿಯೇ ಬೆಂಗಳೂರಿನಲ್ಲಿ ವರ್ತುಲ ರೈಲು ಮಾರ್ಗ ನಿರ್ಮಾಣವಾಗುತ್ತಿತ್ತು. 60ರ ದಶಕದಲ್ಲಿಯೇ ನಗರದಲ್ಲಿ ವರ್ತುಲ ರೈಲು ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. ಬೆಂಗಳೂರು ನಗರ ನಿಲ್ದಾಣ–ಬೆಂಗಳೂರು ಕಂಟೋನ್ಮೆಂಟ್–ಬೆಂಗಳೂರು ಪೂರ್ವ–ಜೀವನಹಳ್ಳಿ–ಹಳೆ ಮದ್ರಾಸ್ ರಸ್ತೆ ದಾಟಿ ಬಿನ್ನಮಂಗಲ, ದೊಮ್ಮಲೂರು–ಕೋರಮಂಗಲ, ಸೆಂಟ್ರಲ್ ಜಂಕ್ಷನ್, ಜಯನಗರ, ಬನಶಂಕರಿ, ಆವಲಹಳ್ಳಿ, ಮೈಸೂರು ರಸ್ತೆ ಮೂಲಕ ಮತ್ತೆ ಸಿಟಿ ರೈಲು ನಿಲ್ದಾಣದಲ್ಲಿ ಕೊನೆಗೊಳ್ಳುವ ಮಾರ್ಗಕ್ಕೆ ಆರೂವರೆ ದಶಕಗಳ ಹಿಂದೆಯೇ ಯೋಜನೆ ರೂಪಿಸಲಾಗಿತ್ತು. ಇದು ಜಾರಿಯಾಗಿದ್ದರೆ ಕೆಂಪೇಗೌಡರು ಕಟ್ಟಿದ ನಗರಕ್ಕೆ ವಿಶ್ವದ ಮೂರನೇ ಅತಿ ಹೆಚ್ಚು ವಾಹನ ನಿಬಿಡ ನಗರ ಎಂಬ ಕಳಂಕ ಬರುತ್ತಿರಲಿಲ್ಲ.

ಯೋಜನೆ ವಿಳಂಬದಿಂದ ವೆಚ್ಚ ಹೆಚ್ಚಳ

ನಮ್ಮ ನಿಧಾನಗತಿ ಈಗಲೂ ಬದಲಾಗಿಲ್ಲ. ಹಾಲಿ ಬೆಂಗಳೂರು ಮೆಟ್ರೊ ಕಾರ್ಯಸಾಧ್ಯತೆ ವರದಿ ಸಲ್ಲಿಕೆಯಾಗಿದ್ದು 2003ರಲ್ಲಿ. ದಿಲ್ಲಿಯಲ್ಲಿ 1984ರಷ್ಟು ಹಿಂದೆಯೇ ಮೆಟ್ರೊ ಯೋಜನೆ ಶುರುವಾಗಿತ್ತು. ಅಂದರೆ ನಾವು ಈ ಬಗ್ಗೆ ಯೋಚಿಸಿದ್ದು 19 ವರ್ಷಗಳ ನಂತರ. ಮೆಟ್ರೊ ಕೆಲಸ ಆರಂಭವಾಗಿದ್ದು 2006ರಲ್ಲಿ. ಆರು ಕಿ.ಮೀ. ದೂರದ ಮೊದಲ ಮೆಟ್ರೊ ಸಂಚಾರಕ್ಕೆ ಚಾಲನೆ ಸಿಕ್ಕಿದ್ದು 2011ರಲ್ಲಿ. 9 ವರ್ಷಗಳ ಅವಧಿಯಲ್ಲಿ ಮೆಟ್ರೊ ನಿರ್ಮಾಣ ವೆಚ್ಚ ನಾಲ್ಕು ಪಟ್ಟು ಏರಿಕೆಯಾಗಿತ್ತು. ಈಗ ಹಳದಿ ಮಾರ್ಗ, ನೇರಳೆ ಮಾರ್ಗದ ಕಾಮಗಾರಿಗಳೂ ಸಾಕಷ್ಟು ತಡವಾಗಿ ಆರಂಭವಾಗಿವೆ. ಒಂದೊಂದು ತಿಂಗಳು ತಡವಾದರೂ ಯೋಜನಾ ವೆಚ್ಚ ಏರುತ್ತಲೇ ಸಾಗುತ್ತದೆ. ಇದೆಲ್ಲವನ್ನೂ ಭವಿಷ್ಯದ ಮೆಟ್ರೊ ಪ್ರಯಾಣಿಕರು ಭರಿಸಬೇಕಾಗಿದೆ.

ಇದೇನೇ ಇರಲಿ, ಸಾರ್ವಜನಿಕ ಸಾರಿಗೆಯ ಮುಖ್ಯ ಉದ್ದೇಶ ಸೇವೆ. ಇಲ್ಲಿ ಹೂಡಿಕೆಯಾಗಿರುವ ಬಂಡವಾಳಕ್ಕಿಂತ ಜನರಿಗೆ ಅಗ್ಗ ದರದಲ್ಲಿ ಸುಗಮ ಸಂಚಾರ ಕಲ್ಪಿಸುವುದು ಸರಕಾರದ ಕರ್ತವ್ಯ. ಮಿತ ದರದಲ್ಲಿ ಸಾರ್ವಜನಿಕ ಸಾರಿಗೆ ಲಭ್ಯವಾದರೆ ಜನರು ಖಾಸಗಿ ವಾಹನಗಳನ್ನು ಆಶ್ರಯಿಸುವುದು ತಪ್ಪುತ್ತದೆ. ಸದ್ಯ ಆರೂವರೆ ಕೋಟಿ ಜನಸಂಖ್ಯೆ ರಾಜ್ಯದಲ್ಲಿ ಎರಡು ಕೋಟಿಗಿಂತ ಹೆಚ್ಚು ವಾಹನಗಳಿವೆ. ಈ ಪೈಕಿ ಸುಮಾರು 95 ಲಕ್ಷ ವಾಹನಗಳು ಬೆಂಗಳೂರಿನಲ್ಲಿಯೇ ಇವೆ. ಅಂದರೆ ಬೆಂಗಳೂರು ಜನತೆ ಖಾಸಗಿ ವಾಹನಗಳನ್ನು ಎಷ್ಟರ ಮಟ್ಟಿಗೆ ಆಶ್ರಯಿಸಿದ್ದಾರೆ ಎನ್ನಲು ಈ ಅಂಕಿ ಅಂಶಗಳು ಸಾಕ್ಷಿ.

ಖಾಸಗಿ ಹೂಡಿಕೆಯನ್ನು ಉತ್ತೇಜಿಸುವ ಐರೋಪ್ಯ ರಾಷ್ಟ್ರಗಳು ಕೂಡ ಅಗ್ಗ ದರದ ನಗರ ಸಾರಿಗೆಗೆ ಉತ್ತೇಜನ ನೀಡಿವೆ. ಐದು ವರ್ಷಗಳ ಹಿಂದೆ ಮಾಲಿನ್ಯ ತಡೆಗಟ್ಟುವ ಉದ್ದೇಶದಿಂದ ಲಕ್ಸೆಂಬರ್ಗ್ ನಗರದಲ್ಲಿ ಉಚಿತ ನಗರ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ರಷ್ಯಾ–ಉಕ್ರೇನ್ ಯುದ್ಧದ ಕಾರಣ ಇಂಧನ ದುಬಾರಿಯಾದ ಕಾರಣ ಜರ್ಮನಿಯಲ್ಲೂ ಸಾರ್ವಜನಿಕ ಸಾರಿಗೆಯಲ್ಲಿ ಅಗ್ಗ ದರದ ಮಾಸಿಕ ಪಾಸ್ ವ್ಯವಸ್ಥೆ ಜಾರಿಗೊಳಿಸಲಾಗಿದೆ.

ಕೇಂದ್ರ ಮತ್ತು ರಾಜ್ಯದ ನಮ್ಮ ನಾಯಕರು ಮೆಟ್ರೊ ವಿಚಾರದಲ್ಲಿ ಕೋಳಿ ಜಗಳ ಬಿಟ್ಟು ಜನಪರವಾಗಿ ಯೋಚಿಸಬೇಕು. ಬೆಂಗಳೂರು ಮಾತ್ರವಲ್ಲ ದೇಶದ ಯಾವುದೇ ಭಾಗದಲ್ಲಿ ಸಾರ್ವಜನಿಕ ಸಾರಿಗೆ ಸೇವೆಯಾಗಿಯೇ ಉಳಿಯಬೇಕು. ಇದು ಲಾಭ ಗಳಿಸುವ ದಂಧೆಯಾಗಬಾರದು.

ನಾರದ ಸಂಚಾರ



ಕಲಹಪ್ರಿಯ
naadigru@gmail.com

ಹುಲಿ ಬಂತು ಹುಲಿ!

ರಾಜ್ಯ ಬಿಜೆಪಿಯ ಪರಿಸ್ಥಿತಿ ಯಾವಾಗ ಸರಿಯಾಗುವುದೋ ಆ ದೇವರೇ ಬಲ್ಲ. ಅದಕ್ಕೆ ತಕ್ಕಂತೆ ಹಬ್ಬುತ್ತಿರುವ ಗಾಳಿ ಸುದ್ದಿಗಳಿಗೇನೂ ಕಮ್ಮಿಯಿಲ್ಲ. ''ದೆಹಲಿಯಲ್ಲಿರುವ ಬಿಜೆಪಿ ವರಿಷ್ಠರು ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರರನ್ನು ಕೆಳಗಿಳಿಸಿ, ಬಸನಗೌಡ ಪಾಟೀಲ್ ಯತ್ನಾಳ್ ಬಣದ ನಾಯಕರೊಬ್ಬರಿಗೆ ಈ ಪಟ್ಟವನ್ನು ಕಟ್ಟಲಿದ್ದಾರೆ'' ಎಂಬ ಸುದ್ದಿ ಕೆಲ ದಿನಗಳವರೆಗೆ ಗಿರಕಿ ಹೊಡೆಯುತ್ತದೆ. ಅದನ್ನು ಜೀರ್ಣಿಸಿಕೊಳ್ಳುವಷ್ಟರಲ್ಲಿ, ದೋಸೆಯನ್ನು ಮಗುಚಿ ಹಾಕಿದ ರೀತಿಯಲ್ಲಿ ಮರುವಾರವೇ, ''ಬಸನಗೌಡ ಪಾಟೀಲ್ ಯತ್ನಾಳ್ ಬಣಕ್ಕೆ ಭೇಟಿಗೆ ಅವಕಾಶವನ್ನೇ ಕೊಡದ ಬಿಜೆಪಿ ವರಿಷ್ಠರು'' ಎಂಬ ಮತ್ತೊಂದು ಸುದ್ದಿ ರಾಜಕೀಯ ಪಡಸಾಲೆಗಳಲ್ಲಿ ಸುತ್ತಾಡಲು ಆರಂಭಿಸುತ್ತದೆ. ಈ ಬಣ ರಾಜಕೀಯದಲ್ಲಿ ಗೆಲ್ಲುವುದು ವಿಜಯೇಂದ್ರರೋ ಅಥವಾ ಯತ್ನಾಳರೋ ಎಂಬುದು ಒತ್ತಟ್ಟಿಗಿರಲಿ, ಈ ಹಗ್ಗಜಗ್ಗಾಟದಲ್ಲಿ

ಅಪ್ಪಟ 'ಮಂಗ್ಯಾ'ಗಳಾಗುತ್ತಿರುವುದು ಅಮಾಯಕ ಕಾರ್ಯಕರ್ತರು ಮತ್ತು ಒಂದಿಷ್ಟು ಜನಸಾಮಾನ್ಯರು ಎಂಬುದಂತೂ ನಿಜ ಕಣ್ರೀ!

ಹಾಗೆ ನೋಡಿದರೆ, 'ಒಂದು ಕಡೆಯಿಂದ ಮಗುವಿನ ಬುಡ ವನ್ನು ಚಿವುಟುವ, ಮತ್ತೊಂದು ಕಡೆಯಿಂದ ತೊಟ್ಟಿಲನ್ನೂ ತೂಗುವ' ಪ್ರವೃತ್ತಿ ಒಂದೇ ರಾಜಕೀಯ ಪಕ್ಷಕ್ಕೆ ಸೀಮಿತವೇನೂ ಅಲ್ಲ; ಇದು ಬಹುತೇಕ ಪಕ್ಷಗಳ ಕೇಂದ್ರ ಮತ್ತು ರಾಜ್ಯ ಮಟ್ಟದ ನಾಯಕರು ಪರಿಪಾಲಿಸಿಕೊಂಡು ಬಂದಿರುವ 'ಹಾವೂ ಸಾಯ ಬಾರದು, ಕೋಲೂ ಮುರಿಯಬಾರದು' ಟೈಪ್‌ನ ಅಲಿಖಿತ ನಿಯಮ. ಕಾರಣ, ಇಂದು 'ಮರಿನಾಯಕ'ನ ರೂಪದಲ್ಲಿ ಕಾಣಿಸಿ ಕೊಂಡ ಪುಢಾರಿಯೊಬ್ಬ, ಮುಂದೊಂದು ಕಾಲಕ್ಕೆ 'ಮಹಾನಾಯಕ'ನಾಗಿ ಬೆಳೆದುಬಿಡುವುದು ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಕಾಣಬರುವ ಪವಾಡವೂ ಹೌದು, ದುರಂತವೂ ಹೌದು. ಹೀಗಾಗಿ ಯಾರನ್ನೂ ಎದುರುಹಾಕಿಕೊಳ್ಳುವಂತಿರುವುದಿಲ್ಲ! ಆದ್ದರಿಂದ, 'ಮನೆಯೊಂದು ಮೂರು ಬಾಗಿಲು' ಎಂಬಂತಾಗಿರುವ ಬಿಜೆಪಿ ರಾಜ್ಯ ಘಟಕದ ಭವಿಷ್ಯದ ವಿಷಯದಲ್ಲಿ ಶ್ರೀಸಾಮಾನ್ಯರು ಜಾಸ್ತಿ ತಲೆ ಕೆಡಿಸಿಕೊಳ್ಳದೆ, ತಂತಮ್ಮ ಮನೆ–ಮಡದಿ–ಮಕ್ಕಳ ವಿಷಯದಲ್ಲಿ ಗಮನ ಹರಿಸಲಿ ಎಂಬುದು ತ್ರಿಲೋಕ ಸಂಚಾರಿ ನಾರದರ ಪ್ರಾಮಾಣಿಕ ಸಲಹೆ!

ಏರಿಕೆಯ ಪಟ್ಟಿಗೆ ಮತ್ತೊಂದು!

ಹಾಲಿನ ದರ, ವಿದ್ಯುತ್ ದರ, ಮೆಟ್ರೋ ಮತ್ತು ಬಸ್ ಪ್ರಯಾಣದರ, ಹಣ್ಣು–ತರಕಾರಿಗಳ ಬೆಲೆ, ದವಸ–ಧಾನ್ಯಗಳ ಬೆಲೆ ಹೀಗೆ ಒಂದೊಂದು ಬಾಬತ್ತಿನಲ್ಲಿ ಏರಿಕೆಯಾದಾಗಲೂ ವಿಷಾದದ ನಗೆಬೀರಿ ನಿಟ್ಟುಸಿರು ಬಿಡುವುದು ಬೆಂಗಳೂರಿಗ

ರಿಗೆ ಅಭ್ಯಾಸವಾಗಿಬಿಟ್ಟಿದೆ. ಇದು ಸಾಲದೆಂಬಂತೆ, ಮಹಾನಗರಿಯಲ್ಲಿ ಬಿಸಿಲಿನ ಪ್ರಮಾಣದಲ್ಲಿ ಏಕಾಏಕಿ ಭಾರಿ ಏರಿಕೆಯಾಗಿರುವ ಮಾಹಿತಿ ಲಭಿಸಿದೆ. ಇದನ್ನೆಲ್ಲಾ ನೋಡಿದ ಹಳಬರೊಬ್ಬರು, ''ನಾವು ಪ್ರಾಥಮಿಕ ಶಾಲೆಯಲ್ಲಿದ್ದಾಗ 'ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ...' ಎಂಬ ಪದ್ಯವಿತ್ತು. ಬೆಂಗಳೂರಿಗರು ಅದನ್ನೇ ಕೊಂಚ ಬದಲಿಸಿಕೊಂಡು, 'ಏರುತಿಹುದು, ಏದುಸಿರು ಬಿಡಿಸುತಿಹುದು ಬೆಲೆಯೇರಿಕೆಯ ಬಾವುಟ' ಎಂದು ಹಾಡಿಕೊಳ್ಳಬೇಕಾಗಿದೆಯಲ್ಲಪ್ಪಾ...' ಎಂದು ತೋಡಿರಾಗದಲ್ಲಿ ನೋವನ್ನು ತೋಡಿಕೊಂಡರಂತೆ!

ಪಂಚ ಗ್ಯಾರಂಟಿಗಳು ಮತ್ತು ಕರ್ನಾಟಕ ಸರಕಾರದ ಆರ್ಥಿಕತೆ

ವಿಚಾರ ವೇದಿಕೆ
ಬಿ.ಎಸ್.ಶಿವಣ್ಣ
vveditoped@gmail.com

ಬಸವಣ್ಣನವರು 12ನೇ ಶತಮಾನದಲ್ಲಿ ಜಗತ್ತಿಗೆ ಸಮಾಜವಾದವನ್ನು ಬೋಧಿಸಿದ ಮಹಾನ್ ಮಾನವತಾವಾದಿ. ಅದೇ ಮಾದರಿಯನ್ನು ಭಾರತದ ಸಂವಿಧಾನದ ವಿಧಿ 38 ಮತ್ತು 39ರಲ್ಲಿ 'ಸಮಾಜವಾದ' ಎಂಬ ಸಿದ್ಧಾಂತದ ಅಡಿ ಯಲ್ಲಿ ಸೇರಿಸಲಾಗಿದೆ. ಸಂಪತ್ತನ್ನು ಕ್ರೋಡೀಕರಿಸುವುದು 'ಬಂಡವಾಳಶಾಹಿ ವಾದ' ಎನಿಸಿಕೊಂಡರೆ, ಸಮಾಜದ ಸಂಪತ್ತನ್ನು ಬಡವರು, ನಿರ್ಗತಿಕರು, ವಿಧವೆಯರು, ವಿದ್ಯಾರ್ಥಿಗಳು, ಅಂಗವಿಲರಿಗೆ ಹಂಚುವುದೇ 'ಸಮಾಜವಾದ' ಎನಿಸಿಕೊಳ್ಳುತ್ತದೆ. ಬಸವಣ್ಣನವರು ಹೇಳಿದ್ದು ಅದನ್ನೇ. ಇಂದಿನ ಹಂಚಿ–ತಿನ್ನುವ ಈ ಕಾರ್ಯವೇ ಉಚಿತ ಕೊಡುಗೆಗಳು/ಗ್ಯಾರಂಟಿಗಳು. ಅಂದು ಬಸವಣ್ಣ ಮಾಡಿದ್ದು ಸರಿಯಿದ್ದರೆ, ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡುತ್ತಿರುವುದೂ ಸರಿಯೇ.

2023ರ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಜನರಿಗಾಗಿ ಪಂಚ ಗ್ಯಾರಂಟಿಗಳನ್ನು ಘೋಷಿಸಿತು ಮತ್ತು ಅವನ್ನು ತನ್ನ ಪ್ರಣಾಳಿಕೆಯಲ್ಲಿ ಅಡಕಗೊಳಿಸಿತು. ಈಗ ಫಲಾನುಭವಿಗಳು ಅದರ ಸದುಪಯೋಗವನ್ನು ಪಡೆಯಲಾರಂಭಿಸಿದ್ದಾರೆ. ಆದರೆ ಸಾಮಾಜಿಕ ಮಾಧ್ಯಮಗಳಲ್ಲಿ ಹಲವರು, 'ಸರಕಾರದ ಈ ಪಂಚಗ್ಯಾರಂಟಿಗಳಿಂದ ರಾಜ್ಯದ ಸರ್ವನಾಶವಾಗುತ್ತಿದೆ' ಎಂದು ಬೊಬ್ಬಿರಿಯುತ್ತಿರುವುದನ್ನು ನೋಡಿದ್ದೇವೆ. ಹೀಗಾಗಿ ಆ ಯೋಜನೆಗಳ ಕಡೆಗೊಂದು ಇಣುಕುನೋಟ ಬೀರೋಣ.

ಗೃಹಜ್ಯೋತಿ ಯೋಜನೆ

2023ರ ಜುಲೈ 1ರಿಂದ, ಪ್ರತಿ ಮನೆಗೆ 200 ಯುನಿಟ್‌ನಷ್ಟು ಉಚಿತ ವಿದ್ಯುತ್ ನೀಡಲಾಗುತ್ತಿದೆ. ಹಿಂದಿನ ವಿದ್ಯುತ್ ಬಿಲ್ ಪಾವತಿಸಿದವರು ಈ ಯೋಜನೆಗೆ ಅರ್ಹರು. ಇದು ಬಡವರ ಮನೆಯ ಅಂಧಕಾರವನ್ನು ದೂರಮಾಡುವ ಯೋಜನೆ. ಸೀಮೆಎಣ್ಣೆ ದೀಪದ ಬೆಳಕಲ್ಲಿ ಓದಿ ಮನಮೋಹನ್ ಸಿಂಗ್ ಈ ದೇಶದ ಪ್ರಧಾನಮಂತ್ರಿಯಾದರು, ಬೀದಿ ದೀಪದ ಬೆಳಕಲ್ಲಿ ಓದಿ ಸರ್ ಎಂ.ವಿಶ್ವೇಶ್ವರಯ್ಯ ದಿವಾನರಾದರು. ಇಂದಿನ ಈ ಗೃಹಜ್ಯೋತಿ ಯೋಜನೆಯ ಬೆಳಕಿನಲ್ಲಿ ಓದಿದ ಬಾಲಕರು ಮುಂದೆ ಇಂಥ ಸಾಧಕರೇ ಆದರೆ ಅಚ್ಚರಿಯಿಲ್ಲ.

ಈ ಯೋಜನೆಯನ್ನು ವಿರೋಧಿಸುವವರ ಮಾತು ಹೇಗಿದೆಯೆಂದರೆ, ''ವಿಶ್ವೇಶ್ವರಯ್ಯನವರು ರಾತ್ರಿಯಲ್ಲಿ ಬೀದಿದೀಪದಡಿ ಓದುತ್ತಿದ್ದುದೇಕೆ, ಅವರು ಹಗಲಿನಲ್ಲಿ ಏನು ಮಾಡುತ್ತಿದ್ದರು?'' ಎಂದು ಅಣಕಿಸುವಂತಿದೆ. ಈ ಹಿಂದಿದ್ದ ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ಅಮೃತಜ್ಯೋತಿ ಯೋಜನೆಗಳನ್ನು ವಿರೋಧಿಸದವರು ಭಾಗ್ಯಜ್ಯೋತಿಗೆ ಅಪಸ್ವರ ಹಾಡುತ್ತಿರುವುದೇಕೆ? ಬಡವರ ಮಕ್ಕಳು ಬೆಳೆಯಬಾರದೇ?

ಗೃಹಲಕ್ಷ್ಮಿ ಯೋಜನೆ

2023ರ ಜೂನ್ 6ರಂದು ಕರ್ನಾಟಕ ಸರಕಾರವು ಆದೇಶವನ್ನು ಹೊರಡಿಸಿ, ಮನೆಯ ಯಜಮಾನಿಯಾಗಿರುವ ಮಹಿಳೆಗೆ ಆಗಸ್ಟ್ 5ರಿಂದ ಪ್ರತಿ ತಿಂಗಳು 2,000 ರುಪಾಯಿ ನೀಡುವುದಾಗಿಯೂ, ಈ ಯೋಜನೆಯ ಫಲಾನುಭವಿಗಳು ಬಡತನ ರೇಖೆಗಿಂತ ಕೆಳಗಿದ್ದು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದವರಾಗಿರಬೇಕೆಂದೂ ತಿಳಿಸಿತು. 'ಹೆಣ್ಣು ಜಗದ ಕಣ್ಣು' ಅಂತ ಹಾಡಿ ಹೊಗಳಿದರೆ ಸಾಲದು, ಅವಳ ಕೈಯನ್ನು ಬಲಪಡಿಸಬೇಕಾದ್ದೂ ಅತ್ಯಗತ್ಯ. ಕಾರಣ, ಹೆಣ್ಣಿನ ಕೈಗೆ ನೀಡಿದ ಹಣವು ಭೂಮಿಗೆ ಹಾಕಿದ ಬೀಜಗಳಿದ್ದಂತೆ, ಅವು ಇಂದಲ್ಲಾ ನಾಳೆ ಫಲವನ್ನು ಕೊಟ್ಟೇ ಕೊಡುತ್ತವೆ.

ಶತಶತಮಾನಗಳಿಂದ ಗಂಡಿನಿಂದ ತುಳಿತಕ್ಕೊಳಗಾಗುತ್ತಲೇ ಬಂದಿದೆ ಸ್ತ್ರೀಸಂಕುಲ. ಮಹಾಭಾರತದಲ್ಲಿ ಅಂಬೆ, ಅಂಬಿಕೆ, ಅಂಬಾಲಿಕೆ, ದ್ರೌಪದಿ, ಕುಂತಿ, ಗಾಂಧಾರಿ ಇವರ ಜೀವನಚರಿತ್ರೆಯನ್ನು ಅವಲೋಕಿಸಿದರೆ ಇದು ಅರಿವಾಗುತ್ತದೆ. ರಜಪೂತರ ಜೋಹರ್ ಪದ್ಧತಿ, ಸತಿಪದ್ಧತಿ ಮಾತ್ರವಲ್ಲದೆ ಬಹಳಷ್ಟು ಕಡೆ ಕಾಣಬರುವ ವರದಕ್ಷಿಣೆ ಪಿಡುಗು, ದೇವದಾಸಿ ಪದ್ಧತಿ ಇಂಥವನ್ನೆಲ್ಲ ನೋಡಿದ ಕವಯಿತ್ರಿಯೊಬ್ಬರು, 'ಹೆಣ್ಣಾಗಿ ಹುಟ್ಟೋದಕ್ಕಿಂತ ಮಣ್ಣಾಗಿ ಹುಟ್ಟಿದ್ದರೆ, ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದ್ದರೆ, ಪುಣ್ಯವಂತರಿಗೆ ನೆರಳಾಗುತ್ತಿದ್ದೆ' ಎಂದು ಬರೆದಿದ್ದಾರೆ.

ಪ್ರಸ್ತುತ, ಕರ್ನಾಟಕ ಸರಕಾರದ ಗೃಹಲಕ್ಷ್ಮಿ ಯೋಜನೆಯು, ಕನ್ನಡದ ಎಷ್ಟೊಂದು ಮಾತೆಯರು ತಲೆಯೆತ್ತಿ ಬದುಕುವಂತೆ ಮಾಡಿದೆ. ''ವಿಷ ಕುಡಿದು ಸಾಯೋಕೂ ನನ್ನ ಕಡೆ ಹತ್ತು ಪೈಸೆ ಇಲ್ಲ'' ಅಂತ ಹಳ್ಳಿಯ ಹೆಂಗಸರು ಬೇಸರವಾದಾಗ ಹೇಳುವುದನ್ನ ಕೇಳಿರುವೆ. ಆದರಿಂದು, ಹೆಣ್ಣಿನ ಖಾತೆಗೆ ಪ್ರತಿ ತಿಂಗಳೂ 2,000 ರು. ಜಮೆಯಾಗುತ್ತಿರುವುದರಿಂದ ಆಕೆ ಗೌರವಯುತವಾಗಿ ಬದುಕುವಂತಾಗಿದೆ. ಈ ಯೋಜನೆಗೆ ಸರಕಾರವು ಎಷ್ಟು ಖರ್ಚು ಮಾಡುತ್ತದೆ ಎಂಬುದಕ್ಕಿಂತ, ಅದರಿಂದ ಎಷ್ಟು ಬಡ ಮಹಿಳೆಯರ ಕಣ್ಣೀರನ್ನು ಒರೆಸುತ್ತದೆ ಎಂಬುದನ್ನು ಪರಿಗಣಿಸಬೇಕಾದ್ದು ಮುಖ್ಯ.

ಯುವನಿಧಿ ಯೋಜನೆ

ಯುವಜನರು ಈ ದೇಶದ ಆಶಾಕಿರಣ. ಕರ್ನಾಟಕದ ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 3,000 ರು., ಡಿಪ್ಲೊಮಾ ಮಾಡಿದವರಿಗೆ 1,500 ರು. ಸಿಗುತ್ತದೆ. ಫಲಾನುಭವಿಗಳು 2 ವರ್ಷದಲ್ಲಿ ಉದ್ಯೋಗ ಪಡೆಯಬೇಕು, ಇಲ್ಲದಿದ್ದರೆ ಈ ಯೋಜನೆಯಿಂದ ಅವರಿಗೆ ಹಣವು ಜಮೆಯಾಗುವುದನ್ನು ನಿಲ್ಲಿಸಲಾಗುತ್ತದೆ. ಇಲ್ಲಿಯವರೆಗೆ ಶಿಷ್ಯವೇತನ, ಉಚಿತ ಹಾಸ್ಟೆಲ್, ಬೈಸಿಕಲ್, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಮುಂತಾದ ಯೋಜನೆಗಳನ್ನು ಸರಕಾರಗಳು ನೀಡುತ್ತಾ ಬಂದಿದ್ದುಂಟು; ಅವಕ್ಕೆ ಇರದಿದ್ದ ವಿರೋಧ ಇಂದಿನ ಈ ಯೋಜನೆಗೆ ಹೊಮ್ಮಿರುವುದೇಕೆ? ಇಂದಿನ ಯುವಕನೇ ನಾಳಿನ ನಾಯಕ. ಇಂದು ಶಿಷ್ಯವೇತನ ಪಡೆದಾತನೇ ಮುಂದೆ ಅಧಿಕಾರಿ, ನ್ಯಾಯಾಧೀಶ, ರಾಜಕಾರಣಿ, ವಿಜ್ಞಾನಿ, ತಂತ್ರಜ್ಞಾನಿ ಆಗಬಹುದು, ಆಗ ಆತ ಈ ಸಮಾಜದ ಋಣವನ್ನು ತೀರಿಸಬಹುದಲ್ಲವೇ?

ಅನ್ನಭಾಗ್ಯ ಯೋಜನೆ

'ಅನ್ನ ದೇವರ ಮುಂದೆ ಇನ್ನು ದೇವರುಂಟೆ, ಜಗದೊಳು ಅನ್ನವೇ ದೈವ' ಎಂದಿದ್ದಾನೆ ಸರ್ವಜ್ಞ. ದೇವರನ್ನು ಹುಡುಕಿಕೊಂಡು ಹೋಗುವ ಅಗತ್ಯವಿಲ್ಲ, ಹಸಿದವರಿಗೆ ಅನ್ನ ಹಾಕಿದರೆ ದೇವರೇ ನಮ್ಮನ್ನು ಹುಡುಕಿಕೊಂಡು ಬರುತ್ತಾನೆ. ಕರ್ನಾಟಕ ಸರಕಾರವು 2023ರ ಜುಲೈ 1ರಿಂದ, ಬಿಪಿಎಲ್ ಕುಟುಂಬಗಳಿಗೆ 10 ಕೆ.ಜಿ. ಅಕ್ಕಿಯು ಉಚಿತವಾಗಿ ದೊರಕುವಂತೆ ಮಾಡಿದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯು ಸಾಕಷ್ಟು ವರ್ಷಗಳ ಹಿಂದಿನಿಂದಲೇ ಜಾರಿಯಲ್ಲಿದೆ. ಬಡವನ ಹೊಟ್ಟೆ ತುಂಬಿಸಬೇಕಾದ್ದು ಎಲ್ಲಾ ಸರಕಾರಗಳ ಆದ್ಯ ಕರ್ತವ್ಯ. ಆಹಾರ ಭದ್ರತಾ ಕಾಯ್ದೆಯೂ ಜಾರಿಗೆ ಬಂದಿದೆ. ಆದರೆ ಅಂದು ಹೊಮ್ಮದಿದ್ದ ವಿರೋಧ ಇಂದೇಕೆ? ಜನಸಂಖ್ಯೆಯ ಆಧಿಕ್ಯ ಮತ್ತು ವೈವಿಧ್ಯವಿರುವ ದೇಶಗಳಿಗೆ ಇಂಥ ಯೋಜನೆಗಳು ಅತ್ಯಗತ್ಯ. ದೇಶದ ಯಾವುದೇ ಪ್ರಜೆಯು ಹಸಿದು ಮಲಗಬಾರದು ಎಂಬುದೇ ಸಮಾಜವಾದದ ಪರಿಕಲ್ಪನೆಯ ಮೂಲಸೆಲೆ. ತಿನ್ನಲು ಅನ್ನ, ಕುಡಿಯಲು ನೀರು, ಮಾನ ಮುಚ್ಚಲು ಬಟ್ಟೆ ಹಾಗೂ ಇತರ ಅಗತ್ಯ ಸೌಕರ್ಯಗಳನ್ನು ಕೊಡಲಾಗದಿದ್ದ ಮೇಲೆ ಪ್ರಜಾಪ್ರಭುತ್ವಕ್ಕೆ ಬೆಲೆಯೆಲ್ಲಿದೆ?

ಶಕ್ತಿ ಯೋಜನೆ

2023ರ ಜೂನ್ 11ರಿಂದ, ಕರ್ನಾಟಕದ ಮಹಿಳೆಯರು ರಾಜ್ಯದ ಯಾವುದೇ ಭಾಗಕ್ಕಾದರೂ ಸರಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿದೆ. 'ಅರಿವನ್ನು ದಕ್ಕಿಸಿಕೊಳ್ಳಲು ಒಂದೋ ದೇಶವನ್ನು ಸುತ್ತಬೇಕು, ಇಲ್ಲವೇ ಕೋಶವನ್ನು ಓದಬೇಕು' ಎಂದಿದ್ದಾರೆ ಬಲ್ಲವರು. ಹೆಣ್ಣು ಎಂಬ ಒಂದೇ ಕಾರಣಕ್ಕೆ ಆಕೆಯ ವಿದ್ಯಾಭ್ಯಾಸ, ಬಟ್ಟೆ–ಬರೆ, ಊಟೋಪಚಾರದಲ್ಲಿ ತಾರತಮ್ಯ ಮಾಡುತ್ತಲೇ ಬಂದಿದ್ದಾರೆ ನಮ್ಮ ಸಮಾಜದ ಕೆಲವರು. ಹೆಣ್ಣಿನ ಸ್ವಾತಂತ್ರ್ಯದ ಮೊದಲ ಹೆಜ್ಜೆಯೇ ಚಲನಶೀಲತೆ. ಯಾವಾಗ ಹೆಣ್ಣು ಮನೆಯ ನಾಲ್ಕು ಗೋಡೆಯಿಂದ ಹೊರಬಂದು ಚಲಿಸಲು ಪ್ರಾರಂಭಿಸುವಳೋ, ಆಗ ಅವಳು ಸ್ವತಂತ್ರಳು. ಆಕೆ ದೇವಸ್ಥಾನಕ್ಕೆ, ತವರಿಗೆ, ಮಗಳ ಮನೆಗೆ, ಶಾಲೆಗೆ, ನೌಕರಿಗೆ ಹೀಗೆ ಎಲ್ಲಿಗೆ ಬೇಕಿದ್ದರೂ ಹೋಗಲಿ, ಒಟ್ಟಾರೆ ಸ್ವತಂತ್ರವಾಗಿ ನಿರ್ಭೀತಿಯಿಂದ ಈ ನಾಡನ್ನು ನೋಡಲಿ ಎಂಬುದೇ ಸರಕಾರದ ಆಶಯವಾಗಿದೆ. 'ಹೆಣ್ಣೊಬ್ಬಳು ನಿರ್ಭೀತಿಯಿಂದ ಮಧ್ಯರಾತ್ರಿಯಲ್ಲಿ ರಸ್ತೆಯಲ್ಲಿ ಓಡಾಡಿದಾಗ ಮಾತ್ರವೇ ನಿಜವಾದ ರಾಮರಾಜ್ಯ ಬಂದಂತೆ' ಎಂದಿದ್ದಾರೆ ಮಹಾತ್ಮ ಗಾಂಧೀಜಿ. ಅಂತೆಯೇ, ಗಾಂಧೀಜಿ ಕಂಡ ರಾಮರಾಜ್ಯದ ಕನಸು ಕರ್ನಾಟಕದಲ್ಲಿಂದು ನನಸಾಗಿದೆ; ಅಂಬೇಡ್ಕರ್ ಕಂಡಿದ್ದ ಭೀಮರಾಜ್ಯದ ಕನಸು ನನಸಾಗಬೇಕಿದೆ!



ಕರ್ನಾಟಕ ಸರಕಾರದ ಆರ್ಥಿಕತೆ

ಕರ್ನಾಟಕ ಸರಕಾರವು 2024ರ ಫೆಬ್ರವರಿ 16ರಂದು, 2024–25ರ ಸಾಲಿನ ಬಜೆಟ್ ಅನ್ನು ಮಂಡಿಸಿತು. ಬಜೆಟ್‌ನ ವೆಚ್ಚ ರು. 3,46,409 ಕೋಟಿಯಷ್ಟಿದ್ದರೆ, ಒಟ್ಟು ಸ್ವೀಕೃತಿಯು ರು. 2,63,428 ಕೋಟಿಯಷ್ಟಿತ್ತು. ಈ ಬಜೆಟ್‌ನಲ್ಲಿ 53,674 ಕೋಟಿ ರು. ಮೊತ್ತವನ್ನು ಸರಕಾರವು ಪಂಚ ಗ್ಯಾರಂಟಿಗಳಿಗೆ ನಿಗದಿ ಮಾಡಿತ್ತು. ಈ ಅಂಕಿ–ಅಂಶಗಳನ್ನು ನೋಡಿದಾಗ, ಇದು ರಾಜ್ಯದ ಮೇಲೆ ಹೊರೆಯೇ? ಬಡವರು, ನಿರ್ಗತಿಕರು, ಹೆಂಗಸರು, ಯುವಕರು ಈ ರಾಜ್ಯಕ್ಕೆ ಭಾರವೇ? ಎಂಬ ಪ್ರಶ್ನೆ ಮೂಡುತ್ತದೆ. ಅದಕ್ಕೆ ಉತ್ತರ– ಖಂಡಿತ ಇಲ್ಲ. ಈ ಅಂಕಿ–ಅಂಶಗಳನ್ನು ನೋಡಿದಾಗ, ಈಗ ಸಾಲ ಮಾಡಿ ಬಡವರಿಗೆ, ಯುವಕರಿಗೆ, ಹೆಂಗಸರಿಗೆ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಸಾಲ ಮಾಡುವುದು ತಪ್ಪು ಎಂದು ಭಾವಿಸಿದರೆ ಅದು ಮೂರ್ಖತನದ ಪರಮಾವಧಿ.

ಸಾಲ ಮಾಡದವರು ಈ ದೇಶದಲ್ಲಿದ್ದಾರೆಯೇ? ವಾಹನ, ಮನೆ ಖರೀದಿಗೆ ನಾವು ಸಾಲ ಮಾಡುವುದಿಲ್ಲವೇ? 10 ಲಕ್ಷ ರು.ಬೆಲೆಯ ಕಾರನ್ನು ಖರೀದಿಸುವ ನಾವು ಅದಕ್ಕಾಗಿ 8 ಲಕ್ಷ ರು. ಸಾಲ ಮಾಡುತ್ತೇವೆ, ಅದು ಯಾವ ಭರವಸೆಯ ಮೇಲೆ? ಈ ಸಾಲವನ್ನು ತೀರಿಸಿಯೇ ಸಾಯುತ್ತೇನೆ ಎಂಬ ಹಠದ ಮೇಲೆ. ಇಲ್ಲಿಯವರೆಗೆ ಈ ದೇಶ, ರಾಜ್ಯ ಮಾಡಿದ ಸಾಲವನ್ನು ಯಾವುದೇ ರಾಜಕಾರಣಿ, ನ್ಯಾಯಾಧೀಶ, ಸಿನಿಮಾ ನಟ, ಉದ್ಯಮಿ ತೀರಿಸಿದ್ದಾರೆಯೇ? ಇದನ್ನು ತೀರಿಸಿದ್ದು ನಾವೆಲ್ಲಾ ಸೇರಿ ಚುನಾಯಿಸುವ ಸರಕಾರವೇ. ಇದನ್ನು ವಿಶಾಲಾರ್ಥದಲ್ಲಿ ಮನಗಾಣಬೇಕು.

ಸಂವಿಧಾನದ 21ನೇ ವಿಧಿಯು ನಮಗೆಲ್ಲರಿಗೂ ಘನತೆಯಿಂದ ಬದುಕುವ ಹಕ್ಕನ್ನು ನೀಡಿದೆ. ಆದರೆ ದೇಶದ ಸ್ಥಿತಿಯನ್ನು ನೋಡಿದರೆ, ಗಣನೀಯ ಸಂಖ್ಯೆಯ ಜನರ ಬದುಕುವ ಹಕ್ಕನ್ನು ಕಸಿಯಲಾಗಿದೆ. ಭಾರತದ ಸಂಪತ್ತಿನ ಸಿಂಹಪಾಲು ಕೆಲವೇ ಜನರ ಕೈಯಲ್ಲಿ ಸೇರಿಕೊಂಡಿದೆ. 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ ರಿಪೋರ್ಟ್, 2023' ಅನ್ನು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಮಹಿಳೆಯರು ಕೆಲಸದಲ್ಲಿ ಭಾಗವಹಿಸುವ ಪ್ರಮಾಣವು 1980ರಲ್ಲಿ ಶೇ.52ರಷ್ಟು ಇದ್ದದ್ದು ಈಗ ಶೇ.39.1ಕ್ಕೆ ಇಳಿದಿದೆ. 25 ವರ್ಷದೊಳಗಿನ ಶೇ.42ರಷ್ಟು ಪದವೀಧರರು ಇಂದು ದೇಶದಲ್ಲಿ ನಿರುದ್ಯೋಗಿಗಳು. ನರೇಗಾ ಯೋಜನೆ ಪಡಿತರ ವ್ಯವಸ್ಥೆಯು ಶೇ.50ರಷ್ಟು ಜನರನ್ನು ಬಡತನ ರೇಖೆಗಿಂತ ಕೆಳಗೆ ಹೋಗದಂತೆ ತಡೆದಿದೆ. ಈ ಯೋಜನೆಯನ್ನು ನಿಲ್ಲಿಸಿದರೆ ರಾತ್ರೋರಾತ್ರಿ ಶೇ.50ರಷ್ಟು ಜನರು ಬಡತನ ರೇಖೆಗಿಂತ ಕೆಳಗೆ ಹೋಗುತ್ತಾರೆ.

ಸರಿಪಡಿಸಬೇಕಿರುವುದು ಯಾವುದನ್ನು?

ಹತ್ತು ವರ್ಷಗಳಲ್ಲಿ, ಈ ದೇಶದ ಬಂಡವಾಳಶಾಹಿಗಳ ಸುಮಾರು 15 ಲಕ್ಷ ಕೋಟಿ ರು.ಗಳಷ್ಟು ಸಾಲವನ್ನು ಮನ್ನಾ ಮಾಡಲಾಗಿದೆ, ಕಾರ್ಪೊರೇಟ್ ಕಂಪನಿಗಳ ತೆರಿಗೆಯನ್ನು ಶೇ.30ರಿಂದ ಶೇ.22ಕ್ಕೆ ಇಳಿಸಲಾಗಿದೆ. ಇದರಿಂದಾಗಿ, ವರ್ಷಕ್ಕೆ 1 ಲಕ್ಷ ಕೋಟಿ ರು. ಸ್ವೀಕೃತಿ ಪಡೆದ ಕಾರ್ಪೊರೇಟ್ ಕಂಪನಿಗಳು ದೇಶದ ಅಭಿವೃದ್ಧಿ ಮಾಡದೆ, ತಮ್ಮ ಅಭಿವೃದ್ಧಿಗೆ ಮುಂದಾಗಿವೆ. ಹೀಗಾಗಿ, ದೇಶದ ಅಭಿವೃದ್ಧಿಯ ಬದಲು ನಿರುದ್ಯೋಗದ ಅಭಿವೃದ್ಧಿ ಆದಂತಾಗಿದೆ. ಭಾರತದಲ್ಲಿ ಕೋಟ್ಯಧಿಪತಿಗಳು ಶೇ.10ರಷ್ಟು ಪ್ರಮಾಣದಲ್ಲಿದ್ದರೆ, ಉಚಿತ ಯೋಜನೆ ಪಡೆಯುವವರು ಶೇ.90ರಷ್ಟು ಇದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಪ್ರಭು' ಎನಿಸಿಕೊಂಡವರು ಬಹುತ್ವದ ಪ್ರತಿನಿಧಿ ಆಗಬೇಕೇ ಹೊರತು, ಕುಲೀನರ ಕೈಯಾಳು ಆಗಬಾರದು. ಒಂದು ವೇಳೆ ಹಾಗಾದರೆ, ಅದು 'ಡೆಮಾಕ್ರಸಿ' ಅಲ್ಲ, 'ಅರಿಸ್ಟೋಕ್ರಸಿ' ಆದಂತೆ!

ಕರ್ನಾಟಕ ಸರಕಾರವು ತನ್ನ ಬಜೆಟ್‌ನ ಶೇ.32.4ರಷ್ಟು ಹಣವನ್ನು ಜನಕಲ್ಯಾಣ ಯೋಜನೆಗಳಿಗೆ ವಿನಿಯೋಗಿಸುತ್ತಿದೆ. ಇದರಿಂದಾಗಿ ಪ್ರತಿ ಕುಟುಂಬಕ್ಕೆ ವಾರ್ಷಿಕ ರು.25,000ರಿಂದ ರು.55,000ದವರೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಹಣ ದೊರೆಯುತ್ತಿದೆ. ಇದರಿಂದ ಮಾನವ ಸಂಪನ್ಮೂಲದ ಅಭಿವೃದ್ಧಿಯಾಗುವುದಲ್ಲದೆ, ಇದೇ ವರ್ಗವು ಭವಿಷ್ಯದಲ್ಲಿ ನೂರಾರು ಲಕ್ಷ ಕೋಟಿ ರುಪಾಯಿಗಳ ಭೌತಿಕ ಅಭಿವೃದ್ಧಿಯನ್ನು ಸೃಷ್ಟಿಸುವುದು ಸಾಧ್ಯವಾಗುತ್ತದೆ.

ಸರಕಾರ ಮಾಡಬೇಕಿರುವುದೇನು?

ಗ್ಯಾರಂಟಿ ಯೋಜನೆಗಳನ್ನು ಘೋಷಿಸುವ ಮೂಲಕ ಸರಕಾರವು 'ಬಡವರ ಬಂಧು' ಆಗಿದೆ, ನಿಜ. ಆದರೆ ಮಾಡಿದ ಸಾಲವನ್ನು ತೀರಿಸಲು ತಕ್ಕ ಯೋಜನೆಯನ್ನು ಅದು ರೂಪಿಸಬೇಕು, ಅರ್ಹ ಫಲಾನುಭವಿಗಳನ್ನು ಹುಡುಕಬೇಕು, ತೆರಿಗೆ ಸೋರಿಕೆಯನ್ನು ತಡೆಗಟ್ಟಬೇಕು, ಕೇಂದ್ರ ಸರಕಾರದಿಂದ ತನಗೆ ನ್ಯಾಯಯುತವಾಗಿ ಬರಬೇಕಾದ ಪಾಲನ್ನು ದಕ್ಕಿಸಿಕೊಳ್ಳಬೇಕು, ಸಮಾಜದ ಕೆಲವು ವರ್ಗಗಳಿಗೆ ಅನವಶ್ಯಕವಾಗಿ ನೀಡಿರುವ ಐಷಾರಾಮಿ ಸೌಲಭ್ಯವನ್ನು ಹಿಂಪಡೆಯಬೇಕು ಮತ್ತು ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ನಷ್ಟ ಉಂಟುಮಾಡುವವರಿಗೆ ಉಗ್ರಶಿಕ್ಷೆ ನೀಡಬೇಕು.

ಕೊನೆಯ ನುಡಿ

ಬಂಡವಾಳಶಾಹಿ ವಾದವನ್ನು ಮಣಿಸಲು ಫ್ರಾನ್ಸ್‌ನಲ್ಲಿ ರಕ್ತಕ್ರಾಂತಿಯಾಯಿತು. ಅಲ್ಲಿನ ರಾಜ 16ನೇ ಲೂಯಿಯ ತಲೆಕಡಿದು ಸಾಯಿಸಲಾಯಿತು. ರಷ್ಯಾದಲ್ಲಿ ಜಾರ್ ವಂಶದ ನಿಕೋಲಸ್ ಎಂಬ ಅರಸ ಆಳುತ್ತಿದ್ದ, ಅವನ ಜತೆಗೆ ರಾಸ್‌ಪುಟಿನ್ ಎಂಬ ದುಷ್ಟ ಸನ್ಯಾಸಿಯಿದ್ದ. ಇವರ ವಿರುದ್ಧ ಪಕ್ಷವೊಂದನ್ನು ಕಟ್ಟಿ, ನಿಕೋಲಸ್‌ನನ್ನು ಕೊಂದು, 1917ರಲ್ಲಿ ಸೋವಿಯತ್ ಒಕ್ಕೂಟವನ್ನು ಸ್ಥಾಪಿಸಲಾಯಿತು. ಫ್ರಾನ್ಸ್, ರಷ್ಯಾ, ಅಮೆರಿಕದಲ್ಲಾದ ಇಂಥ ರಕ್ತಕ್ರಾಂತಿ ಭಾರತದಲ್ಲಾಗಿಲ್ಲ. ಏಕೆಂದರೆ, ಈ ದೇಶದಲ್ಲಿ 'ಗ್ಯಾರಂಟಿ ಯೋಜನೆ'ಗಳಂಥ ಸಮಾಜವಾದಿ ಮಾರ್ಗೋಪಾಯಗಳಿವೆ. ಅಧಿಕಾರಿಗಳು, ಶ್ರೀಮಂತರು, ಪತ್ರಕರ್ತರು ಈ ಯೋಜನೆಗಳನ್ನು ಟೀಕಿಸಬಹುದು. ಆದರೆ, ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ.

ನಮಗೆಲ್ಲರಿಗೂ ಬೇಕಿರುವುದು ಅಗಲವಾದ ರಸ್ತೆಗಳಲ್ಲ, ಭವ್ಯ ಬಂಗಲೆಗಳಲ್ಲ, ಜಗಮಗಿಸುವ ವಿದ್ಯುತ್ ದೀಪಗಳಲ್ಲ, ಐಷಾರಾಮಿ ಕಾರುಗಳಲ್ಲ, ವೇಗವಾಗಿ ಚಲಿಸುವ ರೈಲುಗಳಲ್ಲ. ನಮಗೆ ಬೇಕಿರುವುದು– ತುತ್ತು ಅನ್ನ ತಿನ್ನೋಕೆ, ಬೊಗಸೆ ನೀರು ಕುಡಿಯೋಕೆ, ತುಂಡು ಬಟ್ಟೆ ಸಾಕು ಮಾನ ಮುಚ್ಚೋಕೆ, ಅಂಗೈ ಅಗಲ ಜಾಗ ಸಾಕು ಹಾಯಾಗಿರೋಕೆ!

(ಲೇಖಕರು ರಾಮಮನೋಹರ್ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 286

ಸಮಾಚಾರ ಸಣ್ಣದಲ್ಲ

ಸಜ್ಜನ್ ಕುಮಾರ್‌ಗೆ ಗಲ್ಲು: ಎಪಿಪಿ ಮನವಿ

ದೆಹಲಿ: ಮಾಜಿ ಪ್ರಧಾನಿ ಇಂದಿರಾ ಗಾಂಧಿ ಹತ್ಯೆ ನಂತರ ದೆಹಲಿಯಲ್ಲಿ 1984ರಲ್ಲಿ ನಡೆದ ಸಿಖ್ ನರಮೇಧ ಸರಣಿಯ ಪ್ರಕರಣವೊಂದರಲ್ಲಿ ಅಪರಾಧಿ ಎಂದು ಈಗಾಗಲೇ ಘೋಷಿಸಲಾಗಿರುವ

ಕಾಂಗ್ರೆಸ್‌ನ ಹಿರಿಯ ನಾಯಕ, ಮಾಜಿ ಸಂಸದ ಸಜ್ಜನ್ ಕುಮಾರ್‌ಗೆ ಗಲ್ಲು ಶಿಕ್ಷೆ ವಿಧಿಸುವಂತೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಮನೀಶ್ ರಾವತ್ ಅವರು ದೆಹಲಿಯಲ್ಲಿನ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರ ನ್ಯಾಯಾಲಯದಲ್ಲಿ ಮಂಗಳವಾರ ಲಿಖಿತ ಮನವಿ ಮಾಡಿದರು. 1984ರ ನ.1ರಂದು ದೆಹಲಿಯ ಸರಸ್ವತಿ ವಿಹಾರ ಪ್ರದೇಶದಲ್ಲಿ ಜಸ್ವಂತ್ ಸಿಂಗ್ ಮತ್ತು ಅವರ ಪುತ್ರ ತರುಣ್‌ದೀಪ್ ಸಿಂಗ್‌ರನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಸಜ್ಜನ್ ಕುಮಾರ್ ಅಪರಾಧಿಯಾಗಿದ್ದಾರೆ. ಫೆ.21ರಂದು ಶಿಕ್ಷೆಯ ಪ್ರಮಾಣ ಪ್ರಕಟವಾಗಲಿದೆ.

ಕೇರಳದಲ್ಲಿ ಮತ್ತೆ ರ‍್ಯಾಗಿಂಗ್: ದೂರು

ತಿರುವನಂತಪುರಂ: ಕೇರಳದಲ್ಲಿ ಮತ್ತೊಂದು ರ‍್ಯಾಗಿಂಗ್ ಪ್ರಕರಣ ವರದಿಯಾಗಿದೆ. ತಿರುವನಂತಪುರದ ಸರಕಾರಿ ಕಾಲೇಜಿನ ಕಿರಿಯ ವಿದ್ಯಾರ್ಥಿ ಮೇಲೆ ಫೆ.11ರಂದು ರ‍್ಯಾಗಿಂಗ್ ನಡೆಸಿದ 7 ಸೀನಿಯರ್ಸ್ ಕ್ರೌರ್ಯ ಮೆರೆದಿದ್ದಾರೆ. 7 ಹಿರಿಯ ವಿದ್ಯಾರ್ಥಿಗಳ ಗುಂಪು ಹಲ್ಲೆ ನಡೆಸಿದೆ. ಬಿದಿರು ಕೋಲು-ಬೆಲ್ಟ್‌ನಿಂದ ಥಳಿಸಿ ಜೀವ ಬೆದರಿಕೆ ಹಾಕಿದೆ ಎಂದು ತಿರುವನಂತಪುರ ಕಾರ್ಯವಟ್ಟಂ ಸರಕಾರಿ ಕಾಲೇಜಿನ ಬಯೋಟೆಕ್ನಾಲಜಿ ವಿದ್ಯಾರ್ಥಿ ಪೊಲೀಸರಿಗೆ ದೂರು ನೀಡಿದ್ದಾನೆ. ಸರಕಾರಿ ನರ್ಸಿಂಗ್ ಕಾಲೇಜಿನಲ್ಲಿ ರ‍್ಯಾಗಿಂಗ್ ಆರೋಪದಡಿ 5 ವಿದ್ಯಾರ್ಥಿಗಳ ಇತ್ತೀಚೆಗಷ್ಟೇ ಬಂಧನವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಮೃತ್ಯುಕುಂಭ: ಮಮತಾ ಟೀಕೆಗೆ ಬಿಜೆಪಿ ಕಿಡಿ

ಕೋಲ್ಕತ್ತ: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದಿರುವುದು ಮಹಾ ಕುಂಭಮೇಳ ಅಲ್ಲ, ಅದೊಂದು ಮೃತ್ಯು ಕುಂಭ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ, ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಟೀಕಿಸಿದ್ದಾರೆ. ಕಾಲ್ತುಳಿತ, ಬೆಂಕಿ ಅವಘಡ, ಅಪಘಾತ ಎಂದು ಈ ಕುಂಭ ಮೇಳದ ಕಡೆಯಿಂದ ಬರೀ ಸಾವಿನ ಸುದ್ದಿಗಳೇ ಬರುತ್ತಿವೆ ಎಂದು ಕಿಡಿಕಾರಿದ್ದಾರೆ. ಕುಂಭಮೇಳದಲ್ಲಿನ ಈ ಎಲ್ಲಾ ಅವ್ಯವಸ್ಥೆಗೂ ಕೇಂದ್ರ ಮತ್ತು ಉತ್ತರ ಪ್ರದೇಶ ಸರಕಾರಗಳ ವೈಫಲ್ಯವೇ ಕಾರಣ ಎಂದು ದೂಷಿಸಿದ್ದಾರೆ.

ಬಿಜೆಪಿ ತಿರುಗೇಟು: 52 ಕೋಟಿ ಜನರು ಅಪಾರ ನಂಬಿಕೆ-ವಿಶ್ವಾಸ- ಭಕ್ತಿಯಿಂದ ಮಹಾ ಕುಂಭಮೇಳಕ್ಕೆ ಆಗಮಿಸಿ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿ ಪುನೀತ ಭಾವ ಅನುಭವಿಸಿದ್ದಾರೆ. ಅದರೆ ಅದಾವುದೂ ಮಮತಾ ಬ್ಯಾನರ್ಜಿ ಕಣ್ಣಿಗೆ ಕಾಣಿಸಿಲ್ಲ. ಅವರು ಮೃತ್ಯುಕುಂಭ ಎಂದು ಕರೆಯುವ ಮೂಲಕ ಕೋಟ್ಯಂತರ ಜನರ ನಂಬಿಕೆಯನ್ನೇ ಅಲ್ಲಗಳೆದಿದ್ದಾರೆ, ಟೀಕಿಸಿದ್ದಾರೆ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.

ಕಾರ್ಯತಂತ್ರ ಪಾಲುದಾರಿಕೆ ವೃದ್ಧಿ ಒಪ್ಪಂದಕ್ಕೆ ಭಾರತ-ಕತಾರ್ ಸಹಿ

ದೆಹಲಿ: ಭಾರತ ಮತ್ತು ಕತಾರ್ ಉಭಯ ದೇಶಗಳ ನಡುವಿನ ಕಾರ್ಯತಂತ್ರ ಪಾಲುದಾರಿಕೆ ವೃದ್ಧಿ ಒಪ್ಪಂದಕ್ಕೆ ಮಂಗಳವಾರ ಸಹಿ ಹಾಕಿವೆ.

ಭಾರತಕ್ಕೆ ಎರಡು ದಿನಗಳ ಅಧಿಕೃತ ಭೇಟಿಗೆ ಆಗಮಿಸಿರುವ ಕತಾರ್ ಅಮೀರ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ 'ಹೈದರಾಬಾದ್ ಹೌಸ್'ನಲ್ಲಿ ಮಂಗಳವಾರ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಬಳಿಕ ಉಭಯ ನಾಯಕರ ಸಮ್ಮುಖದಲ್ಲಿ ಕಾರ್ಯತಂತ್ರದ ಪಾಲುದಾರಿಕೆ ವೃದ್ಧಿಸುವ ಒಪ್ಪಂದ ದಾಖಲೆಗಳನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಕತಾರ್ ಸಚಿವರು ವಿನಿಮಯ ಮಾಡಿಕೊಂಡರು.

ಕತಾರ್ ಅಮೀರ್ ಥಾನಿ ಅವರ ಭೇಟಿ ಭಾರತ-ಕತಾರ್ ಮಧ್ಯೆ ಬೆಳೆವಣಿಗೆ ಕಾಣುತ್ತಿರುವ ಬಹುಮುಖ ಪಾಲುದಾರಿಕೆಗೆ ಮತ್ತಷ್ಟು ವೇಗ ನೀಡಲಿದೆ. ಈ ಬಾರಿ ನಡೆಸಿರುವ ಕಾರ್ಯತಂತ್ರ ಪಾಲುದಾರಿಕೆ ವೃದ್ಧಿ ಒಪ್ಪಂದ ಚರ್ಚೆಯಲ್ಲಿ ಮುಖ್ಯವಾಗಿ ವ್ಯಾಪಾರ ವೃದ್ಧಿ, ಬಂಡವಾಳ ಹೂಡಿಕೆ, ತಂತ್ರಜ್ಞಾನ ಸಹಕಾರ, ಇಂಧನ ಪೂರೈಕೆ, ಎರಡೂ ದೇಶಗಳ ಜನರ ನಡುವಿನ ಸಂಬಂಧ ವೃದ್ಧಿ ಮೊದಲಾದ ವಿಚಾರಗಳನ್ನು ಚರ್ಚಿಸಲಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ.

ಹೈದರಾಬಾದ್ ಹೌಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕತಾರ್ ಅಮೀರ್ ತಮೀಮ್ ಬಿನ್ ಹಮದ್ ಅಲ್ ಥಾನಿ ನೇತೃತ್ವದಲ್ಲಿ ಎರಡೂ ದೇಶಗಳ ನಿಯೋಗಗಳು ಹಲವಾರು ದ್ವಿಪಕ್ಷೀಯ ವಿಷಯಗಳನ್ನು ಚರ್ಚಿಸಿ ಒಪ್ಪಂದ ಮಾಡಿಕೊಂಡರು. ಈ ಸಭೆಯಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾರತದ ಪ್ರತಿನಿಧಿಗಳ ತಂಡದಲ್ಲಿದ್ದರು.

ಭಾರತ ಮತ್ತು ಕತಾರ್ ನಡುವೆ ದ್ವಿಮುಖ ತೆರಿಗೆ ತಪ್ಪಿಸುವ ಮತ್ತು ಆದಾಯದ ಮೇಲಿನ ತೆರಿಗೆಗೆ ಸಂಬಂಧಿಸಿ ಆರ್ಥಿಕ ವಂಚನೆ ತಡೆಯುವ ಪರಿಷ್ಕೃತ ಒಪ್ಪಂದವನ್ನೂ ಮಾಡಿಕೊಳ್ಳಲಾಗಿದ್ದು, ಇದೇ ವೇಳೆ ಸಹಿ ಮಾಡಿದ ಒಪ್ಪಂದ ಪತ್ರಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು.

ಮಂಗಳವಾರ ಬೆಳಗ್ಗೆ ರಾಷ್ಟ್ರಪತಿ ಭವನದ ಮುಂಭಾಗ ಕತಾರ್ ಅಮೀರ್ ಅವರಿಗೆ ಗಾರ್ಡ್ ಆಫ್ ಹಾನರ್ ಮೂಲಕ ವಿಧ್ಯುಕ್ತ ಸ್ವಾಗತ ನೀಡಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ಮೋದಿ ಮತ್ತಿತರ ಸಚಿವರು ಕತಾರ್ ಅಮೀರ್‌ರನ್ನು ಸ್ವಾಗತಿಸಿದರು.

ಪ್ರಧಾನಿ ಮೋದಿ ಅವರ ಆಹ್ವಾನದ ಮೇರೆಗೆ ಕತಾರ್‌ನ ಅಮೀರ್ ಭಾರತಕ್ಕೆ ಎರಡು ದಿನಗಳ ಭೇಟಿ ನೀಡಿದ್ದಾರೆ. ಇದು ಕತಾರ್ ಅಮೀರ್ ಭಾರತಕ್ಕೆ ನೀಡುತ್ತಿರುವ ಎರಡನೇ ಭೇಟಿ. ಈ ಹಿಂದೆ 2015ರ ಮಾರ್ಚ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು.



ಅಮೀರ್ ಥಾನಿ ನನ್ನ ಸೋದರ

ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ರಾತ್ರಿ ಖುದ್ದಾಗಿ ದೆಹಲಿಯ ಪಾಲಂ ತಾಂತ್ರಿಕ ವಿಮಾನ ನಿಲ್ದಾಣಕ್ಕೆ ತೆರಳಿ ಕತಾರ್‌ನ ಅಮೀರ್ ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದ್ದರು. ಅಮೀರ್ ಥಾನಿ ನನ್ನ ಸೋದರನಾಗಿದ್ದಾರೆ. ಅವರು ಈಗ ಕೈಗೊಂಡಿರುವ ಭಾರತದ ಭೇಟಿ ಫಲಪ್ರದವಾಗಲಿ ಎಂದು ಹಾರೈಸುವೆ ಎಂದು ಹೇಳಿದ್ದರು.

ಕತಾರ್‌ನಲ್ಲಿ ಭಾರತೀಯರು

ಕತಾರ್‌ನಲ್ಲಿ ಭಾರತೀಯರ ಸಂಖ್ಯೆ ಗಣನೀಯವಾಗಿದೆ. ಕತಾರ್ ಅಭಿವೃದ್ಧಿಯಲ್ಲಿ, ದೇಶ ನಿರ್ಮಾಣದಲ್ಲಿ ಭಾರತೀಯ ತಂತ್ರಜ್ಞರು, ಶ್ರಮಜೀವಿಗಳ ಅತಿದೊಡ್ಡ ಕೊಡುಗೆ ಇದೆ. ಈ ವಿಚಾರವಾಗಿ ಕತಾರ್ ಕೂಡಾ ಸಂದರ್ಭೋಚಿತವಾಗಿ ಭಾರತೀಯ ಸಮುದಾಯದ ಪ್ರಶಂಸೆ ಮಾಡಿದೆ. ಈಗ ಕತಾರ್ ಅಮೀರ್ 2 ದಿನಗಳ ಕಾಲ ಭಾರತ ಪ್ರವಾಸ ಕೈಗೊಂಡಿರುವುದು ಎರಡೂ ದೇಶಗಳ ನಡುವಿನ ಸಂಬಂಧವನ್ನು ಇನ್ನಷ್ಟು ಸದೃಢಗೊಳಿಸಿದೆ.

ಸಿಬ್ಬಂದಿ ನೇಮಕ ಪ್ರಕ್ರಿಯೆ ಶುರು

'ಟೆಸ್ಲಾ' ಕಾರು ಭಾರತ ಪ್ರವೇಶಕ್ಕೆ ವೇದಿಕೆ ಸಿದ್ಧ

ದೆಹಲಿ: ವಿಶ್ವದ ಬಹುಬೇಡಿಕೆಯ ವಿದ್ಯುಚ್ಛಕ್ತಿ ಚಾಲಿತ ಕಾರು 'ಟೆಸ್ಲಾ' ಭಾರತದ ರಸ್ತೆಗಿಳಿಯುವುದು ಕಡೆಗೂ ದೃಢಪಟ್ಟಿದೆ. ಚೀನಾದಲ್ಲಿ ಜೋಡಣೆ ಯಾದ 'ಟೆಸ್ಲಾ' ಕಾರಿಗೆ ಭಾರತದ ಮಾರುಕಟ್ಟೆಗೆ ಪ್ರವೇಶವಿಲ್ಲ. ಏನಿದ್ದರೂ ಭಾರತದಲ್ಲೇ ತಯಾರಾದರಷ್ಟೇ ಟೆಸ್ಲಾ ಕಾರಿಗೆ ಪ್ರವೇಶ ಎಂಬ ಷರತ್ತಿನ ಕಾರಣ ದಿಂದಾಗಿ ಇಷ್ಟು ದಿನ ದೂರವಿದ್ದ ಟೆಸ್ಲಾ ಕಾರುಗಳು ಸದ್ಯದಲ್ಲೇ ಭಾರತದಲ್ಲಿ ಸಂಚರಿಸಲಿವೆ.

ಪ್ರಧಾನಿ ನರೇಂದ್ರ ಮೋದಿ ಅವರ ಫೆ.13-14ರ ಪ್ರವಾಸ ಕಾಲದಲ್ಲಿ ಪತ್ನಿ-ಮಕ್ಕಳ ಸಮೇತ ಭೇಟಿಯಾಗಿ ಮಾತುಕತೆ ನಡೆಸಿದ ವಿಶ್ವದ ಶ್ರೀಮಂತ ಉದ್ಯಮಿ, ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಎಲಾನ್ ಮಸ್ಕ್, ಟೆಸ್ಲಾ ಭಾರತ ಪ್ರವೇಶಕ್ಕೆ ರಹದಾರಿ ಪಡೆದಿದ್ದಾರೆ. ಅದರ ಮೊದಲ ಭಾಗವಾಗಿ ಭಾರತದಲ್ಲಿನ ಟೆಸ್ಲಾ ಘಟಕಕ್ಕೆ ಪ್ರಮುಖ ಅಧಿಕಾರಿಗಳ ನೇಮಕ ಪ್ರಕ್ರಿಯೆ ಆರಂಭಗೊಂಡಿದೆ.

ಟೆಸ್ಲಾ ಇಂಡಿಯ ಘಟಕಕ್ಕೆ ಸರ್ವಿಸ್ ಟೆಕ್ನಿಷಿಯನ್, ಕಸ್ಟಮರ್ ಎಂಗೇಜ್‌ಮೆಂಟ್ ಮ್ಯಾನೇಜರ್, ಡೆಲಿವರಿ ಆಪರೇಷನ್ಸ್ ಸ್ಪೆಷಲಿಸ್ಟ್, ಕಸ್ಟಮರ್ ಫೇಸಿಂಗ್, ಬ್ಯಾಕ್ ಎಂಡ್ ಜಾಬ್ ಸೇರಿ ಪ್ರಮುಖ 13 ಹುದ್ದೆಗಳಿಗೆ ದೆಹಲಿ, ಮುಂಬೈನಲ್ಲಿ ಕಾರ್ಯನಿರ್ವಹಿಸಲು ಮೊದಲ ಹಂತದಲ್ಲಿ ಅರ್ಜಿ ಕರೆಯಲಾಗಿದ್ದು, ಲಿಂಕ್ಡ್‌ಇನ್ ಪೇಜ್‌ನಲ್ಲಿ ಪ್ರಕಟವಾಗಿದೆ.



ಸುಂಕ ಇಳಿಕೆ-ಮಾರಾಟ ವೃದ್ಧಿ

ವಿದೇಶಿ ಮೂಲದ ಐಶಾರಾಮಿ ಕಾರುಗಳ ಮೇಲಿನ ಸುಂಕವನ್ನು ತಗ್ಗಿಸಲು ಭಾರತ ಸರಕಾರ ಒಪ್ಪಿದೆ. 40 ಸಾವಿರ ಅಮೆರಿಕನ್ ಡಾಲರ್ ಮೀರಿದ ಬೆಲೆಯ ಕಾರುಗಳ ಮೂಲ ಸುಂಕ ದರವನ್ನು ಶೇ.110ರಿಂದ ಶೇ.70ಕ್ಕೆ ಇಳಿಸಿದೆ. ಹಾಗಾಗಿ ಟೆಸ್ಲಾ ಕಾರುಗಳನ್ನು ಭಾರತಕ್ಕೆ ತರಲು ಎಲಾನ್ ಮಸ್ಕ್ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ. 2024ರಲ್ಲಿ ಭಾರತದಲ್ಲಿ 1 ಲಕ್ಷ ಎಲೆಕ್ಟ್ರಿಕ್ ಕಾರುಗಳು ಮಾರಾಟವಾಗಿವೆ. ಟೆಸ್ಲಾ ಭಾರತ ಮಾರುಕಟ್ಟೆ ಪ್ರವೇಶಿಸಿದ ನಂತರ ಎಲೆಕ್ಟ್ರಿಕ್ ಕಾರುಗಳ ಮಾರಾಟ ವೇಗ ಪಡೆಯಲಿದೆ ಎಂಬ ನಿರೀಕ್ಷೆ ಇದೆ.

ನಕಲಿ ಏಜೆನ್ಸಿ ವಿರುದ್ಧ ಕ್ರಮವೇನು: ಹೈ ಪ್ರಶ್ನೆ

ಚಂಡೀಗಢ: ಭಾರತದ ನೂರಾರು ಮಂದಿ ಅಕ್ರಮ ಮಾರ್ಗಗಳಲ್ಲಿ ಅಮೆರಿಕದೊಳಕ್ಕೆ ನುಸುಳುತ್ತಿರುವುದು, ಅದರಲ್ಲಿ ಪಂಜಾಬ್-ಹರಿಯಾಣದವರೇ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪಂಜಾಬ್-ಹರಿಯಾಣ ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಅಮೆರಿಕಕ್ಕೆ ಹೋಗಿ ದುಡಿಯಬೇಕು, ನೆಲೆಸಬೇಕು ಎಂಬ ಆಸೆ ಪಡುವ ಜನರ ಕನಸನ್ನೇ ಬಂಡವಾಳವಾಗಿಸಿಕೊಂಡರು ಎರಡೂ ರಾಜ್ಯಗಳಲ್ಲಿ ಹಲವು ನಕಲಿ ಏಜೆನ್ಸಿಗಳು ಹುಟ್ಟಿಕೊಂಡು ಜನರನ್ನು ವಂಚಿಸುತ್ತಿವೆ. ಈ ವಂಚಕ ಏಜೆನ್ಸಿಗಳ ವಿರುದ್ಧ ರಾಜ್ಯಗಳ ಸರಕಾರ ಯಾವ ಕ್ರಮ ಕೈಗೊಂಡಿದೆ ಎಂದು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್‌ನಾಗು ಮತ್ತು ನ್ಯಾ. ಹರ್ಮೀತ್ ಸಿಂಗ್ ಗ್ರೇವಲ್ ಮಂಗಳವಾರ ಪ್ರಶ್ನೆ ಮಾಡಿದ್ದಾರೆ. ಈ ನಕಲಿ ಏಜೆನ್ಸಿಗಳ ವಿರುದ್ಧ ಯಾವ ಕ್ರಮ ಜರುಗಿಸಲಿದ್ದೀರಿ ಎಂಬುದನ್ನು ನ್ಯಾಯಾಲಯಕ್ಕೆ ತಿಳಿಸಿ ಎಂದೂ ನಿರ್ದೇಶನ ನೀಡಿದ್ದಾರೆ.

ಲಕ್ಷಾಂತರ ರು. ಶುಲ್ಕ ಪಡೆಯುವ ನಕಲಿ ಏಜೆನ್ಸಿಗಳು, ಪಂಜಾಬ್, ಹರಿಯಾಣ ರಾಜ್ಯಗಳ ಜನರನ್ನು ಅಮೆರಿಕಕ್ಕೆ ಅಕ್ರಮ (ಡಾಂಕಿ ರೂಟ್) ಮಾರ್ಗದಲ್ಲಿ ಕರೆದೊಯ್ಯುತ್ತಿವೆ. ಇದೊಂದು ಮಾನವ ಕಳ್ಳಸಾಗಣೆ ದೊಡ್ಡ ಜಾಲವಾಗಿದೆ. ಇದನ್ನು ತಡೆಯಲು ಎರಡೂ ರಾಜ್ಯಗಳ ಸರಕಾರಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿರುವ ಪಂಜಾಬ್‌ನ ನಾಗರಿಕರೊಬ್ಬರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ಸಲ್ಲಿಸಿದ್ದಾರೆ.

'ಎಮಿಗ್ರೇಷನ್ ಕಾಯಿದೆ-1983'ರ ಅಡಿಯಲ್ಲಿ ರಾಜ್ಯ ಸರಕಾರದಿಂದ 'ಎಮಿಗ್ರೇಷನ್ ಚೆಕ್ ಪೋಸ್ಟ್' ರಚನೆ ಆಗಬೇಕು. ಪ್ರಮಾಣೀಕೃತ ವಲಸೆ ಪ್ರಕ್ರಿಯೆ ಏಜೆನ್ಸಿಗಳ ಪರಿಷ್ಕೃತ ಪಟ್ಟಿ ಪ್ರಕಟಿಸಬೇಕು. ಈ ಬಗ್ಗೆ ಹೈಕೋರ್ಟ್ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದೂ ಮನವಿ ಮಾಡಿದ್ದಾರೆ.

ಅಮೃತಸರವೇ ಏಕೆ?

ಪ್ರಸ್ತುತ ಅಮೆರಿಕ ಅಕ್ರಮ ವಲಸಿಗರನ್ನು, ಸರಿಯಾದ ದಾಖಲೆಗಳಿಲ್ಲದ ವಿದೇಶಿ ಪ್ರಜೆಗಳನ್ನು ನಿರ್ದಾಕ್ಷಿಣ್ಯವಾಗಿ ಗಡಿಪಾರು ಮಾಡುತ್ತಿದೆ. ಭಾರತೀಯ ಅಕ್ರಮ ವಲಸಿಗರನ್ನು ಈವರೆಗೆ 3 ತಂಡಗಳಲ್ಲಿ ವಾಯುಪಡೆ ವಿಮಾನದಲ್ಲಿ ಕಳುಹಿಸಿಕೊಟ್ಟಿದೆ. ಪಂಜಾಬ್‌ನವರೇ ಅಕ್ರಮ ವಲಸಿಗರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಗಡಿಪಾರಾದವರನ್ನು ಹೊತ್ತ ಅಮೆರಿಕದ ವಾಯುಪಡೆ ವಿಮಾನಗಳು ನೇರ ಅಮೃತಸರ ವಿಮಾನ ನಿಲ್ದಾಣದಲ್ಲಿಯೇ ಇಳಿಯುತ್ತಿವೆ.

ಧರಣಿ ನಿರತ ರೈತರ ಜತೆ ಕೇಂದ್ರ ಸಚಿವ ಜೋಶಿ ಸಭೆ

ದೆಹಲಿ: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀತಿಯನ್ನು ಕಾಯಿದೆಯಾಗಿಸುವಂತೆ ಒತ್ತಾಯಿಸಿ ವರ್ಷದಿಂದ ಪ್ರತಿಭಟನೆ ನಡೆಸುತ್ತಿರುವ ಪಂಜಾಬ್-ಹರಿಯಾಣ ರೈತ ನಾಯಕರು, ರೈತ ಸಂಘದ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ್ ಜತೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಂಗಳವಾರ ಸಭೆ ನಡೆಸಿದರು. ಕೆಲವು ದಿನಗಳಿಂದ ಉಪವಾಸ ನಡೆಸುತ್ತಿದ್ದ ಸಂಯುಕ್ತ ಕಿಸಾನ್ ಮೋರ್ಚಾ ನಾಯಕನ ಜತೆಗೂ ಸಚಿವ ಜೋಶಿ ಮಾತನಾಡಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, ರೈತ ಸಂಘ 'ಸಂಯುಕ್ತ ಕಿಸಾನ್ ಮೋರ್ಚಾ' ನಾಯಕರನ್ನು ಭೇಟಿ ಮಾಡಿ ಮಾತನಾಡಿರುವೆ. ಈ ಭೇಟಿ ವೇಳೆ ಪಂಜಾಬ್ ಸರಕಾರದ ಪ್ರತಿನಿಧಿಗಳೂ ಇದ್ದರು. ಚರ್ಚೆ ಸಕಾರಾತ್ಮಕವಾಗಿತ್ತು. ರೈತರ ಬೇಡಿಕೆಗಳನ್ನು ವಿವರವಾಗಿ ಆಲಿಸಿದೆ. ಪ್ರಧಾನಿ ಮೋದಿ ಸರಕಾರ ರೈತರಿಗಾಗಿ ಯಾವ ರೀತಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಿದೆ ಎಂದು ವಿವರಿಸಿದೆ ಎಂದು ಸಚಿವರು ಸುದ್ದಿಗಾರರಿಗೆ ವಿವರಿಸಿದ್ದಾರೆ.

ಜಗಜಿತ್ ಸಿಂಗ್ ದಲ್ಲೆವಾಲ್ ಉಪವಾಸ ನಿಲ್ಲಿಸುವಂತೆ ಮನವಿ ಮಾಡಿದೆ. ಅವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ನಾವು ರೈತರನ್ನು ಮತ್ತೊಮ್ಮೆ(ಫೆ.22) ಭೇಟಿ ಮಾಡಲಿದ್ದೇವೆ. ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ನೇತೃತ್ವದಲ್ಲಿ ರೈತರು-ರೈತ ಸಂಘಗಳ ಜತೆ ಚರ್ಚೆ ನಡೆಸುತ್ತೇವೆ ಎಂದು ಜೋಶಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಝೆಲೆನ್‌ಸ್ಕಿ ಜತೆಗೆ ಮಾತಿಗೆ ಸಿದ್ಧ: ಪುಟಿನ್

ರಿಯಾದ್: ಉಕ್ರೇನ್ ಯುದ್ಧ ನಿಲುಗಡೆ ವಿಷಯವಾಗಿ ಸೌದಿ ಅರೇಬಿಯದಲ್ಲಿ ಅಮೆರಿಕ-ರಷ್ಯಾ ನಿಯೋಗದ ಸಭೆ ಮಂಗಳವಾರ ನಡೆದಿದ್ದು, ಈ ಸಂದರ್ಭ ರಷ್ಯಾ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು, ಅಗತ್ಯವೆನಿಸಿದರೆ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಜತೆಗೆ ಮಾತುಕತೆಗೆ ಅಧ್ಯಕ್ಷ ಪುಟಿನ್ ಸಿದ್ಧರಿದ್ದಾರೆ ಎಂದಿದ್ದಾರೆ. ಅಮೆರಿಕ ನಿಯೋಗದ ನೇತೃತ್ವ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ರಷ್ಯಾ ನಿಯೋಗದ ನೇತೃತ್ವವನ್ನು ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ವಹಿಸಿದ್ದರು.

ಟ್ರಂಪ್, ಮಸ್ಕ್ ವಿರುದ್ಧ ಅಮೆರಿಕದ ವಿವಿಧೆಡೆ ಪ್ರತಿಭಟನೆ

ಬೋಸ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅವರ 2.0 ಆಡಳಿತ ಕಾಲದಲ್ಲಿನ ನೀತಿಗಳ ವಿರುದ್ಧ ಅಮೆರಿಕದ ಕೆಲವೆಡೆ ಪ್ರತಿಭಟನೆ ವ್ಯಕ್ತವಾಗಿದೆ. 'ಪ್ರೆಸಿಡೆಂಟ್'ದಿನವಾದ ಫೆ.17ರ ಸೋಮವಾರ ಬೋಸ್ಟನ್ ನಗರ ಸೇರಿದಂತೆ ಕೆಲವೆಡೆ ಪ್ರತಿಭಟನೆ ನಡೆದಿವೆ. ಡೊನಾಲ್ಡ್ ಟ್ರಂಪ್ ಹಾಗೂ ಎಲಾನ್ ಮಸ್ಕ್ ಅವರ ನೀತಿಗಳು ಜನ ವಿರೋಧಿ ಯಾಗಿವೆ ಎಂದು ಪ್ರತಿಭಟನಾ ಕಾರರು ಖಂಡಿಸಿದ್ದಾರೆ. ಬೋಸ್ಟನ್ ಸ್ಟೇಟ್‌ಹೌಸ್‌ನಿಂದ ಸಿಟಿ ಹಾಲ್‌ವರೆಗೂ 1,000 ಜನರು ಪ್ರತಿಭಟನಾ ಮೆರಣಿಗೆ ನಡೆಸಿದ್ದಾರೆ. ಫೆಡರಲ್ ವಲಸೆ ಜಾರಿ ಮಸೂದೆ ವಿರೋಧಿಸಿದ ಪ್ರತಿಭಟನಾಕಾರರು ಅರಿಜೋನಾ ಸ್ಟೇಟ್ ಹೌಸ್‌ಗೆ ನುಗ್ಗಲು ಪ್ರಯತ್ನಿಸಿದರು. ಫ್ಲೋರಿಡಾ ಮತ್ತು ಕ್ಯಾಲಿಫೋರ್ನಿಯಾದಲ್ಲಿಯೂ ನೂರಾರು ಪ್ರತಿಭಟನಾಕಾರರು 'ಇದು ಮೈ ಪ್ರೆಸಿಡೆಂಟ್ ಡೇ ಅಲ್ಲ' ಹಾಗೂ 'ಎಲಾನ್ ಮಸ್ಕ್ ಸರಕಾರದಲ್ಲಿರ ಬಾರದು' ಎಂದು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದ್ದಾಗಿ ಮಾಧ್ಯಮಗಳು ವರದಿ ಮಾಡಿವೆ. ಮತ್ತಿತರ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ ದ್ದಾರೆ. ವಾಷಿಂಗ್ಟನ್ ಡಿಸಿ, ಫ್ಲೋರಿಡಾ ಸೇರಿದಂತೆ ಅಮೆರಿಕದ ಕೆಲವು ಪ್ರಮುಖ ನಗರಗಳಲ್ಲಿ ಪ್ರತಿಭಟನೆ ನಡೆಯಿತು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು.
ಆಸ್ತಿ ಅಧಿಕಾರಿಗಳು, ಕೃವಿವಿ, ರಾಯಚೂರು.

ನಂ. ಆಅ/ಕೃವಿವಿವಿರಾ/ಟೆ.ನೋ.-178 /2024-25 ದಿನಾಂಕ:-15-02-2025

ಇ-ಹರಾಜು ಪ್ರಕಟಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿಯಿಂದ ವಿಶ್ವವಿದ್ಯಾಲಯದ ಹೆಚ್ಚುವರಿ ಅನುದಾನಗಳನ್ನು ಸಂಚಿತ ಅವಧಿ ಠೇವಣಿ ಇಡಲು ಶೆಡ್ಯೂಲ್ಡ್ ಪಬ್ಲಿಕ್ ಸೆಕಟರ್ / ಪ್ರೈವೇಟ್ ಸೆಕ್ಟರ್ ಬ್ಯಾಂಕ್‌ಗಳಿಂದ ನಿಶ್ಚಿತಾವಧಿ ಠೇವಣಿ ಬಡ್ಡಿ ದರಗಳ ಇ-ಹರಾಜನ್ನು ಅಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳು ವೆಬ್‌ಸೈಟ್ ವಿಳಾಸ https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ವೇಳಾ ಪಟ್ಟಿ:- (1) ಇ-ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ವ್ಯಕ್ತಪಡಿಸುವಿಕೆಯ ದಿನಾಂಕ:- 22-02-2025 ಸಾಯಂಕಾಲ 5.00 ಗಂಟೆಯವರಿಗೆ (2) ಮೌಲ್ಯಮಾಪನ ಪ್ರಾರಂಭಿಸುವ ದಿನಾಂಕ:- 24-02-2025 ರಂದು ಬೆಳಿಗ್ಗೆ 11.05 ಗಂಟೆಗೆ (3) ಇ-ಹರಾಜು ಪ್ರಕ್ರಿಯೆ ದಿನಾಂಕ:-27-02-2025 ಬೆಳಿಗ್ಗೆ 11.05 ಗಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಹಣಕಾಸು ನಿಯಂತ್ರಣಾಧಿಕಾರಿಗಳು, (ಮೊ. ಸಂಖ್ಯೆ: 9480696303) ಹಣಕಾಸು ನಿಯಂತ್ರಣಾಧಿಕಾರಿಗಳವರ ಕಛೇರಿ, ಆಡಳಿತ ಭವನ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು, ಇವರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ https://kppp.karnataka.gov.in ನಲ್ಲಿ ಇಲ್ಲವೆ ಹೆಲ್ಪಡೆಸ್ಕನಿಂದ(ಸಹಾಯಕ ದೂರವಾಣಿ ಸಂಖ್ಯೆ: 080-25501216 ಮತ್ತು 25501227) ಪಡೆಯಬಹುದು.

ಸಹಿ/- ಆಸ್ತಿ ಅಧಿಕಾರಿಗಳು,
ಕೃ.ವಿ.ವಿ.ವಿ. ರಾಯಚೂರು.

DIP/RCR/743/KSMCA/744/2024-25

ತಾಲ್ಲೂಕ್ ಪಂಚಾಯತ್ ಕಾರ್ಯಾಲಯ, ಶಿರಾ, ತುಮಕೂರು ಜಿಲ್ಲೆ -572137
Email ID:eo.tps.sira2@gmail.com

ಸಂ.ತಾಪಂಶಿ/ಅ.ನಿ.ವಿವ-02/2024-25 **ದಿನಾಂಕ: 17-02-2025**

ಅಲ್ಪಾವಧಿ (ಇ-ಪ್ರೊಕ್ಯೂರ್‌ಮೆಂಟ್) ಟೆಂಡರ್ ಪ್ರಕಟಣೆ

ವಿಷಯ:- 2024-25 ನೇ ಸಾಲಿನ ಶಿರಾ ತಾಲ್ಲೂಕು ಪಂಚಾಯಿತಿಯ ಅನಿರ್ಬಂದಿತ ಯೋಜನೆಯ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿ ಶೇ.5% ರಿಗೆ ಮಿಸಲಿರಿಸಿದ ಅನುದಾನದಲ್ಲಿ ತ್ರಿಚಕ್ರ ವಾಹನ ವಾಹನ ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಕುರಿತು.

ಉಲ್ಲೇಖ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ತುಮಕೂರು ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಜಿಪತು/ ಯೋಶಾ/ ಟಿಪಿಒ /ತಾ.ಪಂ ಅನಿರ್ಬಂಧಿತ/ಶಿರಾ/36/2023-24 ದಿನಾಂಕ:-16-11-2024.

2024-25 ನೇ ಸಾಲಿನಲ್ಲಿ ರಾಜ್ಯ ಹಣಕಾಸು ಆಯೋಗದ ಅನಿರ್ಭಂಧಿತ ಯೋಜನೆಯ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಶೇ.5% ರ ವಿಶೇಷ ಚೇತನರ ಅನುದಾನದಲ್ಲಿ **ತ್ರಿಚಕ್ರ ವಾಹನ ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್** ಮೂಲಕ ಅರ್ಹ ಏಜೆನ್ಸಿಯವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಈ ಕೆಳಕಂಡಂತೆ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ ನಲ್ಲಿ **(https://kppp.karnataka.gov.in)** ಟೆಂಡರ್‌ನ್ನು ಆಹ್ವಾನಿಸಿದೆ. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು)

ಕ್ರ ಸಂ	ಇ-ಪ್ರಕ್ಯೂರ್ ಮೆಂಟ್ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ:	ಟೆಂಡರ್ ತೆರೆಯುವ ಕಡೆ ದಿನಾಂಕ:
01	RDPR/2024-25/ND IND7244/CALL-2	9.40	23,500-00	24-02-2025	25-02-2025

ಸಹಿ/-ಕಾರ್ಯ ನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯತ್, ಶಿರಾ

DIPR/TUM/RO-175/24-25/Oysters

ಕೆನಡಾದಲ್ಲಿ ವಿಮಾನ ಪಲ್ಟಿ: 18 ಜನಕ್ಕೆ ಗಾಯ

ಟೊರಾಂಟೊ: ಕೆನಡಾ ದೇಶದ ಟೊರಾಂಟೊದಲ್ಲಿ ಪಿಯರ್ಸನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ವೇಳೆ ಡೆಲ್ಟಾ ಏರ್ ಲೈನ್ಸ್ ವಿಮಾನ ತಲೆಕೆಳಗಾಗಿದ್ದು, 18 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಮಿನ್ನಿಯಾಪೊಲಿಸ್‌ನಿಂದ ಬರುತ್ತಿದ್ದ 80 ಜನರಿದ್ದ ವಿಮಾನ ರನ್ವೇಯಲ್ಲಿ ಪಲ್ಟಿಯಾಗಿದೆ. ಹಿಮಭರಿತ ನೆಲದ ಮೇಲೆ ಚಕ್ರಗಳು ಜಾರಿದ್ದರಿಂದ ವಿಮಾನ ಮಗುಚಿ ಬಿದ್ದಿದೆ. ಯಾವುದೇ ಸಾವು- ನೋವು ಉಂಟಾಗಿಲ್ಲ ಎಂದು ಚಿತ್ರ ಸಮೇತ ವರದಿಯಾಗಿದೆ.

ಅವಘಡ ಹಿನ್ನೆಲೆ ಟೊರಾಂಟೊ ಪಿಯರ್ಸನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರಲಿದ್ದ ಎಲ್ಲಾ ವಿಮಾನಗಳನ್ನು ಏರ್‌ಲೈನ್ಸ್ ರದ್ದುಗೊಳಿಸಿದೆ. ತುರ್ತು ಕಾರ್ಯಾಚರಣೆ ತಂಡಗಳು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯದಲ್ಲಿ ತೊಡಗಿವೆ.

ವಿಮಾನ ತಲೆಕೆಳಗಾಗಿ ಬಿದ್ದಿದ್ದರಿಂದ ನಾವೆಲ್ಲಾ ಬಾವಲಿ ರೀತಿ ವಿಮಾನದಲ್ಲಿ ತಲೆಕೆಳಗಾಗಿ ನೇತಾಡುತ್ತಿದ್ದೆವು ಎಂದು ಪ್ರಯಾಣಿಕರೊಬ್ಬರು ಸುದ್ದಿಗಾರರ ಬಳಿ ಹೇಳಿಕೊಂಡಿದ್ದಾರೆ.

ಕಳೆದೊಂದು ತಿಂಗಳಲ್ಲಿ ಉತ್ತರ ಅಮೆರಿಕದಲ್ಲಿ ನಡೆದ 4ನೇ ವಿಮಾನ ಅಪಘಾತವಾಗಿದೆ. ಜ.29ರಂದು ರಾಷ್ಟ್ರ ರಾಜಧಾನಿ ವಾಷಿಂಗ್ಟನ್ ಡಿಸಿ ಬಳಿ ವಾಣಿಜ್ಯ ವಿಮಾನ ಜೆಟ್ ಲೈನರ್ ಲ್ಯಾಂಡಿಂಗ್ ಆಗುವ ವೇಳೆ ಸೇನಾ ಹೆಲಿಕಾಪ್ಟರ್ ಡಿಕ್ಕಿ ಹೊಡೆದಿಯ್ಯು. ಬಳಿಕ ವಿಮಾನ ಸಮುದ್ರಕ್ಕೆ ಬಿದ್ದಿದ್ದರಿಂದ 67 ಪ್ರಯಾಣಿಕರು ಸಾವನ್ನಪ್ಪಿದರು. ಜ.31ರಂದು ಫಿಲಡೆಲ್ಫಿಯದಲ್ಲಿ ವೈದ್ಯಕೀಯ ಸಾರಿಗೆ ವಿಮಾನ ಅಪಘಾತಕ್ಕೀಡಾಗಿ 6 ಜನರು ಸಾವನ್ನಪ್ಪಿದ್ದರು.

ಕ್ಯಾನ್ಸರ್ ತಡೆಗೆ ಲಸಿಕೆ 5-6 ತಿಂಗಳಲ್ಲಿ ಸಿದ್ಧ: ಸಚಿವ ಜಾಧವ್

ಛತ್ರಪತಿ ಸಂಭಾಜಿನಗರ: ಮಹಿಳೆಯರಲ್ಲಿ ಕ್ಯಾನ್ಸರ್ ರೋಗ ಬರುವುದನ್ನು ತಡೆಯುವಂತಹ ಲಸಿಕೆ ಮುಂದಿನ 5-6 ತಿಂಗಳಲ್ಲಿ ಭಾರತದಲ್ಲಿ ಲಭ್ಯವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಪ್ರತಾಪ್‌ರಾವ್ ಜಾಧವ್ ಹೇಳಿದ್ದಾರೆ. ಇಲ್ಲಿ ಸುದ್ದಿಗೋಷ್ಠಿ

ನಡೆಸಿದ ಸಚಿವರು, ಸದ್ಯ ಕ್ಯಾನರ್ ನಿರೋಧಕ ಲಸಿಕೆಯ ಸಂಶೋಧನೆ-ಅಭಿವೃದ್ಧಿ ಪೂರ್ಣಗೊಂಡಿದ್ದು, ಪ್ರಾಯೋಗಿಕ ಬಳಕೆ ನಡೆಯುತ್ತಿದೆ. ಈಗಿನ ಕ್ಲಿನಿಕಲ್ ಟ್ರಯಲ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಅಂದರೆ 5-6 ತಿಂಗಳಲ್ಲಿ ಲಸಿಕೆ ನೀಡುವುದನ್ನು ಆರಂಭಿಸಲಾಗುವುದು. ಕ್ಯಾನ್ಸರ್ ಬಾರದಂತೆ ತಡೆಯುವ ಈ ಲಸಿಕೆಯನ್ನು ಮೊದಲಿಗೆ 9 ವರ್ಷದಿಂದ 16 ವರ್ಷದ ಬಾಲಕಿಯರಿಗೆ ನೀಡಲಾಗುವುದು ಎಂದು ಹೇಳಿದರು.

ಈ ಲಸಿಕೆ ಬಾಯಿ, ಅನ್ನನಾಳ ಮತ್ತು ಗರ್ಭಾಶಯ, ಗರ್ಭಕಂಠದಲ್ಲಿ ಕ್ಯಾನ್ಸರ್ ಬಾರದಂತೆ ತಡೆಯುತ್ತದೆ ಎಂದು ಪ್ರಶ್ನೆಯೊಂದಕ್ಕೆ ಸಚಿವರು ಉತ್ತರಿಸಿದರು. ದೇಶದಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಆರಂಭಿಕ ಹಂತದಲ್ಲೇ ಕ್ಯಾನ್ಸರ್ ರೋಗ ಪತ್ತೆ ಹಚ್ಚಿದರೆ ಚಿಕಿತ್ಸೆ ಸರಾಗ. ಆ ಕಾರಣಕ್ಕಾಗಿ 30 ವರ್ಷ ದಾಟಿದ ಮಹಿಳೆಯರಿಗೆ ಉಚಿತ ತಪಾಸಣೆಗಾಗಿ ಸರಕಾರಿ ಆಸ್ಪತ್ರೆಗಳು, ಡೇಕೇರ್ ಸೆಂಟರ್‌ಗಳಲ್ಲಿ 'ಅರ್ಲಿ ಡೆಟೆಕ್ಷನ್ ಘಟಕ'ಗಳನ್ನು ಆರಂಭಿಸಲಾಗುವುದು ಎಂದು ವಿವರಿಸಿದರು.

ಎಸಿ, ಟಿವಿ-ಸ್ಪೀಕರ್, ಕುರ್ಚಿ ಕದ್ದ ಎಎಪಿ ಮಾಜಿ ಡಿಸಿಎಂ

ದೆಹಲಿ: ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಹೀನಾಯ ಸೋಲು ಕಂಡ ಬಳಿಕ ಎಎಪಿ ನಾಯಕ, ಮಾಜಿ ಡಿಸಿಎಂ ಮನೀಶ್ ಸಿಸೋಡಿಯ ತಮ್ಮ ಕ್ಷೇತ್ರದ ಕಚೇರಿಯಲ್ಲಿದ್ದ ಎಸಿ, ಟಿವಿ, ಸ್ಪೀಕರ್, ಕುರ್ಚಿ, ಟೇಬಲ್‌ಗಳನ್ನು ಕದ್ದೊಯ್ದಿದ್ದಾರೆ ಎಂದು ಬಿಜೆಪಿ ಶಾಸಕ

ರವೀಂದರ್ ಸಿಂಗ್ ನೇಗಿ ಮಂಗಳವಾರ ಗಂಭೀರ ಆರೋಪ ಮಾಡಿದ್ದಾರೆ.

ಪತ್ಪರ್‌ಗಂಜ್ ಕ್ಷೇತ್ರದ ನೂತನ ಶಾಸಕ ಬಿಜೆಪಿಯ ರವೀಂದರ್ ಸಿಂಗ್ ನೇಗಿ ಸೋಮವಾರ ತಮ್ಮ ಕ್ಷೇತ್ರದ ಶಾಸಕರ ಕಚೇರಿಗೆ ತೆರಳಿದಾಗ ಕಚೇರಿಯಲ್ಲಿ ಪೀಠೋಪಕರಣಗಳಿರಲೇ ಇಲ್ಲ. ಎಸಿ, ಟಿವಿ, ಸ್ಪೀಕರ್, ಕುರ್ಚಿ, ಟೇಬಲ್ ನಾಪತ್ತೆಯಾಗಿದ್ದವು. ಅವೆಲ್ಲವನ್ನೂ ಮನೀಶ್ ಸಿಸೋಡಿಯಾ ಹೊತ್ತೊಯ್ದಿದ್ದಾರೆ ಎಂದು ಆರೋಪಿಸಿದ್ದಾರೆ. 'ಮಾಜಿ ಶಾಸಕ ಮನೀಶ್ ಸಿಸೋಡಿಯ ಮತ್ತು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪ್ರದೇಶದ ಶಾಸಕರ ಕಚೇರಿಯಿಂದ ಎಲ್ಲಾ ಸರಕಾರಿ ವಸ್ತುಗಳನ್ನು ಕದ್ದಿದ್ದಾರೆ ಎಂದು ನೇಗಿ ಆರೋಪಿಸಿದ್ದಾರೆ. ಕಚೇರಿಯಿಂದ ಕಾಣೆಯಾಗಿರುವ ವಸ್ತುಗಳು ಸರಕಾರಕ್ಕೆ ಸೇರಿದ್ದಾಗಿವೆ. ಹಾಗಾಗಿ ಅವನ್ನು ಖಂಡಿತಾ ವಾಪಸ್ ಪಡೆಯುತ್ತೇವೆ. ಸರಕಾರ ಅಧಿಕಾರಕ್ಕೆ ಬಂದ ಬಳಿಕ ಸಿಸೋಡಿಯ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಅವರು ಹೊತ್ತೊಯ್ದಿರುವ ಎಲ್ಲ ವಸ್ತುಗಳಿಗೂ ಸಿಸೊಡಿಯರಿಂದಲೇ ದಂಡ ಕಟ್ಟಿಸುತ್ತೇವೆ. 1 ರು. ಕೂಡಾ ಬಿಡುವುದಿಲ್ಲ ಎಂದು ನೇಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜ-ಕಾ ಹೊಸ ಕಾಯಿದೆ ಜಾರಿ ಅಮಿತ್ ಶಾ ನೇತೃತ್ವದಲ್ಲಿ ಸಭೆ

ದೆಹಲಿ: ಸದ್ಯ ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು-ಕಾಶ್ಮೀರದಲ್ಲಿ ನೂತನ ಅಪರಾಧ ಕಾಯಿದೆಗಳನ್ನು ಜಾರಿಗೊಳಿಸುವ ಸಂಬಂಧ ದೆಹಲಿಯಲ್ಲಿ ಮಂಗಳವಾರ ಸಭೆ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಈ ಕುರಿತು

ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು.

ನಾರ್ಥ್ ಬ್ಲಾಕ್‌ನಲ್ಲಿ ನಡೆದ ಸಭೆಯಲ್ಲಿ ಜಮ್ಮು- ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ, ಕೇಂದ್ರ ಗೃಹ ಕಾರ್ಯದರ್ಶಿ, ಜಮ್ಮು-ಕಾಶ್ಮೀರ ಮುಖ್ಯ ಕಾರ‍್ಯದರ್ಶಿ, ಡಿಜಿಪಿ, ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯುರೊ ಮಹಾ ನಿರ್ದೇಶಕ ಹಾಗೂ ಕೇಂದ್ರ ಮತ್ತು ಜಮ್ಮು-ಕಾಶ್ಮೀರದ ಗೃಹ ಇಲಾಖೆ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು. ಜಮ್ಮು-ಕಾಶ್ಮೀರದ ಪೊಲೀಸ್, ನ್ಯಾಯಾಂಗ, ಫೋರೆನ್ಸಿಕ್ ಮತ್ತು ಪ್ರಾಸಿಕ್ಯೂಷನ್ ವಿಭಾಗಗಳು, ಸೆರೆಮನೆ ಇಲಾಖೆ ಗಳಿಗೆ ಸಂಬಂಧಿಸಿದ ಕಾಯಿದೆಗಳಾದ ಭಾರತೀಯ ನ್ಯಾಯ ಸಂಹಿತಾ(ಬಿಎನ್‌ಎಸ್)-2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ(ಬಿಎನ್‌ಎಸ್‌ಎಸ್)-2023, ಭಾರತೀಯ ಸಾಕ್ಷ್ಯ ಅಧಿ ನಿಯಮ (ಬಿಎಸ್‌ಎ)-2023 ಜಾರಿ ಕುರಿತು ಸಭೆ ಯಲ್ಲಿ ಚರ್ಚಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಲಾ ಅಭಿವೃದ್ಧಿಗೆ ಆದ್ಯತೆ ನೀಡಿ

ಮಹಾತ್ಮ ಗಾಂಧಿ ನರೇಗಾ ಯೋಜನೆ ಪ್ರಗತಿ ಪರಿಶೀಲನಾ ಸಭೆ | ಜಿಪಂ ಸಿಇಒ ರಾಹುಲ್ ಶಿಂಧೆ

ಬೆಳಗಾವಿ: ಮನರೇಗಾ ಯೋಜನೆಯಡಿ 2024-25 ನೇ ವರ್ಷಕ್ಕೆ ಜಿಲ್ಲಾ ಆದ್ಯತಾ ಕಾಮಗಾರಿಗಳಾದ ಶಾಲಾ ಶೌಚಾಲಯ, ಆಟದ ಮೈದಾನ, ಅಡುಗೆ ಕೋಣೆ, ಶಾಲಾ ಆವರಣ ಗೋಡೆ, ಎಸ್. ಡಬ್ಲ್ಯೂಎಮ್ ಘಟಕ, ಗ್ರಾಮ ಪಂಚಾಯಿತ ಕಟ್ಟಡ ಇನ್ನು ಚಾಲ್ತಿಯಲ್ಲಿರುವುದು ವಿಷಾದನಿಯವಾಗಿದೆ. ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಇದೇ ತಿಂಗಳ ಅಂತ್ಯದಲ್ಲಿ ಪೂರ್ಣಗೊಳಿಸಲು ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ ಸೂಚನೆ ನೀಡಿದರು.

> **ಸನ್ 2022-23 ನೇ ಸಾಲಿಗೆ ಶೇ 75.19, 2023-24 ಶೇ 53.20 ಹಾಗೂ 2024-25 ನೇ ಸಾಲಿನಡಿ ಕೇವಲ ಶೇ 27.35 ರಷ್ಟು ಮಾತ್ರ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಗಳು ಕಾಮಗಾರಿಗಳು ಪೂರ್ಣಗೊಳಿಸದೇ ಹಾಗೇ ಉಳಿದುಕೊಂಡಿವೆ ಕಡ್ಡಾಯವಾಗಿ ಮಾರ್ಚ ಅಂತ್ಯದೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಾಂತ್ರಿಕ ಸಂಯೋಜಕರು ಹಾಗೂ ತಾಂತ್ರಿಕ ಸಹಾಯಕರಿಗೆ ನಿರ್ದೇಶನ ನೀಡಿದರು.**
>
> **ರಾಹುಲ್ ಶಿಂಧೆ,** ಜಿಲ್ಲಾ ಪಂಚಾಯಿತಿ ಸಿಇಒ

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ತಾಲ್ಲೂಕು ಪಂಚಾಯತ್ ಅಧಿಕಾರಿಗಳೊಂದಿಗೆ ಹಾಗೂ ಸಿಬ್ಬಂದಿಗಳೊಂದಿಗೆ ಜರುಗಿದ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾನವ ದಿನ ಸೃಜನೆಯಲ್ಲಿ ಸನ್ 2023-24 ನೇ ಸಾಲಿಗೆ ಹೋಲಿಕೆ ಮಾಡಿದರೆ ಪ್ರಸಕ್ತ ಸಾಲಿಗೆ 23.26 ಲಕ್ಷ ಮಾನವ ದಿನಗಳು ಕುಂಠಿತವಾಗಿದ್ದು, ಜನರಿಗೆ ಮನರೇಗಾ ಯೋಜನೆಯಡಿ ಕಡ್ಡಾಯವಾಗಿ ಕೆಲಸ ನೀಡಿ ಮಾರ್ಚ-2025ರ ಅಂತ್ಯದೊಳಗಾಗಿ ನೀಡಿದ ಗುರಿಗನುಗುಣವಾಗಿ ಪ್ರಗತಿ ಸಾಧಿಸಬೇಕೆಂದು ಸೂಚಿಸಿದರು. ಸನ್ 204-25 ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ 13 ಎಸ್.ಎಚ್.ಜಿ ಶೆಡ್ ಗಳನ್ನು ಕೂಡಲೇ ಪೂರ್ಣಗೊಳಿಸುವುದು. 2025-26ನೇ ಸಾಲಿಗೆ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಂಡು ಪೂರ್ಣಗೊಳಿಸಲು ಸಭೆಗೆ ತಿಳಿಸಿದರು. ಸಾಮಾಜಿಕ ಪರಿಶೋಧನೆಯ 2550 ಪ್ರಕರಣಗಳು ಬಾಕಿ ಇದ್ದು, ನಿನ್ನೆ ನಡೆದ ಅಭಿಯಾನದಡಿ ಒಂದೇ ದಿನದಲ್ಲಿ 473 ಎ.ಟಿ.ಆರ್. ಇತ್ಯರ್ಥಗೊಳಿಸುವುದು ಪ್ರಶಂಸನೀಯ ಅದರಂತೆ ಬಾಕಿ ಇರುವ ಪ್ರಕರಣಗಳನ್ನು ಅಡಾಕ್ ಸಮಿತಿ ಸಭೆಗಳನ್ನು ಮಾಡುವುದರ ಮೂಲಕ ಮುಕ್ತಾಯಗೊಳಿಸಲು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ, ಯೋಜನಾ ನಿರ್ದೇಶಕ (ಡಿ.ಆರ್.ಡಿ.ಎ) ರವಿ ಎನ್ ಬಂಗಾರೆಪ್ಪನವರ, ಜಿಲ್ಲಾ ಪಂಚಾಯತ ಎ.ಡಿ.ಪಿ.ಸಿ ಬಸವರಾಜ್ ಎನ್. ಜಿಲ್ಲಾ ಐ.ಇ.ಸಿ ಸಂಯೋಜಕರ ಪ್ರಮೋದ ಗೋಡೆಕರ, ಡಿ.ಎಮ್.ಐ.ಎಸ್ ಮೌನೇಶ ಚೌಡಕಿ ಅಕೌಂಟ್ಸ್ ಮ್ಯಾನೇಜರ್ ಮಂಜುನಾಥ ಮಳಗಲಿ, ಜಿಲ್ಲೆಯ ಎಲ್ಲ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಗ್ರಾಮೀಣ ಉದ್ಯೋಗ, ತಾಂತ್ರಿಕ ಸಂಯೋಜಕರು, ಟಿ.ಎಮ್.ಐ.ಎಸ್, ತಾಂತ್ರಿಕ ಸಹಾಯಕರು ಹಾಗೂ ಜಿ.ಪಂ. ಸಿಬ್ಬಂದಿ ಉಪಸ್ಥಿತರಿದ್ದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಪಂ ಸಿಇಒ ರಾಹುಲ್ ಶಿಂಧೆ ಅವರು ಮಾತನಾಡಿದರು.

ರಾಷ್ಟ್ರಮಟ್ಟದ ಸಮ್ಮೇಳನ ಫೆ.22ರಂದು: ತೆಗ್ಗಿಹಳ್ಳಿ

ಪತ್ರಿಕಾಗೋಷ್ಠಿಯಲ್ಲಿ ಬೆಂಬಳಗಿ ಮಹಾವಿದ್ಯಾ ಲಯದ ಪ್ರಾಚಾರ್ಯ ಡಾ. ಪಿ.ಬಿ. ತೆಗ್ಗಿಹಳ್ಳಿ ಮಾತನಾಡಿದರು.

ರಾಮದುರ್ಗ: ಪಟ್ಟಣದ ಸಿ.ಎಸ್.ಬೆಂಬಗಳಗಿ ಆರ್ಟ್ಸ್, ಎಂ.ಆರ್. ಪಾಲರೇಶ ವಿಜ್ಞಾನ ಮತ್ತು ಜಿ.ಎಲ್ ರಾಠಿ ವಾಣಿಜ್ಯ ಕಾಲೇಜಿನ ಇಂಗ್ಲೀಷ ವಿಭಾಗ ಹಾಗೂ ಐಕ್ಯೂಎಸಿ ಸಂಯುಕ್ತ ಆಶ್ರಯದಲ್ಲಿ ಭಾರತೀಯ ಇಂಗ್ಲಿಷ ಕಾದಂಬರಿಗಳಲ್ಲಿ ಸಮಕಾಲಿನ ಉದಯೋನ್ಮುಖ ಪ್ರವೃತ್ತಿಗಳು ವಿಷಯ ಕುರಿತು ಫೆ.22 ರಂದು ಒಂದು ದಿನದ ರಾಷ್ಟ್ರ ಮಟ್ಟದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ಡಾ.ಪಿ.ಬಿ.ತೆಗ್ಗಿಹಳ್ಳಿ ಹೇಳಿದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ-22 ರಂದು ಮುಂಜಾನೆ 10.30 ಘಂಟೆಗೆ ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷ ಟಿ. ದಾಮೋದರ ಅವರ ಅಧ್ಯಕ್ಷತೆಯಲ್ಲಿ ನಡೆಯುವ ರಾಷ್ಟ್ರ ಮಟ್ಟದ ಸಮ್ಮೇಳನವನ್ನು ಧಾರವಾಡದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಪಿ.ಎಚ್. ಹೊಸಮನಿ ಉದ್ಘಾಟಿಸುವರು. ಮೈಸೂರ ವಿಶ್ವವಿದ್ಯಾಲ ಯದ ಇಂಗ್ಲೀಷ ವಿಭಾಗದ ಪ್ರೊ. ವಿಜಯ ಶೇಷಾದ್ರಿ, ವಿಷಯ ಮಂಡಿಸಲಿದ್ದಾರೆ. ದೇವರಾಯ ವಿಶ್ವವಿದ್ಯಾಲಯದ ಇಂಗ್ಲೀಷ ವಿಭಾಗದ ಪ್ರಾಧ್ಯಾಪಕ ಪ್ರೊ. ಎನ್. ಶಾಂತಾ ನಾಯಕ ವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಇಲಕಲ್ ಎಸ್.ವ್ಹಿ.ಎನ್ ಕಾಲೇಜಿನ ಇಂಗ್ಲೀಷ ವಿಭಾಗದ ಪ್ರಾಧ್ಯಾಪಕ ಪ್ರೊ.ಎಸ್.ಬಿ. ಬಿರಾದಾರ ಭಾಗವಹಿಸಲಿದ್ದಾರೆ. ಸಂಘಟಿಕರಾದ ಎಸ್.ಕೆ. ರಂಗಪ್ಪಗೋಳ, ಕನ್ನಡ ಪ್ರಾಧ್ಯಾಪಕ ಡಾ.ಎಂ.ಎನ್. ಸಿದ್ದಗೀರಿ ಇತರರಿದ್ದರು.

ಸಮಾಚಾರ ಸಣ್ಣದಲ್ಲ

ನಕ್ಷಾ ಸರ್ವೇ ಕಾರ್ಯಕ್ಕೆ ಚಾಲನೆ

ಗೋಕಾಕ: ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ನಗರಸಭೆ ಗೋಕಾಕ ಇವುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಕೇಂದ್ರ ಸರಕಾರದ ಯೋಜನೆ ''ನಕ್ಷಾ'' ಸರ್ವೇ ಕಾರ್ಯ ಚಾಲನೆ ಸಮಾರಂಭವನ್ನು ಮಂಗಳವಾರದಂದು ನಗರಸಭೆ ಸಭಾ ಭವನದಲ್ಲಿ ಶಾಸಕ ರಮೇಶ ಜಾರಕಿಹೊಳಿ ಉದ್ಘಾಟಿಸಿದರು.
ಈ ಸಂದರ್ಭದಲ್ಲಿ ರಾಜ್ಯ ಸಭಾ ಸದಸ್ಯ ಈರಣ್ಣ ಕಡಾಡಿ, ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ಉಪಾಧ್ಯಕ್ಷೆ ಬಿಬಿಬತೂಲ ಜಮಾದಾರ, ಪ್ರಾದೇಶಿಕ ಭೂ ದಾಖಲೆಗಳ ಬೆಳಗಾವಿ ವಿಭಾಗದ ಜಂಟಿ ನಿರ್ದೇಶಕಿ ನಜ್ಮಾ ಪೀರಜಾದೆ, ತಹಶೀಲದಾರ ಡಾ.ಮೋಹನ ಭಸ್ಮೆ, ಡಿವೈಎಸ್‌ಪಿ ಡಿ ಎಚ್ ಮುಲ್ಲಾ, ಪೌರಾಯುಕ್ತ ರಮೇಶ ಜಾಧವ, ಭೂ ದಾಖಲೆಗಳ ಸಹಾಯಕ ನಿರ್ದೇಶಕ ಆರ್ ಆರ್ ಪಾಟೀಲ ಇದ್ದರು.

ಇಂದು ಆಂಜನೇಯ ಶಾಲೆಯ ವಾರ್ಷಿಕೋತ್ಸವ

ಮೂಡಲಗಿ: ತಾಲ್ಲೂಕಿನ ಅರಭಾವಿಯ ಆಂಜನೇಯ ಗ್ರಾಮೀಣ ಶಿಕ್ಷಣ ಸಂಸ್ಥೆಯ ಶ್ರೀಆಂಜನೇಯ ಅನುದಾನಿತ ಪೂರ್ವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ 33 ನೇ ವರ್ಷದ ವಾರ್ಷಿಕೋತ್ಸವ ಹಾಗೂ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವು ಫೆ. 19 ರಂದು ಸಂಜೆ 4ಕ್ಕೆ ಶಾಲೆಯ ಆವರಣದಲ್ಲಿ ಜರುಗಲಿದೆ. ಸಮಾರಂಭದ ಸಾನ್ನಿಧ್ಯವನ್ನು ಜಗದ್ಗುರು ದುರದುಂಡೀಶ್ವರ ಸಿದ್ಧ ಸಂಸ್ಥಾನ ಮಠದ ಪೀಠಾಧಿಪತಿ ಗುರುಬಸವಲಿಂಗ ಸ್ವಾಮೀಜಿ ಮತ್ತು ಶಿವಯ್ಯ ಸ್ವಾಮಿಗಳು ವಹಿಸುವರು. ಉದ್ಘಾಟನೆಯನ್ನು ಶಾಸಕ ಬಾಲಚಂದ್ರ ಜಾರಕಿಹೊಳಿ ನೆರವೇರಿಸುವರು. ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಶಂಕರಣ್ಣಾ ಬಿಲಕುಂದಿ ವಹಿಸುವರು.
ಶಾಸಕ ರಮೇಶ ಜಾರಕಿಹೊಳಿ, ಸಚಿವ ಸತೀಶ ಜಾರಕಿಹೊಳಿ, ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ, ಸಂಸದೆ ಪ್ರೀಯಾಂಕ ಜಾರಕಿಹೊಳಿ ಭಾಗಹಿಸುವರು. ಅತಿಥಿ ಉಪನ್ಯಾಸಕರಾಗಿ ಮೂಡಲಗಿಯ ಸಾಹಿತಿ, ಪತ್ರಕರ್ತ ಬಾಲಶೇಖರ ಬಂದಿ ಭಾಗವಹಿಸುವರು ಎಂದು ಮುಖ್ಯ ಶಿಕ್ಷಕ ಎಂ.ಬಿ. ಜೈನ ತಿಳಿಸಿದ್ದಾರೆ.

ಇಂದು ವಿದ್ಯುತ್ ಪೂರೈಕೆ ವ್ಯತ್ಯಯ

ಹುಕ್ಕೇರಿ: ತಾಲೂಕಿನ ಹತ್ತರಗಿ ವಿದ್ಯುತ್ ಉಪಕೇಂದ್ರದಲ್ಲಿ ನಿರ್ವಹಣೆ ಕಾರ್ಯದ ನಿಮಿತ್ತ ಫೆ.19.ರಂದು ಬೆಳಗ್ಗೆ 9ರಿಂದ ಸಂಜೆ 6ವರೆಗೆ ವಿದ್ಯುತ್ ಪೂರೈಕೆ ಸ್ಥಗೀತಗೊಳ್ಳಲಿದೆ. ಹತ್ತರಗಿ ವಿದ್ಯುತ್ ಉಪಕೇಂದ್ರದಗಳ ಮೇಲೆ ಬರುವ ಗ್ರಾಮಗಳಾದ ಕುರಣಿ, ಕುರಣಿವಾಡಿ, ಚಿಕ್ಕಾಲಗುಡ್ಡ, ಹಂಚಿನಾಳ, ಉ, ಖಾನಾಪೂರ, ಜಿನರಾಳ, ಯಮಕಮನರಡಿ, ಹತ್ತರಗಿ, ಆನಂದಪೂರ, ಇಂದಿರಾ ನಗರ, ಹಳೇ ಗುಡಗನಟ್ಟಿ, ಸುತ್ತುಮುತ್ತ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆ ನಿಲುಗಡೆಯಾಗಲಿದೆ. ಎಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವಿಗೋಷ್ಠಿಗೆ ಶಿಕ್ಷಕ ನಾಗೇಶ್ ನಾಯಕ ಆಯ್ಕೆ

ಬೆಳಗಾವಿ: ಜಿಲ್ಲೆಯ ಶಿಕ್ಷಕ, ಕವಿ, ವಿಮರ್ಶಕರಾದ ನಾಗೇಶ್ ಜೆ. ನಾಯಕ ಅವರು ಮುಧೋಳದಲ್ಲಿ ನಡೆಯಲಿರುವ ರನ್ನ ವೈಭವದ ಕವಿಗೋಷ್ಠಿಗೆ ಬೆಳಗಾವಿ ಜಿಲ್ಲೆಯಿಂದ ಆಯ್ಕೆಯಾಗಿದ್ದಾರೆ. ಫೆಬ್ರುವರಿ 24 ರಂದು, ಉತ್ಸವದ ಮೂರನೇ ದಿನ ಬೆಳಿಗ್ಗೆ ಅಜಿತ ಸೇನಾ ಚಾರ್ಯರ ವೇದಿಕೆಯಲ್ಲಿ ಬಿ.ಆರ್. ಪೋಲಿಸ್ ಪಾಟೀಲ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕವಿಗೋಷ್ಠಿಯಲ್ಲಿ ಕವಿತೆ ವಾಚಿಸಲಿದ್ದಾರೆ.
ನಾಗೇಶ್ ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿ ಮಾಡುತ್ತಿದ್ದು 26 ಕ್ಕೂ ಹೆಚ್ಚು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಈಗಾಗಲೇ ಮೈಸೂರು ದಸರಾ ಉತ್ಸವ, ಆಳ್ವಾಸ್ ನುಡಿಸಿರಿ, ಹಂಪಿ ಉತ್ಸವ, ಕಿತ್ತೂರು ಉತ್ಸವ, ಇಟಗಿ ಉತ್ಸವ, ಬೀದರನ ಜನಪರ ಉತ್ಸವ, ದೂರ ದರ್ಶನ ಚಂದನ ವಾಹಿನಿಗಳಲ್ಲಿ ಕಾವ್ಯ ವಾಚನ ಮಾಡಿದ್ದಾರೆ. ಕಾಡುವ ಕವಿತೆ ಅಂಕಣದ ಮೂಲಕ ನಾಡಿನ ಕವಿಗಳ ಕವಿತೆಯ ಒಳನೋಟವನ್ನು ಕಟ್ಟಿಕೊಡುತ್ತಿದ್ದಾರೆ. ಸಹೃದಯ ಸಾಹಿತ್ಯ ಪ್ರತಿಷ್ಠಾನದ ಮೂಲಕ ಕಾವ್ಯ ಪ್ರಶಸ್ತಿಯನ್ನು ಕೊಡಮಾಡುತ್ತಿದ್ದಾರೆ. ಸಾಹಿತ್ಯ ಲೋಕದ ಸಾಕಷ್ಟು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿರುವ ಇವರು ಐತಿಹಾಸಿಕ ರನ್ನ ವೈಭವದಲ್ಲಿ ಕವಿತೆ ವಾಚನ ಮಾಡುತ್ತಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನಕಲಿ ಜಾತಿ ಪ್ರಮಾಣ ಪತ್ರ: ಕ್ರಮಕ್ಕೆ ಮನವಿ

ಅಥಣಿ: ನಕಲಿ ಜಾತಿ ಪ್ರಮಾಣಪತ್ರ ಪಡೆದು ದುರುಪಯೋಗ ಪಡಿಸಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ದಲಿತ ಕ್ರಾಂತಿ ಸೇನೆ ಕಾರ್ಯಕರ್ತರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ತಾಲೂಕಿನ ಐಗಳಿ ಗ್ರಾಮದ ನಿವೃತ್ತ ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀಮತಿ ಹಂಪವ್ವ ರಾಯಪ್ಪ ಶಿಂಗಿ ಅವರು ಲಿಂಗಾಯತ ಜಾತಿಗೆ ಸೇರಿದ ವಿರೇಶಗೌಡ ಕುಮಾರಗೌಡ ಎಂಬುವವರನ್ನು ವಿವಾಹವಾಗಿದ್ದು, ಅವರ ಪುತ್ರಿಯರಾದ ಸವಿತಾ ಶಿಂಗಿ ಮತ್ತು ಸರೀತಾ ಶಿಂಗಿ ಎಂಬುವವರು ಎಸ್‌ಸಿ ಜಾತಿ ಪ್ರಮಾಣ ಪತ್ರ ಪಡೆದು ನೌಕರಿ ಗಿಟ್ಟಿಸಿಕೊಂಡಿದ್ದಾರೆ.

ಅವರ ಪುತ್ರ ವಿನೋದ ಶಿಂಗಿ ಎಂಬುವವರು ದಲಿತ ಕೋಟಾದಲ್ಲಿ ಎಲ್‌ಎಲ್‌ಬಿವರೆಗೂ ಶಿಕ್ಷಣ ಪಡೆದು, ಸರಕಾರಿ ಶಿಷ್ಯ ವೇತನ ಪಡೆದಿದ್ದಾರೆ. ಅಲ್ಲದೆ, ತಮ್ಮ ಕುಟುಂಬದ ಆದಾಯ ಪ್ರಮಾಣಪತ್ರವನ್ನು ಕೇವಲ 10 ಸಾವಿರ ರು. ಇದೆ ಎಂದು ಸುಳ್ಳು ಪ್ರಮಾಣ ಪತ್ರ ಪಡೆದಿದ್ದಾರೆ. ತಂದೆ-ತಾಯಿ ಬೇರೆ ಬೇರೆ ಜಾತಿಯವರಾಗಿದ್ದರೆ ಕಾನೂನು ಪ್ರಕಾರ ತಂದೆಯ ಜಾತಿಯೇ ಮಕ್ಕಳಿಗೂ ಅನ್ವಯವಾಗುತ್ತದೆ. ಆದರೆ ಈ ಪ್ರಕರಣದಲ್ಲಿ ತಾಯಿಯ ಜಾತಿಯ ಪ್ರಮಾಣಪತ್ರವನ್ನು ಮಕ್ಕಳು ಪಡೆಯುವ ಮೂಲಕ ನಿಜವಾದ ಎಸ್‌ಸಿ ಸಮುದಾಯಕ್ಕೆ ವಂಚನೆ ಮಾಡಿದ್ದಾರೆ. ಆದ್ದರಿಂದ ಕೂಡಲೇ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕ್ರಾಂತಿ ಸೇನೆ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ನಕಲಿ ಜಾತಿ ಪ್ರಮಾಣಪತ್ರ ಪಡೆದು ದುರುಪಯೋಗ ಪಡಿಸಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ದಲಿತ ಕ್ರಾಂತಿ ಸೇನೆ ಕಾರ್ಯಕರ್ತರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಕಿಮೋಥೆರಪಿ ಕೇಂದ್ರ ಆರಂಭಕ್ಕೆ ಸಿದ್ಧತೆ

ಬೆಳಗಾವಿ: ಪುನೀತ್ ರಾಜಕುಮಾರ ಹೃದಯ ಜ್ಯೋತಿ ಯೋಜನೆಯನ್ನು ಎಲ್ಲಾ ತಾಲೂಕಿನಲ್ಲಿ ವಿಸ್ತರಿಸಲು ಚಿಂತನೆ ಮಾಡಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಂಗಳವಾರ ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ಮಾಡಲಾಗಿದೆ. ಡಯಾಲಿಸಿಸ್ ಕೇಂದ್ರವನ್ನು ಬದಲಾವಣೆ ಮಾಡಲಾಗಿದೆ. ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಟೆಕ್ ಕೇರ್ ಕಿಮೋಥರೆಪಿ ಕೇಂದ್ರಗಳನ್ನು ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಆದಷ್ಟು ಶೀಘ್ರದಲ್ಲೇ ಮುಖ್ಯಮಂತ್ರಿ ಲೋಕಾರ್ಪಣೆ ಮಾಡಲಿದ್ದಾರೆ ಎಂದರು.

ಸರಕಾರದಿಂದಲೇ ಮುಂದಿನ ತಿಂಗಳಿನಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ಆರೋಗ್ಯ ಮೇಳ ಆಯೋಜಿಸಲು ದಿನಾಂಕ ನಿಗದಿ ಮಾಡುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಬ್ರೂಣ ಹತ್ಯೆ ಹಾಗೂ ಗರ್ಭಿಣಿ ಹಾಗೂ ಬಾಣಂತಿಯರ ಸಾವಿನ ಪ್ರಕರಣವನ್ನು ತಗ್ಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

ಬಾಣಂತಿಯರ ಸಾವಿನ ಬಗ್ಗೆ ಟಾಸ್ಕ್ ಪೋರ್ಸ್ ಮಾಡಿ ಅದನ್ನು ತಡೆಯುವಲ್ಲಿ ಯಶಸ್ವಿಯಾಗುತ್ತಿದ್ದೇ ಎಂದರು.

ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರು ಗುಣಮಟ್ಟದ ಚಿಕಿತ್ಸೆ ನೀಡುತ್ತಾರೆ. ಒಂದೊಂದು ಬಾರಿ ಕೆಲವೊಂದ ಘಟನೆ ನಡೆದಾಗ ಅವರನ್ನು ಕೆಟ್ಟ ದೃಷ್ಟಿಯಿಂದ ನೀಡಿದರೆ ವೈದ್ಯರು ಮಾನಸಿಕವಾಗಿ ಕುಗ್ಗುತ್ತಾರೆ. ಆದ್ದರಿಂದ ಅವರಿಗೆ ಆತ್ಮಸ್ಥೈರ್ಯ ತುಂಬುವ ಅಗತ್ಯ ಇದೆ ಎಂದರು.

ರಾಜ್ಯದಲ್ಲಿ ವೈದ್ಯರ ನೇಮಕ ಮಾಡುವ ಕುರಿತು 220ಜನ ನೇಕಮ ಮಾಡಿಕೊಳ್ಳಬೇಕೆಂದು ಸಿಎಂ ಅನುಮತಿ ನೀಡಿದ್ದಾರೆ.

1,300 ಪಿಎಚ್ ಸಿ, ಎಎನ್ ಎಂಗಳನ್ನು ಭರ್ತಿ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ. ಬೇರೆ ಬೇರೆ ಕಡೆಗಳಲ್ಲಿ ಗುತ್ತಿಗೆಯಾದರ ಮೇಲೆ ನೇಮಕ ಮಾಡಿಕೊಡಳ್ಳಲು ಸೂಚನೆ ನೀಡಲಾಗಿದೆ ಎಂದರು.

ಫೆ.19ರಂದು ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಅವರಿಗೆ ಆಮಂತ್ರಣ ನೀಡುತ್ತಿರುವ ಗಣ್ಯರು.

ಗೋಕಾಕ ತಾಲೂಕಿನ ಘಟಪ್ರಭಾ ಪುರಸಭೆಯ ನೂತನ ಕಸವಿಲೇವಾರಿ ವಾಹನಕ್ಕೆ ಶಾಸಕ ರಮೇಶ ಜಾರಕಿಹೊಳಿ ಅವರು ಮಂಗಳವಾರದಂದು ನಗರದ ಶಾಸಕರ ಗೃಹಕಚೇರಿ ಆವರಣದಲ್ಲಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಎಮ್ ಎಸ್ ಪಾಟೀಲ, ಮುಖಂಡರಾದ ಡಿ ಎಮ್ ದಳವಾಯಿ, ಕಲ್ಲೋಳೆಪ್ಪ ಗಾಡಿವಡ್ಡರ, ಕೆಂಪಣ್ಣ ಚೌಕಾಶಿ, ಮಲ್ಲಿಕಾರ್ಜುನ ತುಕ್ಕಾನಟ್ಟಿ, ಮಲ್ಲು ಕೋಳಿ, ಸುರೇಶ ಪೂಜಾರಿ, ಸಲೀಂ ಕಬ್ಬೂರ, ಶೇಖರ ರಜಪೂತ, ಸೇರಿದಂತೆ ಅನೇಕರು ಇದ್ದರು.

ನೋಂದಣಿಯ ಮಾಹಿತಿ ಆನ್‌ಲೈನ್‌ನಲ್ಲಿ ಲಭ್ಯ: ಸಂಸದ ಕಡಾಡಿ

ಭೂ ವಿವಾದಕ್ಕೆ ಕಡಿವಾಣ ಹಾಕುವ ನಕ್ಷಾ ಯೋಜನೆ

ಬೆಳಗಾವಿ: ನಗರ ಪ್ರದೇಶದ ಆಸ್ತಿಗಳ ನಿಖರತೆ ತಿಳಿಯಲು ಮತ್ತು ನೋಂದಣಿಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡುವುದು, ಆ ಮೂಲಕ ವಂಚನೆ, ಬೇನಾಮಿ ವಹಿವಾಟುಗಳನ್ನು ಪರಿಶೀಲಿಸುವುದು ಮತ್ತು ಭೂ ವಿವಾದಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರಕಾರವು ಪ್ರಾಯೋಗಿಕವಾಗಿ ನಕ್ಷಾ ಸರ್ವೆ ಯೋಜನೆಯನ್ನು ಪ್ರಾರಂಭಿಸಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಮಂಗಳವಾರ ಫೆ.18ರಂದು ಭೂ ದಾಖಲೆಗಳ ಇಲಾಖೆ, ಕಂದಾಯ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆ ನಕ್ಷಾ ಸರ್ವೆ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಸಂಸದ ಈರಣ್ಣ ಕಡಾಡಿ ಅವರು ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಬೋರಗಾಂವ ನಗರಗಳು ಈ ಯೋಜನೆಗೆ ಆಯ್ಕೆಯಾಗಿವೆ. ರಾಜ್ಯದಲ್ಲಿ 10 ನಗರಗಳು ಮತ್ತು ದೇಶದಲ್ಲಿ 150 ನಗರಗಳು ಪ್ರಾಯೋಗಿಕ ಕಾರ್ಯಕ್ರಮಕ್ಕೆ ಆಯ್ಕೆಯಾಗಿವೆ. ಈ ಕಾರ್ಯಕ್ರಮಕ್ಕಾಗಿ ಕೇಂದ್ರ ಸರಕಾರವು 193.81 ಕೋಟಿ ರೂ.ಗಳ ಆರ್ಥಿಕ ವೆಚ್ಚವನ್ನು ನಿಗದಿಪಡಿಸಲಾಗಿದೆ ಎಂದರು.

ಡ್ರೋನ್ ಮುಖಾಂತರ ನಗರ ಪ್ರದೇಶದ 3ಡಿ ಚಿತ್ರಣದೊಂದಿಗೆ ವೈಮಾನಿಕ ಛಾಯಾಗ್ರಹಣದಿಂದ ಆಸ್ತಿಗಳ ಸರ್ವೆ ಮಾಡಿ ನಕ್ಷೆಗಳನ್ನು ತಯಾರು ಮಾಡುತ್ತಾರೆ ಇದರಿಂದ ನಿಖರವಾದ ಆಸ್ತಿ ಗೋತ್ತಾಗುತ್ತದೆ. ಒಳಚರಂಡಿ ಮತ್ತು ಪ್ರವಾಹ ನಿರ್ವಹಣೆಯ ಯೋಜನೆ ಮತ್ತು ನಮ್ಮ ನಗರ ಪ್ರದೇಶಗಳಿಗೆ ಮಾಸ್ಟರ್ ಪ್ಲಾನ್‌ಗಳನ್ನು ಸಿದ್ಧಪಡಿಸುವಲ್ಲಿ ಈ ಸರ್ವೆ ಕಾರ್ಯ ಉಪಯುಕ್ತವಾಗಿರುತ್ತದೆ ಎಂದರು.

ಗೋಕಾಕ ನಗರ ಪದೇ ಪದೇ ಪ್ರವಾಹಕ್ಕೆ ತುತ್ತಾಗುತ್ತದೆ. ಆ ಪ್ರವಾಹದ ನೀರು ಬಂದಾಗ ಈ ನಗರವನು ಸುರಕ್ಷಿತವಾಗಿಡಲು ಇದರಿಂದ ಅಧ್ಯಯನ ಮಾಡಬಹುದಾದ ಸಾಧ್ಯತೆ ಇದೆ ಮತ್ತು ವಿಶೇಷವಾಗಿ ಗೋಕಾಕ ನಗರದಲ್ಲಿ ಸುಮಾರು 26 ಸಾವಿರ ಆಸ್ತಿಗಳಿದ್ದರೂ ಕೂಡಾ ಕೇವಲ 5 ಸಾವಿರ ಆಸ್ತಿಗಳು ಮಾತ್ರ ನಗರ ಸಭೆ ವ್ಯಾಪ್ತಿಯಲ್ಲಿ ದಾಖಲೀಕರಣಗೊಂಡಿವೆ ಎಂದರು.

ಇವುಗಳನೆಲ್ಲ ಅಧಿಕೃತ ಮಾಡುವುದರಿಂದ ಹೂಡಿಕೆದಾರರಿಗೆ ಭೂಮಿಯ ಮಾಲೀಕತ್ವದ ಹಕ್ಕು ಸಿಗುತ್ತದೆ. ಸ್ಥಳೀಯ ಪ್ರಾಧಿಕಾರಗಳು ಸಾರ್ವಜನಿಕರಿಗೆ ಮೂಲಸೌಕರ್ಯಗಳನ್ನು ಒದಗಿಸಲು ಮತ್ತು ವಲಯ ನಿಯಮಾವಳಿಗಳನ್ನು ಜಾರಿಗೆ ತರಲು ಅನುವು ಮಾಡಿಕೊಡುತ್ತದೆ. ಸಾರ್ವಜನಿಕರು ಈ ಯೋಜನೆಯ ಜಾರಿಗೆ ಸಹಕರಿಸಬೇಕೆಂದು ಕರೆ ನೀಡಿದರು. ಶಾಸಕರಾದ ರಮೇಶ ಜಾರಕಿಹೊಳಿ, ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕ ಶ್ರೀಮತಿ ನಜ್ಮಾ ಎಂ. ಪೀರಜಾದೆ, ತಹಶೀಲ್ದಾರ ಡಾ. ಮೋಹನ ಭಸ್ಮೆ, ಡಿ.ವಾಯ್.ಎಸ್.ಪಿ ಡಿ.ಎಚ್. ಮುಲ್ಲಾ, ನಗರಸಭೆ ಪೌರಾಯುಕ್ತ ಆರ್. ಪಿ. ಜಾಧವ, ಭೂ ದಾಖಲೆಗಳ ಸಹಾಯಕ ನಿರ್ದೇಶಕ ಆರ್. ಆರ್. ಪಾಟೀಲ, ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ನಗರಸಭೆ ಉಪಾಧ್ಯಕ್ಷೆ ಬೀಬಿಬತೂಲ ಜಮಾದಾರ ಸೇರಿದಂತೆ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

ನಕ್ಷಾ ಸರ್ವೆ ಕಾರ್ಯಕ್ರಮದಲ್ಲಿ ಸಂಸದ ಈರಣ್ಣ ಕಡಾಡಿ ಅವರನ್ನು ಸನ್ಮಾನಿಸಲಾಯಿತು.

ಶೀಘ್ರದಲ್ಲೇ ಎಸ್‌ಸಿ, ಎಸ್‌ಟಿ ಸಮಾವೇಶ

ಯರಗಟ್ಟಿ: ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಸಮಸ್ಯೆ ಇಲ್ಲ. ಸಣ್ಣ ಪುಟ್ಟ ಪ್ರತಿಷ್ಠೆ ವಿಚಾರವಾಗಿ ರಾಜಕೀಯ ನಡೆಯುತ್ತದೆ. ಇದನ್ನು ಸರಿಪಡಿಸಿಕೊಂಡರೆ ಒಳ್ಳೆಯದಾಗುತ್ತದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಂಗಳವಾರ ಯರಗಟ್ಟಿ ಪಟ್ಟಣಕ್ಕೆ ಭೇಟಿನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಕಾಂಗ್ರೆಸ್ ನಾಯಕರು ಸಾರ್ವಜನಿಕವಾಗಿ ಮಾತನಾಡಿದರೆ ಯಾವುದೇ ಉಪಯೋಗ ಇಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಬಣ್ಣಗಳಲ್ಲಿ ಹಾದಿ ಬೀದಿಯಲ್ಲಿ ಮಾತನಾಡುವುದು ಸರಿಯಲ್ಲ ಎಂದರು. ಸಿಎಂ ಬದಲಾವಣೆ ಅದನ್ನ ನಾವು ಅಷ್ಟು ಸುಲಭವಾಗಿ ಆಗುತ್ತದೆ ಎಂದು ಹೇಳಲು ಆಗದು. ಎಲ್ಲರೂ ಕೂಡಿ ಒಮ್ಮತವಾಗಿ ಆಯ್ಕೆ ಮಾಡುವ ನಿರ್ಣಯ. ಅನಗತ್ಯ ಚರ್ಚೆ ಮಾಡುವುದು ವಿಷಯ ಅಲ್ಲ ಎಂದರು. ಶೀಘ್ರದಲ್ಲೇ ಸಿಎಂ ನೇತೃತ್ವದಲ್ಲಿ ಎಸ್.ಸಿ, ಎಸ್. ಟಿ ಸಮಾವೇಶ ನಡೆಯಲಿದೆ ಎಂದರು. ಈ ವೇಳೆ ಶಾಸಕ ವಿಶ್ವಾಸ ವೈದ್ಯ, ಜಿಲ್ಲಾ ವೈದ್ಯಾಧಿಕಾರಿ ಡಾ. ಆಯ್. ಪಿ. ಗಡಾದ, ತಾಲೂಕು ವೈದ್ಯಾಧಿಕಾರಿ ಡಾ. ಶ್ರೀಪಾದ ಸಬ್ನಿಸ್, ವೈದ್ಯಾಧಿಕಾರಿ ಡಾ. ಬಿ. ಎಸ್. ಬಳ್ಳೂರ, ಡಾ. ಕಾರ್ತಿಕ ವಾಲಿ, ಪ. ಪಂ. ಸದಸ್ಯರಾದ ನಿಖಿಲ ಪಾಟೀಲ, ಹನುಮಂತಪ್ಪ ಹಾರುಗೊಪ, ಸಲಿಂಬೇಗ ಜಮಾದಾರ, ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸವರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ ಮುಖಂಡರು ಇದ್ದರು.

{ಶಿವಾನಂದ ಪಾಟೀಲ} ಸಚಿವ

ಈಗಷ್ಟೇ ಅಲ್ಲ, ಮುಂದಿನ ಅವಧಿಯಲ್ಲೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಇರಬಹುದು. ಇದರಲ್ಲಿ ತಪ್ಪೇನಿದೆ. ಸಿ.ಎಂ ಸ್ಥಾನದಲ್ಲಿ ಯಾರನ್ನು ಮುಂದುವರಿಸಬೇಕು ಮತ್ತು ಬದಲಿಸಬೇಕು ಎಂಬುದನ್ನು ಸಿಎಲ್‌ಪಿ ಹಾಗೂ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ.

ಅಪ್ರೆಂಟೀಸ್ ತರಬೇತಿಯಿಂದ ವೃತ್ತಿ ನೈಪುಣ್ಯತೆ

ಮೂಡಲಗಿ: ಐಟಿಐ ತರಬೇತಿ ಪೂರ್ಣಗೋಳಿಸಿದ ತರಬೇತಿದಾರರು ಕಡ್ಡಾಯವಾಗಿ ಅಪ್ರೆಂಟೀಸ್ ಮುಗಿಸುವುದು ಅತ್ಯವಶ್ಯಕ. ಇದಕ್ಕಾಗಿ ಸರಕಾರ ವಿಶೇಷ ಯೋಜನೆ ಜಾರಿಗೆ ತಂದಿದ್ದು, ಐಟಿಐ ತರಬೇತಿದಾರರು ವೃತ್ತಿ ನೈಪುಣ್ಯತೆ ಮತ್ತು ಡಿಪ್ಲೋಮಾ ಕೋರ್ಸಿಗೆ ತತ್ಸಮಾನ ವಿದ್ಯಾರ್ಹತೆ ಪಡೆಯುತ್ತಾರೆ. ಜೊತೆಗೆ ಉದ್ಯೋಗ ಪಡೆಯುವಲ್ಲಿ ಹೆಚ್ಚಿನ ಮನ್ನಣೆ ಸಿಗುತ್ತದೆ ಎಂದು ಮೂಡಲಗಿ ತಾಲೂಕಾ ಸಹಾಯಕ ಅಪ್ರೆಂಟೀಸ್‌ಶಿಪ್ ಸಲಹೆಗಾರ ಮತ್ತು ರಾಯಬಾಗ ಸರಕಾರಿ ಐಟಿಐ ತರಬೇತಿ ಅಧಿಕಾರಿ ಎಸ್.ಎಸ್. ಗುಬ್ಬಿ ಹೇಳಿದರು.

ಇಲ್ಲಿಯ ಚೈತನ್ಯ ಕ್ಷೇಮಾಭಿವೃದ್ಧಿ ಸೊಸಾಯಿಟಿಯ ಚೈತನ್ಯ ಐಟಿಐ ಕಾಲೇಜಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಅಡಿಯಲ್ಲಿ ಮೂಡಲಗಿ ತಾಲೂಕಾ ಐಟಿಐ ತರಬೇತಿದಾರರಿಗೆ ಹಾಗೂ ಉದ್ದಿಮೆದಾರರಿಗೆ ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಮತ್ತು ಅಪ್ರೆಂಟಿಸಶಿಪ್ ತರಬೇತಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಾಗಾರದಲ್ಲಿ ಯಾದವಾಡ ದಾಲ್ಮಿಯಾ ಸಿಮೆಂಟ್ ಕಾರ್ಖಾನೆಯ ಮಾನವ ಸಂಪನ್ಮೂಲ ವ್ಯವಸ್ಥಾಪಕ ಈರಸಂಗಯ್ಯ ಬಾಗೋಜಿಮಠ, ಭೋರುಕಾ ಪಾವರ್ ಕಾರ್ಪೋರೇಶನ್ ವಿಂಡ್ ಪವರ ಪ್ರೊಜೆಕ್ಟ್ ರಾಯಬಾಗ ಮತ್ತು ಮೂಡಲಗಿ ಮಾನವ ಸಂಪನ್ಮೂಲ ವ್ಯವಸ್ಥಾಪಕ ಶ್ರೀಧರ ಮರ್ಲಖಾನೆ, ವಿಂಡ್ ಪವರ ಪ್ರೊಜೆಕ್ಟ್ ಅಭಿಯಂತರ ಲಕ್ಷ್ಮೀಕಾಂತ ಬೋರಗಾಂವ ಅವರು ಕೈಗಾರಿಕಾ ತರಬೇತಿ ವಿದ್ಯಾರ್ಥಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದ ಅವರು ಅಪ್ರೆಂಟಿಸ್‌ಶಿಪ್ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಬೇಕೆಂದರು.

ಚೈತನ್ಯ ಆಶ್ರಮ ಶಾಲೆಯ ಆಡಳಿತಾಧಿಕಾರಿ ಸುಭಾಸ ಕಮದಾಳ, ಚೈತನ್ಯ ಸಂಸ್ಥೆಯ ಅಧ್ಯಕ್ಷ ಉದಯಕುಮಾರ ಜೋಕಿ, ಚೈತನ್ಯ ಅರ್ಬನ್ ಸೊಸಾಯಿಟಿ ಅಧ್ಯಕ್ಷ ತಮ್ಮಣ್ಣ ಕೆಂಚರಡ್ಡಿ, ಗೋಕಾಕ-ಮೂಡಲಗಿ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿ ಸಂಘದ ಅಧ್ಯಕ್ಷ ವಾಯ್.ಬಿ.ಪಾಟೀಲ, ಕಾಲೇಜಿನ ಉಪಾಧ್ಯಕ್ಷ ವಿಜಯ ಎಸ್. ಹೊರಟ್ಟಿ, ಸಂಸ್ಥೆಯ ಆಡಳಿತ ಮಂಡಳಿ, ತಾಲೂಕಿನ ವಿವಿಧ ಐಟಿಐ ಕಾಲೇಜಗಳ ಪ್ರಾಚಾರ್ಯರು, ಸಿಬ್ಬಂದಿ ಮತ್ತು ತರಬೇತಿದಾರರು ಪಾಲ್ಗೊಂಡಿದ್ದರು.

ಐಟಿಐ ಕಾಲೇಜಿನ ಪ್ರಾಚಾರ್ಯ ಸುನೀಲ ಕುಳ್ಳೋಳಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಎಸ್.ಎಲ್. ಪೂಜೇರಿ ಸ್ವಾಗತಿಸಿದರು, ಜೆ.ಎಸ್. ಸಮಾಜೆ ವಂದಿಸಿದರು, ಟಿ.ಆರ್. ಝೂರೆ ನೀರೂಪಿಸಿದರು.

ಅಪ್ರೆಂಟೀಸ್‌ಶಿಪ್ ಕಾರ್ಯಾಗಾರವನ್ನು ರಾಯಬಾಗ ಸರಕಾರಿ ಐಟಿಐ ತರಬೇತಿ ಅಧಿಕಾರಿ ಎಸ್.ಎಸ್. ಗುಬ್ಬಿ ಉದ್ಘಾಟಿಸಿ ಮಾತನಾಡಿದರು.

ವಿಶ್ವವಾಣಿ
ಆರಾಮ
@vishwavaninews
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು ಬುಧವಾರ 19 | 02 | 2025

ಬನಾನಾ ರಿಪಬ್ಲಿಕ್!

ಬಲಾಢ್ಯ ದೇಶ ಮತ್ತು ಬಲಾಢ್ಯ ಕಂಪೆನಿಗಳು ಕೆಲವು ದೇಶಗಳ ರಾಜಕೀಯವನ್ನು ನಿಯಂತ್ರಿಸುತ್ತವೆ! ಅಂತಹ ದೇಶಗಳು ಬನಾನ ರಿಪಬ್ಲಿಕ್. ಬಾಳೆ ಹಣ್ಣು ಬೆಳೆಸಲು ಸರಕಾರಗಳನ್ನೇ ಬುಡಮೇಲು ಮಾಡಿದ್ದವು ಇಂತಹ ಕಂಪೆನಿಗಳು!

● ಪ್ರಕಾಶ ಹೆಗಡೆ

ನಾವೆಲ್ಲರೂ ಬನಾನ ರೆಪಬ್ಲಿಕ್ ಬಗ್ಗೆ ಕೇಳಿಯೇ ಇರುತ್ತೇವೆ. ಆದರೆ ಈ ನುಡಿಗಟ್ಟು ಎಲ್ಲಿಂದ ಬಂತು, ಮತ್ತು ಅದರ ನಿಖರವಾದ ಅರ್ಥ ನಮ್ಮಲ್ಲನೇಕರಿಗೆ ಗೊತ್ತಿಲ್ಲದಿರಬಹುದು.

ಬನಾನ ಗಣರಾಜ್ಯವೆಂದರೆ, ವಿದೇಶಿ ಬಂಡವಾಳದಿಂದ ನಿಯಂತ್ರಿಸಲ್ಪಡುವ, ಅವರ ಬಯಕೆಯಂತೆ ಒಂದೇ ತೆರನಾದ ಸರಕನ್ನು ರಫ್ತು ಮಾಡುವ ದೇಶ. ಒಂದೇ ಸಾಮಾನಿನ ರಫ್ತಿನಿಂದಾಗಿ ಪರ ದೇಶಗಳ ಮೇಲೆ ಅವಲಂಬಿತವಾಗಿ ರಾಜಕೀಯವಾಗಿ ಅಸ್ಥಿರ ಹಾಗೂ ಆರ್ಥಿಕವಾಗಿ ಡೊಲಾಯಮಾನದ ಸ್ಥಿತಿಯಲ್ಲಿರಬಹುದಾದ ದೇಶ. ಮೊದಲಿಗೆ ಮಧ್ಯ ಅಮೇರಿಕಾ ಖಂಡದ ಲ್ಯಾಟಿನ್ ದೇಶಗಳನ್ನು ಬನಾನಾ ರಿಪಬ್ಲಿಕ್ ಅಥವಾ ಬನಾನಾ ಸ್ಟೇಟ್ ಎಂದು ಕರೆಯಲಾಯಿತು.

ಬಾಳೆ ಹಣ್ಣಿಗೂ ರಾಜಕೀಯಕ್ಕೂ ಏನು ಸಂಬಂಧ?

ಇದೊಂದು ರಾಜಕೀಯ ಪದ. ಈ ದೇಶದ ಆಡಳಿತ ಶಾಹಿ ಧುರೀಣರು ಯು.ಎಸ್.ಎ. ದೇಶದ ಬಾಳೆ ಹಣ್ಣು ಬೇಡಿಕೆ ಪೂರೈಸಲು ತಮ್ಮ ದೇಶದಿಂದ ಬಾಳೇಹಣ್ಣು ರಫ್ತು ಮಾಡಿ ತಮ್ಮ ದೇಶದ ಅವಶ್ಯಕತೆಗಳನ್ನು ನೀಗಿಸಿಕೊಳ್ಳುತ್ತಿದ್ದರು. ಆದುದರಿಂದ ಬನಾನಾ ರಿಪಬ್ಲಿಕ್ ಎಂದರೆ, ಅಂತಹ ದೇಶಗಳ ಆರ್ಥಿಕತೆಗಳು ಹೆಚ್ಚಾಗಿ ಸೀಮಿತ ಸಂಪನ್ಮೂಲ ಉತ್ಪನ್ನವನ್ನು ರಫ್ತು ಮಾಡುವುದರ ಮೇಲೆ ಅವಲಂಬಿತವಾಗಿವೆ ಎಂದರ್ಥ ಮಾಡಿಕೊಳ್ಳಬಹುದು.

ಬನಾನ ರಿಪಬ್ಲಿಕ್ ಹುಟ್ಟುವಿಕೆಗೆ ಅಮೇರಿಕದ ಹಣ್ಣಿನ ಕಂಪನಿಗಳು ನೇರ ಹೊಣೆ ಎಂದರೆ ಆಶ್ಚರ್ಯವಾಗಬಹುದು. 19ನೇ ಶತಮಾನದ ಅಂತ್ಯದ ವೇಳೆಗೆ, ಅಮೆರಿಕನ್ನರು ತಮ್ಮ ದೇಶದಲ್ಲಿ ಹಣ್ಣುಗಳನ್ನು ಬೆಳೆಯಲು ಪ್ರಯತ್ನಿಸಿ, ಕಡಿಮೆ ಇಳುವರಿಯಿಂದ ನಷ್ಟ ಅನುಭವಿಸಿ ದಿವಾಳಿಯ ಹಂತದಲ್ಲಿದ್ದರು. ಬಾಳೆಹಣ್ಣುಗಳು ಬೇಗನೆ ಬೆಳೆಯುವ ಮಧ್ಯ ಅಮೆರಿಕದ ಬೆಚ್ಚಗಿನ ಹವಾಮಾನದ ಪ್ರದೇಶಗಳಿಂದ ಆಮದು ಮಾಡಿಕೊಳ್ಳುವುದು ಲಾಭದಾಯಕ ಎಂದು ಕಂಡುಕೊಂಡರು. ಚಿಕ್ವಿಟಾ ಬ್ರಾಂಡ್ ಇಂಟರ್ ನ್ಯಾಶನಲ್ ಕಂಪೆನಿ (ಈಗಿನ ಹೆಸರು ಯುನೈಟೆಡ್ ಫ್ರೂಟ್ ಕಂಪನಿ) ಇಂತಹ ಒಂದು ದಿಗ್ಗಜ

ಕೆಲವು ಬನಾನಾ ರಿಪಬ್ಲಿಕ್ ದೇಶಗಳು

● ಕ್ಯೂಬಾ ● ಕೊಲಂಬಿಯಾ ● ಕೋಸ್ಟಾರಿಕಾ ● ಗ್ವಾಟೆಮಾಲ ● ಹೋಂಡುರಾಸ್ ● ಪನಾಮಾ ● ನಿಕರಾಗುವಾ ● ಬಾಂಗ್ಲಾದೇಶ ಇತ್ಯಾದಿ

ಕಾರ್ಪೊರೇಟ್. ಸುಮಾರು 20,000 ಕಾರ್ಮಿಕರನ್ನು ಹೊಂದಿರುವ ಅತಿ ದೊಡ್ಡ ಬಾಳೇಹಣ್ಣು ವಿತರಕ ಕಂಪನಿ.

ಇಂತಹ ಕಂಪನಿಗಳು ಮಧ್ಯ ಅಮೇರಿಕಾದ ಹೊಂಡುರಾಸ್ ಮತ್ತು ಹಲವು ಸುತ್ತಮುತ್ತಲಿನ ದೇಶಗಳಲ್ಲಿ ಬಾಳೇಹಣ್ಣುಗಳ ಫಸಲನ್ನು ಸಾಗಿಸಲು ಭೂಮಿಗೆ ಪ್ರತಿಯಾಗಿ ರಸ್ತೆಗಳು, ಬಂದರುಗಳು ಮತ್ತು ರೈಲ್ವೆಗಳನ್ನು ನಿರ್ಮಿಸಿ ಉತ್ತಮ ಮೂಲಸೌಕರ್ಯಗಳನ್ನು ಒದಗಿಸಿ ಸ್ಥಳೀಯರಿಗೆ ಬಾಳೆ ತೋಟಗಳನ್ನು ಸ್ಥಾಪಿಸಲು ಪ್ರೇರೇಪಿಸಿದರು. ತದನಂತರ ಈ ದೇಶಗಳಿಂದ ಆಗ್ನೇಯ ಯುನೈಟೆಡ್ ಅಮೇರಿಕಾ ರಾಜ್ಯಗಳಿಗೆ ರಫ್ತು ಮಾಡಲು ಪ್ರಾರಂಭಿಸಿದರು. ಆಮದು ಮಾಡಿದ ಈ ಬಾಳೇಹಣ್ಣುಗಳನ್ನು ಅಮೇರಿಕದಲ್ಲಿ ಮಾರಿ ಹಲವು ವರ್ಷಗಳಲ್ಲೆಯಶಸ್ವಿ ವ್ಯಾಪರಿಗಳೆನಿಸಿಕೊಂಡರು. ಬಾಳೇಹಣ್ಣು ಅಮೆರಿಕನ್ನರಲ್ಲಿ ಜನಪ್ರಿಯವಾಯಿತು. ಇದು ಪೌಷ್ಟಿಕ ಹಣ್ಣು. ಯು.ಎಸ್.ನಲ್ಲಿ ಸ್ಥಳೀಯವಾಗಿ ಬೆಳೆಯುವ ಹಣ್ಣಿಗಿಂತ ಕಡಿಮೆ ವೆಚ್ಚದಾಯಕವಾಗಿತ್ತು.

ಶಸ್ತ್ರಾಸ್ತ್ರ ಪೂರೈಕೆ ರಾಜಕೀಯ ಅಸ್ತಿರತೆ

ಇಂತಹ ಮಧ್ಯ ಅಮೇರಿಕೆಯ ದೇಶಗಳು ಸಾಮಾನ್ಯವಾಗಿ ಶೋಷಿತ ಸಮಾಜದ ಜನರಿಂದ ಕೂಡಿದೆ ಹಾಗೂ ಶ್ರೇಣೀಕೃತ ಸಾಮಾಜಿಕ ವರ್ಗಗಳನ್ನು ಹೊಂದಿದೆ. ಈ ದೇಶಗಳ ಕೆಲ ರಾಜಕೀಯ-ಆರ್ಥಿಕ ಬಲಾಢ್ಯರು ದೇಶದ ಆರ್ಥಿಕತೆಯನ್ನು ಶೋಷಿಸಲು ಪ್ರಾಥಮಿಕ ವಲಯದ ಉತ್ಪಾದನೆಗಳನ್ನು ನಿಯಂತ್ರಿಸುತ್ತಾರೆ. ತಮ್ಮ ನಿಯಂತ್ರಣವನ್ನು ಕಾಪಿಟ್ಟುಕೊಳ್ಳಲು ರಾಜಕೀಯ ಮುಖಂಡರುಗಳು ಮತ್ತು ಮಿಲಿಟರಿ ಮೂಲಕ ದಬ್ಬಾಳಿಕೆಯ ಸರಕಾರ ನಡೆಸುತ್ತಾರೆ. ಚುನಾವಣೆಯಲ್ಲಿ ತಮಗೆ ಬೇಕಾದವರು ಆಯ್ಕೆಯಾಗುವಂತೆ, ಬಾಳೆ ಹಣ್ಣಿನ ಕಂಪೆನಿಗಳು ತಂತ್ರಗಾರಿಕೆ ಮಾಡುತ್ತಿದ್ದರು! ಪರೋಕ್ಷವಾಗಿ ಈ ಮುಖಂಡರುಗಳಿಗೆ ದಂಗೆಗಾಗಿ ಶಸ್ತ್ರಾಸ್ತ್ರಗಳನ್ನು ಪೂರೈಸಿ ಶಾಶ್ವತವಾಗಿ ಅಥವಾ ಬಹಳ ವರ್ಷಗಳವರೆಗೆ ರಾಜಕೀಯ ಅಸ್ಥಿರತೆ ಈ ದೇಶಗಳಲ್ಲಿರುವಂತೆ ಪರಿಸರವನ್ನು ಸೃಷ್ಟಿಸಿ ಅದೇ ಪರಿಸರ ಮುಂದುವರಿಯುವಂತೆ ಖಾತ್ರಿಪಡಿಸಿಕೊಂಡರು. ರಾಜಕೀಯವಾಗಿ ಬಾಳೆಹಣ್ಣಿನ ಕಂಪನಿಗಳು ಹಸ್ತಕ್ಷೇಪ ಮಾಡಿದ್ದರಿಂದ, ಬನಾನ ರಿಪಬ್ಲಿಕ್ ಎಂಬ ಹೆಸರು ಬಳಕೆಗೆ ಬಂತು.

ಡ್ರಗ್ಸ್ ವ್ಯಾಪಾರವೂ ಇದೆ

ಇಂದಿಗೂ ಈ ಪ್ರದೇಶದ ಅನೇಕ ದೇಶಗಳು ಬಾಳೇಹಣ್ಣಿನ ವ್ಯಾಪಾರವನ್ನು ತಮ್ಮ ಆರ್ಥಿಕತೆಯ ಪ್ರಮುಖ ಭಾಗವಾಗಿ ಉಳಿಸಿಕೊಂಡಿವೆ. ಆದರೆ ವಿಪರ್ಯಾಸವೆಂದರೆ, ಈ ದೇಶಗಳು ಕೊಕೇನ್‌ನಂತಹ ಬೆಳೆಗಳನ್ನು ಬೆಳೆದು ಅಮೇರಿಕಾ, ಕೆನಡಾ ಇತ್ಯಾದಿ ದೇಶಗಳಿಗೆ ಕಳ್ಳಸಾಗಣೆ ಮಾರ್ಗದಲ್ಲಿ ಮಾರಾಟಮಾಡಿ ಕ್ಲಾಸಿಕ್ ಬನಾನ ರಿಪಬ್ಲಿಕ್ ಮಾತ್ರವಾಗುಳಿದಿಲ್ಲ. ಇನ್ನೂ ಕೆಟ್ಟ ದೇಶಗಳಾಗಿ ಪರಿವರ್ತನೆಯಾಗಿವೆ. ಈ ಕಳ್ಳಸಾಗಣೆ ಮಾರ್ಗಗಳು ಇಂದು ಮಾನವ ಕಳ್ಳಸಾಗಣೆಗಾಗಿಯೂ ಉಪಯೋಗಿಸಲಾಗುತ್ತಿದೆ.

20ನೇ ಶತಮಾನದಲ್ಲಿ ವಸಾಹತುಶಾಹಿ ದೇಶಗಳಿಂದ ಸ್ವಾತಂತ್ರ್ಯವನ್ನು ಪಡೆದ ಹೆಚ್ಚಿನ ದೇಶಗಳು, ಬನಾನಾ ರಿಪಬ್ಲಿಕ್ ಗುಣಗಳನ್ನು ಹೊಂದಿವೆ. ಇವಕ್ಕೆ ಕಾರಣ ಅವರ ರಾಷ್ಟ್ರಗಳ ಖಾಸಗಿ ನಿಗಮಗಳ ಪ್ರಭಾವ. ಇಂತಹ ದೇಶಗಳು ತಮ್ಮ ಆರ್ಥಿಕತೆಗೆ ಒಂದೇ ಉದ್ಯಮಕ್ಕೆ ಒಲುಮೆ ತೋರಿಸಿದಂತಿದೆ. ಉದಾಹರಣೆಗೆ – ಮಾಲ್ದೀವ್ಸ್ (ರೆಸಾರ್ಟ ಕಂಪನಿಗಳು), ಚಿಲಿ (ವಿದೇಶಿ ಕಣಿಗಾರಿಕೆ ಕಂಪನಿಗಳು) ಮತ್ತು ಫಿಲಿಪೈನ್ಸ್ (ತಂಬಾಕು ಉದ್ಯಮ). ಅಂತೆಯೇ ಇಂದಿಗೂ ಬನಾನ ರಿಪಬ್ಲಿಕ್‌ಗಳು ಜೀವಂತವಾಗಿವೆ. ಅನೇಕ ವಸಾಹತುಶಾಹಿ ಗುಣ ಹೊಂದಿದ ಕಂಪನಿಗಳೂ ತಮ್ಮ ಕಪಿಮುಷ್ಟಿಯಲ್ಲಿ ಇಂತಹ ದೇಶಗಳನ್ನು ಶೋಷಣೆ ಮಾಡುತ್ತಿರುವುದನ್ನು ಈಗಲೂ ಕಾಣಬಹುದು.

ಶರಣಾಗತಿಯ ಕಲೆ

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಎಲ್ಲಾ ಕಾರ್ಯಗಳನ್ನು ತನಗೆ ಅರ್ಪಿಸಿ ಅಹಂಕಾರ ಮತ್ತು ಆಸೆಗಳನ್ನು ತೊರೆದು ಜ್ವರವಿಲ್ಲದೆ ಯುದ್ಧ ಮಾಡಬೇಕೆಂದು ಕೃಷ್ಣ ಅರ್ಜುನನಿಗೆ ಹೇಳುತ್ತಾನೆ. (3.30) ಈ ಶ್ಲೋಕವು ಗೀತೆಯ ಸಾರಾಂಶವಾಗಿದ್ದು ನಿತ್ಯ ಜೀವನದ ನಮ್ಮ ಅನೇಕ ಸಂದೇಹಗಳಿಗೆ ಉತ್ತರ ನೀಡುತ್ತದೆ.

ನಮ್ಮ ಮೊದಲನೆಯ ಸಂದೇಹವೆಂದರೆ 'ಏನು ಮಾಡುವುದು?' ನಮ್ಮ ಸಂತೋಷವೂ ಮತ್ತಾವುದೋ ಕಾರ್ಯದಲ್ಲಿದೆ ಎಂದು ತಿಳಿದು ನಾವೀಗ ಏನು ಮಾಡುತ್ತಿದ್ದೇವೆ ಎಂಬುದರಲ್ಲಿ ಸಂತೋಷ ಪಡೆದಿರುವದೇ ಇದಕ್ಕೆ ಕಾರಣವಾಗಿದೆ. ನಾವೇ ಆಯ್ಕೆ ಮಾಡಿಕೊಂಡಿರಬಹುದಾದ ಅಥವಾ ನಮ್ಮ ಮೇಲೆ ಹೇರಲ್ಪಟ್ಟ ಕಾರ್ಯವನ್ನು ಸಮರ್ಥವಾಗಿ ಮಾಡಬೇಕೆಂದು ಈ ಶ್ಲೋಕ ಹೇಳುತ್ತದೆ. ಒಬ್ಬನನ್ನು ಕೊಲ್ಲುವುದು ಅಥವಾ ತಾನೇ ಕೊಲ್ಲಲ್ಪಡುವ ಕುರುಕ್ಷೇತ್ರ ಯುದ್ಧದಂತೆ ಇದು ಕ್ರೂರವೂ, ಕ್ಲಿಷ್ಟವೂ ಆಗಿರಬಹುದು.

ವೈಜ್ಞಾನಿಕವಾಗಿ ನಮ್ಮ ಸಂಕೀರ್ಣವಾದ ಮಾನವ ದೇಹವು ಒಂದೇ ಕಣದಿಂದ ವಿಕಸನಗೊಂಡಿದೆ. ಇಲ್ಲಿ ಪ್ರತಿ ಕಾರ್ಯವು ಹಿಂದಿನದಕ್ಕೆ ತಳಕು ಹಾಕಿಕೊಂಡಿದೆ. ಆದ್ದರಿಂದ ಸದ್ಯ ನಮ್ಮ ಕೈಯಲ್ಲಿರುವ ಕಾರ್ಯ ಹಿಂದಿನ ಕಾರ್ಯಗಳ ಸರಣಿಯ ಫಲವಾಗಿದೆ. ಅಲ್ಲಿ ಒಂದೇ ಕಾರ್ಯವೆಂಬುದಿಲ್ಲ.

ಮುಂದಿನ ಪ್ರಶ್ನೆಯೆಂದರೆ ಹೇಗೆ ಮಾಡುವುದು? ಅಹಂಕಾರ ಆಸೆಗಳನ್ನು ತೊರೆದು ಉದ್ವೇಗ ಅಥವಾ ವಿಷಾದದಿಂದ ಅರ್ಜುನನಿಗಬಂದಂತಹ ಜ್ವರವನ್ನು ಬಿಟ್ಟು ನಾವು ಕಾರ್ಯಪ್ರವೃತ್ತರಾಗಬೇಕೆಂದು ಈ ಶ್ಲೋಕ ಹೇಳುತ್ತದೆ. ಆಸೆಗಳನ್ನು ತೊರೆಯುವುದರಿಂದ ನಾವು ದು:ಖದಿಂದ ಮುಕ್ತರಾಗುತ್ತೇವೆ ಯಾಕೆಂದರೆ ಎರಡು ಒಟ್ಟಿಗೆ ಹೋಗುತ್ತವೆ.

ನಾವು ನಮ್ಮೆಲ್ಲ ಕ್ರಿಯೆಗಳನ್ನು ಕೃಷ್ಣಾರ್ಪಣ ಮಾಡಿದರೆ ನಾವು ಎದುರಿಸುವ ಎಲ್ಲಾ ತೊಡಕುಗಳನ್ನು ನಿವಾರಿಸಕೊಳ್ಳಬಹುದೆಂದು ಕೃಷ್ಣ ತಿಳಿಸುತ್ತಾನೆ. ಕೃಷ್ಣ ಪರಮಾತ್ಮನಾಗಿ ನಮ್ಮ ಬಳಿ ಬರುತ್ತಾನೆ. ನಮ್ಮ ಕೈಲಿರುವ ಅನೇಕ ಕೆಲಸ ಕ್ಲಿಷ್ಟಕರವಾಗಿದ್ದರೆ ಜ್ಞಾನ, ಶಕ್ತಿ, ಅನುಭವ ಇದ್ದವರಿಂದ ಹೆಚ್ಚಿನ ಮಾಹಿತಿ ಪಡೆಯುತ್ತೇವೆ. ನಮ್ಮ ಅಂತಿಮ ಗುರಿ ಎಂದರೆ ಸಮಸ್ಯೆಗೆ ಪರಿಹಾರ. ನಮ್ಮ ಕೈ ಮೀರಿದ್ದರೆ ಎಲ್ಲವನ್ನು ಪರಮಾತ್ಮನಿಗೆ ಸಮರ್ಪಿಸುವದಾಗಿದೆ.

ಅಹಂಕಾರವು ದೌರ್ಬಲ್ಯ ಮತ್ತು ಭಯದ ಸಂಕೇತವಾಗಿದೆ. ಇದಕ್ಕಾಗಿ ಅಧಿಕಾರ, ಲೌಕಿಕ ಸಂಪತ್ತು ಮತ್ತು ಪ್ರಸಿದ್ಧಿಯನ್ನು ಬಯಸುತ್ತದೆ. ಆದ್ದರಿಂದ ಒಬ್ಬನಿಗೆ ತನ್ನದೆಲ್ಲವನ್ನು ಪರಮಾತ್ಮನಿಗೆ ಅರ್ಪಿಸಲು ಬಲ ಮತ್ತು ನಿರ್ಭಯ ಬೇಕಾಗುತ್ತದೆ.

ಏಳರ ಬಾಲೆ ಹಾಡತೊಡಗಿದರೆ..

ವಯಸ್ಸು ಏಳು; ವಾಸ ನ್ಯೂಜೀಲ್ಯಾಂಡ್. ಕನ್ನಡ ಗೀತೆಗಳನ್ನು ಈಕೆ ಹಾಡತೊಡಗಿದರೆ, ಪ್ರೇಕ್ಷಕರ ಮೈ ಮನಗಳಲ್ಲಿ ವಿದ್ಯುತ್ ಸಂಚಾರವಾದಂತಹ ಭಾವ.

● ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಕಳೆದ ತಿಂಗಳು ಜನವರಿ 18ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ಸಮ್ಮೇಳನವೊಂದರಲ್ಲಿ, ಏಳು ವರ್ಷದ ಬಾಲಕಿ ಎಲ್ಲರ ಗಮನ ಸೆಳೆದ ಪರಿ ಅನನ್ಯ, ಅನೂಹ್ಯ. ಕಾರ್ಯಕ್ರಮದಲ್ಲಿ ಆರಂಭದಲ್ಲಿ ಪ್ರಾರ್ಥನಾ ಗೀತೆ ಹಾಡಲು ಈ ಪುಟ್ಟ ಬಾಲೆ, ವೇದಿಕೆಯೇರಿ ಗೀತೆಗೆ ಧ್ವನಿಯಾದಳು. ಒಮ್ಮೆಲೇ ಸಭೆಯಲ್ಲಿ ಮಿಂಚಿನ ಸಂಚಾರ! ಅದೆಂತಹ ಅದ್ಭುತ ಕಂಠಸಿರಿ! ಪುಟ್ಟ ಬಾಲಕಿಯ ಹಾಡಿದ ಸುಶ್ರಾವ್ಯ ದೇವರ ನಾಮ ಮುಗಿಯುತ್ತಿದ್ದಂತೆ ಮಂತ್ರಮುಗ್ಧರಾಗಿದ್ದ ಸಭಿಕರು ಹಲವು ಸೆಕೆಂಡ್ ಕಾಲ ಕರತಾಡನಗೈದಿದ್ದರು. ಸಭೆ ಮುಗಿದ ನಂತರ ಅವಳನ್ನು ಅಭಿನಂದಿಸಲು ಸಾಲುಗಟ್ಟಿದ್ದರು.

ಈ ಪುಟಾಣಿಯ ಹೆಸರು ಆರೋಹ. ಇವರ ತಂದೆ ಕಿರಣ್ ಸಾಲಿಗಾಮೆ, ತಾಯಿ ಮೈತ್ರಿ ಸಾಲಿಗಾಮೆ ಇವರು ನಮ್ಮ ರಾಜ್ಯದವರು, ಈಗ ನ್ಯೂಜಿಲೆಂಡ್ ದೇಶದ ಕ್ರೈಸ್ಟ್ ಚರ್ಚ್‌ನಲ್ಲಿ ಉದ್ಯೋಗ ನಿಮಿತ್ತ ನೆಲೆಸಿದ್ದಾರೆ. ಆರೋಹಳು ಅಲ್ಲಿನ ಮೆರಿನ್ ಸ್ಕೂಲಲ್ಲಿ 3ನೇ ತರಗತಿ ಓದುತ್ತಿದ್ದಾಳೆ. ಆರೋಹಳಿಗೆ ಬಾಲ್ಯದಿಂದಲೂ ಲಲಿತಕಲೆಗಳಲ್ಲಿ ಅತೀವ ಆಸಕ್ತಿ. ನಾಲ್ಕು ವರ್ಷದವಳಿದ್ದಾಗಲೇ ಆನ್ ಲೈನ್ ಭಾವಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿ ವಿಶೇಷ ಪ್ರಶಸ್ತಿಗಳಿಸಿದ್ದಳು. ಶಾಲಾ ಕಾರ್ಯಕ್ರಮಗಳು,ಹಲವು ಕನ್ನಡಪರ ವೇದಿಕೆಗಳಲ್ಲಿ ಗಾಯನ, ನೃತ್ಯ, ಭಾಷಣ ಮಾಡಿದ್ದಾಳೆ. ಇವಳು ಹಲವು ಗೀತೆಗಳನ್ನು ಕಲಿತಿದ್ದಾಳೆ; ಕಾರ್ಯಕ್ರಮಗಳಲ್ಲಿ, ಆನ್ ಲೈನ್ ವೇದಿಕೆಗಳಲ್ಲಿ ಕನ್ನಡ ದೇವರನಾಮ, ಭಾವಗೀತೆಗಳನ್ನು ಒಂದಿನಿತೂ ಬೇಸರಿಸದೇ ಪುಂಖಾನುಪುಂಖವಾಗಿ ಹಾಡಲಾರಂಭಿಸಿದರೆ ಪ್ರೇಕ್ಷಕರಿಗೆ ಸುಖಾನುಭೂತಿ.

4 ನೇ ವಯಸ್ಸಿನವಳಿರುವಾಗಲೇ, 28, ಮೇ ,2022ರಂದು ಬೆಂಗಳೂರಿನ ಉದಯ ಕಲಾನಿಕೇತನ ಸಂಸ್ಥೆಯ ನಾಟಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮೊತ್ತಮೊದಲ ಪ್ರಾರ್ಥನಾ ಗೀತೆ ಹಾಡಿದಳು. ತನ್ನ 5 ನೇ ವಯಸ್ಸಿನಲ್ಲಿಯೇ ಇಡೀ ಹನುಮಾನ್ ಚಾಲೀಸಾವನ್ನು ಪುಸ್ತಕ ನೋಡದೇ ಅನನ್ಯ ಭಕ್ತಿಪರವಶಳಾಗಿ ನಿರರ್ಗಳವಾಗಿ ಹೇಳುತ್ತಿದ್ದ ಆರೋಹ ಬೆಂಗಳೂರಿನ ಗುರು ಪ್ರಾದೇಶ್ ಆಚಾರ್ಯರ ಮೂಲಕ ಅಂತರ್ಜಾಲದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ವಯಲಿನ್ ಕಲಿಯುತ್ತಿದ್ದಾಳೆ.

ಉದ್ದ ಜಡೆ, ಹಣೆಗೆ ಬೊಟ್ಟು, ಲಂಗ ದಾವಣಿ, ಕೈತುಂಬಾ ಗಾಜಿನ ಬಳೆ ಧರಿಸಿ, ಈ ಪೋರಿ ಪೋಷಕರ ಬೆಂಬಲದ ಬಲದಿಂದ ವಿದೇಶದಲ್ಲೂ ಭಾರತೀಯ ಸಂಸ್ಕೃತಿಯನ್ನು ಟಿಸಿಲೊಡೆಸಿ ಪಸರಿಸುತ್ತಿದ್ದಾಳೆ. ಕನ್ನಡ ಗೀತೆಗಳ ಜತೆಯಲ್ಲೇ, ಹಳೆಯ ಹಿಂದಿ ಚಲನಚಿತ್ರ ಗೀತೆಗಳೆಂದರೆ ಇವಳಿಗೆ ಅಚ್ಚುಮೆಚ್ಚು. ಲತಾ ಮಂಗೇಶ್‌ಕರ್, ಕಿಶೋರ್ ಕುಮಾರ್, ರಫಿಯವರ ಗೀತೆಗಳೆಂದರೆ ಇಷ್ಟ.

ಸ್ಪಷ್ಟ ಧ್ವನಿಯಲ್ಲಿ ಮಧುರವಾಗಿ ಹಾಡುವ ಆರೋಹಳಿಗೆ ಕನ್ನಡ ದಾಸ ಸಾಹಿತ್ಯವೆಂದರೆ ಅದಮ್ಯ ಅಭಿಮಾನ. ಹಲವು ಗೀತೆಗಳನ್ನು, ದಾಸರ ಪದಗಳನ್ನು ಕಲಿತಿದ್ದಾಳೆ, ಕಾರ್ಯಕ್ರಮದಲ್ಲಿ ಹಾಡುತ್ತಾಳೆ. ಈಕೆಗೆ ಭವಿಷ್ಯದಲ್ಲಿ ಉತ್ತಮ ಗಾಯಕಿ, ನರ್ತನಪಟು ಆಗುವ ಆಸೆಯಿದೆ. ವಿಶೇಷವೆಂದರೆ ಇವಳು ಹಾಡುವ ಎಲ್ಲ ಗೀತೆಗಳು ಬಾಯಿಪಾಠವಾಗಿದ್ದು ಎಲ್ಲವನ್ನೂ ಪತ್ರ ನೋಡದೇ ಹಾಡಬಲ್ಲಳು!

ಮನೆಯಲ್ಲಿ ಮತ್ತು ತರಗತಿಯ ಭಾರತೀಯ ಸಹಪಾಠಿಗಳೊಂದಿಗೆ ಅರಳು ಹುರಿದಂತೆ ಕನ್ನಡದಲ್ಲಿ ಮಾತು. ಈಜು. ಕ್ರಿಕೆಟ್, ಜಿಮ್ನಾಸ್ಟಿಕ್ ಮತ್ತಿತರ ಕ್ರೀಡಾ ತರಬೇತಿ ಪಡೆಯುತ್ತಿರುವ ಆರೋಹಳ ಬಹುಮುಖ ಪ್ರತಿಭೆ, ಧೀಶಕ್ತಿಯನ್ನು ಕಂಡು ನ್ಯೂಜಿಲೆಂಡ್ ಕನ್ನಡಪರ ಭಕ್ತಿಮಾರ್ಗ ಸಂಸ್ಥೆ 2022 ರ ಮಾರ್ಗಿರಿ ಉತ್ಸವದಲ್ಲಿ 'ಮಧುರವಾಣಿ' ಎಂಬ ಬಿರುದು ಕೊಟ್ಟು ಸನ್ಮಾನಿಸಿದೆ.

ಏಳು ವರ್ಷದ ಆರೋಹಳಿಗೆ ಕಲಾಸರಸ್ವತಿ ಇನ್ನೂ ಹೆಚ್ಚು ಆಶೀರ್ವದಿಸಲಿ ಮತ್ತು ಈಕೆಯ ಗಾಯನ ಇನ್ನೂ ಏಳಿಗೆ ಹೊಂದಲಿ ಎಂದು ಹಾರೈಸೋಣ.

ಸಂಪಾದನೆಯ ಉದ್ದೇಶವೇನು?

● ಬೇಲೂರು ರಾಮಮೂರ್ತಿ

ಒಂದು ಗುರುಕುಲದಲ್ಲಿ ಅನೇಕ ವಿದ್ಯಾರ್ಥಿಗಳು ಪಾಠ ಕಲಿಯುತ್ತಿದ್ದರು. ಎಷ್ಟು ವಿದ್ಯಾರ್ಥಿಗಳು ಬಂದರೂ ಗುರುಗಳು ಸೇರಿಸಿಕೊಳ್ಳುತ್ತಿದ್ದರು. ಆದರೆ ಯಾವ ವಿದ್ಯಾರ್ಥಿಯಿಂದಲೂ ಗುರುದಕ್ಷಿಣೆ ಕೇಳುತ್ತಿರಲಿಲ್ಲ. ಯಾರಾದರೂ ವಿದ್ಯಾರ್ಥಿಗಳು ಗುರುದಕ್ಷಿಣೆ ಕೊಟ್ಟರೆ ಬೇಡ ಎನ್ನುತ್ತಿರಲಿಲ್ಲ. ಎಷ್ಟು ಏನು ಅಂತ ಕೇಳದೇ ಗೋಲಕದಲ್ಲಿ ಹಾಕಿಬಿಡು ಎನ್ನುತ್ತಿದ್ದರು. ಗುರುದಕ್ಷಿಣೆ ಕೊಡದೇ ಇರುವ ವಿದ್ಯಾರ್ಥಿಗಳಿಗೂ ಗುರುದಕ್ಷಿಣೆ ಕೊಡುವ ವಿದ್ಯಾರ್ಥಿಗಳಿಗೂ ಯಾವುದೇ ವ್ಯತ್ಯಾಸವಿಲ್ಲದೇ ಪಾಠ ಮಾಡುತ್ತಿದ್ದರು. ಯಾರಾದರೂ ವಿದ್ಯಾರ್ಥಿಗಳು ಕಲಿಯುವುದರಲ್ಲಿ, ನೆನಪಿಟ್ಟುಕೊಳ್ಳುವುದರಲ್ಲಿ ತುಸು ಹಿಂದೆ ಇದ್ದರೆ ಅಂಥಾ ವಿದ್ಯಾರ್ಥಿಗಳಿಗೆ ಮತ್ತೆ ಮತ್ತೆ ಪಾಠ ಮಾಡುತ್ತಿದ್ದರು.

ಒಂದು ದಿನ ಒಬ್ಬ ವಿದ್ಯಾರ್ಥಿ 'ಗುರುಗಳೇ, ನೀವು ದಕ್ಷಿಣೆ ಕೊಡದ ವಿದ್ಯಾರ್ಥಿಗಳನ್ನು ಕೇಳುವುದೇ ಇಲ್ಲ' ಅಂತ ವಿಚಾರಿಸಿದ. ಅದಕ್ಕೆ ಗುರುಗಳು 'ನೋಡಪ್ಪಾ, ಮನುಷ್ಯನಿಗೆ ತಕ್ಕಮಟ್ಟಿಗೆ ಅನುಕೂಲ ಇದ್ದರೆ ಅವನು ಬೇರೊಂದು ಕಡೆ ಕೈ ಚಾಚಬಾರದು. ಈಗ ನನಗೆ ನನ್ನ ಕುಟುಂಬಕ್ಕೆ ಸಾಕಾಗುವಷ್ಟು ಇದೆ. ಹೀಗಿರುವಾಗ ನಾನು ಶಿಷ್ಯರಲ್ಲಿ ಏಕೆ ಕೇಳಬೇಕು. ನನಗೆ ನೆಮ್ಮದಿ ಕೊಡುವ ಕೆಲಸ ಎಂದರೆ ನಾನು ನಿಮಗೆ ಪಾಠ ಹೇಳಿಕೊಡುವುದು. ನಾವು ಸದಾ ನಮಗೆ ನೆಮ್ಮದಿ ತರುವಂಥಾ ಜ್ಞಾನ ಹೆಚ್ಚಿಸುವಂಥಾ ಕೆಲಸ ಮಾಡಬೇಕು. ಸಾಮಾನ್ಯವಾಗಿ ಯಾರಾದರೂ ಯಾವುದಾದರೂ ಉದ್ಯೋಗ ಮಾಡುತ್ತಿದ್ದಾರೆ ಎಂದರೆ ಅವರ ಹೊಟ್ಟೆ ಬಟ್ಟೆಗೆ ಮತ್ತು ಐಷಾರಾಮಿ ವಸ್ತುಗಳಿಗೆ ಎನ್ನುವುದು ಸಾಮಾನ್ಯಭಾವ. ಆದರೆ ಮನುಷ್ಯನ ಸಂಪಾದನೆ ಅವನ ಅವಶ್ಯಕತೆಯ ಐಷಾರಾಮಿ ವಸ್ತುಗಳನ್ನೂ ಮೀರಿ ಹೋಗಬೇಕು. ಅಂದರೆ ನಾವು ನಮ್ಮ ಮನಸಿನ ಆನಂದಕ್ಕೆ ಕೆಲಸ ಮಾಡಬೇಕು. ನಾನು ನಿಮಗೆಲ್ಲಾ ಪಾಠ ಮಾಡಿದರೆ ನನಗೆ ತಿಂಗಳಿಗೆ ಇಷ್ಟು ಸಂಪಾದನೆ ಆಗುತ್ತದೆ ಎನ್ನುವುದಕ್ಕಿಂತ ನಾನು ನಿಮಗೆಲ್ಲಾ ಪಾಠ ಹೇಳಿಕೊಟ್ಟರೆ ನಿಮಗೆ ಜೀವನದಲ್ಲಿ ಒಳ್ಳೆಯದಾಗುತ್ತದೆ ಎನ್ನುವುದು ಬಹಳ ಮುಖ್ಯವಾಗಬೇಕು.

'ಕೆಲವು ಉದಾಹರಣೆ ಕೊಡಬೇಕು ಎಂದರೆ ಸಂಗೀತ ನುಡಿಸುತ್ತಿದ್ದ ಬಿಸ್ಮಿಲ್ಲಾಖಾನ್ ಹೊಟ್ಟೆಪಾಡಿಗೆ ಸಂಗೀತ ನುಡಿಸುತ್ತಿರಲಿಲ್ಲ! ನಮ್ಮ ಹಿಂದಿನ ಅನೇಕ ವಿಜ್ಞಾನಿಗಳು ಗುರುತ್ವಾಕರ್ಷಣೆ ಕಂಡುಹಿಡಿದ ಐನ್‌ಸ್ಟೈನ್, ರೇಡಿಯೋ ಕಂಡುಹಿಡಿದ ಮಾರ್ಕೋನಿ, ಟೆಲಿಫೋನ್ ಕಂಡುಹಿಡಿದ ಅಲೆಗ್ಸಾಂಡರ್ ಗ್ರಾಹಂಬೆಲ್ ಮುಂತಾದವರು ಕೇವಲ ಹಣಕ್ಕಾಗಿ ದುಡಿಯದೇ ದೇಶದ ಹಿತಕ್ಕಾಗಿ, ಸಾಮಾಜಿಕ ಸುಧಾರಣೆಗಳಿಗಾಗಿ ದುಡಿದರು. ಅದಕ್ಕೇ ನಮ್ಮ ದುಡಿಮೆ ಬರೀ ದುಡಿಮೆ ಆಗದೇ ಅದೊಂದು ಯಜ್ಞ ಆಗಬೇಕು. ಸಾಧಾರಣ ನೆಮ್ಮದಿ, ಸುಖಕ್ಕಿಂತ ದೀರ್ಘಕಾಲದ ನೆಮ್ಮದಿಗಾಗಿ ದುಡಿಯಬೇಕು. ನೀವುಗಳೂ ಮುಂದೆ ಜೀವನೋಪಾಯಕ್ಕಾಗಿ ಯಾವುದಾದರೂ ಉದ್ಯೋಗ ಹಿಡಿದಾಗ ಇದನ್ನು ನೆನಪಿಟ್ಟುಕೊಂಡಿರಿ. ಜೀವನದ ಭದ್ರತೆಗೆ ಹಣ ಸಂಪಾದನೆ ಅವಶ್ಯಕ. ಆದರೆ ಅದಕ್ಕೂ ಮೀರಿದ್ದು ಇನ್ನೊಂದು ಇದೆ ಅಂತ ಅಂದುಕೊಂಡಾಗ ನಿಮ್ಮ ಸಂಪಾದನೆಯಲ್ಲಿ ಸತ್ಯ, ಧರ್ಮ ಇರುತ್ತದೆ, ಅದೇ ನಿಮ್ಮನ್ನು ಸದಾ ಕಾಪಾಡುವುದು' ಎಂದರು.

ನಿಜ ಅಲ್ಲವೇ. ಯಾವುದಾದರೂ ಒಂದು ದಾರಿಯಿಂದ ಸಂಪಾದನೆ ಮಾಡುತ್ತೀವಿ ಎನ್ನುವುದಕ್ಕಿಂತ ನ್ಯಾಯವಾದ, ಸತ್ಯವಾದ ದಾರಿಯಲ್ಲಿ ಸಂಪಾದನೆ ಮಾಡುತ್ತೀವಿ ಎನ್ನುವುದು ಮುಖ್ಯ.

ಕುಸಿದ ಸೇತುವೆ ನಲುಗಿದ ಪರಿಸರ

ಬಹುಬೇಗನೆ ಕುಸಿದ ಕಾಳಿ ಸೇತುವೆಯು ಒಂದು ಇಂಜಿನಿಯರಿಂಗ್ ದುರಂತ. ಕುಸಿದು ಹೋದ ಅದರ ಭಾಗಗಳನ್ನು ತೆಗೆಯುವಾಗ, ನದಿ ಮತ್ತು ಕಡಲಿನ ಪರಿಸರಕ್ಕೆ ಹಾನಿಯಾಗದಂತೆ ಎಚ್ಚರಿಕೆ ವಹಿಸಲಾಗುತ್ತಿದೆ.

● ಮೋಹನ ಭಟ್ಟ, ಅಗಸೂರು

ಕಳೆದ ಆಗಸ್ಟ್‌ನಲ್ಲಿ ಕುಸಿದು ಹೋದ ಕಾಳಿ ಸೇತುವೆಯ ಅಳಿದುಳಿದ ಭಾಗಗಳನ್ನು ತೆಗೆಯುವ ಕಾರ್ಯ ಕಳೆದ ಎರಡು ತಿಂಗಳಿಂದ ನಡೆಯುತ್ತಿದೆ. ಇದೇ ಹಳೆ ಸೇತುವೆಗೆ ಆಧಾರವಾಗಿದ್ದ ಭಾರೀ ಕಾಂಕ್ರೀಟ್ ಕಾಲಮ್ ಕುಸಿದಿದೆ.

ಬೃಹತ್ ಕ್ರೇನುಗಳನ್ನು ಬಳಸಿ ಕುಸಿದ ಸೇತುವೆಯ ಭಾಗಗಳನ್ನು ತೆಗೆಯುವದು ತಾಂತ್ರಿಕವಾಗಿ ಹಲವು ಸವಾಲುಗಳನ್ನು ಎದುರಿಸಿದೆ. ಹೊಸ ಸೇತುವೆಯು ಸನಿಹದಲ್ಲಿಯೇ ಇರುವದರಿಂದ ಅದಕ್ಕೆ ತೊಂದರೆಯಾಗದಂತೆ ಕಾಳಜಿ ವಹಿಸಲಾಗಿದೆ. ಇಪ್ಪತ್ನಾಲ್ಕು ಗಂಟೆಯೂ ವಾಹನ ಸಂಚಾರ ಇರುವದರಿಂದ ಕೂಡ ಕಾಮಗಾರಿಯ ತೀವ್ರತೆಯನ್ನು ಅವಲಂಬಿಸಿದೆ.

ಕಾಳಿ ನದಿಯು ಕಡಲನ್ನು ಸೇರುವ ವಿಸ್ತಾರವಾದ ಪ್ರದೇಶ ಅತ್ಯಂತ ಸೂಕ್ಷ್ಮವಾದದ್ದು. ಅನೇಕ ಕಡಲ ಜೀವಿಗಳು ನದಿಯ ಸಂಗಮಪ್ರದೇಶದಲ್ಲಿ ಮಾತ್ರ ಬದುಕಿ ಉಳಿಯುತ್ತವೆ. ವಿವಿಧ ರೀತಿಯ ಮೃದ್ವಂಗಿಗಳು, ಜಲಚರಗಳು ಇಂತಹ ಪರಿಸರದಲ್ಲಿ ಮಾತ್ರ ಇರುತ್ತವೆ. ಹೀಗಾಗಿ ಸೇತುವೆಯನ್ನು ಕತ್ತರಿಸಿ ಹೊರತೆಗೆಯುವಾಗ, ಸುತ್ತಲಿನ ಪರಿಸರವನ್ನೂ ಕಾಪಾಡುವಂತೆ ಎಚ್ಚರಿಕೆ ವಹಿಸಲಾಗಿದೆ.

ಕಾರವಾರದ ಕಡಲಜೀವ ಶಾಸ್ರ ಸ್ನಾತಕೋತ್ತರ ಅಧ್ಯಯನ ಕೇಂದ್ರ ದಲ್ಲಿ ಹಲವು ವರ್ಷಗಳ ಕಾಲ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರುವ ಹಾಗು ಕಡಲ ಪರಿಸರದ ಕುರಿತು ಅಧ್ಯಯನ ಮಾಡಿರುವ ಡಾ.ಎನ್.ವಿ.ನಾಯಕ ಅವರು ವ್ಯಕ್ತ ಪಡಿಸಿರುವ ಅಭಿಪ್ರಾಯ ಕೆಳಗಿನಂತಿದೆ.

'ಕಾಳಿ ಹಾಗೂ ಕಡಲ ವಿಶಾಲವಾದ ಸಂಗಮ ಪ್ರದೇಶವು ವೈಜ್ಞಾನಿಕವಾಗಿ ಮಹತ್ವವನ್ನು ಪಡೆದಿದೆ. ಭೂಸಾರಿಗೆ ಸೇತುವೆ ಹಾಗೂ ರೈಲು ಸೇತುವೆಗಳು ನಿರ್ಮಾಣವಾದ ಮೇಲೆ ಹಿನ್ನೀರು ಪ್ರದೇಶದಲ್ಲಿ ಮರಳು ದಿಬ್ಬಗಳು ಕಾಣಿಸಿಕೊಂಡಿವೆ. ಇದು ಜಲಪ್ರವಾಹಕ್ಕೆ ತೊಂದರೆಯಾಗಿದೆ ಎಂದರ್ಥವಾಗಿದೆ. ಸಹಜವಾಗಿಯೇ ಕಡಲಜೀವಿಗಳ ಪರಿಸರಕ್ಕೆ ತೊಂದರೆಯಾಗಿದೆ. ಕಾಳಿನದಿಯ ಹಿನ್ನೀರು ಪ್ರದೇಶವಾದ ನಾಕುದಾ ಮುಲ್ಲಾ ಸದಾಶಿವಗಡ ಮುಂತಾದ ಕಡೆ ಹರಿವು ಇರುವ ಪ್ರದೇಶದಲ್ಲಿ ಮರಳು ಶೇಖರಣೆಯು ಕಡಲಜೀವಿಗಳಿಗೆ ಮಾರಕವಾಗಿದೆ. ಸಂಗಮಪ್ರದೇಶದಲ್ಲಿ ನೀರು ಏರಳಿತಕ್ಕೆ ಅಭಿವೃದ್ಧಿ ಚಟುವಟಿಕೆಗಳಿಂದ ಯಾವ ತೊಂದರೆಯೂ ಆಗಬಾರದು' ಎಂಬ ಅಭಿಪ್ರಾಯ ವನ್ನು ವ್ಯಕ್ತ ಪಡಿಸಿದ್ದಾರೆ.

ಇನ್ನು ಈಗ ನಡೆದಿರುವ ಕಾಳಿ ಹಳೆಯ ಸೇತುವೆಯನ್ನು ತೆಗೆಯುವ ಕಾಮಾಗಾರಿಯ ವೇಳೆ ಕಾಂಕ್ರೀಟ್, ಕಬ್ಬಿಣದ ಚೂರುಗಳನ್ನು ನೀರಿಗೆ ಎಸೆದರೆ, ಕಾಳಿನದಿಯ ಪ್ರವಾಹಕ್ಕೆ ಅಡೆತಡೆಯಾಗಿ, ಹರಿಯುವ ನೀರಿನ ದಿಕ್ಕು ಬದಲಾಗಬಹುದು. ಹಳೆ ಸೇತುವೆಯ ತ್ಯಾಜ್ಯ ವಿಲೇವಾರಿಮಾಡುವಾಗ ಕೂಡ ಕಠಿಣ ನಿಯಮಪಾಲನೆ ಮಹತ್ವದ್ದಾಗಿದೆ ಎಂದು ಡಾ.ನಾಯ್ಕ ಅವರು ವ್ಯಕ್ತ ಪಡಿಸಿದ್ದಾರೆ.

ನಿರ್ಮಾಣಗೊಂಡು, ಕೆಲವೇ ದಶಕಗಳಲ್ಲಿ ಕುಸಿದು ಹೋಗ ಕಾಳಿ ಸೇತುವೆಯ ಕಥೆಯನ್ನು ಹೇಳುತ್ತಾ ಹೋದರೆ, ಮನಸ್ಸಿಗೆ ವ್ಯಥೆಯಾಗುವುದಂತೂ ನಿಜ.

ಅರಮನೆ ಎದುರು ಸ್ಕೂಟರ್?

● ಶಶಾಂಕ್ ಮುದೂರಿ

ಒಂದೆಡೆ ಸಾಲಾಗಿ ನಿಂತಿರುವ ಐತಿಹಾಸಿಕ ಮೌಲ್ಯದ ತೋಪುಗಳು ಮತ್ತು ಕುಶಾಲುತೋಪುಗಳು; ಅದರ ಪಕ್ಕದಲ್ಲೇ, ಪೆಟ್ರೋಲ್‌ನಿಂದ ಚಲಿಸುವ, ಪೆಟ್ರೋಲ್ ಹೊಗೆ ಉಗುಳುವ ಸ್ಕೂಟರ್‌ಗಳು. ಅಲ್ಲಿನ ತೋಪುಗಳನ್ನು ನೋಡಿ ವಿದೇಶಿ ಪ್ರವಾಸಿಗರು ಮತ್ತು ನಮ್ಮ ದೇಶದ ಪ್ರವಾಸಿಗರು ಅಚ್ಚರಿಪಡುತ್ತಿದ್ದಾರೆ; ಹಾಗೆಯೇ ಪಕ್ಕದಲ್ಲಿ ನಿಂತಿರುವ ಸ್ಕೂಟರುಗಳು, ಮೋಟಾರ್‌ಬೈಕ್‌ಗಳು ಇಲ್ಲೇನು ಮಾಡುತ್ತಿವೆ ಎಂದು ವಿಸ್ಮಯವನ್ನೂ ಪಡುತ್ತಿದ್ದಾರೆ!

ಇದು ಮೈಸೂರು ಅರಮನೆಯ ಎದುರಿನ ದೃಶ್ಯ. ಅರಮನೆಯ ದರ್ಬಾರ್ ಹಾಲ್ ಪ್ರದೇಶವು ಸಾಕಷ್ಟು ಪ್ರಖ್ಯಾತ. ಮೈಸೂರು ಮಹಾರಾಜರು ಸಾರ್ವಜನಿಕ ದರ್ಬಾರ್ ನಡೆಸುವ ಎತ್ತರವಾದ ಪ್ರದೇಶ; ಅಲ್ಲಿ ಸಾಕಷ್ಟು ಐತಿಹಾಸಿಕ ವರ್ಣ ಚಿತ್ರಗಳಿವೆ; ಕಲಾತ್ಮಕ ಕಂಬಗಳಿವೆ. ಅಲ್ಲಿಂದ ಕೆಳಗೆ ದೃಷ್ಟಿ ಹಾಯಿಸಿ ದರೆ, ಎದುರಿನಲ್ಲಿ ವಿಶಾಲವಾದ ಮೈದಾನವಿದೆ; ಇದು ಅರಮನೆಯ

ಮುಂಭಾಗದ ಮೈದಾನ. ಜನಸಾಮಾನ್ಯರು ದರ್ಬಾರ್ ನೋಡಲು ನೆರೆಯುವ ಜಾಗ; ಈಗಲೂ ನವರಾತ್ರಿಯ ಸಮಯದಲ್ಲಿ ಅಲ್ಲಿನ ವೈಭವ ಅನನ್ಯ, ಬಹು ಪ್ರಖ್ಯಾತ.

ಇದೇ ಅಂಗಣದಲ್ಲಿ ಸಾಲಾಗಿ ತೋಪುಗಳನ್ನು ಜೋಡಿಸಿಟ್ಟಿದ್ದಾರೆ. ಮಹಾರಾಜರ ಕಾಲದಲ್ಲಿ ಉಪಯೋಗಗೊಂಡ, ಐತಿಹಾಸಿಕ ಮೌಲ್ಯ ಹೊಂದಿದ ತೋಪುಗಳು ಮತ್ತು ಕುಶಾಲು ತೋಪುಗಳು ಇಂದು ಅರಮನೆಯ ದರ್ಬಾರ್ ಹಾಲಿನ ಕೆಳಭಾಗದಲ್ಲೇ ಇವೆ. ಅದರ ಪಕ್ಕದಲ್ಲೇ, ಸಾಲಾಗಿ ಸ್ಕೂಟರ್‌ಗಳನ್ನು ನಿಲ್ಲಿಸಲಾಗಿದೆ! ಈ ಸ್ಕೂಟರುಗಳೆಲ್ಲವೂ ಇಪ್ಪತ್ತೊಂದನೆಯ ಶತಮಾನದಲ್ಲಿ ನಾಗರಿಕರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗುವ ವಾಹನಗಳು. ಆದರೆ ಇಲ್ಲಿ ಪಾರ್ಕ್ ಮಾಡಿರುವುದು, ಸಿಬ್ಬಂದಿಯ ವಾಹನಗಳು. ಅರಮನೆಗೆ ನಿತ್ಯ ಉದ್ಯೋಗಕ್ಕೆ ಬರುವ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಯವರು, ಅರಮನೆಯ ಮುಂಭಾಗದಲ್ಲೇ ತಮ್ಮ ಸ್ಕೂಟರುಗಳನ್ನು ಸಾಲಾಗಿ ನಿಲ್ಲಿಸಿದ್ದಾರೆ.

ಅರಮನೆಯ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಯವರು, ತಮ್ಮ ವಾಹನಗಳನ್ನು ದರ್ಬಾರ್ ಹಾಲ್ ಎದುರಿನಲ್ಲೇ ನಿಲ್ಲಿಸುವ ಬದಲು, ತುಸು ಮರೆಯಾಗಿ, ತುಸು ದೂರದಲ್ಲಿ ನಿಲ್ಲಿಸಬಹುದಲ್ಲವೆ? ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಅರಮನೆಯ ಆವರಣಕ್ಕೆ ಸ್ಕೂಟರ್ ಮತ್ತು ಮೋಟಾರ್ ಸೈಕಲ್‌ಗಳ ಪ್ರವೇಶವನ್ನೂ ನಿಷೇಧಿಸುವುದು ಸೂಕ್ತ; ಇದರಿಂದ, ಅಲ್ಲಿನ ವಾತಾವರಣವೂ ಸ್ವಚ್ಛವಾಗಿರುತ್ತದೆ ಮತ್ತು ಐತಿಹಾಸಿಕ ತೋಪುಗಳ ವೀಕ್ಷಣೆಗೆ ಹೆಚ್ಚಿನ ಮಹತ್ವ ದೊರಕುತ್ತದೆ.

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಮಾಘ ಮಾಸ, ಷಷ್ಠಿ ತಿಥಿ (ಬೆಳಗ್ಗೆ 7.32ರವರೆಗೆ), ಕೃಷ್ಣ ಪಕ್ಷ, ಸ್ವಾತಿ ನಕ್ಷತ್ರ, ವೃದ್ಧಿ ಯೋಗ, ರಾಹುಕಾಲ ಮಧ್ಯಾಹ್ನ 12.33ರಿಂದ 2.02ರವರೆಗೆ, ಅಭಿಜಿತ್ ಲಗ್ನವಿಂದು ಲಭ್ಯವಿಲ್ಲ.

ಮನೆಮದ್ದು

ಋತುಸ್ರಾವವು ಅಧಿಕವಾಗಿದ್ದರೆ, ಮಾವಿನಕಾಯಿಯ ಸಿಪ್ಪೆಯನ್ನು ಸ್ವಲ್ಪ ತುಪ್ಪದೊಂದಿಗೆ ಹುರಿದು 2-3 ಚಮಚದಷ್ಟು ಸೇವಿಸುವುದರಿಂದ ಸಮಸ್ಯೆ ಹತೋಟಿಗೆ ಬರುವುದು. ಬಿಳಿ ದಾಸವಾಳ ಹೂವನ್ನು ನುಣ್ಣಗೆ ಅರೆದು ಒಂದು ಲೋಟ ಹಾಲಿನಲ್ಲಿ ಕದಡಿ ಸೇವಿಸಿದರೂ ಈ ಸಮಸ್ಯೆ ಪರಿಹಾರವಾಗುವುದು.

ಸೌಂದರ್ಯ ಸೂತ್ರ

ಮುಖವು ತಾಜಾ ಆಗಿ ಹೊಳೆಯುತ್ತಿರಬೇಕೇ? ಒಂದಿಷ್ಟು ಐಸ್ ಕ್ಯೂಬ್ ತೆಗೆದಿಟ್ಟುಕೊಳ್ಳಿ. ಪುಟ್ಟ ಸೌತೆಕಾಯಿಯೊಂದನ್ನು ತುರಿದು ಅದಕ್ಕೆ ತಲಾ ಒಂದು ಚಹಾ ಚಮಚದಷ್ಟು ಜೇನುತುಪ್ಪ, ಸ್ಕಿನ್ ಟಾನಿಕ್, ಎರಡು ಚಹಾ ಚಮಚದಷ್ಟು ಹಾಲು ಬೆರೆಸಿ ಚೆನ್ನಾಗಿ ಕಲಸಿ. ಅದಕ್ಕೆ ಐಸ್ ಕ್ಯೂಬ್ ಸೇರಿಸಿ ಮುಖಕ್ಕೆ ಲೇಪಿಸಿ, ಕೆಲ ಕಾಲದವರೆಗೆ ಬಿಟ್ಟು ನಂತರ ತೊಳೆದುಕೊಳ್ಳಿ.

ದಿನ ಭವಿಷ್ಯ

ಮೇಷ: ಬಾಳಸಂಗಾತಿಯ ಮನೆಯವರ ಕಡೆಯಿಂದ ನಿಮಗೆ ಉಡುಗೊರೆ ಸಿಗಲಿದೆ. ಇದನ್ನು ಅನ್ಯಥಾ ಭಾವಿಸದೆ, 'ದೊಡ್ಡವರ ಆಶೀರ್ವಾದ' ಎಂದು ಪರಿಗಣಿಸಿ ಸ್ವೀಕರಿಸಿ. ಎಂಥದೇ ಒತ್ತಡ ಎದುರಾದರೂ ಸತ್ಯಮಾರ್ಗ ಕೈಬಿಡಬೇಡಿ.

ವೃಷಭ: ಚಾಡಿಮಾತಿಗೆ ಕಿವಿಗೊಡದಿರಿ, ನಿಮ್ಮ ಸ್ವಂತಿಕೆ ಮತ್ತು ಅಸ್ಮಿತೆ ಕಾಪಾಡಿಕೊಳ್ಳಿ. ವಿದೇಶ ಪ್ರಯಾಣದ ನಿಮ್ಮ ಆಸೆಗೆ ಹಿತೈಷಿಯೊಬ್ಬರು ಬಲವನ್ನು ತುಂಬಲಿದ್ದಾರೆ. ಸಾಲದ ತಂಟೆಗೆ ಹೋಗಬೇಡಿ.

ಮಿಥುನ: ಬಹಳ ದಿನಗಳಿಂದ ತಪ್ಪಿಹೋಗಿದ್ದ ದೇವತಾ ಕಾರ್ಯವನ್ನು ನಡೆಸಲು ಅನುಕೂಲವಾಗಿದ್ದಕ್ಕೆ ನಿಮ್ಮ ಮನಸ್ಸು ಪ್ರಫುಲ್ಲಿತಗೊಳ್ಳುವುದು. ಹಂಚಿಕೊಂಡು ತಿನ್ನುವುದರಲ್ಲಿ ಸಮಾಧಾನವಿದೆ ಎಂಬುದನ್ನು ಅರಿಯುವಿರಿ.

ಕಟಕ: ನಿಮ್ಮ ಪರಿಶ್ರಮದ ದುಡಿಮೆ ಹಾಗೂ ಕಾರ್ಯದಕ್ಷತೆಯು ಕಚೇರಿಯ ಮುಖ್ಯಸ್ಥರ ಗಮನಕ್ಕೆ ಬಂದು, ಯಥೋಚಿತ ಬಡ್ತಿಯನ್ನು ನೀಡಲಿದ್ದಾರೆ. ಸಾಧ್ಯವಾದಲ್ಲಿ ಸನಿಹದ ಗುರುಪೀಠಕ್ಕೆ ತೆರಳಿ ನಮಸ್ಕಾರ ಹಾಕಿಕೊಂಡು ಬನ್ನಿ.

ಸಿಂಹ: ಪಾಲುದಾರಿಕೆಯ ಉದ್ಯಮಕ್ಕಿಂತ, ಸ್ವಲ್ಪ ತಡವಾದರೂ ಪರವಾಗಿಲ್ಲ ಏಕಮಾಲೀಕತ್ವದ ಉದ್ಯಮವನ್ನು ನೆಚ್ಚುವುದು ಮೇಲು. ಮಾತಿನ ಮೇಲೆ ಹಿಡಿತವಿರಲಿ. ಕುಟುಂಬದ ಸದಸ್ಯರೊಂದಿಗೆ ಹೆಚ್ಚು ಸಮಯ ವಿನಿಯೋಗಿಸಿ.

ಕನ್ಯಾ: ಹಣ ಸಂಪಾದನೆಯೊಂದೇ ಬದುಕಿಗೆ ನೆಮ್ಮದಿ ನೀಡಲಾರದು. ಚಿತ್ರಕಲೆ, ಸಂಗೀತ, ರಂಗೋಲಿ, ಭಾಷಣಕಲೆ ಇತ್ಯಾದಿ ಮಗ್ಗುಲುಗಳ ಕಡೆಗೂ ಗಮನ ಹರಿಸಿದರೆ ಏಕತಾನತೆ ದೂರವಾಗುತ್ತದೆ.

ತುಲಾ: ನಿಮ್ಮ ಪರಿಣತಿಗೆ ತಕ್ಕಂಥ ಕೆಲಸ ಸಿಗುವವರೆಗೂ, ನೀವು ಕೊಂಚ ರಾಜಿಮಾಡಿಕೊಂಡು ಅನ್ಯಶೈಲಿಯ ಉದ್ಯೋಗ ಮಾಡಬೇಕಾಗಿ ಬರಬಹುದು. ಬೇಸರಿಸದೆ, ಇದನ್ನೂ ಒಂದು ಅನುಭವ ಎಂದುಕೊಳ್ಳಿ.

ವೃಶ್ಚಿಕ: ಬಂಧು-ಮಿತ್ರರು ಆಗ್ರಹಿಸಿದರು ಎಂದ ಮಾತ್ರಕ್ಕೆ ಸಾಲದ ಜಾಮೀನು ಪತ್ರಕ್ಕೆ ಸಹಿ ಹಾಕಬೇಕು ಎಂದೇನೂ ಇಲ್ಲ. ವಿಶ್ವಾಸ ಮತ್ತು ವ್ಯವಹಾರವನ್ನು ಪ್ರತ್ಯೇಕ ನೆಲೆಯಲ್ಲೇ ನಿರ್ವಹಿಸಿ. ಗಣೇಶನನ್ನು ಆರಾಧಿಸಿ.

ಧನು: ನಿಮ್ಮನ್ನು ಹೊಗಳುವವರೆಲ್ಲಾ ನಿಮ್ಮ ಹಿತಚಿಂತಕರಲ್ಲ, ಅವರು ನಿಮ್ಮಿಂದ ಏನೋ ಪ್ರಯೋಜನವನ್ನು ಬಯಸುತ್ತಿರಲಿಕ್ಕೂ ಸಾಕು. ಹೀಗಾಗಿ ವಿವೇಚನಾಪೂರ್ವಕವಾಗಿ ಸಂಬಂಧಗಳನ್ನು ನಿರ್ವಹಿಸಿ.

ಮಕರ: ಪೇಂಟ್ ಮತ್ತು ಹಾರ್ಡ್‌ವೇರ್ ಉದ್ಯಮ ಪ್ರಾಯಶಃ ನಿಮ್ಮ ಕೈಹಿಡಿಯಬಹುದು, ಹಾಗಂತ ಪಾಲುದಾರಿಕೆಗೆ ಮುಂದಾಗಬೇಡಿ ಮತ್ತು ಉದ್ಯಮಕ್ಕೆಂದು ನಿಮ್ಮಲ್ಲಿರಬಹುದಾದ ಮೂಲಧನವನ್ನೇ ವಿನಿಯೋಗಿಸಿ.

ಕುಂಭ: ಮಕ್ಕಳಿಗೆ ಅಗತ್ಯ ಸ್ವಾತಂತ್ರ್ಯ ನೀಡಬೇಕು ಎಂಬುದು ನಿಜವಾದರೂ, ಅವರ ಮೇಲೊಂದು ಹದ್ದಿನ ಕಣ್ಣಿಟ್ಟಿರಬೇಕು ಎಂಬುದನ್ನು ಮರೆಯದಿರಿ. ಅವರ ವಿದ್ಯಾಭ್ಯಾಸದ ಪ್ರಗತಿಯ ಕುರಿತು ಶಾಲೆಯಲ್ಲಿ ವಿಚಾರಿಸಿ.

ಮೀನ: ಹಾಸಿಗೆ ಇದ್ದಷ್ಟು ಕಾಲುಚಾಚಬೇಕು ಎಂಬ ನಿಯಮಕ್ಕೆ ಬದ್ಧರಾಗಿ. ಹಣಕಾಸು ಸಂಬಂಧಿತ ಚೀಟಿ ವ್ಯವಹಾರಗಳು ಅಥವಾ ಮಲ್ಟಿ ಲೆವೆಲ್ ಮಾರ್ಕೆಟಿಂಗ್‌ನಂಥ ಸಾಹಸಕ್ಕೆ ಕೈಹಾಕುವುದು ಬೇಡ. ಸಂಚುಕೋರರಿದ್ದಾರೆ, ಜಾಗ್ರತೆ.

● ಕೆ.ಬಿ.ಸಂತೋಷ್ ಗುರೂಜಿ



ಮಧುರ ಸ್ಮೃತಿ

ವಾವ್! ಇಬ್ಬರು ದಿಗ್ಗಜರ ಸಮ್ಮಿಲನ. ಬರೋಬ್ಬರಿ 2 ವರ್ಷಗಳವರೆಗೆ ಪ್ರದರ್ಶನಗೊಂಡ ಚಲನಚಿತ್ರವೆಂದು ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ದಾಖಲಿಸಲ್ಪಟ್ಟಿದೆ 'ಬಂಗಾರದ ಮನುಷ್ಯ'. ಅಪರಾಧ ಮತ್ತು ಪತ್ತೇದಾರಿ ಹೂರಣದ ಕಾದಂಬರಿಗಳಿಗೆ ಹೆಸರಾಗಿದ್ದ ಟಿ.ಕೆ.ರಾಮರಾವ್ ಅವರು ಬರೆದ ಇದೇ ಹೆಸರಿನ ಸಾಮಾಜಿಕ ಕಾದಂಬರಿಯನ್ನು ಆಧರಿಸಿದ್ದ ಈ ಚಿತ್ರದಲ್ಲಿ, ಮನುಷ್ಯ ಜೀವನದ ವಿವಿಧ ಹಂತಗಳನ್ನು ಸರಳವಾಗಿ ಬಿಡಿಸಿ ಹೇಳುವ 'ನಗುನಗುತಾ ನಲೀ ನಲೀ ಏನೇ ಆಗಲಿ' ಎಂಬ ನಯನ ಮನೋಹರ, ಕರ್ಣಮಧುರ, ನಿತ್ಯನೂತನ ಗೀತೆಯಿದೆ. ಈ ಸೂಪರ್ ಹಿಟ್ ಗೀತೆಯ ಚಿತ್ರೀಕರಣವಾಗುವಾಗ 'ರಾಜೀವ' ಪಾತ್ರಧಾರಿ ಡಾ.ರಾಜ್‌ಕುಮಾರ್ ಅವರು ನಿರ್ದೇಶಕ ಸಿದ್ದಲಿಂಗಯ್ಯನವರ ಜತೆಗೆ ರಸಮಯ ಕ್ಷಣಗಳನ್ನು ಹಂಚಿಕೊಳ್ಳುತ್ತಿರುವಾಗಿನ ಅನನ್ಯ ಚಿತ್ರವಿದು.

ಎಂಥ ಕಷ್ಟ ಬಂದರೂ ಧೃತಿಗೆಡಬೇಡಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಬಹಳ ಹಿಂದೆ ಒಂದು ಹಳ್ಳಿಯಲ್ಲಿ ಒಬ್ಬ ರೈತ ವಾಸವಾಗಿದ್ದ, ಅವನಿಗೆ ಬಹಳ ಸುಂದರವಾದ ಮಗಳಿದ್ದಳು. ದುರದೃಷ್ಟವಶಾತ್, ಆ ರೈತ ತನ್ನ ಗ್ರಾಮದ ತೀರಾ ವಯಸ್ಸಾದ ಜಮೀನ್ದಾರನಿಂದ ಸಾಕಷ್ಟು ಹಣವನ್ನು ಸಾಲ ಪಡೆಯಬೇಕಾಗಿ ಬಂದಿತ್ತು. ಅದಕ್ಕೆ ಪ್ರತಿಯಾಗಿ ಜಮೀನ್ದಾರ, ಆ ಸುಂದರ ಹುಡುಗಿಯನ್ನು ತನಗೆ ಮದುವೆ ಮಾಡಿ ಕೊಡುವಂತೆ ರೈತನಿಗೆ ದುಂಬಾಲುಬಿದ್ದ.

ರೈತ ಮತ್ತು ಅವನ ಮಗಳಿಗೆ ಈಗ ಧರ್ಮಸಂಕಟ ಶುರುವಾಯಿತು. ಏನೂ ತೋಚದ ಅವರು, ''ಗ್ರಾಮ ಪಂಚಾಯತಿಗೆ ಹೋಗೋಣ, ಅಲ್ಲಿನ ಮುಖಂಡರು ಯಾವುದೇ ನಿರ್ಧಾರ ತೆಗೆದುಕೊಂಡರೂ ಒಪ್ಪುತ್ತೇವೆ'' ಎಂದು ಆ ಜಮೀನ್ದಾರನಿಗೆ ಹೇಳಿದರು. ಇಬ್ಬರೂ ಸೇರಿ ಆ ಪಂಚಾಯತಿ ಮುಖಂಡರ ಮುಂದೆ ನಡೆದಿದ್ದೆಲ್ಲವನ್ನೂ ಹೇಳಿದರು. ಅದನ್ನು ಕೂಲಂಕಷವಾಗಿ ಆಲಿಸಿದ ಮುಖಂಡರು, ''ಈ ವಿಷಯವು ತುಂಬಾ ಜಟಿಲವಾಗಿದೆ, ಆದ್ದರಿಂದ ಇದರ ನಿರ್ಧಾರವನ್ನು ನಾವು ಆ ವಿಧಿಗೆ ಬಿಡುತ್ತೇವೆ. ಇದಕ್ಕೊಂದು ಉಪಾಯ ಮಾಡೋಣ. ಮುಂದೆ ಬಿದ್ದಿರುವ ಬಿಳಿ ಮತ್ತು ಕಪ್ಪು ಕಲ್ಲುಗಳ ರಾಶಿಯಿಂದ ಈ ಜಮೀನ್ದಾರನು ಒಂದು ಕಪ್ಪು ಮತ್ತು ಒಂದು ಬಿಳಿ ಕಲ್ಲನ್ನು ಆರಿಸಿ ರೈತನ ಮಗಳ ಎರಡು ಮುಷ್ಟಿಯಲ್ಲಿ ಒಂದೊಂದರಂತೆ ಇಡಬೇಕು. ಅವಳು ಯಾವ ಮುಷ್ಟಿಯನ್ನು ತೆರೆದು ನೋಡುತ್ತಾಳೋ, ಅದನ್ನಾಧರಿಸಿ ಅವಳ ಭವಿಷ್ಯ ನಿರ್ಧಾರವಾಗುತ್ತದೆ. ಅಂದರೆ, ಅವಳು ಬಿಳಿಯ ಕಲ್ಲಿರುವ ಮುಷ್ಟಿ ತೆರೆದರೆ, ಈ ಜಮೀನ್ದಾರನನ್ನು ಮದುವೆಯಾಗುವಂತಿಲ್ಲ; ಅಕಸ್ಮಾತ್ ಕಪ್ಪುಕಲ್ಲಿನ ಮುಷ್ಟಿಯನ್ನು ತೆರೆದರೆ ಅವನನ್ನೇ ಮದುವೆಯಾಗಬೇಕಾಗುತ್ತದೆ. ಈ ಇಡೀ ಪ್ರಕ್ರಿಯೆಗೆ ಅವಳು ಒಪ್ಪದಿದ್ದರೆ, ಅವಳ ತಂದೆಯಾದ ರೈತನನ್ನು ಈ ಹಳ್ಳಿಯಿಂದಲೇ ಬಹಿಷ್ಕರಿಸಬೇಕಾಗುತ್ತದೆ'' ಎಂದರು.

ಅಂತೆಯೇ, ಕಲ್ಲುಗಳನ್ನು ಎತ್ತಿಕೊಳ್ಳಲು ಜಮೀನ್ದಾರ ಕೆಳಗೆ ಬಾಗಿದ; ಆದರೆ ಆತ ಕೇವಲ ಕಪ್ಪುಕಲ್ಲುಗಳನ್ನು ಮಾತ್ರವೇ ಎತ್ತಿಕೊಂಡಿದ್ದು ಆ ಹುಡುಗಿಯ ತೀಕ್ಷ್ಣ ದೃಷ್ಟಿಗೆ ಗೋಚರಿಸಿಬಿಟ್ಟಿತು. ಅಂದರೆ, ಆಕೆ ಯಾವ ಮುಷ್ಟಿಯನ್ನು ತೆರೆದರೂ ಕಪ್ಪು ಕಲ್ಲೇ ಸಿಕ್ಕಿ, ಆತನನ್ನು ವಿಧಿಯಿಲ್ಲದೇ ಮದುವೆಯಾಗಬೇಕಾಗುತ್ತಿತ್ತು. ಜಮೀನ್ದಾರನ ಈ ಸಂಚಿಗೆ ಧೃತಿಗೆಡದ ಆಕೆ, ಈಗ ತಾನೇನು ಮಾಡಬಹುದೆಂದು ಯೋಚಿಸತೊಡಗಿದಳು. ಶ್ರೀಕೃಷ್ಣನ ಪರಮಭಕ್ತೆಯಾದ ಅವಳು ಎಲ್ಲವನ್ನೂ ಅವನಲ್ಲಿ ನಿವೇದಿಸಿಕೊಂಡು ಕೃಷ್ಣನ ನಾಮಸ್ಮರಣೆ ಮಾಡುತ್ತಾ ಗಟ್ಟಿ ನಿರ್ಧಾರ ಮಾಡಿ ಮುಂದಕ್ಕೆ ಕೈಚಾಚಿದಳು. ಆಗ ಜಮೀನ್ದಾರನು ತನ್ನ ಪೂರ್ವಯೋಜಿತ ಸಂಚಿನಂತೆ ಅವಳ ಎರಡೂ ಕೈಗಳಲ್ಲಿ ಕಪ್ಪುಕಲ್ಲುಗಳನ್ನೇ ಇರಿಸಿಬಿಟ್ಟ!

ಹುಡುಗಿಗೆ ಅವನ ಮೋಸ ಅದಾಗಲೇ ತಿಳಿದಿತ್ತು, ಅದಕ್ಕೆ ಹೇಗಾದರೂ ಮಾಡಿ ಅವನಿಗೆ ತಕ್ಕ ಪಾಠ ಕಲಿಸಬೇಕಿತ್ತು. ಅದಕ್ಕೆ ಅವಳೊಂದು ಉಪಾಯ ಮಾಡಿದಳು. ಪಂಚಾಯತಿಯ ಮುಖಂಡರು ಮತ್ತಿತರ ಜನರು ನೋಡನೋಡುತ್ತಿರುವಂತೆಯೇ, ಒಂದು ಕೈನಲ್ಲಿದ್ದ ಕಲ್ಲನ್ನು ದೂರಕ್ಕೆ ಎಸೆದುಬಿಟ್ಟಳು. ಇದನ್ನು ಕಂಡು ದಿಗ್ಭ್ರಾಂತರಾದ ಅವರೆಲ್ಲಾ, ''ಅದೇಕೆ ಹೀಗೆ ಮಾಡಿದೆ?'' ಎಂದು ಸಿಟ್ಟಿನಿಂದ ಕೇಳಿದರು. ಆಗ ಅವಳು ಸಮಾಧಾನದ ದನಿಯಲ್ಲಿ, ''ನಾನು ಒಂದು ಕೈಯಲ್ಲಿರುವ ಕಲ್ಲನ್ನು ಮಾತ್ರವೇ ಎಸೆದಿದ್ದು; ಮತ್ತೊಂದು ಕೈಯಲ್ಲಿರುವ ಕಲ್ಲನ್ನು ನೋಡಿದರೆ, ನಾನು ಎಸೆದ ಕಲ್ಲು ಯಾವ ಬಣ್ಣದ್ದು ಎಂಬುದು ನಿಮಗೆ ಗೊತ್ತಾಗುತ್ತದೆ. ಆಗ ನಿರ್ಧಾರ ಸುಲಭ'' ಎಂದಳು. ಆಕೆ ಮತ್ತೊಂದು ಮುಷ್ಟಿಯನ್ನು ಬಿಡಿಸಿದಾಗ, ಕಪ್ಪು ಕಲ್ಲು ಭದ್ರವಾಗಿ ಕುಳಿತಿತ್ತು! ಅದನ್ನು ಕಂಡ ಪಂಚಾಯತಿ ಮುಖಂಡರು, ''ಹುಡುಗಿ ಆರಿಸಿಕೊಂಡಿದ್ದು ಬಿಳಿಯ ಕಲ್ಲು, ಹೀಗಾಗಿ ಆಕೆ ಜಮೀನ್ದಾರನನ್ನು ಮದುವೆಯಾಗುವಂತಿಲ್ಲ, ರೈತನ ಸಾಲ ಕೂಡ ಮನ್ನಾ'' ಎಂದು ನ್ಯಾಯನಿರ್ಣಯ ಮಾಡಿದರು.

ಆ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲ್ಲರಂತೆ ಅವಳು ಯೋಚಿಸಿ ತನ್ನ ಒಂದು ಕೈ ತೆರೆದಿದ್ದರೆ, ಜಮೀನ್ದಾರನನ್ನು ವಿಧಿಯಿಲ್ಲದೆ ಮದುವೆಯಾಗಬೇಕಾಗಿ ಬರುತ್ತಿತ್ತು. ಪಂಚಾಯತಿಯ ಎಲ್ಲರನ್ನೂ ಆ ಜಮೀನ್ದಾರ ಖರೀದಿಸಿಬಿಟ್ಟಿದ್ದ, ಹೀಗಾಗಿ ಅವರ ಬಳಿ ಆತನ ಸಂಚನ್ನು ಹೇಳಿದ್ದರೂ ಆಕೆಗೆ ಪ್ರಯೋಜನವಾಗುತ್ತಿರಲಿಲ್ಲ. ಆದರೆ ಹುಡುಗಿ ತನ್ನ ಜಾಣ್ಮೆಯಿಂದಾಗಿ ಹಾಗೂ ತಾನು ನಂಬಿದ್ದ ದೈವದ ಬಲದಿಂದಾಗಿ ಅಸಾಧ್ಯವಾದುದನ್ನು ಸಾಧ್ಯವಾಗಿಸಿದಳು!

ಕೆಲವೊಮ್ಮೆ ಅನನುಕೂಲಕರ ಪರಿಸ್ಥಿತಿಗಳು ಎಲ್ಲಾ ಕಡೆಯಿಂದ ಅಮರಿಕೊಂಡು ನಮ್ಮನ್ನು ಧೃತಿಗೆಡಿಸುತ್ತವೆ. ಆಗ ಆತಂಕಗೊಳ್ಳದೆ ನಿರಾಳರಾಗಿದ್ದು ಸಂದರ್ಭವನ್ನು ನಿಭಾಯಿಸಬೇಕು. ಸಮಾಧಾನದಿಂದಿದ್ದರೆ ಎಂಥ ಸಂಕಷ್ಟವನ್ನೂ ಜಯಿಸಬಹುದು.

ವಿವಿಧ ವಿನೋದಾವಳಿ...

ಬಿತ್ತಿದಂತೆ ಬೆಳೆ!

ಯಗಟಿ ರಘು ನಾಡಿಗ್

ಆಲೂಪ್ರಸಾದ್ ಜಾಧವ್ ಒಬ್ಬ ಚೋರಶಿಖಾಮಣಿ. ಪಿಕ್‌ಪಾಕೆಟ್ ಮಾಡೋದ್ರಲ್ಲಿ ಆತ ಬೆಂಗಳೂರಿನ ಕಲಾಸಿಪಾಳ್ಯದಲ್ಲಿಯೇ 'ವರ್ಲ್ಡ್ ಫೇಮಸ್ಸು'. ಎರಡು ತಿಂಗಳ ಜೈಲುಶಿಕ್ಷೆಯನ್ನು ಮುಗಿಸಿಕೊಂಡು ಆಗಷ್ಟೇ ಹೊರಬಂದಿದ್ದ ಆಲೂ, ತನ್ನ 'ಕೈಚಳಕ'ವನ್ನು ತೋರಿಸಲೆಂದು ಜನದಟ್ಟಣೆಯಿರುವ ಸ್ಥಳಗಳನ್ನು ಹುಡುಕಿಕೊಂಡು ಹೊರಟು ಕೆಂಪೇಗೌಡ ರಸ್ತೆಗೆ ಬಂದ. ಅಂದೇ ಸಂತೋಷ್ ಚಿತ್ರಮಂದಿರದಲ್ಲಿ ಸೂಪರ್‌ಸ್ಟಾರ್ ಒಬ್ಬರ ಸಿನಿಮಾ ರಿಲೀಸಾಗಿತ್ತು. ತನ್ನ 'ಕೈಕೆಲಸ'ಕ್ಕೆ ಇದೇ ಸರಿಯಾದ ಜಾಗವೆಂದು ನಿರ್ಧರಿಸಿದ ಆಲೂ, ಬಾಲ್ಕನಿ ಟಿಕೆಟ್ ತೆಗೆದುಕೊಳ್ಳಲು ನಿಂತಿದ್ದವರ ಜತೆ ತಾನೂ ಕ್ಯೂನಲ್ಲಿ ನಿಂತ.

ಆತ ಟಿಕೆಟ್ ತೆಗೆದುಕೊಳ್ಳುವವನಂತೆ ನಾಟಕವಾಡಿ, ಸಿಕ್ಕಾಪಟ್ಟೆ ರಷ್‌ನಲ್ಲಿ ತಳ್ಳಾಟವಾಡಿ ಕ್ಯೂನಿಂದ ಹೊರಬರುವಷ್ಟರಲ್ಲಿ ಸಾಕಷ್ಟು ಜೇಬುಗಳ 'ಕಟಾವೂ' ಆಗಿತ್ತು. ಎಣಿಸಿ ನೋಡಿದರೆ 1,500 ರುಪಾಯಿಗಳ ಭರ್ಜರಿ ಇಳುವರಿ ಬಂದಿತ್ತು.

'ಶುಕ್ರವಾರ ಬೇರೇ... ಪರವಾಗಿಲ್ಲವೇ, ಲಕ್ಷ್ಮೀ ಕಟಾಕ್ಷ ಚೆನ್ನಾಗೇ ಇದೆ!' ಅಂತ ಹೇಳಿಕೊಂಡು ತನಗೆ ತಾನೇ ಬೆನ್ನು ತಟ್ಟಿಕೊಂಡ ಆಲೂ, 'ಜೈಲಿನಲ್ಲಿ ಮುದ್ದೆ ಮುರಿದೂ ಮುರಿದೂ ಬೇಜಾರಾಗಿದೆ. ಒಂದೆರಡು ಮಸಾಲೆ ದೋಸೆಯನ್ನಾದರೂ ಮೆತ್ತೋಣ' ಎಂದುಕೊಂಡು ಹೋಟೆಲ್ ವಿಷ್ಣು ಭವನದತ್ತ ಹೆಜ್ಜೆ ಹಾಕಲು ಮನಸ್ಸು ಮಾಡಿದ.

ಯಾವುದಾದರೂ 'ಅನುಭವಿ' ಹದ್ದಿನ ಕಣ್ಣುಗಳು ತನ್ನನ್ನು ಗುರುತಿಸಿ ಹಿಡಿಯುವ ಮುಂಚೆಯೇ ಥಿಯೇಟರ್ ಆವರಣದಲ್ಲಿನ ಜನದಟ್ಟಣೆಯಿಂದ ಕಳಚಿಕೊಳ್ಳಬೇಕು ಎಂದುಕೊಂಡು ಜನರನ್ನೆಲ್ಲಾ ತಳ್ಳಿಕೊಂಡೇ ಆಲೂ ನಡೆಯುತ್ತಿರುವಾಗ, ಅವನ ಪ್ಯಾಂಟಿನ ಜೇಬಿನ ಬಳಿ ಏನೋ ಸರಿದಾಡಿದಂತಾಯಿತು. ಎಷ್ಟೆಂದರೂ ಜೇಬಿನ ವಿಷಯದಲ್ಲಿ ಆತ 'ಪಕ್ಕಾ ಪ್ರೊಫೆಷನಲ್' ಅಲ್ಲವೇ?! ಹೀಗಾಗಿ, 'ನಾನೇ 420, ನನ್ನ ಜೇಬಿಗೇ ಕೈಹಾಕುವ 840 ಯಾರಪ್ಪಾ' ಅಂದುಕೊಂಡು, ಕೈ ಸರಿದಾಡಿದಂತಾದ ಸ್ಥಳಕ್ಕೆ 'ಲಪಕ್ಕನೇ' ಕೈಹಾಕಿದ...

ಎಸ್... ಅವನ ಊಹೆ ನಿಜವಾಗಿತ್ತು. ಅವನ ಜೇಬಿಗೂ ಕತ್ತರಿ ಬೀಳೋದ್ರಲ್ಲಿತ್ತು. ಆ ಇನ್ನೊಂದು ಕೈಯನ್ನು ಹಿಡಿದೆಳೆದಾಗ ಕಂಡಿದ್ದು ಒಬ್ಬಳು ಸುಂದರವಾದ ಹುಡುಗಿ! ಹಾಗಂತ ಅವನು ಆಕೆಗೆ ತಪರಾಕಿ ಕೊಡುವಂತಿರಲಿಲ್ಲ, ಏಕೆಂದರೆ, ಆ ಹುಡುಗಿಯೂ ಅವನ ಕಸುಬಿನವಳೇ, ಜತೆಗೆ ಸುರಸುಂದರಿ ಬೇರೇ! 'ನೀ ಏನಾದರೂ ನನ್ನ ಕಳ್ಳತನಕ್ಕೆ ಏಟು ಕೊಟ್ಟರೆ, ನಿನ್ನಿಂದ ಜೇಬು ಕಟಾವಿಗೆ ಒಳಗಾದ 15 ಮಂದಿಯನ್ನೂ ಕೂಗಿ ಕರೆದು ನಿನ್ನನ್ನು ಹಿಡಿಸಿಬಿಡುವೆ' ಎಂಬಂತಿತ್ತು ಅವಳ 'ಬ್ಲ್ಯಾಕ್‌ಮೇಲ್' ಮುಖಭಾವ. ಹಾಗಂತ ಬಿಡುವ ಹಾಗೂ ಇಲ್ಲ... 1,500 ರುಪಾಯಿಗಳ ಇಳುವರಿ!!

ಕಣ್ಸನ್ನೆಯಲ್ಲೇ ಅವಳನ್ನು ಥಿಯೇಟರ್ ಆವರಣ ದಿಂದ ಹೊರಗೆ ಕರೆದುಕೊಂಡು ಬಂದ ನಮ್ಮ ಕಥಾನಾಯಕ ಆಲೂಪ್ರಸಾದ್ ಜಾಧವ್, ಅವಳ ಇಂಗ್ಲಿಷ್ ಲುಕ್ಕು ಮತ್ತು ಚಮಕ್ಕನ್ನು ನೋಡಿ, What is your Name, honey? ಎಂದು ಕೇಳಿದ. ಅದಕ್ಕೆ ಅವಳು Robbery Devi ಎಂದು ಉತ್ತರಿಸಿದಳು. 'ವಾಹ್, ಎಂಥಾ ಲಗತ್ತಾದ ಹೆಸರು...' ಎಂದು ಗೊಣಗಿಕೊಂಡ ಆಲೂ, ಅವಳ ಮುಂದೆ ಒಂದು ಡೀಲ್ ಇಟ್ಟ- ''ನೋಡು ರಾಬರಿ ದೇವಿ, ನಾನೂ ಜೇಬುಗಳ್ಳ ನೀನೂ ಜೇಬುಗಳ್ಳಿ. ಜತೆಗೆ ನೀನು ಸುಂದರಿ ಬೇರೇ. ನಾವಿಬ್ಬರೂ ಮದುವೆಯಾದರೆ ನಮಗೆ ಹುಟ್ಟುವ ಮಗು ನಮ್ಮಿಬ್ಬರ ಕೈಚಳಕವನ್ನೂ ಮೀರಿಸುವಂಥ ಪ್ರಳಯಾಂತಕನಾಗಿ, ನಮ್ಮಿಬ್ಬರ ಕೀರ್ತಿಯನ್ನು ಪರಪ್ಪನ ಅಗ್ರಹಾರದ ಜೈಲಿನಿಂದ ಹಿಡಿದು ಬಳ್ಳಾರಿ, ಹಿಂಡಲಗಾ ಜೈಲುಗಳವರೆಗೂ ಹಬ್ಬಿಸೋದು ಗ್ಯಾರಂಟಿ. ನಿನ್ನ ಅಭಿಪ್ರಾಯ ಹೇಳು'' ಎಂದ ಆಲೂಪ್ರಸಾದ್. ರಾಬರಿ ದೇವಿಗೂ ಇದು ಒಪ್ಪಿಗೆಯಾಯಿತು. ಅಲಸೂರು ಗೇಟ್ ಪೊಲೀಸ್ ಠಾಣೆಯ ಸಮೀಪವಿರುವ (!) ದೇವಾಲಯವೊಂದರಲ್ಲಿ ಅವರಿಬ್ಬರೂ ಮದುವೆಯಾದರು.

ಕೆಲವು ತಿಂಗಳ ನಂತರ ರಾಬರಿ ದೇವಿ ಗರ್ಭಿಣಿಯಾದಳು. ಮಗುವು ಗರ್ಭಾವಸ್ಥೆಯಲ್ಲಿರುವಾಗಲೇ 'ಕೈಕಸುಬಿನ' ಎಲ್ಲಾ ಪ್ರಾವೀಣ್ಯವನ್ನೂ ರೂಢಿಸಿಕೊಳ್ಳುವಂತಾಗಲಿ ಎಂಬ ದೃಷ್ಟಿಯಿಂದ, ಚಾರ್ಲ್ಸ್ ಶೋಭರಾಜ್, ವೀರಪ್ಪನ್, ಕರೀಂಲಾಲಾ ತೆಲಗಿ ಮುಂತಾದವರ ಕಥೆಗಳನ್ನು ಪ್ರತಿ ರಾತ್ರಿ ಮಲಗುವಾಗ ರಾಬರಿ ದೇವಿಗೆ ಆಲೂಪ್ರಸಾದ್ ಹೇಳುತ್ತಿದ್ದ. ಒಂಬತ್ತು ತಿಂಗಳು ತುಂಬಿದ ನಂತರ ರಾಬರಿ ದೇವಿಗೆ ಹೆರಿಗೆ ನೋವು ಶುರುವಾದಾಗ, ಪೊಲೀಸ್ ಕಮಿಷನರ್ ಕಚೇರಿಯ ಎದುರು ಇರುವ ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ಆಕೆಯನ್ನು ಸೇರಿಸಿದ ಆಲೂಪ್ರಸಾದ್, ಪಡಸಾಲೆಯಲ್ಲಿ ಟೆನ್ಷನ್‌ನಿಂದ ಹೆಜ್ಜೆಹಾಕತೊಡಗಿದ.

ಕೆಲ ಹೊತ್ತಿನ ನಂತರ ಹೆರಿಗೆ ಕೋಣೆಯಿಂದ ಹೊರಬಂದ ದಾದಿಯು, ''ಕಂಗ್ರಾಟ್ಸ್, ನಿಮಗೆ ಗಂಡು ಮಗು ಹುಟ್ಟಿತು'' ಎಂದು ಸುದ್ದಿ ಮುಟ್ಟಿಸಿ, ''ಆದರೇ....'' ಎಂದು ರಾಗವೆಳೆದು ತಡವರಿಸಿದಳು. ಹೆರಿಗೆಯ ವೇಳೆ ರಾಬರಿ ದೇವಿಗೆ ಏನಾಯಿತೋ ಎಂದು ಗಾಬರಿಗೊಂಡು ವಾರ್ಡಿನೊಳಗೆ ಓಡಿದ ಆಲೂಪ್ರಸಾದ್, ''ನನ್ನ ಹೆಂಡತಿ ಕ್ಷೇಮವಾಗಿದ್ದಾಳೆ ತಾನೇ?'' ಎಂದು ಅಲ್ಲಿದ್ದ ವೈದ್ಯರನ್ನು ಪ್ರಶ್ನಿಸಿದ. ಅದಕ್ಕೆ ವೈದ್ಯರು, ''ತಾಯಿ ಮತ್ತು ಮಗು ಇಬ್ರೂ ಆರೋಗ್ಯವಾಗಿದ್ದಾರೆ ಕಣ್ರೀ; ಆದರೆ ನಿಮ್ಮ ಮಗುವಿನ ಬಲಗೈ ಬೆರಳುಗಳು ಇನ್ನೂ ಬಿಡಿಸಿಕೊಂಡಿಲ್ಲ'' ಎಂದು ಹೇಳಿ, ದಬ್ಬಳ, ಸ್ಕ್ರೂಡ್ರೈವರ್, ನೈಲ್ ಕಟರ್, ಬಾಚಣಿಗೆ ಮುಂತಾದವನ್ನು ಬಳಸಿ, ಮಗುವಿನ ಬೆರಳುಗಳನ್ನು ಬಿಡಿಸಲು ಹರಸಾಹಸ ಪಟ್ಟರು. ಆದರೆ ಆ ಮಗು ಮಾತ್ರ ಮುಷ್ಟಿಯನ್ನು ಬಿಗಿಯಾಗೇ ಹಿಡಿದುಕೊಂಡಿತ್ತು.

ಇದನ್ನು ಕಂಡು ಆಲೂಪ್ರಸಾದ್‌ಗೆ ತುಂಬಾ ಬೇಸರವಾಯಿತು. ''ಛೇ, ನನ್ನ ಮಗ ನನಗಿಂತ ದೊಡ್ಡ ಪಿಕ್‌ಪಾಕೆಟರ್ ಆಗ್ತಾನೇಂತ ಎಷ್ಟೆಲ್ಲಾ ಕನಸು ಕಂಡಿದ್ದೆ. ಮುಂದೆ ಚಕ್ರವ್ಯೂಹವನ್ನು ಭೇದಿಸಲು ಅನುಕೂಲವಾಗಲಿ ಅಂತ, ಮಗು ಗರ್ಭದಲ್ಲಿದ್ದಾಗಲೇ ಎಲ್ಲಾ ಕಿಲಾಡಿ-ಖದೀಮರ ಕಥೆಗಳನ್ನೂ ಹೇಳಿದ್ದೆ. ನಮ್ಮ ಕಸುಬಿಗೆ ಬೇಕಿರೋದೇ 'ಕೈಚಳಕ'. ಈಗ ನೋಡಿದರೆ ಅದು ಮುಷ್ಟಿ ಬಿಗಿಹಿಡಿದಿದೆ. ಎಲಾ ವಿಧಿಯೇ!'' ಎಂದು ಆಲೂಪ್ರಸಾದ್ ಮನಸ್ಸಿನಲ್ಲೇ ಕೊರಗಿದ. ಇದ್ದಕ್ಕಿದ್ದಂತೆಯೇ ಆ ಡಾಕ್ಟರ್‌ಗೆ ಅದೇನು ಹೊಳೆಯಿತೋ ಏನೋ... ತಮ್ಮ ಕೊರಳಲ್ಲಿದ್ದ ಬಂಗಾರದ ಚೈನನ್ನು ಬಿಚ್ಚಿ, ಆಟವಾಡುತ್ತಾ ಮಲಗಿದ್ದ ಆ ಮಗುವಿನ ಮುಖದೆದುರು ಹಿಡಿದು, ''ಛೀ ತುಂಟಾ... ಛೀ ಪೋಲೀ... ಛೀ ಕಳ್ಳಾ...'' ಎಂದು ಬಾಲಭಾಷೆಯಲ್ಲಿ ಹೇಳುತ್ತಾ, ಆ ಸರವನ್ನು ಆಡಿಸತೊಡಗಿದರು. ಏನಾಶ್ಚರ್ಯ! ಬಿಗಿಹಿಡಿದಿದ್ದ ಮಗುವಿನ ಮುಷ್ಟಿ ನಿಧಾನವಾಗಿ ಸಡಿಲಗೊಂಡಿತು.... ಕೈಬೆರಳುಗಳು ತೆರೆದುಕೊಳ್ಳತೊಡಗಿದವು. ವೈದ್ಯರು ತನ್ನ ಮುಖದೆದುರು ಆಡಿಸುತ್ತಿದ್ದ ಚಿನ್ನದ ಸರವನ್ನು ತೆಗೆದುಕೊಳ್ಳುವ ಯತ್ನವಾಗಿ ಮಗುವು ತನ್ನ ಬಲಗೈಯನ್ನು ಮುಂದುಮಾಡಿ ಪೂರ್ತಿ ಬಿಡಿಸಿತು. ನೋಡಿದರೆ, ಆ ಕೈಯೊಳಗೊಂದು 'ಚಿನ್ನದ ಉಂಗುರ' ಇತ್ತು! ಅದನ್ನು ನೋಡುತ್ತಲೇ ಅಲ್ಲಿ ನಿಂತಿದ್ದ ದಾದಿ ಕಿಟಾರನೆ ಕಿರುಚಿದಳು. ಕಾರಣ, ಹೆರಿಗೆ ಮಾಡಿಸಿದ ಆ ದಾದಿಯ ಕೈಯಲ್ಲಿದ್ದ ಉಂಗುರವನ್ನು ಈ 'ಬಾಲಪ್ರತಿಭೆ' ತಾನು ಹುಟ್ಟುವಾಗಲೇ ಲಪಟಾಯಿಸಿತ್ತು..!!

ಇದನ್ನು ಕಂಡು ಆನಂದಾತಿರೇಕಗೊಂಡ ಆಲೂಪ್ರಸಾದ್ ಜಾಧವ್ ಮತ್ತು ರಾಬರಿ ದೇವಿ ತಮ್ಮ ತಮ್ಮಲ್ಲೇ ಪ್ರತ್ಯೇಕವಾಗಿ ಹೀಗೆ ಗೊಣಗಿಕೊಂಡರು:

''ಎಲಾ ಕಳ್ ನನ್ ಮಗನೇ...!''

ಪ ದ ಬಂ ಧ



ಎಡದಿಂದ ಬಲಕ್ಕೆ

3. ಗಂಜಿಗೆ ಮತ್ತೊಂದು ಹೆಸರು (3)
6. ಮೋಡಕ್ಕೆ ಮತ್ತೊಂದು ಹೆಸರು (3)
7. ಬೆಳಕು ನೀಡುವ ಕಂದೀಲು (3)
8. ಜೇನಿಗೆ ಅಳವಡಿಸಿರುವ ಬಳೆ (3)
9. ಹುದುಗಿಸಿಟ್ಟ ಧನ (2)
11. ಎರಡಕ್ಷರದ ಚಿತ್ತ (2)
12. ಅಗತ್ಯವಾಗಿ ನೀಡಬೇಕಾದ ವಿವರಣೆ (3)
13. ತಿರುಗಿ ಬಂದಿರುವ ಹೆಚ್ಚುಗಾರಿಕೆ (3)
14. ಚಿಕ್ಕದಾದ ಕತ್ತಿ (2)
16. ತಿರುಗಿ ಬಂದಿರುವ ಸಂತೋಷ (2)
19. ದೂರವನ್ನು ಅಳೆಯುವ ಒಂದು ಪ್ರಮಾಣ (3)
21. ಜೈನರ ದೇವಾಲಯ (3)
22. ಒರಟಲ್ಲದುದು, ನಯ (3)
23. ಭಿಕ್ಷೆ ಬೇಡುವವನು (3)

ಮೇಲಿನಿಂದ ಕೆಳಕ್ಕೆ

1. ರಾಜ್ಯ ಅಥವಾ ದೇಶದ ಮುಖ್ಯವಾದ ಪಟ್ಟಣ (4)
2. ಅನುಸರಣೆಗೆ ಯೋಗ್ಯವಾದುದು (3)
3. ರಾಣಿಯ ವಾಸ (4)
4. ಹರಾಜು ಅಥವಾ ಏಲಂ (3)
5. ಅವನು ಕೊನೆಗೆ ನೀಡಿದ ಒಪ್ಪಿಗೆ (4)
10. ಸೊಕ್ಕು ಎನ್ನುವ ಪದ (3)
11. ಪಟ್ಟದ ರಾಣಿ (3)
14. ತೋಳಿನಲ್ಲಿರುವ ಶಕ್ತಿ (4)
15. ಮಂಗಳನಿಗೊಂದು ಚಂದದ ಹೆಸರು (4)
17. ಕುದುರೆ, ದನಕರು ಮುಂತಾದುವುಗಳ ಕಾಲಿನ ಗೊರಸು (4)
18. ದೇವತೆಗಳ ತಾಯಿ (3)
20. ರಾಕ್ಷಸನಿಗೆ ಮತ್ತೊಂದು ಹೆಸರು (3)

ಸರಿಯುತ್ತರಗಳು

[illegible]

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ

▶▶ ಕೃಪೆ: ಸುಧೀರ್ ತೈಲಾಂಗ್



ಇನ್ನು ಮುಂದೆ ಪೆಪ್ಪರ್ ಸ್ಪ್ರೇ, ನೈಲ್ ಕಟರ್ ಪ್ರಯೋಜನಕ್ಕೆ ಬರೋಲ್ಲ ಕಣಮ್ಮಾ... ಇದೇ ಸರಿ!!

ಮುದ್ರಾವಿಶ್ವ

ನಿದ್ರೆ ಸಾಕು, ಮುದ್ರೆಗಳಿಗೆ ಒಡ್ಡಿಕೊಳ್ಳಿ..

ಡಾ. ಪತಂಜಲಿ ಆಚಾರ್ಯ

ಧಾರ್ಮಿಕ ಆಚರಣೆ ಮತ್ತು ಧ್ಯಾನದ ಸಮಯದಲ್ಲಿ ಹಾಗೂ ನೃತ್ಯಪ್ರಕಾರಗಳಲ್ಲಿ ಸಾಮಾನ್ಯವಾಗಿ ನಿರ್ವಹಿಸಲಾಗುವ ನಿರ್ದಿಷ್ಟ ಕೈಸನ್ನೆಗಳನ್ನು 'ಮುದ್ರೆಗಳು' ಎನ್ನಲಾಗುತ್ತದೆ. ಇವು ದೇಹ ಹಾಗೂ ಮನಸ್ಸಿನಲ್ಲಿ ಪ್ರಾಣದ (ಅಂದರೆ ಶಕ್ತಿಯ) ಹರಿವನ್ನು ಸರಾಗವಾಗಿಸುತ್ತವೆ. ಯೋಗ ಮುದ್ರೆಗಳ ಅಭ್ಯಾಸದಲ್ಲಿರುವ ಒಂದು ಸೌಕರ್ಯವೆಂದರೆ, ಇವನ್ನು ಆಹಾರ ಸೇವನೆಯ ಮೊದಲು ಅಥವಾ ನಂತರವೂ ಮಾಡಬಹುದು. ಇವುಗಳ ಅನುಸರಣೆಯಲ್ಲಿ ಯಾವುದೇ ನಿಷ್ಠುರ ನಿಯಮದ ಅಥವಾ ಕಾಲಾವಧಿಯ ಹಂಗಿಲ್ಲ. ವ್ಯಕ್ತಿಯೊಬ್ಬರು ತಾವು ಮಾತಾಡುವಾಗ, ನಡೆಯುವಾಗ ಅಥವಾ ಮಲಗಿರುವಾಗಲೂ 'ಮುದ್ರೆಗಳ ಅಭ್ಯಾಸಕ್ಕೆ' ಒಡ್ಡಿಕೊಳ್ಳಬಹುದು. ಒಬ್ಬ ಒಳ್ಳೆಯ ಗುರುವಿನಿಂದ ಮಾರ್ಗದರ್ಶನ ಪಡೆದು ಮುದ್ರೆಗಳ ಅಭ್ಯಾಸದಲ್ಲಿ ತೊಡಗುವುದು ಸೂಕ್ತ. ಇಂಥ ಒಂದಷ್ಟು ಮುದ್ರೆಗಳ ಕುರಿತಾಗಿ ಅರಿಯೋಣ...

ಜ್ಞಾನಮುದ್ರೆ

ಇದು ಧ್ಯಾನಾಭ್ಯಾಸದಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಯೋಗಮುದ್ರೆ.



ಈ ಮುದ್ರೆಯಲ್ಲಿ ತೋರುಬೆರಳು ಹಾಗೂ ಹೆಬ್ಬೆರಳನ್ನು ಸೇರಿಸಿ ಒಂದು ವೃತ್ತಾಕಾರವನ್ನು ರೂಪಿಸಲಾಗುತ್ತದೆ. ಮಿಕ್ಕ ಮೂರು ಬೆರಳುಗಳು ಹೊರಗೆ ಚಾಚಲ್ಪಡುತ್ತವೆ. ಈ ಭಂಗಿಯಲ್ಲಿ ಎರಡೂ ಕೈಗಳನ್ನು ಆಯಾ ಭಾಗದ ತೊಡೆಯ ಮೇಲೆ ಇರಿಸಿಕೊಂಡು ಶುರುವಿನಲ್ಲಿ ಕನಿಷ್ಠ 5-10 ನಿಮಿಷದವರೆಗೆ ಆ ಭಂಗಿಯಲ್ಲಿ ಇರಬೇಕು, ನಂತರ 45 ನಿಮಿಷಗಳವರೆಗೂ ವಿಸ್ತರಿಸಬಹುದು.

ಈ ಮುದ್ರೆಯ ಅಭ್ಯಾಸವು ಮನಸ್ಸನ್ನು ಚುರುಕುಗೊಳಿಸುತ್ತದೆ, ದೇಹದ ಆರೋಗ್ಯವನ್ನು ವರ್ಧಿಸುತ್ತದೆ. ವ್ಯಕ್ತಿಯ ಸೃಜನಶೀಲತೆ, ಏಕಾಗ್ರತೆಯನ್ನು ಹೆಚ್ಚಿಸಿ ಜ್ಞಾನದ ಪರಿಧಿಯನ್ನು ಮತ್ತಷ್ಟು ವಿಸ್ತರಿಸುತ್ತದೆ. ದೇಹದಲ್ಲಿ ಶಕ್ತಿಯ ಹರಿವು ನಿರಂತರವಾಗಿರುವಂತೆ ನೋಡಿಕೊಳ್ಳುತ್ತದೆ. ಈ ಮುದ್ರೆಯ ಆಚರಣೆಯಿಂದಾಗಿ ಒತ್ತಡವು ತಗ್ಗಿ, ಸುಖನಿದ್ರೆ ಪ್ರಾಪ್ತಿಯಾಗುತ್ತದೆ.

ಇಲ್ಲೊಂಚೂರು ಕೇಳ್ರೀ...

- ಡೈಮಂಡ್ ನೆಕ್ಲೆಸ್ ಕಳೆಗುಂದಿದೆಯೆಂದು ನೀವೂ ಮಂಕಾಗದಿರಿ. 3-4 ಚಹಾ ಚಮಚದಷ್ಟು 'ಜಿನ್' ಮದ್ಯಸಾರದಲ್ಲಿ ವಜ್ರಹಾರವನ್ನು ಮುಳುಗಿಸಿಟ್ಟು ಅರ್ಧ ಗಂಟೆಯ ನಂತರ ಹೊರತೆಗೆಯಿರಿ. ನಂತರ ಮೆದು ವಸ್ತ್ರದಿಂದ ಒರೆಸಿದರೆ ವಜ್ರಹಾರ ಥಳಥಳ ಮಿನುಗುವುದು.
- ಮನೆಯ ಗಾಜಿನ ಕಿಟಕಿಗಳು, ಕನ್ನಡಿಗಳ ಮೇಲೆ ಕೊಳೆ ಮೆತ್ತಿಕೊಂಡಿದ್ದರೆ, ಸೀಮೆಸುಣ್ಣ (ಚಾಕ್ ಪೌಡರ್) ಲೇಪಿಸಿ ಚೆನ್ನಾಗಿ ತಿಕ್ಕಿರಿ. ಗಾಜಿನ ಕಿಟಕಿಗಳು ಮತ್ತು ಕನ್ನಡಿ ಥಳಥಳಿಸಬೇಕೆಂದಿದ್ದರೆ, ಸ್ವಲ್ಪ ಅಮೋನಿಯಾವನ್ನು ನೀರಿನಲ್ಲಿ ಬೆರೆಸಿ ಉಜ್ಜಬೇಕು. ಕನ್ನಡಿಯನ್ನು ತೊಳೆದ ನಂತರ ಟಿಶ್ಯೂ ಪೇಪರ್‌ನಿಂದ ಒರೆಸಿ ಉಜ್ಜಿದರೆ ಅದು ಉಜ್ವಲವಾಗಿ ಕಾಣುವುದು.
- ಬಟ್ಟೆಗೆ ಡಾಂಬರ್ ಅಥವಾ ಗ್ರೀಸ್‌ನ ಕಲೆ ಮೆತ್ತಿಕೊಂಡಿದ್ದರೆ, ಕಲೆಯಿರುವ ಜಾಗವನ್ನು ಒಂದು ಬಟ್ಟಲಲ್ಲಿ ಇರಿಸಿ, ಅದಕ್ಕೆ ಶುದ್ಧವಾದ ಆಲಿವ್ ಎಣ್ಣೆಯನ್ನು ಹೊಯ್ದು ಇಟ್ಟುಕೊಳ್ಳಬೇಕು. ಮರುದಿನ ಸಾಬೂನಿನಿಂದ ತೊಳೆದರೆ ಕಲೆಯು ಮಾಯವಾಗುವುದು. ಆಲಿವ್ ಎಣ್ಣೆ ಸಿಗದಿದ್ದಲ್ಲಿ, ಕೊಬ್ಬರಿ ಎಣ್ಣೆ ಅಥವಾ ನೀಲಗಿರಿ ಎಣ್ಣೆಯನ್ನು ಬಳಸಬಹುದು. ಬೆನ್‌ಜೀನ್ ಅಥವಾ ಪೆಟ್ರೋಲ್ ಬಳಕೆಗೂ ಆಸ್ಪದವಿದೆ.
- ಉಣ್ಣೆಯ ಬಟ್ಟೆಯಲ್ಲಿ ಯಾವ ಕಲೆಗಳಿದ್ದರೂ ತೆಗೆಯುವುದು ಕೊಂಚ ಪ್ರಯಾಸಕರ ಸಂಗತಿಯೇ. ಇಂಥ ವೇಳೆ ಎಮರಿ ಪೇಪರ್‌ನಿಂದ ಲಘುವಾಗಿ ಉಜ್ಜಿದರೆ ಕಲೆ ಹೋಗುವುದು. ಬಟ್ಟೆಯಲ್ಲಿ ಮಸಿಯ ಕಲೆಗಳಿದ್ದರೆ ಸ್ವಲ್ಪ ಉಪ್ಪನ್ನು ಚಿಮುಕಿಸಿ ಒರೆಸಿ ತೆಗೆಯುವುದರಿಂದ ಕಲೆಗಳು ಮಾಯವಾಗುವುವು.

ಸಮಾಚಾರ ಸಣ್ಣದಲ್ಲ

ಭಾರತ ತಂಡದ ಜೆರ್ಸಿ ಬಿಡುಗಡೆ

ದುಬೈ: ಇಂದಿನಿಂದ ಪಾಕಿಸ್ತಾನ ಹಾಗೂ ಯುಎಇನಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡದ ಜೆರ್ಸಿಯನ್ನು ಮಂಗಳವಾರ ಬಿಸಿಸಿಐ ಬಿಡುಗಡೆ ಮಾಡಿದೆ. ಮೆನ್ ಇನ್ ಬ್ಲ್ಯೂ ಜೆರ್ಸಿಯಲ್ಲಿ ಚಾಂಪಿಯನ್ಸ್ ಟ್ರೋಫಿಯ ಅಧಿಕೃತ ಲೋಗೋ ಮತ್ತು ಆತಿಥೇಯ ರಾಷ್ಟ್ರವಾದ ಪಾಕಿಸ್ತಾನ ಹೆಸರು ಕೂಡ ಕಾಣಿಸಿಕೊಂಡಿದೆ. ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಾಕಿಸ್ತಾನ-2025 ಎಂದು ಪ್ರಿಂಟ್ ಮಾಡಲಾಗಿದೆ. ಜೆರ್ಸಿಯ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಆರಂಭದಲ್ಲಿ ಭಾರತದ ಆಟಗಾರರ ಜೆರ್ಸಿ ಮೇಲೆ ಪಾಕ್ ಹೆಸರನ್ನು ಹಾಕಲು ಬಿಸಿಸಿಐ ನಿರಾಕರಿಸಿತ್ತು. ಈ ಕುರಿತು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಐಸಿಸಿಗೆ ದೂರು ನೀಡಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಐಸಿಸಿ, ಬಿಸಿಸಿಐ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗಿತ್ತು. ಬಳಿಕ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸಾಯ್ಕಿಯಾ ಐಸಿಸಿ ಮಾರ್ಗಸೂಚಿಗಳನ್ನು ನಾವು ಪಾಲಿಸುತ್ತೇವೆ ಎಂದು ಹೇಳುವ ಮೂಲಕ ಜೆರ್ಸಿಯಲ್ಲಿ ಪಾಕ್ ಹೆಸರು ಹಾಕಲು ಒಪ್ಪಿಕೊಂಡಿತ್ತು.

ಸಚಿನ್ ಬ್ಯಾಟಿಂಗ್ ಅಭ್ಯಾಸ ಆರಂಭ

ಮುಂಬೈ: ಫೆಬ್ರುವರಿ 22ರಿಂದ ಮಾರ್ಚ್ 16ರ ವರೆಗೆ ನಡೆಯಲಿರುವ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್ (ಐಎಂಎಲ್) ಕ್ರಿಕೆಟ್ ಟೂರ್ನಿಗೆ ಭಾರತ ತಂಡದ ನಾಯಕ ಸಚಿನ್ ತೆಂಡೂಲ್ಕರ್ ನೆಟ್ಸ್‌ನಲ್ಲಿ ಕಠಿಣ ಬ್ಯಾಟಿಂಗ್ ಅಭ್ಯಾಸ ಶುರು ಮಾಡಿದ್ದಾರೆ. ಸಚಿನ್ ಬ್ಯಾಟಿಂಗ್ ಅಭ್ಯಾಸ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದು, ಅವರ ಆಟ ನೋಡಲು ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಮುಂಬೈ, ವಡೋದರಾ ಮತ್ತು ರಾಯಪುರದಲ್ಲಿ ಪಂದ್ಯಗಳು ಆಯೋಜನೆಯಾ ಗಲಿವೆ. ಭಾರತದ ಮಾಸ್ಟರ್ಸ್ ತಂಡದಲ್ಲಿ ಯುವರಾಜ್ ಸಿಂಗ್, ಸುರೇಶ್ ರೈನಾ, ಇರ್ಫಾನ್ ಪಠಾಣ್ ಮತ್ತು ಅಂಬಾಟಿ ರಾಯುಡು ಸ್ಥಾನ ಪಡೆದಿದ್ದಾರೆ. ಸಚಿನ್ ನಾಯಕತ್ವದಲ್ಲಿ ಅವರು ಆಡಲಿದ್ದಾರೆ. ಶ್ರೀಲಂಕಾ ಮಾಸ್ಟರ್ಸ್ ತಂಡದಲ್ಲಿ ಸ್ಫೋಟಕ ಶೈಲಿಯ ಆರಂಭಿಕ ಬ್ಯಾಟರ್ ರೊಮೇಶ್ ಕಲುವಿತರಣ, ವೇಗಿ ಸುರಾಂಗ್ ಲಕ್ಮಲ್ ಮತ್ತು ಉಪುಲ್ ತರಂಗಾ ಅವರು ಆಡಲಿದ್ದಾರೆ. ಈ ಟೂರ್ನಿಯಲ್ಲಿ ಇಂಗ್ಲೆಂಡ್, ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳೂ ಆಡಲಿವೆ. ಉದ್ಘಾಟನಾ ಆವೃತ್ತಿಯ ಈ ಟೂರ್ನಿಯಲ್ಲಿ ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ವೆಸ್ಟ್ ಇಂಡೀಸ್ ಸೇರಿದಂತೆ ಒಟ್ಟು ಆರು ತಂಡಗಳು ಭಾಗವಹಿಸಲಿದೆ.

ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಗಿಂದು ಚಾಲನೆ | 19 ದಿನ ನಡೆಯುವ ಟೂರ್ನಿ

ಪಾಕ್-ಕಿವೀಸ್ ಹಣಾಹಣಿ

ಕರಾಚಿ: ಬಹುನಿರೀಕ್ಷಿತ ಐಸಿಸಿ ಚಾಂಪಿಯನ್ಸ್ ಟ್ರೋಫಿ ಇಂದಿನಿಂದ ಪ್ರಾರಂಭವಾಗಲಿದೆ. ಪಾಕಿಸ್ತಾನ ಮತ್ತು ದುಬೈನಲ್ಲಿ 19 ದಿನಗಳ ಕಾಲ ನಡೆಯಲಿರುವ ಈ ಟೂರ್ನಿಯಲ್ಲಿ ಒಟ್ಟು 8 ತಂಡಗಳು ಭಾಗಿಯಾಗುತ್ತಿವೆ. ಇಂದು ನಡೆಯಲಿರುವ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಕರಾಚಿಯ ನ್ಯಾಷನಲ್ ಸ್ಟೇಡಿಯಂನಲ್ಲಿ ಮುಖಾ ಮುಖಿ ಆಗುತ್ತಿವೆ. ಪ್ರಥಮ ಪಂದ್ಯದಲ್ಲಿ ಆತಿಥೇಯ ಪಾಕಿಸ್ತಾನ ತಂಡವು ನ್ಯೂಜಿಲೆಂಡ್ ವಿರುದ್ಧ ಸೆಣೆಸಲು ಸಜ್ಜಾಗಿದೆ. ಎ-ಬಣದಲ್ಲಿರುವ ಪಾಕಿಸ್ತಾನ ತಂಡ ಇನ್ನುಳಿದ ಪಂದ್ಯಗಳಲ್ಲಿ ತನ್ನ ಸಾಂಪ್ರದಾಯಿಕ ಎದುರಾಳಿ ಭಾರತ ಮತ್ತು ಬಾಂಗ್ಲಾದೇಶವನ್ನು ಎದುರಿಸ ಬೇಕಿದೆ. ಮುಂದಿನ ಪಂದ್ಯಗಳ ಒತ್ತಡ ದೂರವಾಗಲು ಪಾಕಿಸ್ತಾನ ತಂಡವು ನ್ಯೂಜಿಲೆಂಡ್ ವಿರುದ್ಧ ಗೆಲ್ಲಬೇಕಾದ ಅನಿವಾರ್ಯತೆ ಎದುರಾಗಿದೆ.

ಫೆಬ್ರವರಿ 23ರಂದು ಭಾರತದ ವಿರುದ್ಧದ ಪಂದ್ಯ ಪಾಕಿಸ್ತಾನದ ಪಾಲಿಗೆ ಸಹಜವಾಗಿಯೇ ತೀವ್ರ ಒತ್ತಡದ್ದಾಗಿರುತ್ತದೆ. ಹೀಗಾಗಿ ಅಂದು ನಿರಾಳವಾಗಿರಬೇಕಾದರೆ ಕರಾಚಿಯಲ್ಲಿ ನಡೆಯಲಿರುವ ಪ್ರಥಮ ಪಂದ್ಯದಲ್ಲೇ ಪಾಕ್‌ಗೆ ಬಲಿಷ್ಠ ನ್ಯೂಜಿಲೆಂಡ್ ಸವಾಲನ್ನು ಮೆಟ್ಟಿ ನಿಲ್ಲಬೇಕಿದೆ. ಇತ್ತೀಚೆಗಷ್ಟೇ ಪಾಕಿಸ್ತಾನದಲ್ಲಿ ನಡೆದ ತ್ರಿಕೋನ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ತಂಡಗಳನ್ನು ಭರ್ಜರಿಯಾಗಿ ಸೋಲಿಸಿ ಕಪ್ ಎತ್ತಿರುವ ನ್ಯೂಜಿಲೆಂಡ್ ತಂಡ ಕಠಿಣ ಎದುರಾಳಿಯಾಗಿ ಗೋಚರಿಸುತ್ತದೆ. ಬ್ಯಾಟಿಂಗ್ ವಿಭಾಗದಲ್ಲಿ ಕೇನ್ ವಿಲಿಯಂಸನ್, ಡೆರಿಲ್ ಮಿಚೆಲ್ ಮತ್ತು ಗ್ಲೆನ್ ಫಿಲಿಪ್ಸ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ನಾಯಕ ಮಿಚೆಲ್ ಸ್ಯಾಂಟ್ನರ್ ಮತ್ತು ಮ್ಯಾಟ್ ಹೆನ್ರಿ ಅಪಾಯಕಾರಿಯಾಗಿ ಗೋಚರಿಸುತ್ತಿದ್ದಾರೆ.

ಪಾಕಿಸ್ತಾನ ತಂಡ: ಮೊಹಮ್ಮದ್ ರಿಜ್ವಾನ್ (ನಾಯಕ) ಬಾಬರ್ ಆಜಂ, ಫಖರ್ ಜಮಾನ್, ಕಮ್ರಾನ್ ಗುಲಾಮ್, ಸೌದ್ ಶಕೀಲ್, ತಯ್ಯಬ್ ತಾಹೀರ್, ಫಾಹೀಮ್ ಅಶ್ರಫ್, ಕುಶ್ದಿಲ್ ಶಾ, ಸಲ್ಮಾನ್ ಅಲಿ ಆಘಾ, ಉಸ್ಮಾನ್ ಖಾನ್, ಅಬ್ರಾರ್ ಅಹ್ಮದ್, ಹ್ಯಾರಿಸ್ ರೌಫ್, ಮೊಹಮ್ಮದ್ ಹಸ್ನೈನ್, ನಸೀಮ್ ಶಾ, ಶಾಹಿನ್ ಶಾ ಅಫ್ರಿದಿ.
ನ್ಯೂಜಿಲೆಂಡ್ ತಂಡ: ಮಿಚೆಲ್ ಸ್ಯಾಂಟ್ನರ್ (ನಾಯಕ), ಮಿಚೆಲ್ ಬ್ರೇಸ್ ವೆಲ್, ಮಾರ್ಕ್ ಚಾಪ್ ಮೆನ್, ಡೆವೊನ್ ಕಾನ್ವೆ, ಲೋಕಿ ಫರ್ಗ್ಯುಸನ್, ವಿಲ್ ಒ ರೂರ್ಕ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ನೇಥನ್ ಸ್ಮಿತ್, ಕೇನ್ ವಿಲಿಯಂಸನ್, ವಿಲ್ ಯಂಗ್, ಜಾಕೋಬ್ ಡಫಿ.

ಪಾಕಿಸ್ತಾನ ತಂಡದಲ್ಲಿ ಅನುಭವಿ ಬ್ಯಾಟರ್‌ಗಳಿದ್ದರೂ ಸಂದರ್ಭಕ್ಕೆ ತಕ್ಕಂತೆ ನಿರೀಕ್ಷಿತ ಪ್ರದರ್ಶನ ಬರುತ್ತಿಲ್ಲ. ಬೌಲಿಂಗ್ ವಿಭಾಗದಲ್ಲಿ ವೇ ಶಾಹೀನ್ ಶಾ ಅಫ್ರಿದಿ ವಿಕೆಟ್ ಪಡೆದರೂ ರನ್ ಧಾರಣೆಗೆ ಕಡಿವಾಣ ಹಾಕುವಲ್ಲಿ ಯಶಸ್ವಿಯಾಗುತ್ತಿಲ್ಲ. ಉಳಿದಂತೆ ನಸೀಮ್ ಶಾ, ಹ್ಯಾರಿಸ್ ರೌಫ್ ಕೂಡ ಫಾರ್ಮ್‌ನಲ್ಲಿಲ್ಲ. ಹಿರಿಯ ಸ್ಟಾರ್ ಆಟಗಾರ ಬಾಬರ್ ಆಜಂ ಅವರಿಂದ ಇತ್ತೀಚೆಗೆ ಮ್ಯಾಚ್ ವಿನ್ನಿಂಗ್ ಪ್ರದರ್ಶನ ಬಂದಿಲ್ಲ, ಆದರೆ ಪ್ರತಿಭಾವಂತರಿಂದ ಕೂಡಿದ ಪಾಕ್ ತಂಡಕ್ಕೆ ತವರು ನೆಲದಲ್ಲಿ ಎಷ್ಟೇ ಬಲಿಷ್ಠ ತಂಡವನ್ನೂ ಸೋಲಿಸುವಷ್ಟು ಸಾಮರ್ಥ್ಯ ಇದೆ ಎಂಬುದೂ ನಿಜ.

ಐಪಿಎಲ್: ರೋಚಕ ಹಿನ್ನೆಲೆ

1998ರ ಚೊಚ್ಚಲ ಆವೃತ್ತಿಗೆ ವಿಲ್ಸ್ ಇಂಟರ್‌ನ್ಯಾಷನಲ್ ಕಪ್ ಎಂದು ಹೆಸರಿಡಲಾಗಿತ್ತು. ಇದಾದ ನಂತರದ ಆವೃತ್ತಿಗೆ ಐಸಿಸಿ ನಾಕೌಟ್ ಟೂರ್ನಿ ಮತ್ತು ಮೂರನೇ ಆವೃತ್ತಿಯಿಂದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಎಂದು ಹೆಸರಿಡಲಾಯಿತು. ಎರಡು ವರ್ಷಕ್ಕೊಮ್ಮೆ ಈ ಟೂರ್ನಿ ಆಯೋಜಿಸಲು ಉದ್ದೇಶಿಸಿದ್ದರೂ, ಇದೀಗ 2017ರ ನಂತರ, ಅಂದರೆ 8 ವರ್ಷದ ಬಳಿಕ ಈ ಟೂರ್ನಿ ಆಯೋಜಿಸಲಾಗುತ್ತಿದೆ. ಇದುವರೆಗಿನ 8 ಟೂರ್ನಿಯಲ್ಲಿ 7 ತಂಡಗಳು ಚಾಂಪಿಯನ್ ಆಗಿ ಹೊರಹೊಮ್ಮಿದೆ. 2002ರಲ್ಲಿ ಶ್ರೀಲಂಕಾದಲ್ಲಿ ಟೂರ್ನಿಯ ಫೈನಲ್ ಪಂದ್ಯ ಭಾರತ ಮತ್ತು ಶ್ರೀಲಂಕಾದ ನಡುವೆ ನಡೆಯುತ್ತಿತ್ತು. ಆದರೆ ರಿಸರ್ವ್ ದಿನದಲ್ಲೂ ಮಳೆ ಬಿದ್ದಿದ್ದರಿಂದ, ಎರಡೂ ತಂಡಗಳನ್ನು ಜಂಟಿ ವಿನ್ನರ್ಸ್ ಎಂದು ಘೋಷಿಸಲಾಯಿತು. ಭಾರತ, ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್ ತಂಡಗಳಿಗೆ ಈ ಟೂರ್ನಮೆಂಟ್ ಫೇವರಿಟ್. ಈ ಪೈಕಿ ವೆಸ್ಟ್ ಇಂಡೀಸ್ ಈ ಟೂರ್ನಿ ಆಡಲು ಈ ಬಾರಿ ಅರ್ಹತೆಯನ್ನು ಪಡೆದುಕೊಂಡಿಲ್ಲ. ಭಾರತ ಮತ್ತು ಆಸ್ಟ್ರೇಲಿಯಾ ಎರಡು ಬಾರಿ ಚಾಂಪಿಯನ್ ಆಗಿವೆ. ಭಾರತವು ಎರಡು ಬಾರಿ ರನ್ನರ್ ಅಪ್ ಆಗಿದೆ.

ಸ್ಕಿವರ್ ಬ್ರಂಟ್ ಅರ್ಧ ಶತಕ | ಹೇಲಿ ಮ್ಯಾಥ್ಯೂಸ್‌ಗೆ 3 ವಿಕೆಟ್

ಮುಂಬೈಗೆ ಭರ್ಜರಿ ಜಯ

ವಡೋದರ: ಮಂಗಳವಾರ ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವು ಗುಜರಾತ್ ಜೈಂಟ್ಸ್ ತಂಡದ ವಿರುದ್ಧ ಐದು ವಿಕೆಟ್‌ಗಳ ಭರ್ಜರಿ ಜಯ ಗಳಿಸಿದೆ.

ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಆರಂಭದಿಂದಲೇ ಶಿಸ್ತುಬದ್ಧ ದಾಳಿಗಿಳಿದು, ಗುಜರಾತ್ ಜೈಂಟ್ಸ್‌ನ ಮೊತ್ತ 6 ರನ್ ಆದಾಗ ಮೂನಿ ಅವರ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾಯಿತು. ಆ ನಂತರವೂ ಜೈಂಟ್ಸ್ ತಂಡವು ನಿರಂತರವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಗಾಡ್ ್ನರ್ ಕೇವಲ 10 ರನ್ ಗಳಿಸಿ ತಮ್ಮ ವಿಕೆಟ್ ಒಪ್ಪಿಸಿದರು. ಆದರೆ ಆ ಬಳಿಕ ಬಂದ ಜೈಂಟ್ಸ್ ತಂಡದ ಹರ್ಲೀನ್ ಡಿಯೋಲ್ 31 ಬಾಲ್‌ಗಳಲ್ಲಿ 32 ರನ್ ಗಳಿಸಿದರು. ಡಿ. ಡೋಟಿನ್ ಕೇವಲ 7 ರನ್ ಗಳಿಸಿ ಪೆವಿಲಿಯನ್ ದಾರಿ ಹಿಡಿದರು. ಆ ಬಳಿಕ ಕ್ರೀಸ್‌ಗೆ ಬಂದ ಕಾಶ್ವಿ ಗೌತಮ್ 15 ಬಾಲ್‌ಗಳಲ್ಲಿ 20 ರನ್, ಸಿಮ್ರಾನ್ ಶೇಕ್ 8 ಬಾಲ್‌ಗಳಲ್ಲಿ ಕೇವಲ 3 ರನ್, ತನುಜಾ ಕನ್ವರ್ 12 ಬಾಲ್‌ಗಳಲ್ಲಿ 13 ರನ್ ಸಂಪಾದಿಸುವಲ್ಲಿ ಯಶಸ್ವಿಯಾದರು. ಉಳಿದಂತೆ ಗುಜರಾತ್ ಜೈಂಟ್ಸ್‌ನ ಬಹುತೇಕ ಆಟಗಾರ್ತಿಯರು ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಗುಜರಾತ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 120 ರನ್‌ಗಳಿಗೆ ಆಲೌಟ್ ಆಯಿತು. ಮುಂಬೈ ತಂಡದ ಪರ ಹೇಲಿ ಮಾಥ್ಯೂಸ್ 3 ವಿಕೆಟ್, ನ್ಯಾಟ್ ಸ್ಕಿವಿರ್ ಬ್ರಂಟ್ ಹಾಗೂ ಅಮೆಲಿಯಾ ಕಿರ್ ತಲಾ ಎರಡು ವಿಕೆಟ್ ಪಡೆದರು. ಶಬ್ನಮ್ ಇಸ್ಮಾಯಿಲ್ ಹಾಗೂ ಅಮನ್‌ದೀಪ್ ಕೌರ್ ತಲಾ ಒಂದು ವಿಕೆಟ್ ಪಡೆದರು.



121 ರನ್‌ಗಳ ಗೆಲುವಿನ ಗುರಿ ಪಡೆದ ಮುಂಬೈ ಇಂಡಿಯನ್ಸ್ ತಂಡದ ಆರಂಭದಲ್ಲಿ ಅಷ್ಟೇನೂ ಚೆನ್ನಾಗಿರಲಿಲ್ಲ. 55 ರನ್‌ಗೆ 3 ಮಹತ್ವದ ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ ಸ್ಕಿವಿರ್ ಬ್ರಂಟ್ ಕೇವಲ 37 ಬಾಲ್‌ಗಳಲ್ಲಿ 57 ರನ್ ಗಳಿಸಿ ಮುಂಬೈ ಇಂಡಿಯನ್ಸ್ ಗೆಲುವಿಗೆ ಪ್ರಮುಖ ಕಾರಣಕರ್ತರಾದರು. ಉಳಿದಂತೆ ಅಮೆಲಿಯಾ ಕಿರ್ 20 ಬಾಲ್‌ಗಳಲ್ಲಿ 19 ರನ್ ಗಳಿಸಿದರು. ಸಂಜನಾ 6 ಬಾಲ್‌ಗಳಲ್ಲಿ 10 ರನ್ ಗಳಿಸಿ ಅಜೇಯರಾಗುಳಿದರು. ಮುಂಬೈ ತಂಡವು ಕೇವಲ 16.1 ಓವರ್‌ಗಳಲ್ಲಿ 122 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಒಂದು ಪಂದ್ಯ ವೀಕ್ಷಿಸಲು ಕುಟುಂಬಕ್ಕೆ ಅನುಮತಿ

ದುಬೈ: ಚಾಂಪಿಯನ್ಸ್ ಟ್ರೋಫಿಯ ಪಂದ್ಯವನ್ನಾಡಲು ಈಗಾಗಲೇ ದುಬೈ ತಲುಪಿರುವ ಟೀಮ್ ಇಂಡಿಯಾ ಆಟಗಾರರಿಗೆ ಬಿಸಿಸಿಐ ಸಿಹಿ ಸುದ್ದಿಯೊಂದನ್ನು ನೀಡಿದ್ದು, ಒಂದು ಪಂದ್ಯವನ್ನು ವೀಕ್ಷಿಸಲು ಆಟಗಾರರ ಕುಟುಂಬಗಳಿಗೆ ಅನುಮತಿ ನೀಡಿದೆ. ಪ್ರವಾಸದ ಸಮಯದಲ್ಲಿ ಆಟಗಾರರ ಕುಟುಂಬಗಳು ಮತ್ತು ಅವರ ವಾಸ್ತವ್ಯದ ಬಗ್ಗೆ ಬಿಸಿಸಿಐ ಕಠಿಣ ನಿಯಮಗಳನ್ನು ಪರಿಚಯಿಸಿದ ನಂತರ, ಇದೀಗ ನಿಯಮದಲ್ಲಿ ಕೊಂಚ ಬದಲಾವಣೆ ಮಾಡಿದಂತಿದೆ.

ಈ ಹಿಂದೆ ಬಿಸಿಸಿಐ ಪ್ರಕಟಿಸಿದ್ದ ನಿಯಮದಂತೆ, ಕ್ರಿಕೆಟಿಗನೊಬ್ಬ 45ಕ್ಕೂ ಅಧಿಕ ದಿನಗಳ ಕಾಲ ವಿದೇಶಿ ಕ್ರಿಕೆಟ್ ಪ್ರವಾಸದಲ್ಲಿದ್ದರೆ, ಆಗ ಕುಟುಂಬ ಸದಸ್ಯರು ಗರಿಷ್ಠ 2 ವಾರಗಳ ಕಾಲ ಅವರ ಜತೆಗಿರಬಹುದು. 45 ದಿನಗಳಿಗಿಂತ ಕಡಿಮೆ ಅವಧಿಯ ಪ್ರವಾಸಗಳಿಗೆ ಕುಟುಂಬಗಳು ಆಟಗಾರರ ಜತೆಯಲ್ಲಿ ಹೋಗಲು ಅನುಮತಿ ಇರಲಿಲ್ಲ. ಚಾಂಪಿಯನ್ಸ್ ಟ್ರೋಫಿ ಬರೀ ಮೂರು ವಾರದಲ್ಲಿ ಮುಕ್ತಾಯಗೊಳ್ಳುತ್ತದೆ, ಹೀಗಾಗಿ ಕಳೆದ ಶನಿವಾರ ಟೀಮ್ ಇಂಡಿಯಾದ ಎಲ್ಲ ಆಟಗಾರರು ಏಕಾಂಗಿಯಾಗಿ ದುಬೈಗೆ ಪ್ರಯಾಣಿಸಿದ್ದರು. ಇದೀಗ ಒಂದು ಪಂದ್ಯದ ದಿನ ಕುಟುಂಬದ ಜತೆಗಿರಲು ಬಿಸಿಸಿಐ ಅನುಮತಿ ನೀಡಿದೆ.

'ಆಟಗಾರರು ಯಾವುದೇ ಗೊಂದಲವಿಲ್ಲದೆ ಟೂರ್ನಿಯ ಮೇಲೆ ಗಮನ ಕೇಂದ್ರೀಕರಿಸಿದ್ದರೂ, ಚಾಂಪಿಯನ್ಸ್ ಟ್ರೋಫಿಯಲ್ಲಿ ಕ್ರಿಕೆಟಿಗರು ತಮ್ಮ ಕುಟುಂಬ ಸದಸ್ಯರನ್ನು (ಪೋಷಕರು ಅಥವಾ ಪತ್ನಿ) ಒಂದು ಪಂದ್ಯಕ್ಕೆ ಕರೆದೊಯ್ಯಲು ಬಿಸಿಸಿಐ ನಿರ್ಧರಿಸಿದೆ. ಆದಾಗ್ಯೂ, ಮಂಡಳಿಯಿಂದ ಪೂರ್ವಾನುಮತಿ ಪಡೆದ ನಂತರವೇ ಅದನ್ನು ಅನುಮತಿಸಲಾಗುತ್ತದೆ. ಪಂದ್ಯದ ಆಯ್ಕೆಯನ್ನು ಆಟಗಾರು ಬಿಸಿಸಿಐಗೆ ತಿಳಿಸಬೇಕು' ಎಂದು ಬಿಸಿಸಿಐ ಮೂಲವೊಂದು ತಿಳಿಸಿರುವುದಾಗಿ ವರದಿಯಾಗಿದೆ.

ರಣಜಿ ಸೆಮಿಫೈನಲ್: ಕೇರಳದ ಅಜರುದ್ದೀನ್ ಅಜೇಯ ಶತಕ

ಬೃಹತ್ ಮೊತ್ತದತ್ತ ಕೇರಳ, ಕುಸಿದ ಮುಂಬೈ

ವಡೋದರಾ: ವಿಕೆಟ್ ಕೀಪರ್ ಅಜರುದ್ದೀನ್ ಅವರ ಅಜೇಯ ಶತಕದ ನೆರವಿನಿಂದ ಇಲ್ಲಿ ನಡೆಯುತ್ತಿರುವ ರಣಜಿ ಕ್ರಿಕೆಟ್‌ನ ಸೆಮಿಫೈನಲ್‌ನಲ್ಲಿ ಕೇರಳ ತಂಡವು ಎರಡನೇ ದಿನದಂತ್ಯಕ್ಕೆ 7 ವಿಕೆಟ್ ನಷ್ಟಕ್ಕೆ 418 ರನ್ ಗಳಿಸಿದ್ದು, ಬೃಹತ್ ಮೊತ್ತದತ್ತ ದಾಪುಗಾಲಿರಿಸಿದೆ.

4 ವಿಕೆಟ್ ನಷ್ಟಕ್ಕೆ 206 ರನ್‌ಗಳಿಂದ ಮಂಗಳವಾರ ಆಟ ಮುಂದುವರಿಸಿದ ಕೇರಳ ತಂಡವು, ಆರನೇ ವಿಕೆಟ್ ಜೊತೆಯಾಟದಲ್ಲಿ ಬೃಹತ್ ಮೊತ್ತವನ್ನು ಸಂಪಾದಿಸಿತು. ವಿಕೆಟ್ ಕೀಪರ್ ಮೊಹಮ್ಮದ್ ಅಜರುದ್ದೀನ್ ಅವರು ಸಲ್ಮಾನ್ ನಿಸಾರ್ ಅವರ ಜತೆ ಸೇರಿ ಕೇರಳಕ್ಕೆ 149 ರನ್‌ಗಳ ಜತೆಯಾಟ ನೀಡಿದರು. ಅಜರುದ್ದೀನ್ 303 ಬಾಲ್‌ಗಳಲ್ಲಿ 149 ರನ್ (ಅಜೇಯ) ಸಂಪಾದಿಸಿದರೆ, ನಿಸಾರ್ 202 ಬಾಲ್‌ಗಳಲ್ಲಿ 52 ರನ್ ಗಳಿಸಿ ತಮ್ಮ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ಅಹಮ್ಮದ್ ಇಮ್ರಾನ್ 66 ಬಾಲ್‌ಗಳನ್ನು ಎದುರಿಸಿ 24 ರನ್ ಗಳಿಸಿದರು. ದಿನದಾಂತ್ಯಕ್ಕೆ ಉತ್ತಮ ಮೊತ್ತವನ್ನು ಪೇರಿಸಿರುವ ಕೇರಳ ತಂಡವು ಬುಧವಾರವೂ ತನ್ನ ಬ್ಯಾಟಿಂಗ್ ಮುಂದುವರಿಸಿ ಬೃಹತ್ ಮೊತ್ತ ಕಲೆ ಹಾಕುವತ್ತ ದಾಪುಗಾಲಿಟ್ಟಿದೆ.

ಹಠಾತ್ ಕುಸಿದ ಮುಂಬೈ: ನಾಗ್ಪುರದಲ್ಲಿ ನಡೆಯುತ್ತಿರುವ ಮತ್ತೊಂದು ರಣಜಿ ಸೆಮಿಫೈನಲ್ ಪಂದ್ಯದಲ್ಲಿ ವಿದರ್ಭ ತಂಡದೆದುರು ಮುಂಬೈ ತಂಡವು ಹಠಾತ್ ಕುಸಿದಿದೆ. ಮಂಗಳವಾರ 5 ವಿಕೆಟ್ ನಷ್ಟಕ್ಕೆ 308 ರನ್‌ಗಳಿಂದ ಆಟ ಮುಂದುವರಿಸಿದ ವಿದರ್ಭ ತಂಡವು ತನ್ನ ಬ್ಯಾಟಿಂಗ್ ಮುಂದುವರಿಸಿ 383 ರನ್‌ಗಳಿಗೆ ಆಲೌಟ್ ಆಯಿತು. ಶಾರ್ದುಲ್ ಠಾಕೂರ್ ಮಾತ್ರ 41 ಬಾಲ್‌ಗಳಲ್ಲಿ 37 ರನ್ ಗಳಿಸುವಲ್ಲಿ ಸಫಲರಾದರು. ಆದರೆ ಆ ಬಳಿಕ ಆಟ ಪ್ರಾರಂಭಿಸಿದ ಮುಂಬೈ ತಂಡವು ಆರಂಭದಲ್ಲಿ ಉತ್ತಮ ಪ್ರದರ್ಶನ ತೋರುವ ಲಕ್ಷಣ ತೋರಿಸಿದರೂ, ಆಗಾಗ ತನ್ನ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಾ ಹೋಯಿತು. ಆರಂಭಿಕ ಆಟಗಾರ ಎ. ಆನಂದ್ ಮಾತ್ರ ವಿದರ್ಭ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದರು. ಅವರು 67 ರನ್‌ಗಳೊಂದಿಗೆ ಅಜೇಯರಾಗಿ ಉಳಿದಿದ್ದಾರೆ. ಅಜಿಂಕ್ಯಾ ರಹಾನೆ 24 ಬಾಲ್‌ಗಳಲ್ಲಿ 18 ರನ್ ಮಾತ್ರ ಗಳಿಸಿ ತನ್ನ ವಿಕೆಟ್ ಒಪ್ಪಿಸಿದರು. ದಿನದಂತ್ಯಕ್ಕೆ ಮುಂಬೈ ತಂಡವು 7 ವಿಕೆಟ್ ನಷ್ಟಕ್ಕೆ ಕೇವಲ 188 ರನ್ ಗಳಿಸಿ 195 ರನ್‌ಗಳ ಹಿನ್ನಡೆಯಲ್ಲಿದೆ.

ವಿಟಾಕೀಸ್

ಕಡಲತಡಿಯಲಿ ಅಮರಾವತಿ

ನಟ ಧರ್ಮ ಕೀರ್ತಿರಾಜ್, ಬಿಗ್‌ಬಾಸ್ ಮನೆಗೆ ಹೋಗಿ ಬಂದ ಮೇಲೆ ಅವರ ಅದೃಷ್ಟ ಬದಲಾಗಿದೆ. ಧರ್ಮ ಅಭಿನಯದ ಸಾಲು ಸಾಲು ಸಿನಿಮಾಗಳು ತೆರೆಗೆ ಬರಲು ಸಿದ್ಧವಾಗಿವೆ. ಅದರಲ್ಲಿ ಅಮರಾವತಿ ಪೊಲೀಸ್ ಠಾಣೆಯೂ ಒಂದು. ಈ ಚಿತ್ರದ ಟೀಸರ್ ರಿಲೀಸ್ ಆಗಿದ್ದು ಸಖತ್ ಕ್ಯೂರಿಯಾಸಿಟಿ ಮೂಡಿಸಿದೆ. ಕಡಲ ತೀರದ ಕಾಲ್ಪನಿಕ ಅಮರಾವತಿ ಎಂಬ ಊರಲ್ಲಿ ನಡೆಯುವ ಮಿಸ್ಸಿಂಗ್, ಮರ್ಡರ್ ಮಿಸ್ಟರಿ ಕಥೆ ಚಿತ್ರದಲ್ಲಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ. ಇದ್ದಕ್ಕಿದ್ದ ಹಾಗೆ ಕಾಣೆಯಾಗುವ ಊರಿನ ಗೌಡ, ಆತನನ್ನು ಪತ್ತೆಹಚ್ಚಲು ಬಂದ ಪೊಲೀಸ್ ಕೂಡ ಕಾಣೆಯಾಗುತ್ತಾನೆ. ಇದೆಲ್ಲದರ ಹಿಂದೆ ಇರುವ ಅಡಗಿರುವ ನಿಗೂಢತೆಯ ಸುತ್ತ ಚಿತ್ರದ ಕಥೆ ಸಾಗುತ್ತದೆ. ಪುನೀತ್ ಅರಸೀಕೆರೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

> **ನಮ್ಮ ಚಿತ್ರದ ಬಹುತೇಕ ಶೂಟಿಂಗ್ ಮುಕಾಯವಾಗಿದ್ದು ಕ್ಲೈಮ್ಯಾಕ್ಸ್ ಹಾಗೂ ಹಾಡೊಂದರ ಚಿತ್ರೀಕರಣ ಬಾಕಿಯಿದೆ. ಅದನ್ನು ಗೋವಾದಲ್ಲಿ ಚಿತ್ರೀಕರಿಸುವ ಪ್ಲಾನ್ ಇದೆ. ಪುನೀತ್ ರಾಜಕುಮಾರ್ ಅವರ ಹುಟ್ಟುಹಬ್ಬದ ದಿನ ಚಿತ್ರದ ಹಾಡು ಬಿಡುಗಡೆಯಾಗಲಿದೆ. ಏಪ್ರಿಲ್ ವೇಳೆಗೆ ಚಿತ್ರ ತೆರೆಗೆ ಬರಲಿದೆ.**
> -ಪುನೀತ್ ಅರಸೀಕೆರೆ ನಿರ್ದೇಶಕ

ಧರ್ಮ ಕೀರ್ತಿರಾಜ್ ಈ ಚಿತ್ರದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ನಟಿಸಿದ್ದು, ಗುರುರಾಜ್ ಜಗ್ಗೇಶ್ ಮತ್ತೊಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವೇದ್ವಿಕಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಹಿರಿಯ ನಟಿ ಭವ್ಯಾ, ಧರ್ಮ, ಸಾಧು ಕೋಕಿಲ, ಕಾಕ್ರೋಚ್ ಸುಧಿ, ನಾಗೇಂದ್ರ ಪ್ರಸಾದ್, ಧರ್ಮಣ್ಣ ಕಡೂರು ಮುಂತಾದವರು ಚಿತ್ರದ ಉಳಿದ ತಾರಾಗಣದಲ್ಲಿದ್ದಾರೆ. ಪಿ.ಪಿ.ಪವರ್ ಪಿಕ್ಚರ್ಸ್ ಲಾಛನದಲ್ಲಿ ಕೆ.ಆರ್.ಪ್ರದೀಪ್ ಕಮಲಪುರ ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ರೋಣದ ಬಕ್ಕೇಶ್ ಸಂಗೀತ ಸಂಯೋಜಿಸಿದ್ದಾರೆ. ಗೌತಮ್ ಮಟ್ಟಿ ಛಾಯಾಗ್ರಹಣ, ಡಿಫರೆಂಟ್ ಡ್ಯಾನಿ, ಅಲ್ಟಿಮೇಟ್ ಶಿವು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ವೆಂಕಿ ಯುವಿಡಿ ಅವರ ಸಂಕಲನ, ಆರ್ಯ ಶಿವು ಕರಗುಂದ ಸಂಭಾಷಣೆ ಈ ಚಿತ್ರಕ್ಕಿದೆ.

ಕಳೆದು ಹೋದ ಕಾಲದ ನೆನಪು ಅಂದೊಂದಿತ್ತು ಕಾಲ

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಕಳೆದು ಹೋದ ಕಾಲದ ಕಥೆ ಹೇಳಲು ಬರುತ್ತಿದ್ದಾರೆ. ಅಂದೊಂದಿತ್ತು ಕಾಲ ಚಿತ್ರದಲ್ಲಿ ವಿನಯ್ ನಾಯಕನಾಗಿ ನಟಿಸಿದ್ದು, ತೆರೆಗೆ ಬರಲು ಸಿದ್ಧವಾಗಿದ್ದಾರೆ. ಅದಿತಿ ಪ್ರಭುದೇವ ನಾಯಕಿಯಾಗಿ ನಟಿಸಿದ್ದಾರೆ. ಸದ್ಯ ಈ ಚಿತ್ರದ ಅಂದೊಂದಿತ್ತು ಕಾಲ ಚಿತ್ರದ ಮುಂಗಾರು ಮಳೆಯಲ್ಲಿ.... ಎಂಬ ಹಾಡು ಬಿಡುಗಡೆಯಾಗಿದೆ.

ಮುಂಗಾರು ಮಳೆಯಲ್ಲಿ ಹಾಡು ಬಿಡುಗಡೆಯಾಗಿ ಯಶಸ್ವಿಯಾಗಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಸಂಗೀತ ನಿರ್ದೇಶಕ ವಿ. ರಾಘವೇಂದ್ರ, ಎಲ್ಲಾ ಹಾಡುಗಳಿಗೆ ಬಹಳ ಚೆನ್ನಾಗಿ ಟ್ಯೂನ್ ಮಾಡಿಕೊಟ್ಟಿದ್ದಾರೆ. ಒಳ್ಳೆಯ ಹಾಡುಗಳನ್ನು ಕೊಟ್ಟ ಅವರಿಗೆ ನನ್ನ ಮೊದಲ ಧನ್ಯವಾದಗಳು. ಚಿತ್ರವು ಮಾರ್ಚ್ ತಿಂಗಳಲ್ಲಿ ಬಿಡುಗಡೆಯಾಗುತ್ತಿದೆ. ಇದೊಬ್ಬ ನಿರ್ದೇಶಕನ ಜೀವನದ ಕಥೆ. ನಮ್ಮ ಚಿತ್ರದ ನಿರ್ದೇಶಕ ಕೀರ್ತಿ ಅವರು ಜೀವನದಲ್ಲಿ ಅನುಭವಿಸಿದ ಘಟನೆಗಳು, ಅವರ ಸ್ನೇಹಿತರ ಅನುಭವಗಳನ್ನು ಸೇರಿಸಿ ಒಂದೊಳ್ಳೆಯ ಕಥೆ ಹೇಳಿದ್ದಾರೆ. ಈ ಚಿತ್ರ ಎಲ್ಲರಿಗೂ ಇಷ್ಟವಾಗುತ್ತದೆ ಎಂಬ ನಂಬಿಕೆ ನನಗಿದೆ. ನಿರ್ಮಾಪಕ ಸುರೇಶ್ ಖುಷಿಯಿಂದ ಮತ್ತು ಪ್ರೀತಿಯಿಂದ ಸಿನಿಮಾ ಮಾಡಿದ್ದಾರೆ. ಅವರಿಗೆ ಒಳ್ಳೆಯದಾಗಬೇಕು. ಅದಿತಿ ಅವರ ಜೊತೆಗೆ ಕೆಲಸ ಮಾಡಿದ ಅನುಭವ ಚೆನ್ನಾಗಿತ್ತು. ಚಿತ್ರವನ್ನು ತೀರ್ಥಹಳ್ಳಿಯ ಸುಂದರ ತಾಣಗಳಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದು ವಿನಯ್ ರಾಜ್ ಕುಮಾರ್ ಹೇಳಿದರು.

> **ನಿರ್ಮಾಪಕರು ಹಾಡಿನ ಚಿತ್ರೀಕರಣವಾ ಗಬೇಕಿದ್ದರಿಂದ, ಯಾವಾಗ ಕೊಡುತ್ತೀರಾ ಎಂದು ಕೇಳಿದಾಗ, ಅವರು ಕೋಪದಲ್ಲಿ ಒಂದು ಬಿಟ್ ಹಾಡಿದರು. ಅದು ಚೆನ್ನಾಗಿದೆ ಎಂದನಿಸಿ ಮುಂದುವರೆಸುವುದಕ್ಕೆ ಹೇಳಿದೆ. ಈ ಹಾಡನ್ನು ಸಿದ್ ಶ್ರೀರಾಮ್ ಅವರಿಂದ ಹಾಡಿಸಬೇಕು ಎಂಬ ಆಸೆ ಇತ್ತಾದರೂ, ಅವರ ಸಂಭಾವನೆ ದುಬಾರಿಯಾಗಿತ್ತು. ಆದರೆ, ಆ ಹಾಡನ್ನು ಸಿನ್ ಅವರೇ ಹಾಡಬೇಕು ಎಂದು ನಿರ್ಮಾಪಕರು ಹಾಡಿಸಿದರು. ಹಾಗಾಗಿ, ಈ ಹಾಡು ಯಶಸ್ವಿಯಾಗುವುದಕ್ಕೆ ನಿರ್ಮಾಪಕರೇ ಕಾರಣ.**
> -ಕೀರ್ತಿ ಕೃಷ್ಣ ನಿರ್ದೇಶಕ

ಅಂದೊಂದಿತ್ತು ಕಾಲ ಎಂಬ ಹೆಸರೇ ಬಹಳ ಆಪ್ತವಾಗಿದೆ , ನಿರ್ದೇಶಕ ಕೀರ್ತಿ ಮತ್ತು ನಿರ್ಮಾಪಕ ಸುರೇಶ್ ನನಗೆ ಸುಂದರವಾದ ಪಾತ್ರವನ್ನು ಕೊಟ್ಟಿದ್ದಾರೆ. ಈ ಚಿತ್ರದಲ್ಲಿ ನನಗೆ ಕಣ್ಣಲ್ಲೇ ಮಾತಾಡುವ ಪಾತ್ರವಿದೆ. ವಿನಯ್ ಅವರ ಜೊತೆಗೆ ಬಹಳ ಖುಷಿಯಿಂದ ಕೆಲಸ ಮಾಡಿದ್ದೇನೆ. ಸಂಗೀತ ನಿರ್ದೇಶಕ ರಾಘವೇಂದ್ರ ಬಹಳ ಒಳ್ಳೆಯ ಹಾಡುಗಳನ್ನು ಕೊಟ್ಟಿದ್ದಾರೆ. ಅದೇ ಕಾರಣಕ್ಕೆ ಜನ ಮೆಚ್ಚಿದ್ದಾರೆ. ಈ ಹಾಡನ್ನು ಮೆಚ್ಚಿ ಹಲವರು ರೀಲ್ಸ್ ಮಾಡಿದ್ದಾರೆ ಎಂದು ಅದಿತಿ ಪ್ರಭುದೇವ ಹೇಳಿದರು.

ಹಾಡಿಗೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ. ಜನರ ಪ್ರೀತಿ ಸಿಕ್ಕಿದೆ. ಇದಕ್ಕೆ ಸೂತ್ರಧಾರರು ನಿರ್ಮಾಪಕ ಭುವನ್ ಸುರೇಶ್. ಅವರ ಪ್ರೋತ್ಸಾಹವಿಲ್ಲದಿದ್ದರೆ, ಹಾಡು ಈ ಮಟ್ಟಿಗೆ ಯಶಸ್ವಿಯಾಗುತ್ತಿರಲಿಲ್ಲ. ಈ ಹಾಡು ಪ್ರತೀ ದಿನ ಯೂಟ್ಯೂಬ್‌ನಲ್ಲಿ ಒಂದೂವರೆ ಲಕ್ಷ ವೀಕ್ಷಣೆ ಕಾಣುತ್ತಿದೆ. ಪ್ರತಿ ದಿನ 300 ರೀಗಳಾಗುತ್ತಿದೆ. ನಾವೇನೇ ಸಂಗೀತ ಸಂಯೋಜಿಸಿದರೂ, ಅದನ್ನು ತೆರೆಯ ಮೇಲೆ ಚೆನ್ನಾಗಿ ತರುವುದು ಬಹಳ ಮುಖ್ಯ. ವಿನಯ್ ಮತ್ತು ಅದಿತಿ ಅವರ ನಡುವಿನ ಕೆಮಿಸ್ಟ್ರಿ ಅದ್ಭುತವಾಗಿದ್ದು, ಅವರಿಬ್ಬರ ಅಭಿಮಾನಿಯಾಗಿದ್ದೇನೆ ಎಂರು ಸಂಗೀತ ನಿರ್ದೇಶಕ ರಾಘವೇಂದ್ರ ಸಂತಸ ವ್ಯಕ್ತಪಡಿಸಿದರುಯ

ಅಂದೊಂದಿತ್ತು ಕಾಲ ಚಿತ್ರದಲ್ಲಿ ವಿನಯ್ ರಾಜ್‌ಕುಮಾರ್ ಮತ್ತು ಅದಿತಿ ಜೊತೆಗೆ ನಿಶಾ ರವಿಕೃಷ್ಣನ್, ಜಗ್ಗಪ್ಪ, ಅರುಣಾ ಬಾಲರಾಮ್ ಮುಂತಾದವರು ನಟಿಸಿದ್ದು, ರವಿಚಂದ್ರನ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬೆಂಗಳೂರು, ತೀರ್ಥಹಳ್ಳಿ ಮುಂತಾದ ಕಡೆ ಚಿತ್ರದ ಚಿತ್ರೀಕರಣವಾಗಿದೆ. ಈ ಚಿತ್ರವನ್ನು ಭುವನ್ ಸಿನಿಮಾ ಅಡಿ ಸುರೇಶ್ ನಿರ್ಮಿಸಿದ್ದಾರೆ. ಚಿತ್ರಕ್ಕೆ ಅಭಿಷೇಕ್ ಕಾಸರಗೋಡು ಛಾಯಾಗ್ರಹಣವಿದೆ.

ವಿಷ್ಣು ಪ್ರಿಯ ನೈಜ ಪ್ರೇಮಕಥೆ

ಶ್ರೇಯಸ್ ಮಂಜು, ಕಣ್ಸನ್ನೆ ಚೆಲುವೆ ಪ್ರಿಯಾ ವಾರಿಯರ್ ಅಭಿನಯದ ವಿಷ್ಣುಪ್ರಿಯಾ ಈ ವಾರ ತೆರೆಗೆ ಬರಲಿದೆ. ನೈಜ ಘಟನೆಯಾಧಾರಿಯ ಪ್ರೇಮಕಥೆಯ ಈ ಸಿನಿಮಾ ಆರಂಭದಿಂದಲೂ ಕುತೂಹಲ ಮೂಡಿಸಿದೆ. ನನ್ನ ಮಗನ ಮೂರನೇ ಚಿತ್ರವನ್ನು ಕಾದಂಬರಿ ಆಧರಿಸಿ ನಿರ್ಮಿಸಬೇಕು ಎಂದುಕೊಂಡಿದ್ದೆ. ಅದಕ್ಕಾಗಿ ಕಥೆ ಹುಡುಕುತ್ತಿದ್ದೆ. ಈ ಬಗ್ಗೆ ಪ್ರಕಟಣೆ ಕೊಟ್ಟು, ಆಹ್ವಾನಿಸಿದಾಗ ಐವತ್ತಕ್ಕೂ ಹೆಚ್ಚು ಕಥೆಗಳು ಬಂದವು. ಅದರಲ್ಲಿ ಸಿಂಧುಶ್ರೀ ಬರೆದ ಈ ಕಥೆ ತುಂಬಾ ಇಷ್ಟವಾಯಿತು ಎಂದು ನಿರ್ಮಾಪಕ ಕೆ.ಮಂಜು ಹೇಳಿದರು.

ಹೃದಯಕ್ಕೆ ತಟ್ಟುವಂಥ ಕಥೆಗಳನ್ನು ಬರೆಯಬೇಕೆಂಬುದು ನನ್ನ ಕನಸು. ಹಾಗಾಗಿ ಈ ಕಥೆ ಹೆಣೆದು ನಿರ್ಮಾಪಕರಿಗೆ ಕಳುಹಿಸಿದ್ದೆ. ಒಮ್ಮೆ ನಿರ್ಮಾಪಕರು ಕರೆ ಮಾಡಿ ನಿಮ್ಮ ಕಥೆ ಸೆಲೆಕ್ಟ್ ಆಗಿದೆ ಎಂದಾಗ ನನಗೆ ನಂಬಲಾಗಲಿಲ್ಲ. ನನ್ನ ತಾತ ಹೇಳುತ್ತಿದ್ದ ಘಟನೆಗಳೇ ನಾನು ಈ ಕಥೆ ಬರೆಯಲು ಸ್ಫೂರ್ತಿ. ನಂತರ ಸಿನಿಮಾಗೆ ಹೇಗೆ ಬೇಕೋ ಆ ರೀತಿ ಒಂದಷ್ಟು ಚೇಂಜ್ ಮಾಡಿಕೊಂಡಿದ್ದಾರೆ ಎಂದು ಕಥೆ ಬರೆದ ಸಿಂಧುಶ್ರೀ ಹೇಳಿದರು.

ತೊಂಬತ್ತರ ಕಾಲ ಘಟ್ಟದ ಕಥೆ ತೆರೆಯಲ್ಲಿ ಸಾಗಲಿದೆ. ನೈಜ ಘಟನೆಯಾಧಾರಿತ ವಿಷ್ಣುಪ್ರಿಯ ಎಲ್ಲರ ಮನಮುಟ್ಟಲಿದೆ ಎಂದು ಶ್ರೇಯಸ್ ಮಂಜು ತಿಳಿಸಿದರು. ನಾಯಕನ ತಂದೆ ಪಾತ್ರದಲ್ಲಿ ಅಚ್ಯುತ್ ಕುಮಾರ್ ಹಾಗೂ ನಾಯಕಿಯ ತಂದೆಯಾಗಿ ಸುಚೇಂದ್ರ ಪ್ರಸಾದ್ ಅಭಿನಯಿಸಿದ್ದಾರೆ. ನಿರ್ದೇಶಕ ಪ್ರಕಾಶ್ ನಿರ್ದೇಶನ ಮಾಡಿದ್ದು, ಇದು ಮಂಜು ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಐವತ್ತನೇ ಚಿತ್ರ ಎನ್ನುವುದು ವಿಶೇಷ. ಗೋಪಿಸುಂದರ್ ಈ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ. ವಿನೋದ್ ಭಾರತಿ ಛಾಯಾಗ್ರಹಣ, ಸುರೇಶ್ ಅರಸ್ ಸಂಕಲನ ಈ ಚಿತ್ರಕ್ಕಿದೆ.

ಶಭಾಷ್ ಬಡ್ಡಿಮಗ್ನೆ ಎಂದ ಪೆಮೋದ್

ಡಾ.ರಾಜ್‌ಕುಮಾರ್ ಚಿತ್ರದಲ್ಲಿ ಬಳಸುತ್ತಿದ್ದ ಶಭಾಷ್ ಬಡ್ಡಿಮಗ್ನೆ ಈಗ ಸಿನಿಮಾದ ಶೀರ್ಷಿಕೆಯಾಗಿದೆ. ಕಿಶನ್ ಪ್ರೊಡಕ್ಷನ್‌ನಲ್ಲಿ ಚೈತ್ರಾಪ್ರಕಾಶ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಬಿ. ಎಸ್.ರಾಜಶೇಖರ್ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಪ್ರಮೋದ್ ಶೆಟ್ಟಿ ನಾಯಕನಾಗಿ ನಟಿಸಿದ್ದಾರೆ. ಇದು ಆರಕ್ಷರ ನಿಜ ಜೀವನದ ಕಥೆಯಾಗಿದ್ದು ಅದಕ್ಕೆ ಮನರಂಜನೆ ಬೆರೆಸಿ ತೆರೆಗೆ ತರಲಾಗಿದೆ. ಚಿಕ್ಕಮಗಳೂರು, ಕಳಸ, ಹೊರನಾಡು ಬ್ಯಾಂಕಾಕ್‌ದಲ್ಲಿ ಚಿತ್ರೀಕರಣ ನಡೆಲಾಗಿದೆ.

ತೊಂಬತ್ತರ ದಶಕದಲ್ಲಿ ಪರಿಚಿತರೊಬ್ಬರು ಹೇಳಿದ ಘಟನೆಯ ಎಳೆಯನ್ನು ಚಿತ್ರರೂಪಕ್ಕೆ ತಂದಿದ್ದೇನೆ. ಅದಕ್ಕಾಗಿ ಅಂದಿನ ಕಾಲಘಟ್ಟಕ್ಕೆ ಹೊಂದಿಕೊಂಡಂತ ಸ್ಥಳಗಳು ಮತ್ತು ಕಾಸ್ಟ್ಯೂಮ್‌ಗಳನ್ನು ಬಳಸಿದ್ದೇವೆ. ಇದು ಪೊಲೀಸರ ನೈಜಘಟನೆಯಾಗಿದ್ದು, ಆತನು ಕರ್ತವ್ಯಕ್ಕಿಂತ ವೈಯಕ್ತಿಕ ಬದುಕಿನಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾ ವೃತ್ತಿ ಬದುಕನ್ನು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. ಮುಂದೆ ಈತನ ಠಾಣಾ ವ್ಯಾಪ್ತಿಯಲ್ಲಿ ಅಪರಾಧವೊಂದು ನಡೆಯುತ್ತದೆ. ಅದನ್ನು ಹೇಗೆ ತನಿಖೆ ಮಾಡುತ್ತಾನೆ ಎಂಬುದನ್ನು ಪ್ರೇಕ್ಷಕರಿಗೆ ಮನರಂಜನೆ ರೀತಿಯಲ್ಲಿ ಕಾಮಿಡಿ ಪಂಚಿಂಗ್ ಡೈಲಾಗ್‌ಗಳ ಮೂಲಕ ತೋರಿಸಲಾಗಿದೆ. ಎಂದು ನಿರ್ದೇಶಕ ರಾಜಶೇಖರ್ ಹೇಳಿದರು. ಭ್ರಷ್ಟ, ಪ್ರಾಮಾಣಿಕ, ಮುಗ್ಧ, ಖಳ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ. ರಿಯಲ್‌ನಲ್ಲಿ ಎಂದಿಗೂ ಸುಮ್ಮನೆ ಕೂತವನಲ್ಲ. ಆದರೆ ರೀಲ್‌ದಲ್ಲಿ ಸೋಂಬೇರಿ ಪೊಲೀಸ್ ಆಫೀಸರ್ ಆಗಿ ಪಾತ್ರವನ್ನು ನಿಭಾಯಿಸಿದ್ದೇನೆ ಪ್ರಮೋದ್ ಶೆಟ್ಟಿ ತಿಳಿಸಿದರು.